ಬುಧವಾರ, ಜನವರಿ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 24 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
70,370	21,238	₹ 62,500 (ಬೆಂಗಳೂರು)	₹72,400 (ಬೆಂಗಳೂರು)	83.15

ನಿಗಮ–ಮಂಡಳಿ ನೇಮಕ ಪಟ್ಟಿ ಸೋರಿಕೆ: ಹೆಸರುಗಳಿಗೆ 17 ಮಂತ್ರಿಗಳ ಆಕ್ಷೇಪ

‘ಹಸ್ತ’ಕ್ಷೇಪ: ಸಿಡಿದೆದ್ದ ಸಚಿವರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಮ್ಮ ಇಲಾಖೆ ವ್ಯಾಪ್ತಿಯ ನಿಗಮ–ಮಂಡಳಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರನ್ನು ನೇಮಕ ಮಾಡುವ ಮುನ್ನ ತಮ್ಮ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡಿಲ್ಲ ಎಂದು ಸಚಿವರು ಸಿಡಿದೆದ್ದಿದ್ದಾರೆ.

ಸರ್ಕಾರ ಬಂದು ಆರು ತಿಂಗಳು ಕಳೆದರೂ ಪಕ್ಷವನ್ನು ಅಧಿಕಾರಕ್ಕೆ ತರಲು ಶ್ರಮಿಸಿದ ಕಾರ್ಯಕರ್ತರಿಗೆ ಹುದ್ದೆಗಳನ್ನು ಕೊಟ್ಟಿಲ್ಲ ಎಂಬ ಒಡಲುರಿ ಕಾಂಗ್ರೆಸ್ ಅನ್ನು ಕಂಗೆಡಿಸಿದೆ. ಅದರ ಮಧ್ಯೆಯೇ, ಪಕ್ಷದ ವರಿಷ್ಠರು ಮತ್ತು ರಾಜ್ಯ ನಾಯಕರ ಮಧ್ಯೆ ಜಟಾಪಟಿ ಹೊಸ ಬಿಕ್ಕಟ್ಟನ್ನು ಸರ್ಕಾರ ಮತ್ತು ಪಕ್ಷದಲ್ಲಿ ಸೃಷ್ಟಿಸಿದೆ.

ಮುಖ್ಯಮಂತ್ರಿ ಮತ್ತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷರ ವಿವೇಚನೆಗೆ ಬಿಡಬೇಕಾದ ನೇಮಕಾತಿಯ ಹೊಣೆಯನ್ನು ಪ್ರಧಾನ ಕಾರ್ಯದರ್ಶಿ ವಹಿಸಿಕೊಂಡಿರುವುದಕ್ಕೆ ತಕರಾರು ತೆಗೆದಿರುವ ಕೆಲವು ಸಚಿವರು, ಕೆ.ಸಿ. ವೇಣುಗೋಪಾಲ್ ಹೆಸರು ಹೇಳದೆಯೇ ಅವರ ವಿರುದ್ಧ ಅತೃಪ್ತಿ ಹೊರಹಾಕಿದ್ದಾರೆ.

ಅಧಿಕೃತವಾಗಿ ಬಿಡುಗಡೆಯಾಗುವ ಮೊದಲೇ ಸೋರಿಕೆಯಾಗಿರುವ ನೇಮಕ ಪಟ್ಟಿಯಲ್ಲಿರುವ ಹೆಸರುಗಳಿಗೆ ಸಂಬಂಧಿಸಿದಂತೆ ಸುಮಾರು 17 ಸಚಿವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಸಹಿ ಹೊಂದಿದ್ದ 37 ಶಾಸಕರು ಮತ್ತು 39 ಕಾರ್ಯಕರ್ತರ ಹೆಸರು ಇದ್ದ ಪಟ್ಟಿ ಇನ್ನೇನು ಬಿಡುಗಡೆ ಆಗಬೇಕು ಎನ್ನುವ ಕ್ಷಣದಲ್ಲಿ ಸೋರಿಕೆಯಾಗಿತ್ತು. ಆ ಪಟ್ಟಿಯಲ್ಲಿದ್ದ ಶಾಸಕರ ಹೆಸರಿನ ಮುಂದೆ ನಿಗಮ–ಮಂಡಳಿಯ ಹೆಸರುಗಳೂ ಇದ್ದವು.

6ನೇ ಪುಟ ನೋಡಿ

ಪ್ರಧಾನ ಕಾರ್ಯದರ್ಶಿ ಪಟ್ಟಿ; ಪರಮೇಶ್ವರ ಹೊಸ ಪಟ್ಟು


ಜಿ.ಪರಮೇಶ್ವರ

‘ನಿಗಮ–ಮಂಡಳಿಗೆ ಆಯ್ಕೆ ವಿಚಾರದ ಜವಾಬ್ದಾರಿಯನ್ನು ಮುಖ್ಯಮಂತ್ರಿ ಮತ್ತು ಪಕ್ಷದ ಅಧ್ಯಕ್ಷರಿಗೆ ಬಿಡಬೇಕು. ಅವರು ಜಿಲ್ಲಾ ನಾಯಕರ ಜತೆ ಮಾತನಾಡಿ ಪಟ್ಟಿ ಮಾಡಬೇಕು. ಅದರೆ, ಈಗ ಪಕ್ಷದ ಪ್ರಧಾನ ಕಾರ್ಯದರ್ಶಿಯವರೇ ಮಾಡುತ್ತಿದ್ದಾರೆ. ಹೀಗಾಗಿ, ಪಟ್ಟಿ ಸಿದ್ಧಪಡಿಸುವುದು ನಿಧಾನವಾಗಿದೆ. ಏನು ಮಾಡುತ್ತಾರೆಂದು ನೋಡೋಣ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, ‘ನಿಗಮ- ಮಂಡಳಿಗಳಿಗೆ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನು ಆಯ್ಕೆ ಮಾಡುವಾಗ ನಮ್ಮ ಅಭಿಪ್ರಾಯವನ್ನು ಯಾರೂ ಕೇಳಿಲ್ಲ. ಒಂದೆರಡು ಹೆಸರು ಕೊಡಿ ಅಂದಾಗ ಕೊಟ್ಟಿದ್ದೇನೆ. ಆದರೆ, ನಮ್ಮ ಜತೆ ಮಾತನಾಡಿ ಪಟ್ಟಿ ಮಾಡಿಲ್ಲ’ ಎಂದರು.



ನಿಗಮ– ಮಂಡಳಿಗೆ ನೇಮಕ ಸಂದರ್ಭದಲ್ಲಿ ಎಲ್ಲರ ಅಭಿಪ್ರಾಯವನ್ನು ಪಡೆದು, ಮಾರ್ಗಸೂಚಿ ನಿಗದಿ ಮಾಡಿದ್ದು, ಅದರಂತೆ ಎಲ್ಲರಿಗೂ ಅಧಿಕಾರ ಹಂಚಲಾಗುವುದು
ಡಿ.ಕೆ. ಶಿವಕುಮಾರ್, ಉಪ ಮುಖ್ಯಮಂತ್ರಿ

‘ನಾನು ಕೂಡಾ ಎಂಟು ವರ್ಷ ಪಕ್ಷದ ಅಧ್ಯಕ್ಷನಾಗಿದ್ದೆ. ಜಿಲ್ಲಾ ಮಟ್ಟದಲ್ಲಿ ಪಕ್ಷ ಸಂಘಟನೆಯಲ್ಲಿ ತೊಡಗಿರುವ ಮುಖಂಡರ ಕೆಲಸ ನಮಗೆ ಗೊತ್ತಿರುತ್ತದೆ. ಹತ್ತಾರು ವರ್ಷ ಪಕ್ಷಕ್ಕೆ ದುಡಿದವರಿದ್ದಾರೆ. ಅವರಿಗೆ ಅಧಿಕಾರ ಕೊಡಬೇಕು. ನಮ್ಮ ಅಭಿಪ್ರಾಯ ಪಡೆಯದೇ ಇರುವುದರಿಂದ ಹೀಗೆ ಆಗಿದೆ. ಕೆಲಸ ಮಾಡದವರಿಗೆ ಅಧಿಕಾರ ಕೊಟ್ಟರೆ, ಕೆಲಸ ಮಾಡಿರುವವರಿಗೆ ನೋವು, ಅಸಮಾಧಾನವಾಗುತ್ತದೆ. ಹೀಗಾಗಿ ಮುಖಂಡರು, ಜಿಲ್ಲಾ ಅಧ್ಯಕ್ಷರ ಸಲಹೆಗಳನ್ನು ಕೇಳಬೇಕಾಗುತ್ತದೆ’ ಎಂದೂ ಅವರು ಅಭಿಪ್ರಾಯಪಟ್ಟರು.

‘ಎಲ್ಲರ ಅಭಿಪ್ರಾಯ ಪಡೆಯಲಾಗದು’



‘ನೇಮಕ ಮಾಡುವ ಮುನ್ನ ಎಲ್ಲರ ಅಭಿಪ್ರಾಯ ಪಡೆಯಲು ಕಷ್ಟವಾಗುತ್ತದೆ. ಪರಮೇಶ್ವರ ಜೊತೆ ನಾನು ಮಾತನಾಡಿದ್ದೇನೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

‘ನಿಗಮ ಮಂಡಳಿಗಳಿಗೆ ಶಾಸಕರ ಹೆಸರು ಅಂತಿಮಗೊಳಿಸಲಾಗಿದೆ. ಕಾರ್ಯಕರ್ತರ ನೇಮಕದ ಬಗ್ಗೆ ನಾನು ಮತ್ತು ಡಿ.ಕೆ. ಶಿವಕುಮಾರ್ ಚರ್ಚೆ ನಡೆಸಿದ್ದೇವೆ. ಪಕ್ಷದ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಬಳಿ ಪಟ್ಟಿ ಇದೆ. ಕೆ.ಸಿ. ವೇಣುಗೋಪಾಲ್ ಅವರ ಸಹಿ ಆಗಬೇಕಿದೆ’ ಎಂದು ಹೇಳಿದರು.

ಅಗ್ರ ಕ್ರಮಾಂಕಕ್ಕೆ ಮರಳಿದ ಸಾತ್ವಿಕ್– ಚಿರಾಗ್

ನವದೆಹಲಿ (ಪಿಟಿಐ): ಕಳೆದ ಎರಡು ವಾರಗಳ ಅವಧಿಯಲ್ಲಿ ಅಮೋಘ ಪ್ರದರ್ಶನ ನೀಡಿರುವ ಭಾರತದ ಡಬಲ್ಸ್ ಜೋಡಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಮಂಗಳವಾರ ಪ್ರಕಟವಾದ ವಿಶ್ವ ಬ್ಯಾಡ್ಮಿಂಟನ್ ಪುರುಷರ ಡಬಲ್ಸ್ ರ‍್ಯಾಂಕಿಂಗ್‌ನಲ್ಲಿ ಅಗ್ರ ಸ್ಥಾನಕ್ಕೆ ಏರಿದ್ದಾರೆ.

ಮಲೇಷ್ಯಾ ಓಪನ್ ಸೂಪರ್ 1000 ಟೂರ್ನಿ ಮತ್ತು ಇಂಡಿಯನ್ ಓಪನ್ ಸೂಪರ್ 750 ಟೂರ್ನಿಯಲ್ಲಿ ಭಾರತದ ಆಟಗಾರರು ರನ್ನರ್ಸ್ ಅಪ್ ಸ್ಥಾನ ಪಡೆದಿದ್ದರು. ಇದರ ಬೆನ್ನಲ್ಲೇ ವಿಶ್ವ ಕ್ರಮಾಂಕದಲ್ಲಿ ಮರಳಿ ಅಗ್ರಸ್ಥಾನ ಪಡೆದುಕೊಂಡಿದ್ದಾರೆ. ಕಳೆದ ವರ್ಷ ನಡೆದ ಹಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲಿ ಸ್ವರ್ಣ ಗೆದ್ದ ನಂತರ ಸಾತ್ವಿಕ್– ಚಿರಾಗ್ ವಿಶ್ವ ಕ್ರಮಾಂಕದಲ್ಲಿ ಅಗ್ರಸ್ಥಾನಕ್ಕೆ ಏರಿದ್ದರು.


ಚಿರಾಗ್ ಮತ್ತು ಸಾತ್ವಿಕ್

ಭಾರತದ ಆಟಗಾರರ ಪೈಕಿ ಎಚ್‌. ಎಸ್.ಪ್ರಣಯ್ ಎಂಟನೇ ಕ್ರಮಾಂಕ ಪಡೆದಿದ್ದಾರೆ. ಲಕ್ಷ್ಯ ಸೇನ್, ಕಿದಂಬಿ ಶ್ರೀಕಾಂತ್, ಪ್ರಿಯಾಂಶು ರಾಜಾವತ್ ಕ್ರಮವಾಗಿ 19, 25 ಮತ್ತು 30ನೇ ಸ್ಥಾನದಲ್ಲಿ ದ್ದಾರೆ.

ಕರ್ಪೂರಿಗೆ ‘ಭಾರತ ರತ್ನ’

ಪ್ರಜಾವಾಣಿ ವಾರ್ತೆ

ನವದೆಹಲಿ: ಸಮಾಜವಾದಿ ನಾಯಕ ಹಾಗೂ ಬಿಹಾರದ ಮಾಜಿ ಮುಖ್ಯಮಂತ್ರಿ ಕರ್ಪೂರಿ ಠಾಕೂರ್ ಅವರಿಗೆ ದೇಶದ ಅತ್ಯುನ್ನತ ನಾಗರಿಕ ಗೌರವ ‘ಭಾರತ ರತ್ನ’ (ಮರಣೋತ್ತರ) ಘೋಷಿಸಲಾಗಿದೆ.

ನಿತೀಶ್ ಕುಮಾರ್ ನೇತೃತ್ವದ ಜೆಡಿಯು ಮತ್ತು ವಿರೋಧ ಪಕ್ಷಗಳ ಇಂಡಿಯಾ ಮೈತ್ರಿಕೂಟದ ‘ಸಾಮಾಜಿಕ ನ್ಯಾಯ’ದ ಅಸ್ತ್ರಕ್ಕೆ ಪ್ರತ್ಯುತ್ತರ ನೀಡುವ ಪ್ರಯತ್ನದ ಭಾಗವಾಗಿ ನರೇಂದ್ರ ಮೋದಿ ಸರ್ಕಾರವು ಕರ್ಪೂರಿ ಅವರನ್ನು ಈ ಗೌರವಕ್ಕೆ ಆಯ್ಕೆ ಮಾಡಿದೆ ಎಂದು ವಿಶ್ಲೇಷಿಸಲಾಗಿದೆ. ಅದೇ ರೀತಿ, ಲೋಕಸಭೆ ಚುನಾವಣೆಗೂ ಮುನ್ನ ಅತ್ಯಂತ ಹಿಂದುಳಿದ ವರ್ಗಗಳನ್ನು ಓಲೈಸುವ ತಂತ್ರಗಾರಿಕೆಯೂ ಇದರ ಹಿಂದೆ ಅಡಗಿದೆ ಎನ್ನಲಾಗಿದೆ.

ಕರ್ಪೂರಿ ಅವರ ಜನ್ಮಶತಮಾನೋತ್ಸವಕ್ಕೆ ಮುನ್ನಾದಿನ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ಈ ಘೋಷಣೆ ಮಾಡಿದರು. ‘ಕರ್ಪೂರಿ ಠಾಕೂರ್ ಅವರಿಗೆ ಭಾರತ ರತ್ನ ಪ್ರಶಸ್ತಿ ನೀಡಲು ಸಂತಸವಾಗುತ್ತಿದೆ’ ಎಂದು ರಾಷ್ಟ್ರಪತಿ ಭವನದ ಪ್ರಕಟಣೆ ತಿಳಿಸಿದೆ.



ಸಮಾಜದ ದುರ್ಬಲ ವರ್ಗದವರ ಏಳಿಗೆಗಾಗಿ ಕರ್ಪೂರಿ ಠಾಕೂರ್ ನಡೆಸಿದ್ದ ನಿರಂತರ ಪ್ರಯತ್ನಗಳಿಗೆ ಭಾರತ ರತ್ನ ಗೌರವವು ಪ್ರಮಾಣಪತ್ರವಾಗಿದೆ
ನರೇಂದ್ರ ಮೋದಿ, ಪ್ರಧಾನಿ

8ನೇ ಪುಟ ನೋಡಿ


ರಾಮಮಂದಿರದಲ್ಲಿ ಮಂಗಳವಾರ ಸರತಿಯಲ್ಲಿ ನಿಂತಿದ್ದ ಭಕ್ತರು –ಪಿಟಿಐ ಚಿತ್ರ

ಮಂದಿರದತ್ತ ಭಕ್ತಸಾಗರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅಂದಾಜು ಐದು ಲಕ್ಷ ಭಕ್ತರಿಂದ ಬಾಲರಾಮನ ದರ್ಶನ
- ಪರಿಸ್ಥಿತಿ ನಿಯಂತ್ರಿಸಲು ಹರಸಾಹಸಪಟ್ಟ ಭದ್ರತಾ ಸಿಬ್ಬಂದಿ

ಲಖನೌ: ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನಡೆದ ಮಾರನೆಯ ದಿನವಾದ ಮಂಗಳವಾರ ರಾಮ ಮಂದಿರವನ್ನು ಸಾರ್ವಜನಿಕರ ಪ್ರವೇಶಕ್ಕೆ ಮುಕ್ತಗೊಳಿಸಿದ್ದು, ಭಕ್ತರು ದೊಡ್ಡ ಸಂಖ್ಯೆಯಲ್ಲಿ ಮಂದಿರದತ್ತ ಹರಿದುಬಂದರು. ಇದರ ಪರಿಣಾಮವಾಗಿ ರಾಮ ಜನ್ಮಭೂಮಿ ಸಂಕೀರ್ಣದ ಒಳಗೆ ಹಾಗೂ ಅದರ ಸುತ್ತಮುತ್ತ ಗೊಂದಲ ಸೃಷ್ಟಿಯಾಗಿತ್ತು.

ಜನಸಂದಣಿಯನ್ನು ತಗ್ಗಿಸಲು ಅಯೋಧ್ಯೆಗೆ ಬಸ್ ಸೇವೆಯನ್ನು ಸ್ಥಗಿತಗೊಳಿಸಲಾಯಿತು. ಅಲ್ಲದೆ, ಲಖನೌ–ಅಯೋಧ್ಯೆ ಹೆದ್ದಾರಿಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿತ್ತು. ಭಕ್ತರು ತಾಳ್ಮೆಯಿಂದ ಇರಬೇಕು ಎಂದು ಮನವಿ ಮಾಡಲಾಯಿತು.

ಅಯೋಧ್ಯೆಗೆ ಧಾವಿಸಿ ಬಂದ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಅವರು, ರಾಮ ಮಂದಿರ ಸಂಕೀರ್ಣದ ವೈಮಾನಿಕ ಸಮೀಕ್ಷೆ ನಡೆಸಿದರು, ಮಂದಿರಕ್ಕೆ ಬರುವ ಭಕ್ತರಿಗೆ ಬಾಲರಾಮನ ದರ್ಶನಕ್ಕೆ ಯಾವುದೇ ಅಡ್ಡಿ ಆಗದಂತೆ ನೋಡಿಕೊಳ್ಳಲು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಂದಿರದ ಬಾಗಿಲನ್ನು ಸಂಜೆ ಏಳು ಗಂಟೆಗೆ ಮುಚ್ಚಲಾಯಿತು. ಅಲ್ಲಿಯವರೆಗೆ ಅಂದಾಜು ಐದು ಲಕ್ಷಕ್ಕೂ ಹೆಚ್ಚು ಮಂದಿ ದರ್ಶನ ಮಾಡಿರಬಹುದು ಎಂದು ಮೂಲಗಳು ಹೇಳಿವೆ. ಭಕ್ತರು ಮಂಗಳವಾರ ನಸುಕಿನ 3 ಗಂಟೆಯಿಂದಲೇ ಮಂದಿರದ ಹೊರಗಡೆ ಸೇರಲು ಆರಂಭಿಸಿದ್ದರು. ಬೆಳಿಗ್ಗೆ 6.30ಕ್ಕೆ ಮಂದಿರದ ಬಾಗಿಲನ್ನು ತೆರೆಯುವ ಹೊತ್ತಿನಲ್ಲಿ, ಮಂದಿರದ ಹೊರಗೆ ಭಕ್ತರ ಸಾಗರವೇ ಸೇರಿತ್ತು. ಇದು ಅಧಿಕಾರಿಗಳಿಗೂ ಆಶ್ಚರ್ಯ ತರಿಸಿತು. ಮಂದಿರದ ಒಳಗೆ ಹೋಗಲು ಭಕ್ತರು ನಾಮುಂದು, ತಾಮುಂದು ಎಂದು ಮುನ್ನಡೆದಾಗ ಸ್ಥಳದಲ್ಲಿ ಗೊಂದಲ ನಿರ್ಮಾಣವಾಯಿತು. ಅವರನ್ನು ನಿಯಂತ್ರಿಸಲು ಮಂದಿರದ ಭದ್ರತಾ ಸಿಬ್ಬಂದಿ ಹರಸಾಹಸ ಪಡಬೇಕಾಯಿತು.

8ನೇ ಪುಟ ನೋಡಿ

‘ಬಿಬಿಎಂಪಿ ಚುನಾವಣೆ ಸದ್ಯಕ್ಕಿಲ್ಲ’

ಬೆಂಗಳೂರು: ‘ಲೋಕಸಭೆ ಚುನಾವಣೆ ನಂತರ ಬಿಬಿಎಂಪಿ ಹಾಗೂ ಇತರೆ ಚುನಾವಣೆಗಳು ನಡೆಯಲಿವೆ. ಪಕ್ಷ ಸಂಘಟನೆಯಲ್ಲಿನ ಸಾಮರ್ಥ್ಯ ಪರಿಗಣಿಸಿ ಪಾಲಿಕೆ ಚುನಾವಣೆಯಲ್ಲಿ ಅವಕಾಶ ನೀಡಲಾಗುವುದು’ ಎಂದು ಪಕ್ಷದ ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಭರವಸೆ ನೀಡಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಮಾತನಾಡಿದ ಅವರು, ‘ಲೋಕಸಭೆ ಚುನಾವಣೆ ಸಮೀಪಿಸುತ್ತಿದೆ. ಬೆಳಿಗ್ಗೆ 10.30ರ ನಂತರ ಕೆಪಿಸಿಸಿ ಕಚೇರಿ ಹಾಗೂ ಸರ್ಕಾರಿ ಗೃಹಕಚೇರಿ ಬಳಿ ನನ್ನನ್ನು ಬಂದು ಭೇಟಿ ಮಾಡಿ. ನಾವು ಪಕ್ಷದ ಕೆಲಸವನ್ನು ಮಾಡಬೇಕು. ಎಲ್ಲರೂ ಸೇರಿ ಬೆಂಗಳೂರಿನ ನಾಲ್ಕು ಲೋಕಸಭೆ ಕ್ಷೇತ್ರಗಳಲ್ಲಿ ಪಕ್ಷವನ್ನು ಗೆಲ್ಲಿಸಬೇಕು’ ಎಂದರು.

ರಾಮಲಲ್ಲಾ ಇನ್ನು ಬಾಲರಾಮ

ಲಖನೌ: ರಾಮ ಮಂದಿರದಲ್ಲಿನ ರಾಮ ವಿಗ್ರಹವನ್ನು ಇನ್ನು ಮುಂದೆ ‘ಬಾಲರಾಮ’ ಎಂದು ಕರೆಯಲಾಗುತ್ತದೆ. ಹಿಂದಿಯಲ್ಲಿ ಇದುವರೆಗೆ ‘ರಾಮ ಲಲ್ಲಾ’ ಎಂದು ಕರೆಯಲಾಗುತ್ತಿತ್ತು.

ಮಂದಿರದಲ್ಲಿ ಇರುವ ರಾಮಮೂರ್ತಿಯು ಐದು ವರ್ಷ ವಯಸ್ಸಿನ ರಾಮನನ್ನು ಪ್ರತಿನಿಧಿಸುವ ಕಾರಣ, ‘ಬಾಲರಾಮ’ ಎಂಬ ಹೆಸರಿನಲ್ಲಿ ಆತನನ್ನು ಕರೆಯಲಾಗುತ್ತದೆ ಎಂದು ಮಂದಿರದ ಪುರೋಹಿತರೊಬ್ಬರು ತಿಳಿಸಿದ್ದಾರೆ.

ಬಾಲರಾಮನ ಅಂಗವಸ್ತ್ರಕ್ಕೆ ಬಂಗಾರದ ಎಳೆಗಳ ಝರಿಯಿಂದ ಅಲಂಕಾರ ಮಾಡಲಾಗಿದೆ. ಬಾಲರಾಮನಿಗೆ ಚಿನ್ನದ ಕಿರೀಟ ತೊಡಿಸಲಾಗಿದೆ. ಅಡಿಯಿಂದ ಮುಡಿಯವರೆಗೆ ಚಿನ್ನದ ಆಭರಣ ಹೊದಿಸಲಾಗಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ




ಒಳ ಪುಟಗಳು



ಬಿಬಿಎಂಪಿಯಿಂದ ಮತ್ತೊಂದು ಬಜೆಟ್‌ಗೆ ಸಿದ್ಧತೆ ● ಕಾರ್ಯಗತವಾಗದ ಹಿಂದಿನ ಭರವಸೆ ● ಚುನಾವಣೆ ನೀತಿಸಂಹಿತೆ ನಡುವೆ ನಿರ್ಲಕ್ಷ್ಯಕ್ಕೊಳಗಾದ ಅಭಿವೃದ್ಧಿ

ಘೋಷಣೆ ಜೋರು; ಅನುಷ್ಠಾನ ಚೂರು–ಪಾರು

● ಆರ್. ಮಂಜುನಾಥ್



ಭಾಷಣವೇ ಭೂಷಣ ಅಭಿವೃದ್ಧಿ ಗೌಣ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಮತ್ತೊಂದು ಬಜೆಟ್‌ಗೆ ಸಿದ್ಧಗೊಳ್ಳುತ್ತಿದೆ.ಆದರೆ, 2023–24ನೇ ಸಾಲಿನ ಬಜೆಟ್ ಘೋಷಣೆಗಳು, ಯೋಜನೆಗಳು ಪುಸ್ತಕದಲ್ಲಿಯೇ ಉಳಿದುಕೊಂಡಿವೆ. ಬಜೆಟ್‌ನ ಪ್ರಮುಖ ಯೋಜನೆಗಳ ಅನುಷ್ಠಾನಕ್ಕೆ ಅಗತ್ಯವಾದ ಪ್ರಾಥಮಿಕ ಪ್ರಕ್ರಿಯೆಗಳೇ ನಡೆದಿಲ್ಲ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ಅನುಮೋದನೆಯಾಗಿದ್ದ ಬಜೆಟ್, ಹೊಸ ಸರ್ಕಾರ ಬಂದಮೇಲೆ ಒಂದಷ್ಟು ಬದಲಾವಣೆ ಕಂಡಿತು. ವಿಧಾನಸಭೆ ಚುನಾವಣೆ ನೀತಿ ಸಂಹಿತೆ, ಹೊಸ ಸರ್ಕಾರ ರಚನೆ, ರಾಜ್ಯ ಬಜೆಟ್ ಮಂಡನೆ... ಹೀಗೆ ಮೂರು ತಿಂಗಳು ಯಾವುದೇ ಕಾಮಗಾರಿಗಳು ಆರಂಭವಾಗಲಿಲ್ಲ. ಪೂರ್ಣಗೊಂಡ ಕಾಮಗಾರಿಗಳಿಗೂ ಬಿಲ್ ಪಾವತಿಯನ್ನು ನಿಲ್ಲಿಸಿದ್ದರಿಂದ ನಡೆಯುತ್ತಿದ್ದ ಕಾಮಗಾರಿಗಳನ್ನೂ ಗುತ್ತಿಗೆದಾರರು ಸ್ಥಗಿತಗೊಳಿಸಿದರು. ಇದರಿಂದಾಗಿ, ಅರ್ಧಕ್ಕೇ ನಿಂತ ಸಾಕಷ್ಟು ಕಾಮಗಾರಿಗಳು ನಗರದೆಲ್ಲೆಡೆ ಕಾಣಸಿಗುತ್ತವೆ.

ಜನವರಿ ಆರಂಭದಿಂದ ನಿರ್ವಹಣೆಯ ಟೆಂಡರ್‌ಗಳನ್ನು ಕರೆಯಲಾಗುತ್ತಿದೆ. ಆದರೆ ಎಲ್ಲ ಪ್ರಕ್ರಿಯೆಗಳು ಅಂತಿಮಗೊಂಡು, ಈ ಕಾಮಗಾರಿಗಳು ಆರಂಭವಾಗುವ ಮುನ್ನ ಲೋಕಸಭೆ ಚುನಾವಣೆಯ ನೀತಿಸಂಹಿತೆಯೂ ಜಾರಿಯಾಗುವ ಸಂಭವ ಇದೆ. ಹೀಗಾದರೆ, ಮತ್ತೆ ಮೂರು ತಿಂಗಳು ಯಾವುದೇ ಕೆಲಸಗಳು ಆರಂಭವಾಗುವುದಿಲ್ಲ.ಆದರೂ ಇವೆಲ್ಲದರ ನಡುವೆ ಮತ್ತೊಂದು ಬಜೆಟ್ ಕೂಡ ಮಂಡನೆಯಾಗಲೇಬೇಕಿದೆ.

ಬಿಬಿಎಂಪಿ ಪ್ರತಿ ಬಜೆಟ್ ಮಂಡನೆಯಾದ ಕೂಡಲೇ ಕನಿಷ್ಠ ನಿರ್ವಹಣೆ ಕಾಮಗಾರಿಗಳು ಆರಂಭವಾಗುತ್ತಿದ್ದವು. ವಾರ್ಡ್‌ಗಳಲ್ಲಿ ರಸ್ತೆ ಗುಂಡಿ ಮುಚ್ಚುವುದು, ಚರಂಡಿ ಹೂಳೆತ್ತುವುದು, ಪಾದಚಾರಿ ಮಾರ್ಗಗಳ ದುರಸ್ತಿ ಕಾಮಗಾರಿಗಳು ನಡೆಯುತ್ತಿದ್ದವು. ಈ ಬಾರಿ ಜನವರಿ ಮುಗಿಯುತ್ತಿದ್ದರೂ ಈ ಕಾಮಗಾರಿಗಳು ಇನ್ನೂ ಟೆಂಡರ್ ಹಂತದಲ್ಲಿಯೇ ಇವೆ. ಈ ಕಾಮಗಾರಿಗಳಲ್ಲದೆ ಪ್ರತಿ ವಾರ್ಡ್‌ಗೆ ನಿರ್ವಹಣೆ ಕೆಲಸಕ್ಕಾಗಿಯೇ ತಲಾ ₹75 ಲಕ್ಷ ಮೀಸಲಿಡಲಾಗಿದೆ. ಈ ಎಲ್ಲ ಕಾಮಗಾರಿಗಳನ್ನು ನಡೆಸಲು ಪ್ರತಿ ವಾರ್ಡ್‌ಗೆ ಒಟ್ಟಾರೆ ₹1.45 ಕೋಟಿ ಬಜೆಟ್‌ನಲ್ಲಿ ನೀಡಲಾಗಿದೆ.



ನಗರದ ಎಸ್‌ಜೆ.ಪಿ ರಸ್ತೆ ಹಾಳಾಗಿ ವರ್ಷವಾಗಿದ್ದು, ವಾಹನ ಸವಾರರಿಗೆ ಸಂಕಷ್ಟ ಎದುರಾಗಿದೆ —ಪ್ರಜಾವಾಣಿ ಚಿತ್ರ: ಎಂ.ಎಸ್‌ಮಂಜುನಾಥ್

ಇದಲ್ಲದೆ, ವಾರ್ಡ್ ಕಾಮಗಾರಿಗೆ ₹1.5 ಕೋಟಿ, ವಿದ್ಯುತ್ ಫಿಟ್ಟಿಂಗ್‌ಗಳಿಗೆ ತಲಾ ₹10 ಲಕ್ಷ ಒದಗಿಸಲಾಗಿದೆ.

‘ವಾರ್ಡ್‌ಗಳ ಅಭಿವೃದ್ಧಿಗೆ ಇಷ್ಟೆಲ್ಲ ಹಣ ಹಂಚಿಕೆ ಬಜೆಟ್‌ನಲ್ಲಾಗಿದ್ದರೂ, ಜನರಿಗೆ ಅಗತ್ಯವಾಗಿ ಬೇಕಾದ ಕೆಲಸಗಳು ನಡೆದಿಲ್ಲ. ಕನಿಷ್ಠ ಗುಂಡಿ ಮುಚ್ಚುವ, ಡಾಂಬರು ಹಾಕುವ ಕೆಲಸಗಳೂ ಆಗಿಲ್ಲ. ವಿಧಾನಸಭೆ ಚುನಾವಣೆಗೆ ಮುನ್ನ ಮುಖ್ಯರಸ್ತೆಗಳಲ್ಲಿ ಮಾತ್ರ ಡಾಂಬರು ಕಾರ್ಯ ನಡೆಯಿತು. ಅದರ ಲೆಕ್ಕ ಹಿಂದಿನ ವರ್ಷಕ್ಕೆ ಸೇರಿಕೊಂಡಿತು. ಈ ಆರ್ಥಿಕ ವರ್ಷದಲ್ಲಿ ಗುಂಡಿಗಳನ್ನೂ ಮುಚ್ಚಿಲ್ಲ’ ಎಂಬುದು ಎಲ್ಲ ವಾರ್ಡ್‌ಗಳ ನಾಗರಿಕರ ದೂರು.

‘ಸಮಾಜ ಕಲ್ಯಾಣ ವಿಭಾಗ ಕಾರ್ಯಕ್ರಮಗಳಿಗೆ ಫಲಾನುಭವಿಗಳನ್ನು ಗುರುತಿಸಿ, ಅರ್ಜಿಗಳನ್ನು ಉಪ ವಿಭಾಗದ ಮಟ್ಟದಿಂದ ಕೇಂದ್ರ ಕಚೇರಿಗೆ ಕಳುಹಿಸಿಕೊಟ್ಟರೂ ಯೋಜನೆಯ ಫಲ ಅರ್ಹರಿಗೆ ಸಿಕ್ಕಿಲ್ಲ’ ಎಂಬುದು ವಲಯ ಅಧಿಕಾರಿಗಳ ದೂರು. ‘ಹಣಕಾಸು ವಿಭಾಗದಿಂದ ಹಣ ಬಿಡುಗಡೆ ಆಗದಿರುವುದರಿಂದ ಫಲಾನುಭವಿಗಳಿಗೆ ಮೊತ್ತ ಅಥವಾ ಕಾರ್ಯಕ್ರಮಗಳು ತಲುಪಿಲ್ಲ’ ಎಂಬುದು ಸಮಾಜ ಕಲ್ಯಾಣ ವಿಭಾಗದ ಅಧಿಕಾರಿಗಳ ಮಾತು.

ವಿದ್ಯಾರ್ಥಿಗಳಿಗೆ ಶೂ ಸಿಕ್ಕಿಲ್ಲ!

ಶೈಕ್ಷಣಿಕ ವರ್ಷ ಮುಗಿಯುತ್ತಾ ಬಂದಿದ್ದರೂ ಬಿಬಿಎಂಪಿ ಶಾಲೆಯ ಮಕ್ಕಳಿಗೆ ಶೂಗಳನ್ನು ವಿತರಿಸಿಲ್ಲ. ಕೆಲವು ಶಾಲೆ-ಕಾಲೇಜುಗಳಿಗೆ ವಿತರಣೆ ಮಾಡಲಾಗಿದ್ದರೂ, ಅಳತೆಯಲ್ಲಿ ಸಾಕಷ್ಟು ಗೊಂದಲವಾಗಿದ್ದು ಅವುಗಳು ಶಾಲೆ ಕೊಠಡಿಯಲ್ಲೇ ಉಳಿದಿವೆ. ಪ್ರಯೋಗಾಲಯಗಳಿಗೆ ಅಗತ್ಯವಾದ ಪರಿಕರಗಳನ್ನು ಇನ್ನೂ ಒದಗಿಸಿಲ್ಲ. ಶಾಲಾ ಕಾಲೇಜುಗಳಿಗೆ ಆಟೋಪಕರಣಗಳನ್ನು ಒದಗಿಸುವ ಪ್ರಕ್ರಿಯೆ ಇನ್ನೂ ಟೆಂಡರ್ ಹಂತದಲ್ಲೇ ಉಳಿದಿದೆ.

‘ಶೈಕ್ಷಣಿಕ ವರ್ಷ ಆರಂಭಕ್ಕೆ ಮುನ್ನ ವಿದ್ಯಾರ್ಥಿಗಳಿಗೆ ಅಗತ್ಯವಾದ ಸಮವಸ್ತ್ರ, ಪರಿಕರಗಳನ್ನು ಒದಗಿಸಲು ಯೋಜಿಸಿ, ಅದರಂತೆ ಕಾರ್ಯನಿರತರಾಗಬೇಕು. ಆದರೆ, ಅಧಿಕಾರಿಗಳ ಉದಾಸೀನದಿಂದ ಶೈಕ್ಷಣಿಕ ವರ್ಷ ಅಂತ್ಯವಾಗುತ್ತಿದ್ದರೂ ಬಜೆಟ್‌ನ ಘೋಷಣೆಯ ಸೌಲಭ್ಯಗಳು ವಿದ್ಯಾರ್ಥಿಗಳನ್ನು ತಲುಪಿಲ್ಲ’ ಎಂದು ಶಿಕ್ಷಕರು ದೂರುತ್ತಾರೆ.



ಉದ್ಯಾನಗಳ ಅಭಿವೃದ್ಧಿ ನಿರ್ಲಕ್ಷ್ಯ!

ತೋಟಗಾರಿಕೆ ವಿಭಾಗಕ್ಕೆ ₹129 ಕೋಟಿ ಹಣವನ್ನು ಬಜೆಟ್‌ನಲ್ಲಿ ಹಂಚಿಕೆ ಮಾಡಿದ್ದರೂ, ಉದ್ಯಾನಗಳಲ್ಲಿ ಮೂಲಸೌಲಭ್ಯದ ಕೊರತೆ ಎದ್ದು ಕಾಣುತ್ತಿದೆ. ಗಿಡಗಳು ಒಣಗಿರುವುದು, ನಿರ್ವಹಣೆ ಕೊರತೆ, ಸ್ವಚ್ಛತೆ ಬಗೆಗಿನ ನಿರ್ಲಕ್ಷ್ಯದ ಬಗ್ಗೆ ಪ್ರತಿ ದಿನವೂ ನಾಗರಿಕರ ದೂರು ಇದ್ದೇ ಇರುತ್ತದೆ. ಸಮಯಕ್ಕೆ ಸರಿಯಾಗಿ ಗುತ್ತಿಗೆಯನ್ನು ನವೀಕರಿಸದಿರುವುದು, ಹೊಸ ಗುತ್ತಿಗೆ ಟೆಂಡರ್ ಆಹ್ವಾನಿಸದಿರುವುದರಿಂದ ಸಮಸ್ಯೆಗಳು ಹೆಚ್ಚಾಗಿವೆ. ಜನವರಿಯಲ್ಲಿ ಉದ್ಯಾನಗಳ ನಿರ್ವಹಣೆ, ಭದ್ರತೆ ಸಿಬ್ಬಂದಿಗಾಗಿ ಟೆಂಡರ್ ಆಹ್ವಾನಿಸುತ್ತಿರುವುದು ಇದೆಲ್ಲ ವೈಫಲ್ಯಕ್ಕೂ ಹಿಡಿದ ಕನ್ನಡಿ.

‘ಕಲ್ಯಾಣ’ ಕಾರ್ಯಕ್ರಮಗಳಿಗೂ ಹಣ ಬಿಡುಗಡೆ ಆಗಿಲ್ಲ!

ಬಜೆಟ್‌ನಲ್ಲಿ ಘೋಷಿಸಿರುವಂತೆ ‘ಸಮಾಜ ಕಲ್ಯಾಣ’ ವಿಭಾಗದ ಕಾರ್ಯಕ್ರಮಗಳು, ಯೋಜನೆಗಳು ಫಲಾನುಭವಿಗಳಿಗೆ ವಿಳಂಬವಾಗದಂತೆ ತಲುಪಬೇಕು. ಪ್ರಸ್ತುತ ಬಜೆಟ್‌ನ ಘೋಷಣೆಯೂ ಸೇರಿದಂತೆ ಕೋವಿಡ್ ನಂತರದ ವರ್ಷಗಳಲ್ಲಿ ಒಂಟಿ ಮನೆ, ಅಂಗವಿಕಲರಿಗೆ ದ್ವಿಚಕ್ರ ವಾಹನ, ಸ್ಮಾರ್ಟ್ ಸ್ಟಿಕ್, ಹಿರಿಯ ನಾಗರಿಕರಿಗೆ ವೀಲ್ ಚೇರ್, ವೃತ್ತಿನಿರತ ಮಹಿಳೆಯರಿಗೆ ದ್ವಿಚಕ್ರ ವಾಹನ, ಹೊಲಿಗೆ ಯಂತ್ರಗಳನ್ನೂ ವಿತರಿಸಿಲ್ಲ.

2022–23ನೇ ಸಾಲಿಗೆ ಒಂಟಿ ಮನೆಗಾಗಿ 6,139 ಅರ್ಜಿಗಳು ಬಂದಿದ್ದವು. ಅದರಲ್ಲಿ 1,145 ಅರ್ಜಿಗಳು ಅರ್ಹವಾಗಿದ್ದವು. ಹಿಂದಿನ ಬಾಕಿ ಸೇರಿದಂತೆ 2022–23ನೇ ಸಾಲಿನಲ್ಲಿ 3,259 ಒಂಟಿ ಮನೆ ಹಾಗೂ ಅಮೃತ ಮಹೋತ್ಸವ ಮನೆಗಳನ್ನು ವಿತರಿಸಲು ಗುರಿ ಹೊಂದಲಾಗಿತ್ತು. ಆದರೆ, 593 ಮನೆಗಳನ್ನು ಮಾತ್ರ ವಿತರಿಸಲಾಗಿದೆ.

ಸಮಾಜ ಕಲ್ಯಾಣ ಕಾರ್ಯಕ್ರಮಗಳಿಗೆ 2023–24ನೇ ಸಾಲಿನ ಬಜೆಟ್‌ನಲ್ಲಿ ₹513 ಕೋಟಿ ಹಂಚಿಕೆ ಮಾಡಲಾಗಿದ್ದರೂ, ₹318.60 ಕೋಟಿ ಮೌಲ್ಯದ ಕ್ರಿಯಾಯೋಜನೆಗೆ 2023ರ ನವೆಂಬರ್ 3ರಂದು ಅನುಮೋದನೆ ನೀಡಲಾಗಿದೆ. ಇದರ ಅನುಷ್ಠಾನದ ಪ್ರಕ್ರಿಯೆ ಇನ್ನೂ ಆರಂಭವೇ ಆಗಿಲ್ಲ.

ಪರಿಶಿಷ್ಟ ಜಾತಿ, ಪಂಗಡದ ಪೌರಕಾರ್ಮಿಕರು, ವರ್ಗದವರು, ಹಿಂದುಳಿದ ಮತ್ತು ಅಲ್ಪಸಂಖ್ಯಾತರು, ಆರ್ಥಿಕವಾಗಿ ಹಿಂದುಳಿದ ವರ್ಗದವರು, ಅಂಗವಿಕಲರು, ಮಹಿಳೆಯರು, ಹಿರಿಯ ನಾಗರಿಕರು, ಬೀದಿ ಬದಿ ವ್ಯಾಪಾರಿಗಳು, ಸಾಮಾನ್ಯ ವರ್ಗದ ಕಲ್ಯಾಣ ಕಾರ್ಯಕ್ರಮಗಳು ಮತ್ತು ರಾತ್ರಿ ತಂಗುದಾಣದ ನಿರ್ಮಾಣ ಮತ್ತು ನಿರ್ವಹಣೆಯ ಕೆಲಸಗಳು ಘೋಷಣೆಯಾಗೇ ಉಳಿದಿವೆ.



ಚಾಮರಾಜಪೇಟೆಯ ಬುಲ್ ಟೆಂಪಲ್ ರಸ್ತೆಯಲ್ಲಿ ಪಾದಚಾರಿ ಮಾರ್ಗದ ದುಃಸ್ಥಿತಿ —ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌ಜಿ



ರಾಜರಾಜೇಶ್ವರಿನಗರದ ಪದ್ಮಾವತಿ ಕಲ್ಯಾಣಮಂಟಪ ಮಧ್ಯದಿಂದ ಹೊರಬರುವ ರಾಜಕಾಲುವೆ ಸ್ಥಿತಿ...

ರಾಜಕಾಲುವೆಗಳ ದುಃಸ್ಥಿತಿ ಮುಂದುವರಿಕೆ!

ನಗರದಲ್ಲಿರುವ ಬೃಹತ್ ನೀರುಗಾಲುವೆಗಳನ್ನು ಮಳೆಗಾಲದೊಳಗೆ ನಿರ್ವಹಣೆ ಮಾಡಲು ₹70.20 ಕೋಟಿ ವೆಚ್ಚ ಮಾಡಲು ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ‘ಈ ಕೆಲಸ ಆಗಿದೆ’ ಎಂದು ಹೇಳಲಾಗುತ್ತಿದ್ದರೂ ವಾಸ್ತವದಲ್ಲಿ ರಾಜಕಾಲುವೆಗಳು ಹೂಳಿನಿಂದ ತುಂಬಿಕೊಂಡಿವೆ. ಜೊತೆಗೆ, ಮಳೆಗಾಲದಲ್ಲಿ ತುರ್ತು ಕಾಮಗಾರಿಗಳಿಗೆ ₹15 ಕೋಟಿ ವೆಚ್ಚವಾಗಿರುವ ಕುರುಹು ಕಾಣುತ್ತಿಲ್ಲ. ₹45 ಕೋಟಿ ವೆಚ್ಚದಲ್ಲಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿಗಳನ್ನು ನಡೆಸಲು ಅಧಿಕಾರಿಗಳಿಗೆ ಇನ್ನೂ ಆಸಕ್ತಿ ಬಂದಿಲ್ಲ. ಟೆಂಡರ್ ಆಹ್ವಾನಿಸುವ ಪ್ರಕ್ರಿಯೆಗಳೂ ನಡೆಯದೆ, ನಗರದ ಹಲವು ಭಾಗಗಳಲ್ಲಿ ರಾಜಕಾಲುವೆಗಳ ‘ಮಣ್ಣಿನ ಗೋಡೆ’ಗಳು ಕುಸಿಯುತ್ತಿವೆ.

ರಾಜಕಾಲುವೆ ಒತ್ತುವರಿ ತೆರವು ಮಾಡಲು ಪ್ರತಿ ವಲಯಕ್ಕೆ ತಲಾ ₹1 ಕೋಟಿ ಹಣ ನೀಡಲಾಗಿದೆ. ಆದರೆ, ರಾಜಕಾಲುವೆ–ಕೆರೆಗಳ ಒತ್ತುವರಿ ತೆರವು ಆರಂಭವೇ ಆಗಿಲ್ಲ. ಕೆರೆಗಳ ಅಭಿವೃದ್ಧಿಗೆ ₹45 ಕೋಟಿ ಮೀಸಲಿಟ್ಟರೂ ಹೊಸದಾಗಿ ಒಂದು ಕಾಮಗಾರಿ ಪ್ರಾರಂಭಿಸಿಲ್ಲ.

ಅಪಘಾತ: ಯುವಕ ಸಾವು

ಬೆಂಗಳೂರು: ಉಲ್ಲಾಳ ಕೆರೆಯ ಬಳಿ ಟಿಪ್ಪರ್ ಹಾಗೂ ಬೈಕ್ ನಡುವೆ ಸೋಮವಾರ ಸಂಜೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ಅಗ್ರಹಾರ ದಾಸರಹಳ್ಳಿ ನಿವಾಸಿ ಲಿಖಿತ್ (22) ಮೃತ ಯುವಕ. ಮಲ್ಲತ್ತಹಳ್ಳಿ ನಿವಾಸಿ ಜ್ಞಾನೇಶ್ (23) ಗಂಭೀರವಾಗಿ ಗಾಯಗೊಂಡಿದ್ದು, ಚಿಕಿತ್ಸೆ ಪಡೆಯುತ್ತಿದ್ದಾರೆ.

‘ಲಿಖಿತ್ ಬೈಕ್ ಚಲಾಯಿಸುತ್ತಿದ್ದರು. ಮುಂದೆ ಚಲಿಸುತ್ತಿದ್ದ ಟಿಪ್ಪರ್ ಅನ್ನು ಹಿಂದಿಕ್ಕುವ ಸಂದರ್ಭದಲ್ಲಿ ಅಪಘಾತ ಸಂಭವಿಸಿದೆ. ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ’ ಎಂದು ಕೆಂಗೇರಿ ಸಂಚಾರ ಪೊಲೀಸರು ಹೇಳಿದರು.

11 ಸ್ಕೈವಾಕ್ ನಿರ್ಮಾಣಕ್ಕೆ ಬಿಬಿಎಂಪಿ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಚ್ಚು ಅಪಘಾತಗಳು ಸಂಭವಿಸುತ್ತಿರುವ ಪ್ರಮುಖ ರಸ್ತೆಗಳಲ್ಲಿ ಸ್ಕೈವಾಕ್ ನಿರ್ಮಿಸಬೇಕು ಎಂದು ನಗರ ಸಂಚಾರ ಪೊಲೀಸರು ಸಲಹೆ ನೀಡಿದ್ದು, 11 ಸ್ಥಳಗಳಲ್ಲಿ ಇದರ ಕಾರ್ಯಸಾಧ್ಯತಾ ವರದಿ ತಯಾರಿಸಲು ಬಿಬಿಎಂಪಿ ಮುಂದಾಗಿದೆ.

ನಗರದಲ್ಲಿ ಅಪಘಾತಗಳು ನಡೆಯುತ್ತಿರುವ ಸ್ಥಳಗಳನ್ನು ಸಂಚಾರ ಪೊಲೀಸರು ಗುರುತಿಸಿದ್ದಾರೆ. ಇದರಲ್ಲಿ ‘ಬ್ಲ್ಯಾಕ್ ಸ್ಪಾಟ್’ ಎಂದು 11 ಪ್ರದೇಶಗಳನ್ನು ಗುರುತಿಸಿದೆ. ಇಲ್ಲಿ ರಸ್ತೆ ದಾಟುವ ಸಂದರ್ಭದಲ್ಲಿ ಪಾದಚಾರಿಗಳಿಗೆ ಹೆಚ್ಚಿನ ಅಪಘಾತವಾಗುತ್ತಿದೆ ಹಾಗೂ ವಾಹನ ಸಂಚಾರಕ್ಕೂ ಅಡೆತಡೆಯಾಗುತ್ತಿದೆ. ಹೀಗಾಗಿ ಸ್ಕೈವಾಕ್‌ಗಳನ್ನು ನಿರ್ಮಿಸಬೇಕು ಎಂದು ಬಿಬಿಎಂಪಿಗೆ ಸಂಚಾರ ಪೊಲೀಸರು ವರದಿ ಸಲ್ಲಿಸಿದ್ದಾರೆ.

‘ಪೊಲೀಸರ ಸಲಹೆಯಂತೆ ಬಿಬಿಎಂಪಿ ಸ್ಕೈವಾಕ್‌ಗಳ ನಿರ್ಮಾಣಕ್ಕೆ ಕಾರ್ಯಸಾಧ್ಯತಾ ವರದಿ ಸಿದ್ಧಪಡಿಸಲು ಟೆಂಡರ್ ಆಹ್ವಾನಿಸಿದೆ. ಫೆಬ್ರುವರಿ ಮೊದಲ ವಾರದಲ್ಲಿ ಸಂಸ್ಥೆ ನಿಗದಿ ಮಾಡಿ, 90 ದಿನಗಳಲ್ಲಿ ವರದಿ ನೀಡಲು ಸೂಚಿಸಲಾಗುತ್ತದೆ. ಆ ವರದಿ ಬಂದ ನಂತರ ಯಾವ ಅನುದಾನದಲ್ಲಿ ನಿರ್ಮಿಸಬೇಕು ಅಥವಾ ಸಾರ್ವಜನಿಕ–ಖಾಸಗಿ ಸಹಭಾಗಿತ್ವದ (ಪಿಪಿಪಿ) ಮಾದರಿಗೆ ಆದ್ಯತೆ ಕೊಡಬೇಕೇ ಎಂಬುದನ್ನು ನಿರ್ಧರಿಸಲಾಗುತ್ತದೆ’ ಎಂದು ಬಿಬಿಎಂಪಿ ತಾಂತ್ರಿಕ ಕೋಶದ ಎಂಜಿನಿಯರ್‌ಗಳು ತಿಳಿಸಿದರು.

ಎಲ್ಲೆಲ್ಲಿ ಸ್ಕೈವಾಕ್ ಪ್ರಸ್ತಾವ: ಟ್ಯಾಂಕ್ ಬಂಡ್ ರಸ್ತೆ, ಹೊರವರ್ತುಲ ರಸ್ತೆಯ ಚೌಡೇಶ್ವರಿ ಅಂಡರ್‌ಪಾಸ್ ಬಳಿ, ಕೈಕೊಂಡನಹಳ್ಳಿ ಜಂಕ್ಷನ್, ತುಮಕೂರು ರಸ್ತೆಯ ಆರ್‌ಎಂಸಿ ಯಾರ್ಡ್ ಸಮೀಪ, ಹೊರವರ್ತುಲ ರಸ್ತೆಯ ಎನ್‌ಸಿಸಿ ಅಪಾರ್ಟ್‌ಮೆಂಟ್ ಬಳಿ, ಹೊರ ವರ್ತುಲ ರಸ್ತೆಯ ಬಾಗ್ಮನೆ ಟೆಕ್‌ಪಾರ್ಕ್ ಸಮೀಪ, ಹೂಡಿ ಜಂಕ್ಷನ್, ಹಳೇ ಮದ್ರಾಸ್ ರಸ್ತೆಯ ಜಿಆರ್‌ಟಿ ಜ್ಯುವೆಲರ್ಸ್ ಎದುರು, ಹಳೇ ಮದ್ರಾಸ್ ರಸ್ತೆಯ ಕಾರ್ಲ್ಟನ್ ಟವರ್ ಬಳಿ, ಮೈಸೂರು ರಸ್ತೆಯ ಬಿಎಚ್‌ಇಎಲ್ ಸಮೀಪ, ಸರ್ಜಾಪುರ ರಸ್ತೆಯ ಕೃಪಾನಿಧಿ ಕಾಲೇಜು ಬಳಿ.

ನಗರದಲ್ಲಿ ಇಂದು


ನೂತನವಾಗಿ ನಿರ್ಮಿಸಿರುವ ವಿದ್ಯಾ ಗಣಪತಿ ದೇವಸ್ಥಾನದ ಪುನರ್ ಪ್ರತಿಷ್ಠಾಪನ ಸಮಾರಂಭ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಅತಿಥಿಗಳು: ಡಿ.ಕೆ. ಸುರೇಶ್, ಎಂ. ಮುನಿರತ್ನ, ಜಯಕರ ಎಸ್.ಎಂ., ಶೇಖ್ ಲತೀಫ್, ಸಿ. ಶ್ರೀನಿವಾಸ್, ಸುನೀತ ಎಂ., ಆಯೋಜನೆ ಮತ್ತು ಸ್ಥಳ: ವಿದ್ಯಾ ಗಣಪತಿ ಸಂಘ, ಜ್ಞಾನಭಾರತಿ, ಬೆಳಿಗ್ಗೆ 10.30

‘ಕೆ.ಎಚ್. ಪಾಟೀಲ’ ದತ್ತಿ ಉಪನ್ಯಾಸ: ಉದ್ಘಾಟನೆ: ಎಚ್.ಕೆ. ಪಾಟೀಲ, ‘ಅರಣ್ಯ ಮತ್ತು ಸಹಕಾರ ಕ್ಷೇತ್ರಕ್ಕೆ ಕೆ.ಎಚ್. ಪಾಟೀಲ ಅವರ ಕೊಡುಗೆ’ ಕುರಿತು ಉಪನ್ಯಾಸ: ಎ. ರಾಮಸ್ವಾಮಿ, ಅಧ್ಯಕ್ಷತೆ: ಎಚ್.ಸಿ. ಬಾಲಕೃಷ್ಣ, ಉಪಸ್ಥಿತಿ: ಜಿ.ಕೆ. ನಾರಾಯಣ ರೆಡ್ಡಿ, ಎಚ್.ಜಿ. ಬಾಲಗೋಪಾಲ್, ಎಸ್. ಟಿ. ನಾರಾಯಣಗೌಡ, ಐ. ನಾರಾಯಣ ರೆಡ್ಡಿ, ಹರೀಶ್ ಅಪ್ಪಾರೆಡ್ಡಿ, ಬಿ.ಎನ್. ಶಿವಕುಮಾರ್, ಆಯೋಜನೆ ಮತ್ತು ಸ್ಥಳ: ವಿವೇಕಾನಂದ ಪದವಿ ಪೂರ್ವ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 11

ರಾಜ್ಯಮಟ್ಟದ ಮಹಾ ಅಧಿವೇಶನ: ಉದ್ಘಾಟನೆ: ಮನು ಬಳಿಗಾರ್, ಜಾಗೃತಿ ನುಡಿ: ಮಲ್ಲಿಕಾ ಎಸ್. ಘಂಟಿ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಯೋಜನೆ: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಕೇಂದ್ರ ಕನ್ನಡ ಕ್ರಿಯಾ ಸಮಿತಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11

‘ಇಂದಿನ ಮಾಧ್ಯಮ ಮತ್ತು ಜನತಂತ್ರ ವ್ಯವಸ್ಥೆ’ ವಿಚಾರ–ವಿಮರ್ಶಾ ಗೋಷ್ಠಿ: ಉದ್ಘಾಟನೆ: ವಿ. ಗೋಪಾಲಗೌಡ, ಭಾಗವಹಿಸುವವರು: ಎಸ್.ಆರ್. ಹಿರೇಮಠ, ರವೀಂದ್ರ ಭಟ್ಟ, ಮಹಿಮ ಪಟೇಲ್, ಪೂರ್ಣಿಮಾ, ಸಿ.ಜಿ. ಮಂಜುಳಾ, ರವಿಕೃಷ್ಣಾ ರೆಡ್ಡಿ, ವಿಜಯಲಕ್ಷ್ಮಿ ಶಿಬರೂರು, ಉಪಸ್ಥಿತಿ: ಕುರುಬೂರು ಶಾಂತಕುಮಾರ್, ‘ಮುಖ್ಯಮಂತ್ರಿ’ ಚಂದ್ರು, ನಿರಂಜನಾರಾಧ್ಯ ವಿ.ಪಿ., ವೆಂಕಟಸ್ವಾಮಿ, ಗುರುದೇವ್ ನಾರಾಯಣ ಕುಮಾರ್, ಬಿ.ಎನ್. ಯೋಗಾನಂದ, ಶಿವಣ್ಣ, ಆಯೋಜನೆ: ಕರ್ನಾಟಕ ಜಲ ಸಂರಕ್ಷಣಾ ಸಮಿತಿ, ಸ್ಥಳ: ಶಾಸಕರ ಭವನ–2, ಬೆಳಿಗ್ಗೆ 11

‘ರಾಜ್ಯ ಶಿಕ್ಷಣ ನೀತಿಯಲ್ಲಿ ಪದವಿ ಪೂರ್ವ ಶಿಕ್ಷಣದ ಅಸ್ಮಿತೆ’ ಚಿಂತನಾ ಸಭೆ: ಆಶಯ ನುಡಿ: ಬರಗೂರು ರಾಮಚಂದ್ರಪ್ಪ, ಅತಿಥಿಗಳು: ವಿ.ಪಿ. ನಿರಂಜನಾರಾಧ್ಯ, ಎಚ್.ಎಲ್. ಪುಷ್ಪ, ಶ್ರೀಪಾದ್ ಭಟ್, ತಿಮ್ಮಯ್ಯ ಪುರ್ಲೆ, ಉಪಸ್ಥಿತಿ: ಎಲ್.ಎನ್. ಮುಕುಂದರಾಜ್, ನಂದೀಶ್ ಕುಮಾರ್, ಆರ್. ರಾಜಗೋಪಾಲ್, ಪ್ರವೀಣ್ ಮಹಿಷಿ, ಸಂಧ್ಯಾ ಮೆನೆಂಜೆಸ್, ಗೋಪಾಲಕೃಷ್ಣ, ಕಲೀಂ ಉಲ್ಲಾ, ಎಸ್. ಬೈರೇಗೌಡ, ಆಯೋಜನೆ: ಕರ್ನಾಟಕ ರಾಜ್ಯ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕರ ಸಂಘ, ಸ್ಥಳ: ಮುಖ್ಯಮಂತ್ರಿಗಳ ಸಭಾಂಗಣ, ಸಚಿವಾಲಯ ನೌಕರರ ಕ್ಲಬ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11



ಬರಗೂರು ರಾಮಚಂದ್ರಪ್ಪ

ರಾಜಾ ರಾಮಣ್ಣ ಜನ್ಮಶತ ಮಾನೋತ್ಸವ ಸಮಾರಂಭ: ಉದ್ಘಾಟನೆ: ಸಿ.ಎನ್. ಆರ್.ರಾವ್, ಆಯೋಜನೆ ಮತ್ತು ಸ್ಥಳ: ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಸ್ಥಳ: ಜೆ.ಆರ್.ಡಿ. ಟಾಟಾ ಸಭಾಂಗಣ, ಐಐಎಸ್‌ಸಿ, ಸಂಜೆ 4

‘2014ರ ನಂತರದ ಭಾರತ ಭ್ರಮೆ ಮತ್ತು ವಾಸ್ತವ’ ಕುರಿತು ಉಪನ್ಯಾಸ: ಪರಕಾಲ ಪ್ರಭಾಕರ್, ಉಪಸ್ಥಿತಿ: ಪೂರ್ಣಾ, ಬಿ.ಸಿ. ಬಸವರಾಜು, ಗಂಗಾಧರ್ ಮುಳುಗುಂದ್, ಆಯೋ ಜನೆ: ಜಾಗೃತ ಕರ್ನಾಟಕ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 4ರಿಂದ

ಶಂಕರ ಹಲ್ಲೇಗೆರೆ ಅವರ ‘ಮಕ್ಕಳು–ಮನಗಳು’ ಪುಸ್ತಕ ಬಿಡುಗಡೆ: ಉದ್ಘಾಟನೆ: ವಿಜಯಶಂಕರ್, ಅಧ್ಯಕ್ಷತೆ: ವೈ.ಬಿ.ಎಚ್. ಜಯದೇವ್, ಅತಿಥಿಗಳು: ಕಾ.ವೆಂ. ಶ್ರೀನಿವಾಸಮೂರ್ತಿ, ಚಿಕ್ಕ ಹೆಜ್ಜಾಜಿ ಮಹದೇವ್, ಬಿ.ಡಿ. ಶಾಸ್ತ್ರಿ, ಪುಷ್ಪ ನಾಗಭೂಷಣ್, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಸಾಹಿತ್ಯ ಕೂಟ, ಸ್ಥಳ: ಲಲಿತ ಕಲಾ ಸಭಾಂಗಣ, ಯಶವಂತಪುರ, ಸಂಜೆ 4

ಸಂಗೀತೋತ್ಸವದ ಉದ್ಘಾಟನೆ: ನಾಗಸ್ವರ: ವಿ. ಮುರಳಿ, ಎಂ. ದುರ್ಗೇಶ್, ತವಿಲ್: ಆರ್. ರಘು, ತಾಳ: ಎಸ್. ಪುರುಷೋತ್ತಮ್, ಶೃತಿ: ಎನ್. ರಾಘವನ್, ಅತಿಥಿಗಳು: ವಿ.ಆರ್. ಗೌರಿಶಂಕರ್, ಪ್ರಿನ್ಸ್ ರಾಮವರ್ಮ, ಆಯೋಜನೆ: ಸದ್ಗುರು ತ್ಯಾಗಬ್ರಹ್ಮ ವೈದಿಕ ಆರಾಧನ ಕೈಂಕರ್ಯ ಟ್ರಸ್ಟ್, ಸ್ಥಳ: ಶೃಂಗೇರಿ ಮಠ, ಚಾಮರಾಜಪೇಟೆ, ಸಂಜೆ 5ರಿಂದ

ಫ್ಯೂಷನ್ ಸಂಗೀತ ಮತ್ತು ನೃತ್ಯೋತ್ಸವ: ‘ಧಾತ್ರಿ’ ಹಾರ್ಮೋನಿಯಂ ಮತ್ತು ಅಕಾರ್ಡಿಯನ್ ಫ್ಯೂಷನ್, ಹಾರ್ಮೋನಿಯಂ: ರವೀಂದ್ರ ಕಾಟೋಟಿ, ಅಕಾರ್ಡಿಯನ್: ಎಂ.ಬಿ. ಪ್ರಕಾಶ್, ರವಿ ಬಿ., ಸಾಗರ್ ಸಾಥೆ, ಕೀ–ಬೋರ್ಡ್: ಹರ್ಷ ಜಾಡೆ, ತಬಲ: ಸುಮೀತ್ ನಾಯಕ್, ‘ಬೈಟು ಕಾಫಿ’ ನಾಟಕ ಪ್ರದರ್ಶನ: ಪ್ರಸ್ತುತಿ: ವಿ ಮೂವ್ ಥಿಯೇಟರ್, ರಚನೆ, ನಿರ್ದೇಶನ: ಅಭಿಷೇಕ್ ಅಯ್ಯಂಗಾರ್, ಸಹ ನಿರ್ದೇಶನ: ವಿನಯ್ ಧ್ರುವಕುಮಾರ್, ಬೆಳಕು: ಮಂಜು ನಾರಾಯಣ್, ರಂಗಸಜ್ಜಿಕೆ: ಶ್ರೀನಿವಾಸ್ ಭಾರ್ಗವ್, ಪಾತ್ರಗಳು: ಎಂ.ಎಸ್. ವಿದ್ಯಾ, ಸೂರಜ್ ಕಿರಣ್, ಪ್ರದೀಪ್ ಪ್ರದ್ಯುಮ್ನ, ವಿದ್ಯಾ ಮಧುರಾ, ನವೀನ್, ಅತಿಥಿಗಳು: ಪ್ರಶಾಂತ್ ಹೆಗ್ಡೆ, ಸಿ.ಎಸ್. ಚರಣ್, ಅಶ್ವಿನಿ ಎಂ. ಶ್ರೀಪಾದ್, ಆಯೋಜನೆ: ಇನ್ಫೋಸಿಸ್ ಪ್ರತಿಷ್ಠಾನ, ಸ್ಥಳ: ಖಿಂಚಾ ಸಭಾಂಗಣ, ಭಾರತೀಯ ವಿದ್ಯಾಭವನ, ಸಂಜೆ 6ರಿಂದ

ವಿವಿಧ ವೈದ್ಯಕೀಯ ಸಂಸ್ಥೆಗಳಿಗೆ ಎರಡು ವರ್ಷಗಳಿಂದ ಪೂರೈಕೆ; ಇಬ್ಬರ ವಿಚಾರಣೆ

ಕೇರಳಕ್ಕೆ ಬಯಾಪ್ಸಿ ಮಾದರಿ ಮಾರಾಟ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆ (ನಿಮ್ಹಾನ್ಸ್) ಆಸ್ಪತ್ರೆಯಲ್ಲಿ ಶಸ್ತ್ರಚಿಕಿತ್ಸೆಗೆ ಒಳಪಟ್ಟಿದ್ದ ರೋಗಿಗಳ ಮಿದುಳು ಟ್ಯೂಮರ್ ಬಯಾಪ್ಸಿ ಮಾದರಿಗಳನ್ನು ಕದ್ದು ಅಕ್ರಮವಾಗಿ ಮಾರಾಟ ಮಾಡಿರುವ ಪ್ರಕರಣದ ತನಿಖೆಯನ್ನು ಸಿದ್ದಾಪುರ ಪೊಲೀಸರು ಚುರುಕುಗೊಳಿಸಿದ್ದಾರೆ.

ನಿಮ್ಹಾನ್ಸ್ ಆಸ್ಪತ್ರೆಯ ರಿಜಿಸ್ಟ್ರಾರ್ ಡಾ.ಶಂಕರ್ ನಾರಾಯಣ್ ರಾವ್ ಅವರು ಸಿದ್ದಾಪುರ ಠಾಣೆಗೆ ದೂರು ನೀಡಿದ್ದರು. ದೂರು ಆಧರಿಸಿ, ಆರೋಪಿಗಳಾದ ನಿಮ್ಹಾನ್ಸ್‌ನ ಟೆಕ್ನಿಷಿಯನ್ ಎಂ.ಆರ್.ಚಂದ್ರಶೇಖರ್, ಶವಾಗಾರದ ಸಹಾಯಕ ಎಸ್.ಅಣ್ಣಾ ದೊರೈ ಅವರನ್ನು ಪೊಲೀಸರು ವಿಚಾರಣೆಗೆ ಒಳಪಡಿಸಿದ್ದಾರೆ.

‘ಆರೋಪಿಗಳು, ಎರಡು ವರ್ಷಗಳಿಂದ ಕೇರಳದ ರಘುರಾಮ್ ಹಾಗೂ ಇತರರಿಗೆ ಬಯಾಪ್ಸಿ ಮಾರಾಟ ಮಾಡಿರುವುದು ಗೊತ್ತಾಗಿದೆ. ರಘುರಾಮ್ ಎಂಬಾತ ಕೇರಳದಲ್ಲಿ ಏಜೆಂಟ್ ಆಗಿದ್ದ. ಆರೋಪಿಗಳಿಂದ ಇನ್ನಷ್ಟು ಮಾಹಿತಿ ಪಡೆದುಕೊಳ್ಳಬೇಕಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಮಿದುಳು ಸಂಬಂಧಿ ಸಮಸ್ಯೆಗಳಿಂದ ಬಳಲುತ್ತಿರುವ ರೋಗಿಗಳು ನಿಮ್ಹಾನ್ಸ್ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಾರೆ. ಇಂಥ ರೋಗಿಗಳ ಮಿದುಳು ಟ್ಯೂಮರ್(ಗಡ್ಡೆ) ಬಯಾಪ್ಸಿ ಮಾದರಿಗಳನ್ನು ಸಂಗ್ರಹಿಸುವ ವೈದ್ಯರು, ಶವಾಗಾರದಲ್ಲಿ ಇರಿಸುತ್ತಿದ್ದಾರೆ. ಪ್ರತಿವರ್ಷ ಅಂದಾಜು 1 ಸಾವಿರಕ್ಕೂ ಹೆಚ್ಚು ಬಯಾಪ್ಸಿ ಮಾದರಿ ಪಡೆದು ಶವಾಗಾರದಲ್ಲಿ ಸಂಗ್ರಹಿಸಲಾಗುತ್ತದೆ. ಇಂತಹ ಬಯಾಪ್ಸಿ ಮಾದರಿಗಳನ್ನೇ ಆರೋಪಿಗಳು ಕದ್ದು ಮಾರಾಟ ಮಾಡುತ್ತಿದ್ದರು.

ಆರೋಪಿಗಳು ಮೊದಲ ಹಂತದಲ್ಲಿ ವಿಚಾರಣೆ ಮುಗಿದಿದೆ. ಅವರು ನೀಡಿದ ಮಾಹಿತಿ ಆಧರಿಸಿ, ಪ್ರಕರಣದ ತನಿಖೆ ನಡೆಸಲಾಗುತ್ತಿದೆ. ಕೇರಳದ ಖಾಸಗಿ ಮೆಡಿಕಲ್ ಕಾಲೇಜು ಸೇರಿದಂತೆ ವಿವಿಧ ವೈದ್ಯಕೀಯ ಸಂಸ್ಥೆಗಳಿಗೆ ಮಾರಾಟ ಮಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಪ್ರಕರಣದಲ್ಲಿ ಹಲವರ ಪಾತ್ರ?

‘ಬಯಾಪ್ಸಿ ಮಾರಾಟ ಪ್ರಕರಣದಲ್ಲಿ ಇನ್ನೂ ಹಲವರ ಪಾತ್ರವಿರುವುದು ಕಂಡುಬಂದಿದೆ. ಅವರ ವಿಚಾರಣೆ ಸಹ ನಡೆಸಲಾಗುವುದು. ಎಫ್‌ಐಆರ್ ದಾಖಲಾದ ಆರೋಪಿಗಳು ಜಾಮೀನು ಪಡೆದುಕೊಂಡಿದ್ದಾರೆ. ಲೆಕ್ಕಪರಿಶೋಧನೆ ವರದಿ ಸಲ್ಲಿಕೆ ಮಾಡುವಂತೆ ನಿಮ್ಹಾನ್ಸ್‌ಗೆ ಕೇಳಲಾಗಿತ್ತು. ವರದಿ ಇನ್ನೂ ನಮ್ಮ ಕೈಸೇರಿಲ್ಲ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಮದ್ಯ ಸೇವಿಸಿ ಶಾಲಾ ವಾಹನ ಚಾಲನೆ: ಪ್ರಕರಣ ದಾಖಲು



ಮದ್ಯ ಸೇವಿಸಿ, ಶಾಲಾ ವಾಹನಗಳನ್ನು ಚಾಲನೆ ಮಾಡುತ್ತಿದ್ದ ಶಾಲಾ ವಾಹನ ಚಾಲಕರನ್ನು ತಪಾಸಣೆ ನಡೆಸಿದ ಸಂಚಾರ ಪೊಲೀಸರು.

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮದ್ಯ ಸೇವಿಸಿ, ಶಾಲಾ ವಾಹನಗಳನ್ನು ಚಾಲನೆ ಮಾಡುತ್ತಿದ್ದ ಚಾಲಕರ ವಿರುದ್ಧ ನಗರದಲ್ಲಿ ವಿಶೇಷ ಕಾರ್ಯಾಚರಣೆ ನಡೆಸಿದ ಪೊಲೀಸರು, 16 ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಮಂಗಳವಾರ ಬೆಳಿಗ್ಗೆ 7ರಿಂದ 9.30ರ ವರೆಗೆ ವಿಶೇಷ ಕಾರ್ಯಾಚರಣೆ ನಡೆಸಿದ ಸಂಚಾರ ಪೊಲೀಸರು 3,414 ವಾಹನಗಳನ್ನು ತಪಾಸಣೆಗೆ ಒಳಪಡಿಸಿದ್ದರು. ಅದರಲ್ಲಿ, 16 ಚಾಲಕರು ಮದ್ಯ ಸೇವಿಸಿ ವಾಹನ ಚಾಲನೆ ಮಾಡುತ್ತಿರುವುದು ಪತ್ತೆಯಾಗಿದೆ ಎಂದು ಪೊಲೀಸರು ಹೇಳಿದರು.

₹55ಲಕ್ಷ ಮೌಲ್ಯದ ಬೈಕ್‌ಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ವಿವಿಧೆಡೆ ಬೈಕ್ ಕಳವು ಮಾಡುತ್ತಿದ್ದ ಆರೋಪಿಗಳನ್ನು ಪೊಲೀಸರು ಬಂಧಿಸಿ, ₹55 ಲಕ್ಷ ಮೌಲ್ಯದ ಬೈಕ್‌ಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ವರ್ತೂರು, ಕಾಡಗೋಡಿ, ಕೆ.ಆರ್. ಪುರ, ಜೆ.ಬಿ. ನಗರ, ಚಿಕ್ಕಪೇಟೆ, ಸುದ್ದಗುಂಟೆ ಪಾಳ್ಯ, ಸರ್ಜಾಪುರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡುತ್ತಿದ್ದ ಆನೇಕಲ್ ತಾಲ್ಲೂಕಿನ ದೊಮ್ಮಸಂದ್ರದ ನಿವಾಸಿ ದಿಲೀಪ್ ಕುಮಾರ್ ಹಾಗೂ ಚಿನ್ನಪ್ಪನಹಳ್ಳಿ ನಿವಾಸಿ ರಿಯನ್ ಎಂಬುವರನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಅತ್ತಿಬೆಲೆ ನಿವಾಸಿ ಸಂತೋಷ್ ರೆಡ್ಡಿ ತಲೆಮರೆಸಿಕೊಂಡಿದ್ದು ಶೋಧ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು. ಬಂಧಿತರಿಂದ ₹15 ಲಕ್ಷ ಮೌಲ್ಯದ 24 ಬೈಕ್, 8 ಮೊಬೈಲ್ ಜಪ್ತಿ ಮಾಡಿಕೊಳ್ಳಲಾಗಿದೆ.

ವೈಟ್‌ಫೀಲ್ಡ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡುತ್ತಿದ್ದ ಆರೋಪಿಯನ್ನು ವಶಕ್ಕೆ ಪಡೆದಿರುವ ಪೊಲೀಸರು, ₹18 ಲಕ್ಷ ಮೌಲ್ಯದ ವಿವಿಧ ಕಂಪನಿಗಳ 15 ಬೈಕ್‌ಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.ಮಾರತ್‌ಹಳ್ಳಿ ಠಾಣೆ ಪೊಲೀಸರು, ₹22 ಲಕ್ಷದ 12 ಬೈಕ್‌ಗಳನ್ನು ಜಪ್ತಿ ಮಾಡಿಕೊಂಡಿದ್ದು, ಇಬ್ಬರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

ಪ್ರತ್ಯೇಕ ಅಪಘಾತ: ಇಬ್ಬರ ಸಾವು

ಬೆಂಗಳೂರು: ಹಲಸೂರು ಹಾಗೂ ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಮಂಗಳವಾರ ಸಂಭವಿಸಿದ ಪ್ರತ್ಯೇಕ ಅಪಘಾತದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ಕೋರಮಂಗಲದಲ್ಲಿ ಸಂಭವಿಸಿದ ಅಪಘಾತದಲ್ಲಿ ಸಾಗರ್ (25) ಎಂಬುವರು ಮೃತಪಟ್ಟಿದ್ದಾರೆ.

ಸಾಗರ್ ತನ್ನ ಸ್ನೇಹಿತರಾದ ಶ್ರೀಧರ್, ಶಶಿಕುಮಾರ್ ಜೊತೆಗೆ ಕಾರಿನಲ್ಲಿ ಮಂಗಳವಾರ ಮುಂಜಾನೆ ತೆರಳುತ್ತಿದ್ದರು. ದೊಮ್ಮಲೂರು ಮೇಲ್ಸೇತುವೆ ಬಳಿ ಕಾರು ರಸ್ತೆ ವಿಭಜಕಕ್ಕೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಘಟನೆಯಲ್ಲಿ ಸಾಗರ್ ಮೃತಪಟ್ಟರು. ಗಾಯಗೊಂಡ ಶ್ರೀಧರ್ ಹಾಗೂ ಶಶಿಕುಮಾರ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಬೆಳಗ್ಗಿನ ಜಾವ ಕಾರು ಚಲಾಯಿಸಿಕೊಂಡು ಬರುವಾಗ ನಿದ್ದೆಮಂಪರಿನಲ್ಲಿ ಡಿವೈಡರ್‌ಗೆ ಡಿಕ್ಕಿ ಹೊಡೆದ ಪರಿಣಾಮ ದುರ್ಘಟನೆ ಸಂಭವಿಸಿರುವ ಸಾಧ್ಯತೆಯಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ವೃದ್ಧ ಸಾವು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ನಲ್ಲೂರಳ್ಳಿಯ ನ್ಯೂ ಟೆಂಪಲ್ ರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ನಲ್ಲೂರಹಳ್ಳಿ ನಿವಾಸಿ ಸಿದ್ದಲಿಂಗಯ್ಯ (77) ಅವರು ಮೃತಪಟ್ಟಿದ್ದಾರೆ. ‘ನಡೆದು ತೆರಳುತ್ತಿದ್ದ ಸಿದ್ದಲಿಂಗಯ್ಯ ಅವರಿಗೆ ಕಾರೊಂದರ ಬಾಗಿಲು ಬಡಿದು ಕೆಳಕ್ಕೆ ಬಿದ್ದಿದ್ದರು. ಹಿಂದಿನಿಂದ ಬಂದ ಕಾರು ಅವರ ಮೇಲೆ ಹತ್ತಿದ ಪರಿಣಾಮ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಪೊಲೀಸರು ಹೇಳಿದರು.

400 ಮೀ. ದೂರ ಎಳೆದೊಯ್ದು ದುಷ್ಕೃತ್ಯ

ಮಲ್ಲೇಶ್ವರ: ಕಾರಿನ ಬಾನೆಟ್ ಮೇಲೇರಿದ್ದ ಕ್ಯಾಬ್ ಚಾಲಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪಘಾತ ಮಾಡಿದ್ದನ್ನು ಪ್ರಶ್ನಿಸಿ, ಕಾರಿನ ಬಾನೆಟ್ ಮೇಲೇರಿದ್ದ ಕ್ಯಾಬ್ ಚಾಲಕನನ್ನು 400 ಮೀಟರ್ ದೂರಕ್ಕೆ ಎಳೆದೊಯ್ದು ದುಷ್ಕೃತ್ಯ ಮಲ್ಲೇಶ್ವರದಲ್ಲಿ ನಡೆದಿದೆ.

ಈ ಘಟನೆ ಜ.15ರಂದು ನಡೆದಿದ್ದು, ಕಾರು ಚಾಲಕ ಮಹಮ್ಮದ್ ಮುನೀರ್ ವಿರುದ್ಧ ಎನ್.ಸಿ.ಆರ್ ದಾಖಲು ಮಾಡಿಕೊಂಡು, ತನಿಖೆ ನಡೆಸಲಾಗುತ್ತಿದೆ ಎಂದು ಸಂಚಾರ ಪೊಲೀಸರು ಹೇಳಿದರು. ಘಟನೆಯ ಸಿ.ಸಿ ಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ.

‘ಮಲ್ಲೇಶ್ವರದ ಸರ್ಕಲ್ ಮಾರಮ್ಮ ದೇವಸ್ಥಾನದ ಬಳಿ, ಅಶ್ವತ್ಥ್ ಅವರ ಕ್ಯಾಬ್‌ಗೆ ಮಹಮ್ಮದ್ ಮುನೀರ್ ಎಂಬುವವರ ಕಾರು ಡಿಕ್ಕಿಯಾಗಿತ್ತು. ಆಗ ಕಾರು ನಿಲ್ಲಿಸುವಂತೆ ಅಶ್ವತ್ಥ್ ಅವರು ಮನವಿ ಮಾಡಿದ್ದರು. ಆದರೆ, ಮುನೀರ್ ವಾಹನ ನಿಲ್ಲಿಸದೆ ಮುಂದಕ್ಕೆ ತೆರಳಲು ಪ್ರಯತ್ನಿಸಿದ್ದರು. ಆಗ, ಅಶ್ವತ್ಥ್ ಅವರು ಕಾರಿನ ಬಾನೆಟ್ ಮೇಲೆ ಹತ್ತಿ ಕೆಳಕ್ಕೆ ಇಳಿಯುವಂತೆ ಮನವಿ ಮಾಡಿದ್ದರು. ಅದನ್ನು ಲೆಕ್ಕಿಸದೇ ಅಶ್ವತ್ಥ್ ಅವರನ್ನು ದೂರಕ್ಕೆ ಎಳೆದೊಯ್ದು ದುಷ್ಕೃತ್ಯ ಎಸಗಲಾಗಿದೆ’

‘ಮಲ್ಲೇಶ್ವರದ 18ನೇ ಕ್ರಾಸ್‌ನ ಸಿಗ್ನಲ್ ವರೆಗೂ ಆರೋಪಿ ತನ್ನ ಕಾರು ಚಲಾಯಿಸಿದ್ದು, ಸ್ಥಳೀಯರು ಹಿಂದೆ ಓಡಿದರೂ ಕಾರು ನಿಲ್ಲಿಸಿಲ್ಲ. ಮಾರ್ಗ ಮಧ್ಯದಲ್ಲಿ ಕಾರಿಗೆ ಬ್ರೇಕ್ ಹಾಕಿ ಅಶ್ವತ್ಥ್ ಅವರನ್ನು ಕೆಳಕ್ಕೆ ಬೀಳಿಸುವ ಪ್ರಯತ್ನ ಸಹ ಮಾಡಿದ್ದ’ ಎಂದು ಪೊಲೀಸರು ಹೇಳಿದರು.

ಅಂದೇ ಸ್ಥಳಕ್ಕೆ ಆಗಮಿಸಿದ್ದ ಮಲ್ಲೇಶ್ವರ ಪೊಲೀಸ್ ಠಾಣಾ ಹೊಯ್ಸಳ ಸಿಬ್ಬಂದಿ ಕಾರು ಚಾಲಕನನ್ನು ವಶಕ್ಕೆ ಪಡೆದು ಎನ್.ಸಿ.ಆರ್ ದಾಖಲಿಸಿಕೊಂಡಿದ್ದರು.

‘ಪ್ರಕರಣ ಸಂಬಂಧ ಇದುವರೆಗೂ ಯಾರೂ ದೂರು ನೀಡಿಲ್ಲ. ಸದ್ಯ ಸಿಸಿ ಟಿವಿ ದೃಶ್ಯಗಳನ್ನು ಆಧರಿಸಿ ಮಾಹಿತಿ ಕಲೆ ಹಾಕಲಾಗುತ್ತಿದೆ. ನಂತರ, ಚಾಲಕನ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ಮಾಹಿತಿ ನೀಡಿದ್ದಾರೆ.



ಬಂಧಿತ ಆರೋಪಿಗಳು.

ಕಳ್ಳತನಕ್ಕೆ ಯತ್ನ: ಇಬ್ಬರ ಬಂಧನ

ನೆಲಮಂಗಲ: ಕಳ್ಳತನಕ್ಕೆ ಹೊಂಚು ಹಾಕುತ್ತಿದ್ದ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

ಬೆಂಗಳೂರಿನ ಕಮ್ಮನಹಳ್ಳಿ ನಿವಾಸಿ ಸೈಯದ್ ಸಬೀರ್(35) ಮತ್ತು ಕನಕ ನಗರದ ಅಸ್ಲಾಂ ಪಾಷ(26) ಬಂಧಿತರು.

ಆರೋಪಿಗಳು ನೆಲಮಂಗಲ ಟೌನ್, ವಿಶ್ವನಾಥಪುರ, ಚನ್ನಪಟ್ಟಣ, ಬೆಂಗಳೂರು ನಗರದ ವಿವಿಧ ಠಾಣಾ ವ್ಯಾಪ್ತಿಯಲ್ಲಿ ಕಳವು ಪ್ರಕರಣಗಳಲ್ಲಿ ಭಾಗಿಯಾಗಿದ್ದರು. ಬಂಧಿತರಿಂದ ನೆಲಮಂಗಲ ಟೌನ್ ಹಾಗೂ ವಿಶ್ವನಾಥಪುರ ಠಾಣೆಗಳ ಪ್ರಕರಣಗಳಿಗೆ ಸಂಬಂಧಿಸಿದಂತೆ 50 ಗ್ರಾಂ ಚಿನ್ನ ವಶಕ್ಕೆ ಪಡೆಯಲಾಗಿದೆ.

ವರದಕ್ಷಿಣೆ ಕಿರುಕುಳ ಆರೋಪ: ಗೃಹಿಣಿ ಆತ್ಮಹತ್ಯೆ: ಪತಿ ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜ್ಞಾನಭಾರತಿ ಪೊಲೀಸ್ ಠಾಣಾ ವ್ಯಾಪ್ತಿಯ ನಾಗದೇವನಹಳ್ಳಿಯಲ್ಲಿ ಗೃಹಿಣಿಯೊಬ್ಬರು ನೇಣು ಹಾಕಿಕೊಂಡು ಮಂಗಳವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ರಂಜಿತಾ (27) ಆತ್ಮಹತ್ಯೆ ಮಾಡಿಕೊಂಡ ಗೃಹಿಣಿ.

‘ಪತಿ ಮಧು ಹಾಗೂ ಅವರ ಕುಟುಂಬಸ್ಥರು ವರದಕ್ಷಿಣೆ ಕಿರುಕುಳ ನೀಡುತ್ತಿದ್ದರು ಎಂದು ಆರೋಪಿಸಿ ರಂಜಿತಾ ಪೋಷಕರು ದೂರು ನೀಡಿದ್ದಾರೆ. ಪತಿ ಮಧು ಅವರನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಪೊಲೀಸರು ಹೇಳಿದರು.

‘ಮಂಡ್ಯ ಜಿಲ್ಲೆ ನಾಗಮಂಗಲದ ರಂಜಿತಾ ಅವರು ತುಮಕೂರು ಜಿಲ್ಲೆ ತುರುವೇಕೆರೆಯ ಮಧು ಅವರನ್ನು ಐದು ವರ್ಷದ ಹಿಂದೆ ಮದುವೆಯಾಗಿದ್ದರು. ದಂಪತಿಗೆ ಮೂರು ವರ್ಷದ ಹೆಣ್ಣು ಮಗುವಿದೆ. ರಂಜಿತಾ ಅವರು ಖಾಸಗಿ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದರು. ಮಧು ಕಂಪನಿಯೊಂದರ ಉದ್ಯೋಗಿಯಾಗಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ವರದಕ್ಷಿಣೆ ನೀಡಿಲ್ಲವೆಂದು ಪುತ್ರಿಯನ್ನು ಕೊಲೆ ಮಾಡಲಾಗಿದೆ. ಕಿರುಕುಳದ ಬಗ್ಗೆ ರಂಜಿತಾ ಅವರು ಆಗಾಗ ಹೇಳುತ್ತಿದ್ದರು. ರಂಜಿತಾ ಸಾವಿಗೂ ಮುನ್ನ ವಿಡಿಯೊ ಕರೆ ಮಾಡಿದ್ದರು’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಜ್ಞಾನಭಾರತಿನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿದ್ಯಾರ್ಥಿನಿ ಆತ್ಮಹತ್ಯೆ

ಬೆಂಗಳೂರು: ಹುಳಿಮಾವು ಪೊಲೀಸ್ ಠಾಣಾ ವ್ಯಾಪ್ತಿಯ ಅಪಾರ್ಟ್‌ಮೆಂಟ್‌ವೊಂದರ 29ನೇ ಮಹಡಿಯಿಂದ ಜಿಗಿದು, 7ನೇ ತರಗತಿಯ ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಮಂಗಳವಾರ ಬೆಳಿಗ್ಗೆ 5 ಗಂಟೆ ಸುಮಾರಿಗೆ ಘಟನೆ ನಡೆದಿದೆ. ಆತ್ಮಹತ್ಯೆಗೆ ನಿಖರ ಕಾರಣ ತಿಳಿದು ಬಂದಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಬಿಬಿಎಂಪಿಗೆ ಹೈಕೋರ್ಟ್ ತಪರಾಕಿ: ಕಠಿಣ ಕ್ರಮದ ಎಚ್ಚರಿಕೆ • ಜನಸಾಮಾನ್ಯರ ಹಿತಕಾಯಲು ಸೂಚನೆ

ಉಳ್ಳವರ ಹಿತಕಾಯುವ ಅಧಿಕಾರಿ ವರ್ಗ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜನಸಾಮಾನ್ಯರ ನಿವೇಶನಗಳ ಕಬಳಿಕೆ ಆರೋಪ
- ಪಾಲಿಕೆ ಅಧಿಕಾರಿಗಳ ಶಾಮೀಲು–ದೂರು

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಒಂದು ಶಾಸನಬದ್ಧ ಸಂಸ್ಥೆಯಾಗಿದ್ದು, ಶ್ರೀಸಾಮಾನ್ಯರ ಹಿತಾಸಕ್ತಿ ಈಡೇರಿಸಲು ರಚಿಸಲಾಗಿದೆ. ಇದು ಪ್ರಭಾವಿಗಳ ಹಿತಾಸಕ್ತಿ ರಕ್ಷಣೆಗಾಗಿ ಇಲ್ಲ. ಪ್ರಭಾವಿಗಳ ಹಿತ ಕಾಯುವ ಅಧಿಕಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕಾಗುತ್ತದೆ' ಎಂದು ಹೈಕೋರ್ಟ್ ಖಡಕ್ ಎಚ್ಚರಿಕೆ ನೀಡಿದೆ.

ಕಟ್ಟಡ ತೆರವಿಗೆ ಸಂಬಂಧಿಸಿದಂತೆ ಬಿಬಿಎಂಪಿ ನೀಡಿದ್ದ ನೋಟಿಸ್ ಪ್ರಶ್ನಿಸಿ ಬೆಂಗಳೂರಿನ ರೆಮ್ಕೊ (ಬಿಎಚ್‌ಇಎಲ್) ಬಡಾವಣೆಯ ಎಂ.ಚಂದ್ರಶೇಖರ್ ಸೇರಿದಂತೆ ಇತರ ನಿವಾಸಿಗಳು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅಧಿಕಾರಿಗಳು ಜನಸಾಮಾನ್ಯರ ಸೇವೆಗಾಗಿ ಇದ್ದಾರೆಯೇ ವಿನಃ ಪ್ರಭಾವಿಗಳ ಪರವಾಗಿ ಸೇವೆ ಸಲ್ಲಿಸಲು ಅಲ್ಲ' ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

ವಿಚಾರಣೆ ವೇಳೆ ಅರ್ಜಿದಾರರು, 'ಮಿರ್ಲೆ ವರದರಾಜ್ ಮತ್ತು ಅವರ ಸಂಬಂಧಿ ಮಂಜುನಾಥ್ ಎಂಬವರು ಬಿಬಿಎಂಪಿ ಅಧಿಕಾರಿಗಳೊಂದಿಗೆ ಶಾಮೀಲಾಗಿ ನಮ್ಮ ಜಮೀನು ಕಬಳಿಸಿದ್ದಾರೆ. ಈ ಸಂಬಂಧ ದೂರು ನೀಡಿದ್ದರೂ ಬಿಬಿಎಂಪಿ ಅಧಿಕಾರಿಗಳು ಕ್ರಮ ಜರುಗಿಸಿಲ್ಲ' ಎಂಬ ಆಕ್ಷೇಪಣೆಯನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, 'ಬಿಬಿಎಂಪಿ ಅಧಿಕಾರಿಗಳು ಖಾಸಗಿ ವ್ಯಕ್ತಿಗಳೊಂದಿಗೆ ಕೈಜೋಡಿಸಿರುವ ಆರೋಪಕ್ಕೆ ಸಂಬಂಧಿಸಿದ ಸತ್ಯಾಸತ್ಯತೆ ಪತ್ತೆ ಹಚ್ಚಲು ಪಾಲಿಕೆ ಮುಖ್ಯ ಆಯುಕ್ತರು ಕ್ರಮ ವಹಿಸಬೇಕು' ಎಂದು ನಿರ್ದೇಶಿಸಿದೆ.





ಸರ್ಕಾರಿ ಅಧಿಕಾರಿಗಳು ಸಂವಿಧಾನಬದ್ಧವಾಗಿ ಕಾರ್ಯನಿರ್ವಹಿಸಬೇಕು. ಖಾಸಗಿ ವ್ಯಕ್ತಿಗಳ ಕೈಗೊಂಬೆಯಾಗಿ ಕಾರ್ಯ ನಿರ್ವಹಣೆ ಮಾಡಬಾರದು.

ಸೂರಜ್ ಗೋವಿಂದರಾಜು
ನ್ಯಾಯಮೂರ್ತಿ

'ಮಿರ್ಲೆ ವರದರಾಜು ಮತ್ತು ಮಂಜುನಾಥ್ ಪ್ರಕರಣದ ಆಸ್ತಿಯ ಮೇಲೆ ಹಕ್ಕು ಹೊಂದಿರಬಹುದು ಅಥವಾ ಇಲ್ಲದಿರಬಹುದು. ಆದರೆ, ಅಧಿಕಾರಿಗಳು ಖಾಸಗಿ ವ್ಯಕ್ತಿಗಳ ಪರವಾಗಿ ಕೆಲಸ ಮಾಡುವುದು ಕಾನೂನಿಗೆ ವಿರುದ್ಧ' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣವೇನು?: ರಾಜ್ಯ ಸರ್ಕಾರದಿಂದ ಸ್ವಾಧೀನಪಡಿಸಿಕೊಂಡಿದ್ದ ಭೂಮಿಯಲ್ಲಿ ಬಿಎಚ್‌ಇಎಲ್ ಅಧೀನದ 'ರೆಮ್ಕೊ' ಗೃಹ ನಿರ್ಮಾಣ ಸಹಕಾರ ಸಂಘ ಬಡಾವಣೆ ನಿರ್ಮಿಸಿ 1992ರಲ್ಲಿ ನಿವೇಶನಗಳನ್ನು ನಿರ್ಮಿಸಿ ಹಂಚಿಕೆ ಮಾಡಲಾಗಿತ್ತು. ಏತನ್ಮಧ್ಯೆ, ಕೆಲ ಭೂ ಮಾಲೀಕರು 'ಸ್ವಾಧೀನ ಪ್ರಕ್ರಿಯೆ ಕಾನೂನು ಬಾಹಿರ' ಎಂದು ಆಕ್ಷೇಪಿಸಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ್ದ ನ್ಯಾಯಪೀಠ ಸ್ವಾಧೀನ ಪ್ರಕ್ರಿಯೆಯನ್ನು ರದ್ದುಪಡಿಸಿತ್ತು. ಬಳಿಕ ಸೊಸೈಟಿಯು ಭೂ ಮಾಲೀಕರನ್ನು ಸಂಪರ್ಕಿಸಿ ಹೆಚ್ಚುವರಿಯಾಗಿ ಪರಿಹಾರ ನೀಡುವುದಾಗಿ ಚರ್ಚೆ ನಡೆಸಿತ್ತು. ಇದಕ್ಕೆ ಒಪ್ಪಿಗೆ ಸೂಚಿಸಿದ್ದ ಭೂ ಮಾಲೀಕರು ತಮ್ಮ ಜಮೀನನ್ನು ಸೊಸೈಟಿಗೆ ಬಿಟ್ಟುಕೊಟ್ಟಿದ್ದರು.

ಈ ಬಡಾವಣೆಯಲ್ಲಿ ನಿವೇಶನ ಪಡೆದ ಬಳಿಕ ಸಂಘದಿಂದ ಮಾಲೀಕರು ಸ್ವಾಧೀನಾನುಭವ ಪತ್ರ ಪಡೆದುಕೊಂಡಿದ್ದರು. ಖಾತೆಯನ್ನೂ ತಮ್ಮ ಹೆಸರಿಗೆ ಮಾಡಿಕೊಂಡಿದ್ದರು ಮತ್ತು ತೆರಿಗೆಯನ್ನೂ ಪಾವತಿಸಿದ್ದರು. ಅಂತೆಯೇ, ಒತ್ತುವರಿದಾರರಿಂದ ಈ ನಿವೇಶನಗಳನ್ನು ರಕ್ಷಣೆ ಮಾಡುವುದಕ್ಕಾಗಿ ಕಾಂಪೌಂಡ್ ಕಟ್ಟಲಾಗಿತ್ತು.

ಈ ಬೆಳವಣಿಗೆಗಳ ಮಧ್ಯೆ, 'ಮಿರ್ಲೆ ವರದರಾಜು ಮತ್ತು ಸಂಬಂಧಿಕರು ಅಧಿಕಾರಿಗಳೊಂದಿಗೆ ಶಾಮೀಲಾಗಿ ನಿವೇಶನಗಳನ್ನು ತಮ್ಮ ಹೆಸರಿಗೆ ಖಾತಾ ಮಾಡಿಕೊಳ್ಳಲು ಮುಂದಾಗಿದ್ದಾರೆ' ಎಂದು ಪಾಲಿಕೆ ಅಧಿಕಾರಿಗಳಿಗೆ ದೂರು ನೀಡಲಾಗಿತ್ತು. ಈ ದೂರನ್ನು ಲೆಕ್ಕಿಸದ ಬಿಬಿಎಂಪಿ, 'ಬಡಾವಣೆಯ ನಿವಾಸಿಗಳಿಂದ ಕಟ್ಟಡಗಳ ನಕ್ಷೆ ಉಲ್ಲಂಘನೆಯಾಗಿದೆ' ಎಂದು ನೋಟಿಸ್ ನೀಡಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

'ಉಲ್ಲಂಘನೆಯಾದರೆ ದಂಡ'

'ನಕ್ಷೆ ಮಂಜೂರಾತಿ ಪಡೆಯದೆ ನಿರ್ಮಿಸಿರುವ ಕಟ್ಟಡಗಳನ್ನು ನೆಲಸಮ ಮಾಡುವ ಬದಲು ಬಿಬಿಎಂಪಿ ಬೈ–ಲಾ ಉಲ್ಲಂಘನೆಯಾಗಿದ್ದರೆ ಅದಕ್ಕೆ ಸಂಬಂಧಿಸಿದಂತೆ ಸೂಕ್ತ ನಿರ್ದೇಶನ ನೀಡಬಹುದು. ಉಲ್ಲಂಘನೆ ಮಾಡಿರುವುದನ್ನು ಪರಿಗಣಿಸಿ ಅಂತಹ ಕಟ್ಟಡಗಳನ್ನು ಸಕ್ರಮಗೊಳಿಸಲು ಬೈ–ಲಾದಲ್ಲಿ ಅವಕಾಶವಿದೆ. ನಕ್ಷೆ ಉಲ್ಲಂಘನೆ ಮಾಡಿದ ದಿನದಿಂದ ತೆರಿಗೆ ಮತ್ತು ದಂಡ ಪಾವತಿಸುವಂತೆ ಸೂಚನೆ ನೀಡಬಹುದು' ಎಂದು ನ್ಯಾಯಪೀಠ ತನ್ನ ಆದೇಶದಲ್ಲಿ ವಿವರಿಸಿದೆ.

ಪಾರ್ಕಿಂಗ್: ಬಿಬಿಎಂಪಿಗೆ ಶುಲ್ಕ ಪಾವತಿಸದ ಏಜೆನ್ಸಿ

• ನವೀನ್ ಮಿನೇಜಸ್

ಬೆಂಗಳೂರು: ಬಿಬಿಎಂಪಿಯ 11 ರಸ್ತೆಗಳಲ್ಲಿನ 'ಪಾವತಿ ಪಾರ್ಕಿಂಗ್' ವ್ಯವಸ್ಥೆಯಿಂದ ಬಿಬಿಎಂಪಿಗೆ ಮೂರು ವರ್ಷಗಳಿಂದ ಒಂದು ರೂಪಾಯಿಯೂ ಸಂದಾಯವಾಗಿಲ್ಲ. ಗುತ್ತಿಗೆ ಪಡೆದಿರುವ ಖಾಸಗಿ ಏಜೆನ್ಸಿಗಳು ಪಾರ್ಕಿಂಗ್ ಶುಲ್ಕವನ್ನು ಸಂಗ್ರಹಿಸುತ್ತಿದ್ದರೂ ಪಾಲಿಕೆಗೆ ಪಾವತಿಸಿಲ್ಲ.

ಪಾರ್ಕಿಂಗ್ ಶುಲ್ಕದಲ್ಲಿ ಬಿಬಿಎಂಪಿ ಪಾಲಿನ ಹಣವನ್ನು ಪಾವತಿಸದ ಗುತ್ತಿಗೆದಾರರ ಮೇಲೆ ಪಾಲಿಕೆ, ಪೊಲೀಸರಿಗೆ ದೂರು ದಾಖಲಿಸಿಲ್ಲ ಹಾಗೂ ಗುತ್ತಿಗೆಯನ್ನೂ ಸ್ಥಗಿತಗೊಳಿಸಿಲ್ಲ.

ಮಾಹಿತಿ ಹಕ್ಕು ಕಾಯ್ದೆಯಡಿ ಮರಿಲಿಂಗೇಗೌಡ ಮಾಲಿ ಪಾಟೀಲ್ ಅವರು ದಾಖಲೆಗಳನ್ನು ಪಡೆದುಕೊಂಡಿದ್ದು, ಅದರ ಪ್ರಕಾರ, 2019ರ ಆಗಸ್ಟ್‌ನಲ್ಲಿ 'ಪಾವತಿ ಪಾರ್ಕಿಂಗ್' ಗುತ್ತಿಗೆಯನ್ನು ನೀಡಲಾಗಿದೆ. 2021ರ ಏಪ್ರಿಲ್‌ನಿಂದ ಪಾಲಿಕೆಗೆ ಗುತ್ತಿಗೆದಾರರು ಶುಲ್ಕ ಪಾವತಿಲ್ಲ.

84 ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಿಸಲು ಹಲವು ಏಜೆನ್ಸಿಗಳಿಗೆ ಪಾಲಿಕೆ ಗುತ್ತಿಗೆಯನ್ನು ನೀಡಿದ್ದು, ಪ್ರತಿ ವರ್ಷ ₹31.60 ಕೋಟಿ ಶುಲ್ಕ ಸಂಗ್ರಹಿಸುತ್ತಿತ್ತು. ಎರಡು ವರ್ಷ ಕೋವಿಡ್‌ನಿಂದಾಗಿ ಏಜೆನ್ಸಿಗಳು ರಿಯಾಯಿತಿ ಪಡೆದುಕೊಂಡಿದ್ದವು.

2020ರ ಅಕ್ಟೋಬರ್‌ನಿಂದ 2021ರ ಮೇ ತಿಂಗಳವರೆಗೆ ಒಂಬತ್ತು ರಸ್ತೆಗಳ ಶುಲ್ಕವನ್ನು ಕಡಿಮೆ ಮಾಡಿದ್ದ ಪಾಲಿಕೆ ₹28 ಲಕ್ಷ ನಿಗದಿಪಡಿಸಿತ್ತು. ಈ ₹28 ಲಕ್ಷವನ್ನೂ ಪಾಲಿಕೆ ಪಾವತಿಸದ ಏಜೆನ್ಸಿ, ಕನ್ನಿಗ್‌ಹ್ಯಾಮ್ ರಸ್ತೆ, ಎಂ.ಜಿ. ರಸ್ತೆ, ಮಲ್ಯ ಆಸ್ಪತ್ರೆ ರಸ್ತೆ, ರೆಸಿಡೆನ್ಸಿ ರಸ್ತೆ, ಸೇಂಟ್ ಮಾರ್ಕ್ಸ್ ರಸ್ತೆ, ಚರ್ಚ್ ಸ್ಟ್ರೀಟ್ ಸೇರಿದಂತೆ ಇತರೆ ರಸ್ತೆಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಿಸುತ್ತಿದೆ. ಅಲ್ಲದೆ, ಮುಂಗಡವಾಗಿ ಶುಲ್ಕ ಪಾವತಿಸದ ವಾಹನ ಸವಾರರಿಗೆ ₹500 ದಂಡವನ್ನೂ ವಿಧಿಸುತ್ತಿದೆ.

ಬಿಬಿಎಂಪಿ ಕಳೆದ ವರ್ಷ ₹2.6 ಕೋಟಿಯನ್ನು ಕೂಡಲೇ ಪಾವತಿಸಬೇಕು ಎಂದು ಏಜೆನ್ಸಿಗೆ ನೋಟಿಸ್ ಜಾರಿ ಮಾಡಿತ್ತು. ಏಳು ದಿನಗಳಲ್ಲಿ ಪಾವತಿ ಮಾಡದಿದ್ದರೆ ಕ್ರಮ ಕೈಗೊಳ್ಳುವುದಾಗಿ ತಿಳಿಸಲಾಗಿತ್ತು.

'ನಮ್ಮ ನೋಟಿಸ್‌ಗೆ ಏಜೆನ್ಸಿ ಪ್ರತಿಕ್ರಿಯಿಸಿದ್ದು, ಸುಮಾರು ₹25 ಲಕ್ಷ ಪಾವತಿಸಿದೆ' ಎಂದು ಬಿಬಿಎಂಪಿ ಕಾರ್ಯಪಾಲಕ ಎಂಜಿನಿಯರ್ ಎಂ.ಟಿ. ಬಾಲಾಜಿ ತಿಳಿಸಿದರು.



ಇನ್ಫೊಸಿಸ್ ಪ್ರತಿಷ್ಠಾನ ಹಾಗೂ ಭಾರತೀಯ ವಿದ್ಯಾಭವನದ ಸಹಯೋಗದಲ್ಲಿ ಮಂಗಳವಾರ ನಡೆದ 'ಫ್ಯೂಷನ್ ಸಂಗೀತ ಹಾಗೂ ನೃತ್ಯೋತ್ಸವ' ಕಾರ್ಯಕ್ರಮದಲ್ಲಿ ಅಮಿತ್ ನಾಡಿಗ್ ಅವರು ಕೊಳಲು ವಾದನ ಪ್ರಸ್ತುತಪಡಿಸಿದರು. ಮ್ಯಾಥಿಯಾಸ್ ಶ್ರೀಫಲ್ ಅವರು ಟ್ರಂಪೆಟ್‌ನೊಂದಿಗೆ ಸಾಥ್ ನೀಡಿದರು. – ಪ್ರಜಾವಾಣಿ ಚಿತ್ರ

ಬಿಬಿಎಂಪಿಗೆ ₹675 ಕೋಟಿ ಬಿಡುಗಡೆ

ಬೆಂಗಳೂರು: ವಿಶೇಷ ಮೂಲಸೌಕರ್ಯಕ್ಕೆ ಬಂಡವಾಳ ಬೆಂಬಲ ಯೋಜನೆಯ ₹3 ಸಾವಿರ ಕೋಟಿ ಅನುದಾನದಲ್ಲಿ ಮೂರನೇ ತ್ರೈಮಾಸಿಕದ ₹675 ಕೋಟಿಯನ್ನು ಬಿಬಿಎಂಪಿಗೆ ಸರ್ಕಾರ ಜ.23ರಂದು ಬಿಡುಗಡೆ ಮಾಡಿದೆ.

ಬಂಡವಾಳ ಬೆಂಬಲ ಯೋಜನೆಯ ಕಾಮಗಾರಿಗಳಿಗೆ ಮಾತ್ರ ಈ ಅನುದಾನವನ್ನು ಬಿಡುಗಡೆ ಮಾಡಬೇಕು ಎಂದು ಬಿಬಿಎಂಪಿಗೆ ಷರತ್ತು ವಿಧಿಸಲಾಗಿದೆ.

ಯೋಜನೆಯ ₹3 ಸಾವಿರ ಕೋಟಿ ಅನುದಾನದಲ್ಲಿ ಮೊದಲ ಎರಡು ತ್ರೈಮಾಸಿಕದಲ್ಲಿ ₹1,350 ಕೋಟಿಯನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ₹2,150 ಕೋಟಿ ಮೊತ್ತದ ಬಿಲ್‌ಗಳು ಇನ್ನೂ ಬಾಕಿ ಉಳಿದಿವೆ. ಈ ಬಿಲ್‌ಗಳನ್ನು ಪಾವತಿಸದಿದ್ದಲ್ಲಿ ಕಾಮಗಾರಿಗಳು ಕುಂಠಿತವಾಗುವ ಸಂಭವ ಇರುತ್ತದೆ. ಹೀಗಾಗಿ, ಮೂರನೇ ತ್ರೈಮಾಸಿಕದ ₹675 ಕೋಟಿ ಅನುದಾನವನ್ನು ಬಾಕಿ ಬಿಲ್‌ಗಳಿಗೆ ತುರ್ತಾಗಿ ಬಿಡುಗಡೆ ಮಾಡಲು ಮುಖ್ಯ ಆಯುಕ್ತರು ಕ್ರಮ ಕೈಗೊಳ್ಳಬೇಕು ಎಂದು ಅನುದಾನ ಬಿಡುಗಡೆ ಆದೇಶದಲ್ಲಿ ಸೂಚಿಸಲಾಗಿದೆ.

ಎರಡನೇ ತ್ರೈಮಾಸಿಕದಲ್ಲಿ ಬಿಡುಗಡೆ ಮಾಡಲಾಗಿದ್ದ ₹675 ಕೋಟಿಯಲ್ಲಿ ₹100 ಕೋಟಿಯನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತ ಸಂಸ್ಥೆಗೆ ಬಿಡುಗಡೆ ಮಾಡಲು ಆದೇಶಿಸಲಾಗಿತ್ತು. ಈ ಹಣವನ್ನು ಮುಂದುವರಿದ ಕಾಮಗಾರಿಗಳಿಗೆ ವಿನಿಯೋಗಿಸಬೇಕು ಎಂದು ತಿಳಿಸಲಾಗಿದೆ.

26 ರಂದು ಜಿ.ಬಿ.ಎಸ್ ವಾಕಥಾನ್

ಬೆಂಗಳೂರು: ಗಣರಾಜ್ಯೋತ್ಸವದ ಅಂಗವಾಗಿ ಇದೇ 26ರಂದು ಜ್ಞಾನಬೋಧಿನಿ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳು 'ಜಿ.ಬಿ.ಎಸ್ ವಾಕಥಾನ್–2024' ಜಾಥಾವನ್ನು ಮೈಸೂರು ರಸ್ತೆಯಲ್ಲಿರುವ ಆರ್.ವಿ. ಕಾಲೇಜು ಬಳಿಯ ಜ್ಞಾನಬೋಧಿನಿ ಪ್ರಾಥಮಿಕ ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಶಾಲೆಯ ಕೆ.ಜಿ. ಚಂದ್ರಶೇಖರ್, 'ನಾಲ್ಕು ಕಿ.ಮೀ. ಮೀಟರ್ ವಾಕಥಾನ್ ಆಯೋಜಿಸಲಾಗಿದೆ. ವಾಕಥಾನ್‌ನಲ್ಲಿ ಭಾಗಹಿಸುವ ಎಲ್ಲರಿಗೂ ಪದಕ ಹಾಗೂ ಪ್ರಮಾಣ ಪತ್ರ ನೀಡಲಾಗುವುದು' ಎಂದರು.

ಕರ್ತವ್ಯದ ಅವಧಿಯಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗಿ

ತಪ್ಪೊಪ್ಪಿಕೊಂಡ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ತವ್ಯದ ಅವಧಿಯಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗಿಯಾಗಿದ್ದ ಯಲಹಂಕ ತಾಲ್ಲೂಕು ಕಚೇರಿಯ 38 ಅಧಿಕಾರಿಗಳು, ಸಿಬ್ಬಂದಿ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ಎದುರು ತಪ್ಪೊಪ್ಪಿಕೊಂಡಿದ್ದಾರೆ.

ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಒಂಬತ್ತು ತಾಲ್ಲೂಕು ಕಚೇರಿಗಳಲ್ಲಿ ಲೋಕಾಯುಕ್ತದ ಪೊಲೀಸ್ ಹಾಗೂ ನ್ಯಾಯಾಂಗ ವಿಭಾಗಗಳ ಅಧಿಕಾರಿಗಳು ಶನಿವಾರ ದಿಢೀರ್ ತಪಾಸಣೆ ನಡೆಸಿದ್ದರು. ಯಲಹಂಕ ತಾಲ್ಲೂಕು ಕಚೇರಿಯ 54 ಅಧಿಕಾರಿಗಳು, ಸಿಬ್ಬಂದಿ ಪೈಕಿ 38 ಮಂದಿ ಕಚೇರಿಯಲ್ಲಿರಲಿಲ್ಲ.

ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ಅನುಮತಿ ಕೋರಿ 38 ಜನರು ತಹಶೀಲ್ದಾರ್ ಅವರಿಗೆ ಮನವಿ ಸಲ್ಲಿಸಿರುವ ಪಟ್ಟಿ ತನಿಖಾ ತಂಡಕ್ಕೆ ಸಿಕ್ಕಿತ್ತು. ಈ ಆಧಾರದಲ್ಲಿ ಸೋಮವಾರ ಲೋಕಾಯುಕ್ತರ ಎದುರು ವಿಚಾರಣೆಗೆ ಹಾಜರಾಗುವಂತೆ ಎಲ್ಲರಿಗೂ ಸೂಚಿಸಲಾಗಿತ್ತು.

‘ಕೆಲಸದ ಅವಧಿಯಲ್ಲಿ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲು ತಹಶೀಲ್ದಾರ್ ಒಪ್ಪಿಗೆ ನೀಡಿದ್ದರು ಎಂಬುದಾಗಿ 38 ಮಂದಿ ಹೇಳಿದರು. ಆದರೆ, ತಹಶೀಲ್ದಾರ್ ಅದನ್ನು ನಿರಾಕರಿಸಿದರು. ಬಳಿಕ 38 ಮಂದಿಯೂ ತಪ್ಪೊಪ್ಪಿಕೊಂಡರು’ ಎಂದು ಲೋಕಾಯುಕ್ತರು ‘ಪ್ರಜಾವಾಣಿ’ಗೆ ತಿಳಿಸಿದರು.

ವರದಿ ಸಲ್ಲಿಸಲು ಸೂಚನೆ: ಈ 38 ಅಧಿಕಾರಿಗಳು, ನೌಕರರು ಎರಡು ತಿಂಗಳ ಅವಧಿಯಲ್ಲಿ ವಿಲೇವಾರಿ ಮಾಡಿರುವ ಕಡತಗಳು, ಅರ್ಜಿಗಳು, ಸ್ಥಳ ತಪಾಸಣೆ ಸೇರಿದಂತೆ ಅವರ ಕೆಲಸದ ಕುರಿತು ವರದಿ ಸಲ್ಲಿಸುವಂತೆ ತಹಶೀಲ್ದಾರ್‌ಗೆ ಸೂಚನೆ ನೀಡಲಾಗಿದೆ. ಕಡತಗಳನ್ನು ಬಾಕಿ ಇರಿಸಿಕೊಂಡಿರುವ ಕುರಿತೂ ಸಂಬಂಧಿಸಿದ ಅಧಿಕಾರಿ, ನೌಕರರು ವಿವರಣೆ ಸಲ್ಲಿಸುವಂತೆ ಸೂಚಿಸಲಾಗಿದೆ ಎಂದರು.

ತಹಶೀಲ್ದಾರ್‌ಗೆ ಎಚ್ಚರಿಕೆ

ಲೋಕಾಯುಕ್ತದ ಅಧಿಕಾರಿಗಳ ತಂಡ ದಿಢೀರ್ ತಪಾಸಣೆ ನಡೆಸಿದಾಗ ಕಚೇರಿಯಿಂದ ದೂರವಿದ್ದ ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್ ವಿಜಯಕುಮಾರ್ ಕೂಡ ಸೋಮವಾರ ವಿಚಾರಣೆಗೆ ಹಾಜರಾಗಿದ್ದರು.

‘ಹೈಕೋರ್ಟ್ ಪ್ರಕರಣವೊಂದರ ಸಂಬಂಧ ಚರ್ಚಿಸಲು ವಕೀಲರ ಬಳಿ ಇದ್ದ ಕಾರಣ ದೂರವಾಣಿ ಕರೆ ಸ್ವೀಕರಿಸಿಲ್ಲ ಎಂದು ತಹಶೀಲ್ದಾರ್ ಸಮಜಾಯಿಷಿ ನೀಡಿದರು. ಎರಡು ತಿಂಗಳ ಅವಧಿಯ ಕೆಲಸಗಳ ಕುರಿತು ವರದಿ ಸಲ್ಲಿಸುವಂತೆ ಅವರಿಗೂ ಸೂಚಿಸಿದ್ದೇನೆ’ ಎಂದು ಲೋಕಾಯುಕ್ತರು ತಿಳಿಸಿದರು.

ಗಣರಾಜ್ಯೋತ್ಸವಕ್ಕೆ ವಂಡರ್ ಲಾ ರಿಯಾಯಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣರಾಜ್ಯೋತ್ಸವದ ಅಂಗವಾಗಿ ವಂಡರ್‌ಲಾ ಹಾಲಿಡೇಸ್ ಸಂಸ್ಥೆ ತನ್ನ ಪಾರ್ಕ್‌ಗೆ ಮುಂಗಡ ಟಿಕೆಟ್ ಕಾಯ್ದಿರಿಸುವವರಿಗೆ ರಿಯಾಯಿತಿ ಕೊಡಗೆಯನ್ನು ಪ್ರಕಟಿಸಿದೆ.

ಜನವರಿ 26ರಿಂದ 28ರವರೆಗೆ ಪಾರ್ಕ್‌ಗೆ ಪ್ರವೇಶಿಸಲು ₹999ರ ದರದಲ್ಲಿ ಮುಂಗಡ ಟಿಕೆಟ್ ಕಾಯ್ದಿರಿಸಬಹುದು. ಇದಲ್ಲದೆ, ‘ವಂಡರ್ ವುಮೆನ್’ ಕೊಡುಗೆಯಲ್ಲಿ ಪ್ರತಿ ಬುಧವಾರದಂದು ಮಹಿಳೆಯರು ‘ಎರಡು ಟಿಕೆಟ್ ಖರೀದಿಸಿದರೆ, 2 ಟಿಕೆಟ್ ಅನ್ನು ಉಚಿತವಾಗಿ ಪಡೆಯಲಿದ್ದಾರೆ’. ಮೂರು ದಿನ ಮೊದಲು ಮುಂಗಡವಾಗಿ ಟಿಕೆಟ್ ಕಾಯ್ದಿರಿಸಿದರೆ ಶೇ 10ರಷ್ಟು ರಿಯಾಯಿತಿಯನ್ನೂ ಪಡೆಯಬಹುದು. ಈ ಕೊಡುಗೆಗಳು ಆನ್‌ಲೈನ್‌ನಲ್ಲಿ ಮಾತ್ರ ಲಭ್ಯವಿದೆ ಎಂದು ಪ್ರಕಟಣೆ ತಿಳಿಸಿದೆ. ಮುಂಗಡ ಟಿಕೆಟ್ ಬುಕ್ಕಿಂಗ್‌ಗಾಗಿ https://bookings.wonderla.com/ ಇಲ್ಲಿಗೆ ಭೇಟಿ ನೀಡಬಹುದು.



ರಾಜರಾಜೇಶ್ವರಿ ನಗರದ ಚನ್ನಸಂದ್ರದಲ್ಲಿ ವೀರಾಂಜನೆಯ ಸ್ವಾಮಿ ದೇವಸ್ಥಾನದ ಮಹಾದ್ವಾರವನ್ನು ಆದಿಚುಂಚನಗಿರಿ ಮಠದ ವಿಜಯನಗರ ಶಾಖಾ ಮಠದ ಸೌಮ್ಯನಾಥ ಸ್ವಾಮೀಜಿ ಉದ್ಘಾಟಿಸಿದರು. ತಮಿಳುನಾಡು ಆದಿಚುಂಚನಗಿರಿ ವಿದ್ಯಾಸಂಸ್ಥೆಗಳ ಕಾರ್ಯದರ್ಶಿ ಬಿ.ಟಿ. ರಾಮಚಂದ್ರ ಹಾಗೂ ಗಂಗಮ್ಮ ನರಸಿಂಹಯ್ಯ ಭಾಗವಹಿಸಿದ್ದರು.

ನ್ಯಾಯಯಾತ್ರೆಗೆ ಅಡ್ಡಿ: ಕಾಂಗ್ರೆಸ್ ಆಕ್ರೋಶ

ಬಿಜೆಪಿ ಗೊಡ್ಡು ಬೆದರಿಕೆಗೆ ಕಾಂಗ್ರೆಸ್ ಹೆದರಲ್ಲ: ಡಿ.ಕೆ.ಶಿವಕುಮಾರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ನೇತೃತ್ವದಲ್ಲಿ ನಡೆಯುತ್ತಿರುವ ‘ಭಾರತ್ ಜೊಡೊ ನ್ಯಾಯಯಾತ್ರೆ’ಗೆ ತಡೆ ಒಡ್ಡಿದ ಕ್ರಮ ಖಂಡಿಸಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ-(ಕೆಪಿಸಿಸಿ) ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಕಾಂಗ್ರೆಸ್ ಮುಖಂಡರು ಹಾಗೂ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಅಸ್ಸಾಂ ಪೊಲೀಸರ ಕ್ರಮ ಖಂಡಿಸಿ ಘೋಷಣೆ ಕೂಗಲಾಯಿತು. ಬಿಜೆಪಿ ಕಾರ್ಯಕರ್ತರಿಂದ ನ್ಯಾಯಯಾತ್ರೆ ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ ಎಂದು ಪ್ರತಿಭಟನಕಾರರು ಆಕ್ರೋಶ ಹೊರಹಾಕಿದರು.

ಡಿ.ಕೆ.ಶಿವಕುಮಾರ್ ಮಾತನಾಡಿ, ‘ಬಿಜೆಪಿ ಗೂಂಡಾಗಳು ಕೈಯಲ್ಲಿ ಮಂತ್ರಾಕ್ಷತೆ ಹಿಡಿದಿದ್ದರೆ, ಬಗಲಲ್ಲಿ ದೊಣ್ಣೆ ಹಿಡಿದಿದ್ದಾರೆ. ಅವರ ಗೊಡ್ಡು ಬೆದರಿಕೆಗೆ ಕಾಂಗ್ರೆಸ್ ಯಾವಾಗಲೂ ಹೆದರುವುದಿಲ್ಲ’ ಎಂದು ಎಚ್ಚರಿಸಿದರು.

‘ದೇಶದಲ್ಲಿ ಸಂವಿಧಾನ, ಪ್ರಜಾಪ್ರಭುತ್ವ ವ್ಯವಸ್ಥೆ ಬದುಕಿದೆಯೋ ಸತ್ತಿದೆಯೋ ಎಂಬ ಪ್ರಶ್ನೆ ಉದ್ಭವಿಸಿದೆ. ನ್ಯಾಯಯಾತ್ರೆಯಿಂದ ಬಿಜೆಪಿ ನಾಯಕರಿಗೆ ನಡುಕ ಆರಂಭವಾಗಿದೆ. ಹೀಗಾಗಿ, ನ್ಯಾಯಯಾತ್ರೆ ತಡೆಯುತ್ತಿದ್ದಾರೆ’ ಎಂದು ಹೇಳಿದರು.

‘ದೇಶದ ಏಕತೆ, ಸಮಗ್ರತೆ ಹಾಗೂ ಶಾಂತಿಗಾಗಿ ಸಾವಿರಾರು ಕಾಂಗ್ರೆಸ್ ನಾಯಕರು ಪ್ರಾಣತ್ಯಾಗ ಮಾಡಿದ್ದಾರೆ. ಬಿಜೆಪಿ ಒಬ್ಬ ನಾಯಕ ಇಂತಹ ತ್ಯಾಗ ಮಾಡಿದ್ದಾರೆಯೇ’ ಎಂದು ಪ್ರಶ್ನಿಸಿದರು.

‘ದೇಶದಲ್ಲಿ ಶಾಂತಿ ಹಾಗೂ ಉತ್ತಮ ವಾತಾವರಣ ಮೂಡಿಸಲು ರಾಹುಲ್ ಗಾಂಧಿ ಅವರು ಯಾತ್ರೆ ನಡೆಸುತ್ತಿದ್ದಾರೆ. ಯಾತ್ರೆಯಲ್ಲಿ ಗಲಾಟೆ, ಕಿರುಚಾಟ ಇಲ್ಲ. ಆದರೆ, ಯಾತ್ರೆಯನ್ನು ಉದ್ದೇಶ ಪೂರ್ವಕವಾಗಿ ತಡೆದು ಗೊಂದಲ ಸೃಷ್ಟಿಸುತ್ತಿದ್ದಾರೆ’ ಎಂದು ಗೃಹ ಸಚಿವ ಜಿ.ಪರಮೇಶ್ವರ ವಾಗ್ದಾಳಿ ನಡೆಸಿದರು.

ಸಚಿವ ಕೃಷ್ಣ ಬೈರೇಗೌಡ ಮಾತನಾಡಿ, ‘ಬಿಜೆಪಿ ಪ್ರಜಾಪ್ರಭುತ್ವದ ವಿರೋಧಿ ನೀತಿ ಅನುಸರಿಸುತ್ತಿದೆ. ಬಿಜೆಪಿಯ ಪ್ರಾಯೋಜಿತ ಗೂಂಡಾಗಳು ನ್ಯಾಯಯಾತ್ರೆ ತಡೆಯಲು ಮುಂದಾಗಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

ಪ್ರತಿಭಟನೆಯಲ್ಲಿ ಸಚಿವ ಕೆ.ಜೆ. ಜಾರ್ಜ್, ವಿಧಾನ ಪರಿಷತ್ ಸದಸ್ಯರಾದ ಬಿ.ಕೆ.ಹರಿಪ್ರಸಾದ್, ಸಲೀಂ ಅಹಮದ್, ಯು.ಬಿ.ವೆಂಕಟೇಶ್, ಮುಖಂಡರಾದ ಎಚ್.ನಾಗೇಶ್, ನಾರಾಯಣಸ್ವಾಮಿ, ಮಹಿಳಾ ಘಟಕದ ರಾಜ್ಯ ಅಧ್ಯಕ್ಷೆ ಪುಷ್ಪಾ ಅಮರನಾಥ್ ಪಾಲ್ಗೊಂಡಿದ್ದರು.



‘ಭಾರತ್ ಜೊಡೊ ನ್ಯಾಯಯಾತ್ರೆ’ಗೆ ತಡೆಯೊಡ್ಡಿದ ಕ್ರಮ ಖಂಡಿಸಿ, ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಮಂಗಳವಾರ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. – ಪ್ರಜಾವಾಣಿ ಚಿತ್ರ

‘ಶ್ರೀರಾಮ ಬಿಜೆಪಿಗರ ಆಸ್ತಿ ಅಲ್ಲ’

‘ರಾಮ ಯಾರ ಮನೆ ಆಸ್ತಿಯೂ ಅಲ್ಲ. ಅವರು ನಮ್ಮನ್ನು ಹಿಂದೂ ವಿರೋಧಿ ಎಂದು ಬಿಂಬಿಸಲು ಟೀಕೆ ಮಾಡುತ್ತಿದ್ದಾರೆ’ ಎಂದು ಡಿ.ಕೆ.ಶಿವಕುಮಾರ್ ಆಕ್ರೋಶ ಹೊರಹಾಕಿದರು.

‘ಅಯೋಧ್ಯೆಯಲ್ಲಿ ಬಾಲರಾಮನ ಮೂರ್ತಿ ಪ್ರತಿಷ್ಠಾಪನೆ ಅಂಗವಾಗಿ ಧಾರ್ಮಿಕ ದತ್ತಿ ಇಲಾಖೆ ಮೂಲಕ ರಾಜ್ಯದ ಎಲ್ಲ ದೇವಾಲಯಗಳಲ್ಲಿ ವಿಶೇಷ ಪೂಜೆ ಹಮ್ಮಿಕೊಳ್ಳಲಾಗಿತ್ತು. ಇದನ್ನು ಸಹಿಸಲು ಬಿಜೆಪಿಗೆ ಆಗುತ್ತಿಲ್ಲ’ ಎಂದು ಹೇಳಿದರು.

’ಬಿಜೆಪಿಯವರು ಧರ್ಮವನ್ನು ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದ್ದರೂ ನಾವು ಹೆಚ್ಚು ಚರ್ಚೆ ಮಾಡುತ್ತಿಲ್ಲ. ಸಿದ್ದರಾಮಯ್ಯ ಅವರ ಹೆಸರಲ್ಲಿ ‘ರಾಮ’, ಶಿವಕುಮಾರ ಹೆಸರಲ್ಲಿ ‘ಶಿವ’ ಹಾಗೂ ‘ಷಣ್ಮುಗ’, ಹರಿಪ್ರಸಾದ್ ಅವರ ಹೆಸರಲ್ಲಿ ‘ಹರಿ’ ಇದ್ದಾನೆ. ಕೃಷ್ಣ ಬೈರೇಗೌಡರ ಹೆಸರಲ್ಲಿ ‘ಕೃಷ್ಣ’ ಇದ್ದಾನೆ. ಹಿಂದೂ ಧರ್ಮ ನಿಮ್ಮ ಮನೆ ಆಸ್ತಿಯೇ’ ಎಂದು ಪ್ರಶ್ನಿಸಿದರು.

ನಾರಾಯಣ ಗುರುಗಳ ವಕೀಲರ ಸಂಘಕ್ಕೆ ಆಯ್ಕೆ

ಪ್ರಜಾವಾಣಿ ವಾರ್ತೆ



ಎ.ಕೆ.ವಸಂತ

ಬೆಂಗಳೂರು: ‘ಕರ್ನಾಟಕ ರಾಜ್ಯ ನಾರಾಯಣ ಗುರುಗಳ ವಕೀಲರ ಸಂಘ‘ದ ನೂತನ ಅಧ್ಯಕ್ಷರಾಗಿ ಹೈಕೋರ್ಟ್‌ನ ಹಿರಿಯ ವಕೀಲ ಎ.ಕೆ.ವಸಂತ ಆಯ್ಕೆಯಾಗಿದ್ದಾರೆ.

‘ಕರ್ನಾಟಕ ಆರ್ಯ ಈಡಿಗ ಸಂಘದ ಕಟ್ಟಡದಲ್ಲಿ ಇತ್ತೀಚೆಗೆ ನಡೆದ ಸರ್ವ ಸದಸ್ಯರ ಸಭೆಯಲ್ಲಿ ನೂತನ ಕಾರ್ಯಕಾರಿ ಸಮಿತಿಯನ್ನು ರಚಿಸಲಾಗಿದ್ದು, ಪ್ರಧಾನ ಕಾರ್ಯದರ್ಶಿಯಾಗಿ ಎಚ್.ವಿ.ಕುಮಾರಸ್ವಾಮಿ, ಖಜಾಂಚಿಯಾಗಿ ಕೆ.ಎನ್. ಲೋಕೇಶ್ ಹಾಗೂ ಗೌರವಾಧ್ಯಕ್ಷರಾಗಿ ಎ.ನಾಗಾರಾಜಪ್ಪ ಮತ್ತು ತಾರಾನಾಥ ಪೂಜಾರಿ ಆಯ್ಕೆಯಾಗಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಆಯ್ಕೆಯ ನಂತರ ನೂತನ ಅಧ್ಯಕ್ಷ ಎ.ಕೆ.ವಸಂತ ಅವರು ಮಾತನಾಡಿ, ‘ನೂತನ ಕಾರ್ಯಕಾರಿ ಸಮಿತಿಯಲ್ಲಿ ಯುವ ವಕೀಲರಿಗೆ ಹೆಚ್ಚಿನ ಜವಾಬ್ದಾರಿ ನೀಡಲಾಗಿದೆ. ರಾಜ್ಯದಾದ್ಯಂತ ಸಂಚರಿಸಿ ಸಮುದಾಯದ ವಕೀಲ ಸಂಘಟನೆಯ ಮೂಲಕ ಯುವ ವಕೀಲರಿಗೆ ಹಿರಿಯ ವಕೀಲರಿಂದ ಸೂಕ್ತ ಮಾರ್ಗದರ್ಶನ ಮತ್ತು ತರಬೇತಿ ನೀಡಲಾಗುವುದು. ಹೊಸದಾಗಿ ನೋಂದಣಿ ಆದ ವಕೀಲರಿಗೆ, ಅನಾರೋಗ್ಯ ಹಾಗೂ ಸಂಕಷ್ಟದಲ್ಲಿರುವ ವಕೀಲರಿಗೆ ಸಹಾಯ ಮಾಡಲು ಸಂಘದಿಂದ ಸಮೂಹ ನಿಧಿ ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ’ ಎಂದರು.

ಮೈಸೂರು ರೇಸ್

ಲ್ಯಾಂಡ್ ಆಫ್ ಗೋಲ್ಡ್ ಗೆಲ್ಲುವ ನಿರೀಕ್ಷೆ

ಡಾ| ಈಶ್ವರಿ ಜಿ.ಕೆ ಬಾಲಕೃಷ್ಣನ್ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಲ್ಯಾಂಡ್ ಆಫ್ ಗೋಲ್ಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹರೆಮ್ 10, ಬಾಕಸ್ 9, ಸಿಟಿ ಆಫ್ ಹಸ್ಲ್ 8
2ನೇ ರೇಸ್: ಜರ್ಕಾವಿ 7, ಆಬುಶನ್ 1, ಟೆಂಪರೆನ್ಸ್ 6
3ನೇ ರೇಸ್: ರನ್ನಿಂಗ್ ಬೋಲ್ಟ್ 3, ಸಿಯೊಲ್‌ಫಾರ್ ಬುಲೆಟ್ 1, ಡಿ ಥರ್ಟೀನ್ ಟ್ವೆಲ್ವ್ 2
4ನೇ ರೇಸ್: ಐ ಕ್ಯಾನ್ 5, ಲಕ್ಕಿ ಪಾಯಿಂಟ್ 4, ಕ್ಯಾಲಿಫೋರ್ನಿಯಾ ಗೋಲ್ಡ್ 15
5ನೇ ರೇಸ್: ಲ್ಯಾಂಡ್ ಆಫ್ ಗೋಲ್ಡ್ 11, ಗ್ಯಾಮ 7, ಹ್ಯಾವಲಾಕ್ ಕ್ರೂಝ್ 3
6ನೇ ರೇಸ್: ಮ್ಯಾಜಿಕ್ ಸರ್ಕಲ್ 9, ಎಡ್ಡಿ ದಿ ಈಗಲ್ 4, ಡಲ್ಲಾಸ್ 7
7ನೇ ರೇಸ್: ಕೇಸರಿ ಕ್ವೀನ್ 5, ಮೇಬ್ಯೂರಿ 2, ಎನ್.ಆರ್.ಐ ಮಿಲ್ಲೇನಿಯಮ್ 6

ಉತ್ತಮ ಬೆಟ್: ರನ್ನಿಂಗ್ ಬೋಲ್ಟ್

ಜಾಕ್‌ಪಾಟ್	1ನೇ ಟ್ರಬಲ್	2ನೇ ಟ್ರಬಲ್
3,4,5,6,7	2,3,4	5,6,7

ಸುಧಾ, ಮಯೂರ ಓದಿರಿ

28ಕ್ಕೆ ಪರೀಕ್ಷೆ

ಬೆಂಗಳೂರು: ಸಶಸ್ತ್ರ ಪೊಲೀಸ್ ಕಾನ್‌ಸ್ಟೆಬಲ್ (ಸಿಎಆರ್/ ಡಿಎಆರ್) (ಪುರುಷ) 3,064 ಹುದ್ದೆಗಳ ನೇಮಕಾತಿಗಾಗಿ ಜ.28ರಂದು ನಗರದ 78 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ. ಅಂದು ಬೆಳಿಗ್ಗೆ 11ರಿಂದ ಮಧ್ಯಾಹ್ನ 12.30ರ ವರೆಗೆ ಪರೀಕ್ಷೆ ನಡೆಯಲಿದೆ.

42,740 ಅಭ್ಯರ್ಥಿಗಳಿಗಾಗಿ ಲಿಖಿತ ಪರೀಕ್ಷೆ ನಡೆಯಲಿದೆ ಎಂದು ಪೊಲೀಸ್ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ. ಅಭ್ಯರ್ಥಿಗಳು ಅರ್ಧ ತೋಳಿನ ಅಂಗಿಯನ್ನು ಕಡ್ಡಾಯವಾಗಿ ಧರಿಸಬೇಕು. ಜಿಪ್ ಪ್ಯಾಕೆಟ್‌ಗಳು, ದೊಡ್ಡ ಬಟನ್‌ಗಳು ಇರುವ ಅಂಗಿಗಳನ್ನು ಧರಿಸಿ ಬರಲು ಅವಕಾಶ ಇಲ್ಲ. ಕೇಂದ್ರದ ಒಳಕ್ಕೆ ಶೂ ನಿಷೇಧಿಸಲಾಗಿದ್ದು, ಅಭ್ಯರ್ಥಿಗಳು ತೆಳುವಾದ ಅಡಿಭಾಗವಿರುವ ಚಪ್ಪಲಿ ಧರಿಸಿ ಬರಬೇಕು ಎಂದು ಸೂಚಿಸಲಾಗಿದೆ.


ಕುನೊ: 3 ಮರಿಗಳಿಗೆ ಜನ್ಮ ನೀಡಿದ ನಮೀಬಿಯಾ ಚೀತಾ

ಭೋಪಾಲ್/ನವದೆಹಲಿ (ಪಿಟಿಐ): ನಮೀಬಿಯಾದಿಂದ ತಂದಿದ್ದ ಚೀತಾವೊಂದು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ 3 ಮರಿಗಳಿಗೆ ಜನ್ಮ ನೀಡಿದೆ.

ಕೇಂದ್ರ ಪರಿಸರ ಸಚಿವ ಭೂಪೇಂದರ್ ಯಾದವ್ ಅವರು ಈ ವಿಷಯವನ್ನು ‘ಎಕ್ಸ್’ ಮೂಲಕ ಮಂಗಳವಾರ ತಿಳಿಸಿದ್ದಾರೆ. ‘ಕುನೊಗೆ ಹೊಸ ಚೀತಾ ಮರಿಗಳ ಆಗಮನ! ನಮೀಬಿಯಾದಿಂದ ತಂದಿದ್ದ ‘ಜ್ವಾಲಾ’ ಹೆಸರಿನ ಚೀತಾವು ಮೂರು ಮರಿಗಳಿಗೆ ಜನ್ಮ ನೀಡಿದೆ. ಇದಕ್ಕೂ ಮುನ್ನ ‘ಆಶಾ’ ಹೆಸರಿನ ಚೀತಾವು ಮೂರು ಮರಿಗಳಿಗೆ ಜನ್ಮ ನೀಡಿತ್ತು. ವನ್ಯಜೀವಿಗಳ ಉಳಿವಿಗೆ ಶ್ರಮಿಸುತ್ತಿರುವ ಸಿಬ್ಬಂದಿ ಮತ್ತು ವನ್ಯಜೀವಿ ಪ್ರೇಮಿಗಳಿಗೆ ಅಭಿನಂದನೆಗಳು’ ಎಂದು ಹೇಳಿದ್ದಾರೆ.

‘ಜ್ವಾಲಾ’ ಚೀತಾವು ಜ.20ರಂದು ಈ ಮರಿಗಳಿಗೆ ಜನ್ಮ ನೀಡಿದೆ. ಕಳೆದ ವರ್ಷ ಮಾರ್ಚ್‌ನಲ್ಲಿ ಇದೇ ಚೀತಾ 4 ಮರಿಗಳಿಗೆ ಜನ್ಮ ನೀಡಿತ್ತು. ಈ ಪೈಕಿ 1 ಮರಿ ಮಾತ್ರ ಉಳಿದುಕೊಂಡಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ತಂತ್ರಜ್ಞಾನ



ಸ್ಯಾಟಲೈಟ್ ಬ್ರಾಡ್‌ಬ್ಯಾಂಡ್‌ನ ಹೊಸ ಅಲೆ



ಕೃಷ್ಣ ಭಟ್

2023 ದೇಶದಾದ್ಯಂತ ಜನರನ್ನು '5ಜಿ' ಅಲೆಯಲ್ಲಿ ತೇಲಿಸಿದ ವರ್ಷವಾಗಿತ್ತು. ನಗರ ಪ್ರದೇಶದ ಜನರಿಗೆ 5ಜಿ ಬೇಗ ಸಿಕ್ಕಿದ್ದರೆ, ಪಟ್ಟಣ ಪ್ರದೇಶದಲ್ಲಿರುವವರಿಗೆ ಈಗಷ್ಟೇ 5ಜಿ ಸೌಲಭ್ಯ ಸಿಕ್ಕಿದೆ. ಆದರೆ, ಇನ್ನೂ ಸುಮಾರು 40ರಷ್ಟು ಪ್ರದೇಶಗಳಿಗೆ ಪ್ರಾಥಮಿಕ ಇಂಟರ್‌ನೆಟ್ ಸೌಲಭ್ಯವೂ, ಮೊಬೈಲ್ ಸಂಪರ್ಕವೂ ಸಿಕ್ಕಿಲ್ಲ. ಆದರೆ, 2024 ಇವೆಲ್ಲವನ್ನೂ ಬದಲಿಸುವ ನಿರೀಕ್ಷೆಯಲ್ಲಿದೆ. ಏಕೆಂದರೆ, 2024ರ ವರ್ಷವನ್ನು ಭಾರತದಲ್ಲಿ 'ಸ್ಯಾಟಲೈಟ್ ಬ್ರಾಡ್‌ಬ್ಯಾಂಡ್ ವರ್ಷ' ಎಂದು ಹೇಳಲಾಗುತ್ತಿದೆ

ಈಗಾಗಲೇ ಸರ್ಕಾರ ಟೆಲಿಕಮ್ಯೂನಿಕೇಶನ್ಸ್ ಮಸೂದೆ 2023ಅನ್ನು ಕಾನೂನಾಗಿ ರೂಪಿಸಿ, ಸ್ಯಾಟಲೈಟ್ ತರಂಗಾಂತರಗಳನ್ನು ಖಾಸಗಿ ಕಂಪನಿಗಳಿಗೆ ಹಂಚಿಕೆ ಮಾಡಲು ಅವಕಾಶ ಮಾಡಿಕೊಟ್ಟಿದೆ. ಇದಕ್ಕೆ ಪೂರಕವಾಗಿ ಈಗಾಗಲೇ ಕೆಲವು ಕಂಪನಿಗಳು ಇಂಟರ್‌ನೆಟ್ ಸೇವೆಯನ್ನು ಒದಗಿಸಲು ಅನುಮತಿ ಪಡೆದಿದ್ದರೆ, ಇಸ್ರೊದ ಅಂಗಸಂಸ್ಥೆ 'ಇನ್‌ಸ್ಪೇಸ್'ನಿಂದ ತರಂಗಾಂತರ ನಿಯೋಜನೆಗಾಗಿ ಅರ್ಜಿ ಸಲ್ಲಿಸಿಕೊಂಡು, ಕಾದು ಕುಳಿತಿವೆ. ಒನ್‌ವೆಬ್ ಸಂಸ್ಥೆಯ ಬೆಂಬಲದೊಂದಿಗೆ ಭಾರ್ತಿ ಗ್ರೂಪ್, ರಿಲಾಯನ್ಸ್‌ನ ಜಿಯೋ ಸ್ಯಾಟಲೈಟ್ ಕಮ್ಯೂನಿಕೇಶನ್ಸ್ ಲಿ. ಮತ್ತು ಉದ್ಯಮಿ ಎಲಾನ್ ಮಸ್ಕ್ ಅವರ ಸ್ಟಾರ್‌ಲಿಂಕ್ ಸಂಸ್ಥೆಗಳು ಭಾರತದಲ್ಲಿ ಸ್ಯಾಟಲೈಟ್ ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಲು ತುದಿಗಾಲಲ್ಲಿ ನಿಂತಿವೆ.

ಹೇಗೆ ಕೆಲಸ ಮಾಡುತ್ತದೆ ಈ ಇಂಟರ್‌ನೆಟ್?

ಸ್ಯಾಟಲೈಟ್ ಬ್ರಾಡ್‌ಬ್ಯಾಂಡ್ ಸೇವೆಗಳಲ್ಲಿ ಹೆಸರೇ ಹೇಳುವ ಹಾಗೆ ಸ್ಯಾಟಲೈಟ್‌ಗಳನ್ನು ಬಳಸಿ ಇಂಟರ್‌ನೆಟ್ ಸೇವೆಯನ್ನು ಒದಗಿಸಲಾಗುತ್ತದೆ. ಸಾಮಾನ್ಯವಾಗಿ 'ಲೋ ಅರ್ಥ್ ಆರ್ಬಿಟ್' (ಲಿಯೋ) ಮತ್ತು 'ಮೀಡಿಯಮ್ ಅರ್ಥ್ ಆರ್ಬಿಟ್' (ಮಿಯೋ) ಸ್ಯಾಟಲೈಟ್‌ಗಳನ್ನು ಬಳಸಲಾಗುತ್ತದೆ. ಲೋ ಅರ್ಥ್ ಆರ್ಬಿಟ್ ಸ್ಯಾಟಲೈಟ್‌ಗಳು ಭೂಮಿಯಿಂದ 250ರಿಂದ 2000 ಕಿ.ಮೀ. ದೂರದಲ್ಲಿ ಸ್ಯಾಟಲೈಟ್‌ಗಳಿರುತ್ತವೆ. ಇನ್ನು ಮಿಯೋ ಸ್ಯಾಟಲೈಟ್‌ಗಳು 2000 ಕಿ.ಮೀ. ಇಂದ 35,786 ಕಿ.ಮೀ. ದೂರದಲ್ಲಿ ಇರುತ್ತವೆ. ಸ್ಟಾರ್‌ಲಿಂಕ್ ಮತ್ತು ಒನ್‌ವೆಬ್ ಲಿಯೋ ಸ್ಯಾಟಲೈಟ್‌ಗಳನ್ನು ಬಳಸುತ್ತವೆ. ಸ್ಟಾರ್‌ಲಿಂಕ್ ಸುಮಾರು ಐದು ಸಾವಿರ ಸ್ಯಾಟಲೈಟ್‌ಗಳನ್ನು ಈಗಾಗಲೇ ಈ ಕಕ್ಷೆಯಲ್ಲಿವೆ. ಇನ್ನು ಒನ್‌ವೆಬ್ 630 ಸ್ಯಾಟಲೈಟ್‌ಗಳನ್ನು ಉಡಾವಣೆ ಮಾಡಿದೆ. ಆದರೆ, ಜಿಯೋ ಮಿಯೋ ಸ್ಯಾಟಲೈಟ್ ಬಳಕೆ ಮಾಡಲು ನಿರ್ಧಾರ ಮಾಡಿದೆ. ಲಿಯೋ ಅನುಕೂಲವೆಂದರೆ, ಇದರ ಲ್ಯಾಟೆನ್ಸಿ ಕಡಿಮೆ ಇರುತ್ತದೆ. ಎಂದರೆ, ಡೇಟಾ ವರ್ಗಾವಣೆಗೆ ತೆಗೆದುಕೊಳ್ಳುವ ಸಮಯದ ಅವಧಿ ಕಡಿಮೆ ಇರುತ್ತದೆ. ಆದರೆ, ಮಿಯೋದಲ್ಲಿ ಹೆಚ್ಚು ದೂರಕ್ಕೆ ಡೇಟಾ ಚಲಿಸಬೇಕಿರುವುದರಿಂದ ಲ್ಯಾಟೆನ್ಸಿ ಹೆಚ್ಚಾಗುತ್ತದೆ. ಇದರಿಂದಾಗಿ, ಯಾವುದಾದರೂ ಒಂದು ಲೈವ್ ಕಾರ್ಯಕ್ರಮವನ್ನು ನಾವು ಇಂಟರ್‌ನೆಟ್ ಬಳಸಿ ವೀಕ್ಷಿಸುತ್ತಿದ್ದೇವೆ ಎಂದಾದರೆ, ಆಗ ಮಿಯೋದಲ್ಲಿ ಕೆಲವು ಸೆಕೆಂಡುಗಳು ತಡವಾಗಿಯೂ, ಲಿಯೋದಲ್ಲಿ ಕೆಲವು ಸೆಕೆಂಡುಗಳು ಬೇಗವೂ ನಾವು ನೋಡಬಹುದು. ಉದಾಹರಣೆಗೆ, ಕ್ರಿಕೆಟ್ ನೋಡುತ್ತಿರುವಾಗ ಲಿಯೋ ಸ್ಯಾಟಲೈಟ್‌ಗಳು ಚೆಂಡು ಬೌಂಡರಿಗೆ ಹೋಗಿದ್ದನ್ನು ತೋರಿಸುತ್ತಿದ್ದರೆ, ಮಿಯೋ ಸ್ಯಾಟಲೈಟ್‌ಗಳು ಇನ್ನೂ ಬೌಲರ್ ಚೆಂಡು ಎಸೆಯುತ್ತಿರುವುದನ್ನೇ ತೋರಿಸುತ್ತಿರಬಹುದು. ಮಿಯೋದ ಅನುಕೂಲವೆಂದರೆ, ಇದು ಹೆಚ್ಚು ಎತ್ತರದಲ್ಲಿರುವುದರಿಂದ ಕಡಿಮೆ ಸ್ಯಾಟಲೈಟ್‌ಗಳಲ್ಲಿ ಹೆಚ್ಚು ಭೂ ಪ್ರದೇಶವನ್ನು ವ್ಯಾಪಿಸುತ್ತದೆ.

ಬಳಸುವುದು ಹೇಗೆ?

ಇಂಟರ್‌ನೆಟ್ ಸೇವೆಯನ್ನು ಸ್ಯಾಟಲೈಟ್‌ಗಳಿಂದ ಬಳಸಬೇಕು ಎಂದಾದರೆ, ಅದಕ್ಕೆ ನಾವು ಪ್ರತ್ಯೇಕ ಆ್ಯಂಟೆನಾವನ್ನು ಖರೀದಿ ಮಾಡಬೇಕಾಗುತ್ತದೆ. ಈಗ ಡಿಟಿಎಚ್ ಅನ್ನು ನಾವು ಹೇಗೆ ಬಳಸುತ್ತಿದ್ದೇವೆಯೋ ಅದೇ ರೀತಿ, ಒಂದು ಡಿಶ್ ಅನ್ನು ಅಳವಡಿಸಿಕೊಳ್ಳಬೇಕಾಗುತ್ತದೆ. ಈ ಡಿಶ್ ಅಥವಾ ಆಂಟೆನಾ ಸ್ಯಾಟಲೈಟ್‌ನಿಂದ ತರಂಗಾಂತರಗಳನ್ನು ಸೆರೆಹಿಡಿದು ರೌಟರ್‌ಗೆ ವರ್ಗಾವಣೆ ಮಾಡುತ್ತದೆ. ಆ ರೌಟರ್‌ನಿಂದ ವೈಫೈ ಅಥವಾ ಕೇಬಲ್ ಮೂಲಕ ನಾವು ಮೊಬೈಲ್ ಅಥವಾ ಇತರ ಸಾಧನಗಳಲ್ಲಿ ಇಂಟರ್‌ನೆಟ್ ಅನ್ನು ಬಳಸಬಹುದು. ಆದರೆ, ಸ್ಟಾರ್‌ಲಿಂಕ್ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ, ನೇರವಾಗಿ ಮೊಬೈಲ್‌ನಲ್ಲೇ ಇದನ್ನು ಬಳಸುವ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಿದ್ದಾಗಿ ಹೇಳಿಕೊಂಡಿದೆ.

ಅನುಕೂಲವೇನು?

ಇದರ ಅತ್ಯಂತ ಮುಖ್ಯ ಅನುಕೂಲವೆಂದರೆ, ಈಗಿರುವ ಮೊಬೈಲ್ ಟವರ್‌ಗಳ ಸೀಮಿತ ವ್ಯಾಪ್ತಿಯನ್ನು ಮೀರಿ ಇವು ದೊಡ್ಡ ಭೂಪ್ರದೇಶಕ್ಕೆ ಇಂಟರ್‌ನೆಟ್ ಸೌಲಭ್ಯವನ್ನು ಕಲ್ಪಿಸಬಲ್ಲವು. ಇಡೀ ದೇಶದ ಯಾವುದೇ ಗುಡ್ಡಗಾಡಿನಲ್ಲಿ ಮನೆ ಇದ್ದರೂ ಕೂಡ, ಅವರು ಇಂಟರ್‌ನೆಟ್ ಅನ್ನು ಬಳಕೆ ಮಾಡಬಹುದು. ಸದ್ಯ, ಈಗಿನ ವ್ಯವಸ್ಥೆಯಲ್ಲಿ ಕುಗ್ರಾಮಗಳಲ್ಲಿ, ಜನಸಂದಣಿ ಕಡಿಮೆ ಇರುವ ಪ್ರದೇಶಗಳಲ್ಲಿ ಇಂಟರ್‌ನೆಟ್, ಮೊಬೈಲ್ ಸಂಪರ್ಕವನ್ನು ಒದಗಿಸುವುದು ಅಸಾಧ್ಯ ಎಂಬಂತಾಗಿದೆ. ಆದರೆ ಈ ಸಮಸ್ಯೆಯನ್ನು ಸ್ಯಾಟಲೈಟ್ ಇಂಟರ್‌ನೆಟ್ ನಿವಾರಿಸಲಿದೆ.

ಅಲ್ಲದೆ, ನೈಸರ್ಗಿಕ ಅಥವಾ ಇತರ ವಿಪತ್ತಿನ ಸಮಯದಲ್ಲಿ ಟವರ್ ಮೂಲಕ ಒದಗಿಸಲಾಗುವ ಇಂಟರ್‌ನೆಟ್ ಸಂಪರ್ಕ ವಿಫಲವಾಗುವುದರಿಂದ, ಸ್ಯಾಟಲೈಟ್ ಸಂವಹನ ಹೆಚ್ಚು ಉಪಯೋಗಕ್ಕೆ ಬರಲಿದೆ.

ಈಗಿರುವ ಇಂಟರ್‌ನೆಟ್‌ಗೆ ಪರ್ಯಾಯವೇ?

ಸದ್ಯದ ಪರಿಸ್ಥಿತಿಯಲ್ಲಿ, ಈಗಿರುವ ಇಂಟರ್‌ನೆಟ್, ಬ್ರಾಡ್‌ಬ್ಯಾಂಡ್ ವ್ಯವಸ್ಥೆಗೆ ಸ್ಯಾಟಲೈಟ್ ಇಂಟರ್‌ನೆಟ್ ಪ್ರತಿಸ್ಪರ್ಧೆಯನ್ನು ಒಡ್ಡುವುದಿಲ್ಲ. ಏಕೆಂದರೆ, ಇದರ ವೇಗ ಈಗಿನ ಬ್ರಾಡ್‌ಬ್ಯಾಂಡ್‌ಗೆ ಹೋಲಿಸಿದರೆ ಕಡಿಮೆಯೇ ಇರುವುದರಿಂದ ಮತ್ತು ವೆಚ್ಚವೂ ಹೆಚ್ಚಾಗಿರುವುದರಿಂದ ಕುಗ್ರಾಮಗಳು ಮತ್ತು ಸಂಪರ್ಕ ಇಲ್ಲದ ಪ್ರದೇಶಗಳಲ್ಲಿ ಬಳಸುವುದೇ ಇದರ ಪ್ರಥಮ ಆದ್ಯತೆಯಾಗಿರುತ್ತದೆ. ಅದನ್ನು ಹೊರತುಪಡಿಸಿ, ನಗರಗಳಲ್ಲಿ ತುರ್ತು ಪರಿಸ್ಥಿತಿಯಲ್ಲಿ ಈ ಸೌಲಭ್ಯವನ್ನು ಬಳಸಬಹುದಾಗಿದೆ. ಇನ್ನೂ ಒಂದು ಅನುಕೂಲವೆಂದರೆ, ವಿಮಾನಗಳಲ್ಲಿ ಇದರ ಬಳಕೆ ಮಾಡಿಕೊಂಡು ಇಂಟರ್‌ನೆಟ್ ಸೌಲಭ್ಯವನ್ನು ಒದಗಿಸಬಹುದಾಗಿದೆ.

ಶಾರ್ಟ್‌ಕಟ್ಸ್

ಕಂಪ್ಯೂಟರ್ ಕೆಲಸಕ್ಕೆ ವೇಗ



ಅವಿನಾಶ್ ಬಿ.

ಡೆಸ್ಕ್‌ಟಾಪ್ ಕಂಪ್ಯೂಟರ್ ಅಥವಾ ಲ್ಯಾಪ್‌ಟಾಪ್ ಈಗಿನ ಅನಿವಾರ್ಯ ವ್ಯವಸ್ಥೆಗಳಲ್ಲೊಂದು. ಆದರೆ, ಕಂಪ್ಯೂಟರ್‌ನಲ್ಲಿ ಕೆಲಸ ಎಂದಾಕ್ಷಣ, ನಮಗೆ ಬೇಕಾದಾಗಲೋ, ನಿಧಾನವಾಗಿ ಕೀಬೋರ್ಡ್ ಅಥವಾ ಕೀಲಿಮಣೆಯಲ್ಲಿರುವ ಕೀಲಿಗಳನ್ನು ಹುಡುಕಿ, ಮೌಸ್ ಹಿಡಿದು ಸ್ಕ್ರಾಲ್ ಮಾಡುತ್ತಲೋ ಕೆಲಸ ಮಾಡುವುದು ಈ ವೇಗದ ಯುಗದಲ್ಲಂತೂ ಆಗದ ಮಾತು. ಈ 5ಜಿ ಇಂಟರ್ನೆಟ್ ಸ್ಪೀಡ್ ಕಾಲದಲ್ಲಿ ಏನಿದ್ದರೂ ಫಟಾಫಟ್ ಆಗಬೇಕಾಗುತ್ತದೆ. ಅದಕ್ಕಾಗಿಯೇ ಇರುವಂಥವು 'ಅಡ್ಡದಾರಿ'ಗಳು, ಎಂದರೆ ಶಾರ್ಟ್‌ಕಟ್‌ಗಳು. ಇದು ಗೊತ್ತಿದ್ದರೆ ಎಷ್ಟೋ ಸಮಯ ಉಳಿತಾಯ ಮಾಡಬಹುದು. ವಿಂಡೋಸ್ ಕಂಪ್ಯೂಟರ್‌ಗಳಲ್ಲಿ ಅತ್ಯಗತ್ಯವಾದ ಕೆಲವೊಂದು ಶಾರ್ಟ್‌ಕಟ್ ವಿಧಾನಗಳನ್ನು ಇಲ್ಲಿ ಪಟ್ಟಿ ಮಾಡಲಾಗಿದೆ.

ಮೊದಲಾಗಿ, ಕೀಬೋರ್ಡ್‌ನಲ್ಲಿರುವ ಟ್ಯಾಬ್ (Tab), ಕಂಟ್ರೋಲ್ (Ctrl), ಶಿಫ್ಟ್ (Shift), ಆಲ್ಟ್ (Alt), ವಿಂಡೋಸ್ (Windows Logo) ಮತ್ತು ಸ್ಪೇಸ್ ಕೀಲಿಗಳು ಹಾಗೂ ಇಂಗ್ಲಿಷ್ ಕಾಗುಣಿತಾಕ್ಷರಗಳ ಕೀಲಿಗಳ ಸ್ಥಾನವನ್ನು ಸರಿಯಾಗಿ ನೆನಪಿಟ್ಟುಕೊಳ್ಳಬೇಕು. ಮುಂದಿನವನ್ನು ನೆನಪಿಟ್ಟುಕೊಂಡರೆ ಕೆಲಸಗಳೆಲ್ಲ ಫಟಾಫಟ್!

- ಬಹುಶಃ ಇದು ಎಲ್ಲರಿಗೂ ತಿಳಿದಿದೆ. ತಿಳಿದಿಲ್ಲವಾದರೆ ತಿಳಿದುಕೊಂಡಿರಲೇಬೇಕು. ಒಂದು ಪುಟದಲ್ಲಿರುವ ಪಠ್ಯ, ಚಿತ್ರ, ವಿಡಿಯೊ ಮುಂತಾದ ಫೈಲ್‌ಗಳಲ್ಲಿ ಎಲ್ಲವನ್ನೂ ಏಕಕಾಲಕ್ಕೆ ಆಯ್ಕೆ ಮಾಡಲು, ಮೌಸ್‌ನ ಕರ್ಸರ್ ಇಟ್ಟ ಬಳಿಕ 'ಕಂಟ್ರೋಲ್' ಹಾಗೂ 'A' ಬಟನ್; ಆಯ್ಕೆ ಮಾಡಿದ ಅಕ್ಷರ ಅಥವಾ ಚಿತ್ರ ಅಥವಾ ಬೇರಾವುದೇ ಫೈಲನ್ನು ಕಾಪಿ ಮಾಡಲು ಕಂಟ್ರೋಲ್ ಮತ್ತು 'C' ಬಟನ್; ಅದನ್ನು ಬೇಕಾದಲ್ಲಿ ಪೇಸ್ಟ್ ಮಾಡಲು ಕಂಟ್ರೋಲ್ ಹಾಗೂ 'V' ಬಟನ್ ಏಕಕಾಲದಲ್ಲಿ ಒತ್ತಿದರಾಯಿತು. ಕಂಟ್ರೋಲ್ ಮೂಲಕ ನಿಭಾಯಿಸಬಹುದಾದ ಇನ್ನಷ್ಟು ಉಪಯುಕ್ತ ಅಂಶಗಳೆಂದರೆ, ತೆರೆದಿರುವ ಫೈಲ್ ಅಥವಾ ಪುಟವನ್ನು ಮುದ್ರಿಸಬೇಕಿದ್ದರೆ ಕಂಟ್ರೋಲ್ ಹಾಗೂ 'P', ಹೊಸ ಫೈಲ್/ಬ್ರೌಸರ್ ವಿಂಡೋ ತೆರೆಯಬೇಕಿದ್ದರೆ ಕಂಟ್ರೋಲ್ ಮತ್ತು 'N', ತೆರೆದಿರುವ ಬ್ರೌಸರ್ ಅಥವಾ ಫೈಲನ್ನು ಮುಚ್ಚಬೇಕಿದ್ದರೆ ಕಂಟ್ರೋಲ್ ಮತ್ತು 'W' ಬಳಸಿ. ಬೇಕೆಂದೇ ಅಥವಾ ಆಕಸ್ಮಿಕವಾಗಿ ಮುಚ್ಚಿದ ಬ್ರೌಸರ್ ಪುಟವನ್ನು ತಕ್ಷಣ ತೆರೆಯಬೇಕಿದ್ದರೆ ಕಂಟ್ರೋಲ್ ಶಿಫ್ಟ್ 'T' ಒತ್ತಿ.
- ಇದು ಎಲ್ಲರೂ ಅಗತ್ಯ ಗಮನಿಸಬೇಕಾಗಿರುವುದು. ಏನೋ ಒಂದು ಜಾಲತಾಣವನ್ನೋ, ವಿಷಯದ ಕುರಿತ ಮಾಹಿತಿಯನ್ನೋ ನಾವು ಕಂಪ್ಯೂಟರಲ್ಲಿ ಎಂದರೆ ವಾಸ್ತವವಾಗಿ ಕಂಪ್ಯೂಟರ್ ಬ್ರೌಸರ್‌ನಲ್ಲಿ ಹುಡುಕಲು ಹೋಗುತ್ತೇವೆ. ಆದರೆ, ಈಗಲೂ ತೀರಾ ಸುತ್ತಿ ಬಳಸಿ ಹೆಚ್ಚುವರಿ ಕ್ಲಿಕ್‌ಗಳನ್ನು ಉಪಯೋಗಿಸಿಯೇ ಹುಡುಕುವವರು ಇದ್ದಾರೆ. ಬ್ರೌಸರ್ ತೆರೆದು ಅದರಲ್ಲಿ ಮತ್ತೆ 'Google' ಎಂದು ಬರೆದು ಸರ್ಚ್ ಮಾಡಿ, ಅಲ್ಲಿ ಹುಡುಕಲು ಹೋಗುವ ಹಂತದ ಬದಲು ಸುಲಭದ ಮತ್ತು ಶಾರ್ಟ್‌ಕಟ್ ವಿಧಾನ ಇಲ್ಲಿದೆ: ನೇರವಾಗಿ ಅಡ್ರೆಸ್ ಬಾರ್‌ನಲ್ಲಿಯೇ ನಿಮಗೆ ಬೇಕಾದ ವಿಚಾರವನ್ನು ಟೈಪ್ ಮಾಡಿ 'ಎಂಟರ್' ಕೊಟ್ಟರಾಯಿತು. ಅದು 'ಗೂಗಲ್' ಅಥವಾ 'ಬಿಂಗ್ ಸರ್ಚ್ ಎಂಜಿನ್' ಮೂಲಕ ನಿಮಗೆ ಬೇಕಾದ ಮಾಹಿತಿಯನ್ನು ತಕ್ಷಣವೇ ನಿಮ್ಮ ಮುಂದಿಡುತ್ತದೆ.
- ಪ್ರಜಾವಾಣಿ ಅಥವಾ ಬೇರಾವುದೇ ವೆಬ್ ತಾಣ ನೋಡ ಬೇಕೆಂದಾದರೆ, ಗೂಗಲ್ ತೆರೆದು, ಅಲ್ಲಿ ಹುಡುಕಿ, ನಂತರ ಸಿಗುವ ಫಲಿತಾಂಶಗಳಿಂದ ಕ್ಲಿಕ್ ಮಾಡಲು ಹೋಗಬೇಡಿ. ನೇರವಾಗಿ ಅಡ್ರೆಸ್ ಬಾರ್‌ನಲ್ಲೇ 'Prajavani.net' ಅಥವಾ ಆಯಾ ತಾಣಗಳ ವೆಬ್ ವಿಳಾಸವನ್ನು ಟೈಪ್ ಮಾಡಿ ಎಂಟರ್ ಕೊಟ್ಟರಾಯಿತು. ಕೆಲವು 'ಡಾಟ್ Com' ತಾಣಗಳಿಗೆ ಹೋಗಬೇಕಿದ್ದರೆ ಮತ್ತೊಂದು ಸುಲಭವಾದ ಶಾರ್ಟ್‌ಕಟ್ ಇದೆ. ಅಡ್ರೆಸ್ ಬಾರ್‌ನಲ್ಲಿ ಸಂಬಂಧಪಟ್ಟ ತಾಣದ ವಿಳಾಸವನ್ನು ತಪ್ಪಿಲ್ಲದೆ ಟೈಪ್ ಮಾಡಿ, ಕಂಟ್ರೋಲ್ ಹಾಗೂ 'ಎಂಟರ್' (Enter) ಒತ್ತಿದರಾಯಿತು. ನೇರವಾಗಿ ಅದರ ಡಾಟ್ ಕಾಂ ತಾಣಕ್ಕೆ ಹೋಗುತ್ತೀರಿ. (ಡಾಟ್ ನೆಟ್, ಡಾಟ್ ಇನ್, ಡಾಟ್ ಆರ್ಗ್ ಮುಂತಾದ ಅನ್ಯ ಟಾಪ್ ಲೆವೆಲ್ ಡೊಮೇನ್[TLD] ಗಳಿಗೆ ಅನ್ವಯವಲ್ಲ.)
- ವೆಬ್ ಜಾಲತಾಣದಲ್ಲಿ ಯಾವುದೇ ಪುಟವನ್ನು ನೋಡುತ್ತಿರುವಾಗ, ಕೆಳಕ್ಕೆ ಅಥವಾ ಮುಂದಿನ ಪುಟಕ್ಕೆ ಸ್ಕ್ರೋಲ್ ಆಗಲು ಮೌಸ್‌ನಲ್ಲಿರುವ 'ಸ್ಕ್ರಾಲ್ ಬಟನ್' ಅನ್ನು ತಿರುಗಿಸುವ ಬದಲು, ಕೀಬೋರ್ಡ್‌ನಲ್ಲಿರುವ 'ಸ್ಪೇಸ್' ಬಾರ್ ಒತ್ತಿ. ಮತ್ತೆ ಮೇಲಕ್ಕೆ ಬರಬೇಕಿದ್ದರೆ, 'ಶಿಫ್ಟ್' ಹಾಗೂ 'ಸ್ಪೇಸ್ ಬಾರ್' ಅನ್ನು ಒತ್ತಿ.
- ಕಂಪ್ಯೂಟರಿನಲ್ಲಿರುವ ಅಪ್ಲಿಕೇಶನ್‌ಗಳು, ಪ್ರೋಗ್ರಾಂಗಳು, ಫೋಲ್ಡರುಗಳನ್ನು ಹುಡುಕಲು ಸುಲಭ ಮಾರ್ಗವೆಂದರೆ, 'ವಿಂಡೋಸ್' ಹಾಗೂ 'E ಬಟನ್'ಗಳನ್ನು ಏಕಕಾಲಕ್ಕೆ ಒತ್ತುವುದು. ಆಗ ಇಡೀ ಕಂಪ್ಯೂಟರಿನಲ್ಲಿರುವ ಫೈಲುಗಳನ್ನು ಜಾಲಾಡುವ (ಎಕ್ಸ್‌ಪ್ಲೋರರ್) ವ್ಯವಸ್ಥೆ ತೆರೆದುಕೊಳ್ಳುತ್ತದೆ. ಅಲ್ಲಿಂದ ಬೇಕಾದಲ್ಲಿಗೆ ಕ್ಲಿಕ್ ಮಾಡಿ ಮುಂದುವರಿಸಬಹುದು.
- ಅಪ್ಲಿಕೇಶನ್ ಒಂದರಲ್ಲಿ ಏನೋ ಕೆಲಸ ಮಾಡುತ್ತಿರುವಾಗ, ಮರಳಿ ಡೆಸ್ಕ್‌ಟಾಪ್‌ಗೆ ಹೋಗಬೇಕೆಂದಾದರೆ, ನೇರವಾಗಿ ವಿಂಡೋಸ್ ಬಟನ್ ಹಾಗೂ 'D' ಅಕ್ಷರವನ್ನು ಏಕಕಾಲಕ್ಕೆ ಒತ್ತಿದರಾಯಿತು. ಇರುವ ಎಲ್ಲ ಅಪ್ಲಿಕೇಶನ್‌ಗಳು 'ಮಿನಿಮೈಸ್' ಆಗಿ, ಪರದೆಯ ಮೇಲೆ ಡೆಸ್ಕ್‌ಟಾಪ್ ಮಾತ್ರ ಕಾಣಿಸುತ್ತದೆ.
- ಏಕಕಾಲಕ್ಕೆ ಎರಡು ವಿಂಡೋಗಳಲ್ಲಿ ಕೆಲಸ ಮಾಡಬೇಕೆಂದಾದರೆ, ವಿಂಡೋಸ್ ಬಟನ್ ಹಾಗೂ ಎಡ/ಬಲ ಬಾಣದ ಗುರುತು ಒತ್ತಿಬಿಡಿ. ಹಾಲಿ ಕೆಲಸ ಮಾಡುತ್ತಿರುವ ವಿಂಡೋ, ಎಡ/ಬಲದ ಅರ್ಧ ಭಾಗಕ್ಕೆ ಹೋಗಿ ನಿಲ್ಲುತ್ತದೆ. ಖಾಲಿ ಇರುವ ಭಾಗಕ್ಕೆ ಬೇರೊಂದು ವಿಂಡೋ ಹೊಂದಿಸಲು ಅವಕಾಶವಿದೆ.
- ಏಕಕಾಲಕ್ಕೆ ಹಲವು ವಿಂಡೋಗಳಲ್ಲಿ ಕೆಲಸ ಮಾಡುತ್ತಿರುವಾಗ ತೆರೆದಿರುವ ನಿರ್ದಿಷ್ಟ ಅಪ್ಲಿಕೇಶನ್‌ಗೆ ಹೋಗಬೇಕಿದ್ದರೆ, ಒಂದೊಂದಾಗಿ ವಿಂಡೋಗಳನ್ನು ಮಿನಿಮೈಸ್ ಮಾಡಿಕೊಂಡೇ ಹೋಗಬೇಕಾಗಿಲ್ಲ. ಆಲ್ಟ್ ಹಾಗೂ ಟ್ಯಾಬ್ ಬಟನ್‌ಗಳನ್ನು ಒತ್ತಿದಾಗ ತೆರೆದಿರುವ ಎಲ್ಲ ವಿಂಡೋಗಳು ಕಾಣಿಸುತ್ತದೆ. ನಿಮಗೆ ಬೇಕಾದ ಅಪ್ಲಿಕೇಶನ್‌ಗೆ ನೇರವಾಗಿ ಹೋಗಬಹುದಾಗಿದೆ.
- ಇನ್ನು, ಕಂಪ್ಯೂಟರ್‌ನಲ್ಲಿ ಏನೋ ಮಾಡುತ್ತಿದ್ದೀರಿ. ದಿಢೀರನೇ ಯಾರೋ ಬರುತ್ತಾರೆ. ಆದರೆ ನಿಮ್ಮ ಕೆಲಸದ ಗೋಪ್ಯತೆ ಕಾಪಾಡುವುದಕ್ಕಾಗಿ ಅಥವಾ ನೀವೇ ನಿಮ್ಮ ಸ್ಥಾನದಿಂದ ಎದ್ದುಹೋಗುವಾಗ ಕಂಪ್ಯೂಟರ್ ಸ್ಕ್ರೀನ್ ಅನ್ನು ಲಾಕ್ ಮಾಡಿಹೋಗುವ ಸುರಕ್ಷತೆಯ ಶಿಷ್ಟಾಚಾರ ಪಾಲಿಸಬೇಕಿದ್ದರೆ, ಸ್ಕ್ರೀನ್ ಲಾಕ್ ಮಾಡಲು ವಿಂಡೋಸ್ ಬಟನ್ ಹಾಗೂ 'L' ಬಟನ್ ಒತ್ತಿದರಾಯಿತು. ಇವಿಷ್ಟು ಪ್ರಮುಖ ಶಾರ್ಟ್‌ಕಟ್‌ಗಳು ನಮ್ಮ ದೈನಂದಿನ ಕೆಲಸ-ಕಾರ್ಯಗಳಿಗೆ ಅತ್ಯುಪಯುಕ್ತ. ಇವನ್ನು ಕಲಿತುಕೊಂಡು, ಕೆಲಸಕ್ಕೆ ವೇಗವನ್ನು ನೀಡೋಣ.



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

25) ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

3) ಥೈರಾಕ್ಸಿನ್ ಹಾರ್ಮೋನ್ ಸಂಬಂಧಿಸಿದಂತೆ ಕೆಳಗಿನವುಗಳಲ್ಲಿ ತಪ್ಪಾಗಿರುವ ಹೇಳಿಕೆ ಯಾವುದು? (ಮಾರ್ಚ್ 2020)

ಎ) ಇದು ಕೊಬ್ಬಿನ ಚಯಾಪಚಯ ಕ್ರಿಯೆಯನ್ನು ನಿಯಂತ್ರಿಸುತ್ತದೆ.
ಬಿ) ಇದರ ಕೊರತೆಯಿಂದ ಗಳಗಂಡ ರೋಗ ಉಂಟಾಗುತ್ತದೆ.
ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.
ಡಿ) ಆಹಾರದಲ್ಲಿನ ಅಯೋಡಿನ್ ಇದರ ಉತ್ಪಾದನೆಗೆ ಅಗತ್ಯವಾಗಿದೆ.

ಉತ್ತರ:- (ಸಿ) ಇದು ಪ್ಯಾರಾಥೈರಾಯ್ಡ್ ಗ್ರಂಥಿಯಿಂದ ಸ್ರವಿಕೆಯಾಗುತ್ತದೆ.

4) ವಿದ್ಯುತ್ ಬಲ್ಬಿನಲ್ಲಿರುವ ತಂತುಗಳಲ್ಲಿ ಬಳಸುವ ಲೋಹ ಯಾವುದು? (ಮಾರ್ಚ್ 2021)

ಎ) ಮ್ಯಾಂಗನೀಸ್ ಬಿ) ಟಂಗಸ್ಟನ್
ಸಿ) ನಿಕ್ಕೆಲ್ ಡಿ) ಕ್ರೋಮಿಯಂ

ಉತ್ತರ:- (ಬಿ) ಟಂಗಸ್ಟನ್

5) ಓಮ್(Ohm) ಎಂಬುದು ಇದರ SIಮಾನವಾಗಿದೆ? (ಮಾರ್ಚ್ 2021)

ಎ) ವಿದ್ಯುತ್ ವಿಭವಾಂತರ ಬಿ) ರೋಧ
ಸಿ) ವಿದ್ಯುತ್ ಪ್ರವಾಹ ಡಿ) ವಿದ್ಯುದಾವೇಶ

ಉತ್ತರ:- (ಬಿ) ರೋಧ

6) ನ್ಯೂಕ್ಲಿಯರ್ ವಿದ್ಯುತ್ ಕ್ರಿಯಾಕಾರಿಯಲ್ಲಿ ಶಕ್ತಿಯ ಮೂಲ ಯಾವುದು? (ಮಾರ್ಚ್ 2021)

ಎ) ನ್ಯೂಕ್ಲಿಯರ್ ವಿದಳನ ಕ್ರಿಯೆ
ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ
ಸಿ) ಬಹೀರುಷ್ಣಕ ಕ್ರಿಯೆ
ಡಿ) ನ್ಯೂಕ್ಲಿಯರ್ ಸಮ್ಮಿಲನ ಕ್ರಿಯೆ

ಉತ್ತರ:_ (ಬಿ) ನಿಯಂತ್ರಿತ ಸರಪಣಿ ನ್ಯೂಕ್ಲಿಯರ್ ವಿದಳನ ಕ್ರಿಯೆ

4) ಸೂರ್ಯನ ಅಗಾಧವಾದ ಶಕ್ತಿ ಕಳೆದ .... ವರ್ಷಗಳಿಂದ ಪ್ರಸ್ತುತ ಯಾವ ದರದಲ್ಲಿ ಹೊರಹೊಮ್ಮುತ್ತಿದೆಯೋ ಅದೇ ದರದಲ್ಲಿ ಹೊರಹೊಮ್ಮುತ್ತಿದೆ.

ಎ) 5 ಬಿಲಿಯನ್ ಬಿ) 10 ಬಿಲಿಯನ್
ಸಿ) 50 ಬಿಲಿಯನ್ ಡಿ) 1 ಬಿಲಿಯನ್

ಉತ್ತರ:- (ಎ) 5 ಬಿಲಿಯನ್

5) ಪತನ ಕಿರಣ, ಪತನ ಬಿಂದುವಿನಲ್ಲಿ ಪ್ರತಿಫಲನದ ಮೇಲ್ಮೈಗೆ ಎಳೆದ ಲಂಬ ಮತ್ತು .... ಈ ಮೂರೂ ಒಂದೇ ಸಮತಲದಲ್ಲಿರುತ್ತದೆ.

ಎ) ಪ್ರತಿಫಲಿತ ಧ್ವನಿ ಬಿ) ಪತನ ಕೋನ
ಸಿ) ಪ್ರತಿಧ್ವನಿತ ಶಬ್ದ ಡಿ) ಪ್ರತಿಫಲಿತ ಕಿರಣ

ಉತ್ತರ:- (ಡಿ) ಪ್ರತಿಫಲಿತ ಕಿರಣ

6) ಭಾರತ ಸರ್ಕಾರವು ವನ್ಯ ಜೀವಿ ಸಂರಕ್ಷಣೆಗಾಗಿ ಅಮೃತಾದೇವಿ ಬಿಷ್ಣೋಯ್ ರಾಷ್ಟ್ರೀಯ ಪ್ರಶಸ್ತಿಯನ್ನು ಸ್ಥಾಪಿಸಿದೆ. ಇದಕ್ಕೆ ಕಾರಣ ಅಮೃತಾದೇವಿ ಬಿಷ್ಣೋಯ್ ಅವರು.............

ಎ) ರಾಜಸ್ತಾನದ ಜೋಧಪುರ್ ಸಮೀಪದ ಖೇಜ್ರಾಲಿ ಹಳ್ಳಿಯಲ್ಲಿ ಖೇಜ್ರಿ ಮರಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು
ಬಿ) ಹರಿಯಾಣದ ರಾಖಿಗಢಿ ಸಮೀಪದ ಹಳ್ಳಿಯಲ್ಲಿ ವನ್ಯಜೀವಿಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು
ಸಿ) ಮಹಾರಾಷ್ಟ್ರದ ಪುಣೆ ಸಮೀಪದ ಹಳ್ಳಿಯಲ್ಲಿ ಪ್ರಾಣಿ ಮತ್ತು ಮರಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು
ಡಿ) ಮೇಲಿನ ಯಾವ ಕಾರಣಕ್ಕಾಗಿಯೂ ಅಲ್ಲ

ಉತ್ತರ:- (ಎ) ರಾಜಸ್ತಾನದ ಜೋಧಪುರ್ ಸಮೀಪದ ಖೇಜ್ರಾಲಿ ಹಳ್ಳಿಯಲ್ಲಿ ಖೇಜ್ರಿ ಮರಗಳ ಉಳಿವಿಗಾಗಿ ತಮ್ಮ ಜೀವನವನ್ನೇ ಸಮರ್ಪಣೆ ಮಾಡಿದ್ದರು

7) ಶ್ವಾಸನಾಳದ ಮೇಲ್ಭಾಗವು .... ಎಂಬ ಸಣ್ಣ ಕೂದಲಿನಂತಹ ರಚನೆಗಳನ್ನು ಹೊಂದಿದೆ, ಇವು ಉಚ್ಛ್ವಾಸದ ಗಾಳಿಯಲ್ಲಿರಬಹುದಾದ ಸೂಕ್ಷ್ಮ ಜೀವಿಗಳು, ಧೂಳು, ಮತ್ತು ಇತರೇ ಹಾನಿಕಾರಕ ಕಣಗಳನ್ನು ತೆಗೆದುಹಾಕಲು ಸಹಾಯ ಮಾಡುತ್ತದೆ. ಧೂಮ್ರಪಾನವು ಈ ಕೂದಲನ್ನು ನಾಶ ಮಾಡುತ್ತದೆ

ಎ) ಸಿಲಿಯಾ(Cilia) ಬಿ) ನ್ಯೂಕ್ಲಿಯಸ್
ಸಿ) ಜಾಕ್‌ರಿ ಡಿ) ಮೇಲಿನ ಯಾವುದೂ ಅಲ್ಲ

ಉತ್ತರ:- (ಎ) ಸಿಲಿಯಾ(Cilia)

8) ಪೈರೋವೇಟ್‌ನ ವಿಭಜನೆಯಿಂದ ಕಾರ್ಬನ್ ಡೈ-ಆಕ್ಸೈಡ್, ನೀರು, ಮತ್ತು ಶಕ್ತಿಯ ಬಿಡುಗಡೆಯಾಗುವ ಸ್ಥಳ............

ಎ) ಕೋಶದ್ರವ್ಯ
ಬಿ) ಮೈಟೋ ಕಾಂಡ್ರಿಯಾ ಸಿ) ಕ್ಲೋರೋಪ್ಲಾಸ್ಟ್
ಡಿ) ನ್ಯೂಕ್ಲಿಯಸ್

ಉತ್ತರ:- (ಬಿ) ಮೈಟೋಕಾಂಡ್ರಿಯಾ

9) ಈ ಕೆಳಗಿನ ಯಾವ ಗುಂಪು ಅಲೋಹವಾಗಿದೆ?

ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್
ಬಿ) ತಾಮ್ರ, ಅಲ್ಯುಮಿನಿಯಂ, ಬ್ರೋಮಿನ್, ಗಂಧಕ
ಸಿ) ಮೆಗ್ನಿಷಿಯಂ, ಸೋಡಿಯಂ, ಗಂಧಕ, ಕಾರ್ಬನ್
ಡಿ) ಸೀಸ, ಸತು, ಗಂಧಕ, ಬ್ರೋಮಿಯಮ್

ಉತ್ತರ:- (ಎ) ಕಾರ್ಬನ್, ಗಂಧಕ, ಅಯೋಡಿನ್, ಬ್ರೋಮಿಯಮ್

10) ಮಾನವನ ಜಠರವು ....ಉತ್ಪಾದಿಸುತ್ತದೆ. ಹಾಗೂ ಅದೂ ಜೀರ್ಣಕ್ರಿಯೆಯಲ್ಲಿ ಸಹಾಯ ಮಾಡುತ್ತದೆ.

ಎ) ಆಮ್ಲಜನಕ ಬಿ) ಸಾರಜನಕ
ಸಿ) ಹೈಡ್ರೋಕ್ಲೋರಿಕ್ ಆಮ್ಲ ಡಿ) ಪೊಟಾಷಿಯಂ ಸಲ್ಫೇಟ್

ಉತ್ತರ:- (ಸಿ) ಹೈಡ್ರೋಕ್ಲೋರಿಕ್ ಆಮ್ಲ

ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ

21) ಟಿಂಡಾಲ್ ಪರಿಣಾಮ ಎಂದರೇನು?

ಉತ್ತರ:- ಕಲಿಲ ಪದಾರ್ಥಗಳಿಂದ ಬೆಳಕಿನ ಚದುರುವಿಕೆಯ ವಿದ್ಯಮಾನವನ್ನು ಟಿಂಡಾಲ್ ಪರಿಣಾಮ ಎನ್ನುತ್ತೇವೆ.

22) ಸೌದೆಗಿಂತ ಇದ್ದಿಲು ಉತ್ತಮ ಹೇಗೆ?

ಉತ್ತರ:- ಸೌದೆಗಿಂತ ಇದ್ದಿಲು ಉತ್ತಮ ಹೇಗೆಂದರೆ
(1) ಇದ್ದಿಲು ಯಾವುದೇ ಹೊಗೆಯನ್ನು ಉಂಟು ಮಾಡುವುದಿಲ್ಲ
2) ಇದ್ದಿಲು ಹೆಚ್ಚು ಉಷ್ಣವನ್ನುಂಟು ಮಾಡುವ ಸಾಮರ್ಥ್ಯವನ್ನು ಹೊಂದಿದೆ.

23) ಮಾನವನಲ್ಲಿ ಆಲೋಚನೆ ಮಾಡಲು ಸಹಾಯ ಮಾಡುತ್ತದೆ. ವಿವಿಧ ಭಾಗಗಳಿಂದ ಸಂವೇದನಾ ಆವೇಗಗಳನ್ನು ಸ್ವೀಕರಿಸುತ್ತದೆ. ಈ ಪ್ರದೇಶ ಶ್ರವಣ, ವಾಸನೆ, ದೃಷ್ಟಿ ಮತ್ತಿತ್ತರ ಕಾರ್ಯ ನಡೆಸಲು ಅನುಕೂಲವಾಗಿದೆ. ಇದು ಯಾವುದಕ್ಕೆ ಸಂಬಂಧಿಸಿದ ವಿವರಣೆಯಾಗಿದೆ?

ಉತ್ತರ:- ಮುಮ್ಮೆದಳು

26) ಗ್ರಹಗಳು ಮಿನುಗುವುದಿಲ್ಲ ಏಕೆ?

ಉತ್ತರ:- ಗ್ರಹಗಳು ಭೂಮಿಗೆ ತುಂಬಾ ಹತ್ತಿರದಲ್ಲಿವೆ ಮತ್ತು ವಿಸ್ತರಿಸಿದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಾವು ಒಂದು ಗ್ರಹವನ್ನು ಹಲವಾರು ಬಿಂದು ಗಾತ್ರದ ಬೆಳಕಿನ ಮೂಲದ ಒಂದು ಸಂಗ್ರಹ ಎಂದು ಭಾವಿಸಿದರೆ ಒಟ್ಟು ಎಲ್ಲಾ ಬಿಂದುಗಳಿಂದ ನಮ್ಮ ಕಣ್ಣನ್ನು ತಲುಪುವ ಬೆಳಕಿನ ವ್ಯತ್ಯಾಸವು ಎಲ್ಲಾ ಬಿಂದುಗಳ ಬೆಳಕಿನ ಸರಾಸರಿ ಹತ್ತಿರವಾಗುತ್ತದೆ. ಇದರಿಂದಾಗಿ ಗ್ರಹಗಳ ಮಿನುಗುವಿಕೆ ಶೂನ್ಯವಾಗಿದೆ.

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

II PUC PHYSICS

REVISION : MODEL QUESTIONS

5. Below are the two statements related to magnetic field lines:

Statement-I : The magnetic field lines do not intersect.

Statement-II: The direction of magnetic field at a point is unique.

(A) Both the statements I and II are correct and II is the correct explanation for I
(B) Both the statements I and II are correct and II is not the correct explanation for I
(C) Statement I is wrong but the statement II is correct
(D) Statement I is correct but the statement II is wrong

Ans:- (A) Both the statements I and II are correct and II is the correct explanation for I

6. A straight conductor of length 'l' is moving with a velocity 'v' in the direction of uniform magnetic field of strength 'B'. The magnitude of emf induced between the ends of the conductor is

(A) Blv (B) $\frac{Blv}{2}$
(C) 0 (D) 2Blv

Ans:- (C) 0

7. The SI unit of magnetic flux is: ………

(A) $Wb\ m^{-1}$ (B) $T\ m^{-2}$
(C) weber (D) $Wb\ m^{-2}$

Ans:- (C) weber

8. The average power dissipated in an ac circuit is maximum if the ac source is connected :

(A) only to pure resistor
(B) only to pure inductor
(C) only to pure capacitor
(D) to a series combination of capacitor and Inductor

Ans:- (A) only to pure resistor

9. The electromagnetic waves with lowest frequency among the following are :

(A) gamma rays (B) UV rays
(C) microwaves (D) radio waves

Ans:- (D) radio waves

10. A ray of light coming from an object which is incident parallel to the principal axis of a convex lens placed in air after refraction __________.

(A) appears to diverge from first principal focus
(B) emerges without any deviation
(C) appears to diverge from second principal focus
(D) passes through second principal focus

Ans:- (D) passes through second principal focus

11. If unpolarised light of intensity 'I0' is passed through a polaroid, the intensity of emergent light is

(A) $\frac{I_0}{4}$ (B) $\frac{2I_0}{3}$
(C) $\frac{I_0}{3}$ (D) $\frac{I_0}{2}$

Ans:- (D) $\frac{I_0}{2}$

12. The following are the statements related to photo emission:

(i) Photoelectric current is independent of intensity of incident radiation.
(ii) Stopping potential is different for different photosensitive metal surfaces for a radiation of particular frequency ($v > v_0$).
(iii) Maximum speed of photoelectrons is independent of frequency of incident radiation.
(iv) Saturation current is different for radiations of different intensities having same frequency.

(A) Only (i) and (iii) are correct
(B) Only (i) and (ii) are correct
(C) Only (iii) and (iv) are correct
(D) Only (ii) and (iv) are correct

Ans:- (D) Only (ii) and (iv) are correct

13. The minimum energy required to free the electron from the ground state of a hydrogen atom is

(A) 0.85 eV (B) 3.4 eV
(C) 13.6 eV (D) 1.51 eV


Ans:- (C) 13.6 eV

14. The radioactive decay in which a helium nucleus is emitted is called ___________

(A) gamma decay (B) alpha decay
(C) negative β decay (D) positive β decay

Ans:- (B) alpha decay

15. In the figure, EV and EC are the valence band and conduction band corresponding to an extrinsic semiconductor. E is the energy state corresponding to the impurity present in it. The impurity present in it can be



(A) arsenic . (B) indium
(C) phosphorous (D) antimony

Ans:- (B) indium

(Contd……..)

ಪಿಎಸ್‌ಐ ಮರು ಪರೀಕ್ಷೆ: 117 ಪರೀಕ್ಷಾ ಕೇಂದ್ರಗಳಲ್ಲೂ ಬಿಗಿ ಬಂದೋಬಸ್ತ್

ಶೇ 66ರಷ್ಟು ಅಭ್ಯರ್ಥಿಗಳು ಹಾಜರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಿಎಸ್‌ಐ ನೇರ ನೇಮಕಾತಿಯ ಮರು ಪರೀಕ್ಷೆ ಮಂಗಳವಾರ ಸುಸೂತ್ರವಾಗಿ ನೆರವೇರಿತು. ಪರೀಕ್ಷೆಗೆ ಅರ್ಹರಾಗಿದ್ದ 54 ಸಾವಿರ ಅಭ್ಯರ್ಥಿಗಳಲ್ಲಿ ಶೇ 66ರಷ್ಟು ಮಂದಿ ಹಾಜರಾಗಿದ್ದರು.

ಎಲ್ಲ 117 ಪರೀಕ್ಷಾ ಕೇಂದ್ರಗಳಲ್ಲೂ ಬಿಗಿ ಬಂದೋಬಸ್ತ್ ಮಾಡಲಾಗಿತ್ತು. ಯಾವುದೇ ಅಕ್ರಮಗಳಿಗೆ ಆಸ್ಪದವಿಲ್ಲ-ದಂತೆ ಪ್ರತಿ ಪರೀಕ್ಷಾ ಕೇಂದ್ರಕ್ಕೂ ತಲಾ 6 ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು. ಕಳೆದ ಬಾರಿ ನಡೆದಿದ್ದ ಇದೇ ನೇಮಕಾತಿ ಪರೀಕ್ಷೆಯಲ್ಲಿ ಉತ್ತರ ಕರ್ನಾಟಕ ಭಾಗದ ಕೆಲ ಜಿಲ್ಲೆಗಳಲ್ಲಿ ಅಕ್ರಮಗಳು ಪತ್ತೆಯಾಗಿ ಆಯ್ಕೆ ಪಟ್ಟಿಯನ್ನೇ ರದ್ದು ಮಾಡಲಾಗಿತ್ತು. ಹಾಗಾಗಿ, ಈ ಬಾರಿಯ ಪರೀಕ್ಷೆಯಲ್ಲಿ ಕಲಬುರಗಿ, ರಾಯಚೂರು ಭಾಗದ ಶಿಕ್ಷಕರನ್ನು ಪರೀಕ್ಷಾ ಕಾರ್ಯದ ಹೊಣೆಯಿಂದ ಹೊರಗಿಡಲಾಗಿತ್ತು. ಮಂಡ್ಯ, ಮೈಸೂರು, ತುಮಕೂರು, ದಾವಣಗೆರೆ ಭಾಗದ ಶಿಕ್ಷಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಪರೀಕ್ಷಾ ಮೇಲ್ವಿಚಾರಕರನ್ನಾಗಿ ನಿಯೋಜಿಸಲಾಗಿತ್ತು.

ಮುಖ್ಯಾಂಶಗಳು

- ಪ್ರತಿ ಪರೀಕ್ಷಾ ಕೇಂದ್ರಕ್ಕೂ ತಲಾ 6 ಪೊಲೀಸ್ ಸಿಬ್ಬಂದಿ ನಿಯೋಜನೆ
- ವಸ್ತ್ರಸಂಹಿತೆಯನ್ನು ಪಾಲಿಸದವರ ಪರದಾಟ

ಕಟ್ಟುನಿಟ್ಟಿನ ನಿಯಮಕ್ಕೆ ಪರದಾಡಿದ ಅಭ್ಯರ್ಥಿಗಳು: ಪರೀಕ್ಷಾ ನೀತಿ ಸಂಹಿತೆಗಳನ್ನೂ ಈ ಬಾರಿ ಕಟ್ಟುನಿಟ್ಟಾಗಿ ಪಾಲಿಸಲಾಯಿತು. ಇದರಿಂದ ಹಲವು ಅಭ್ಯರ್ಥಿಗಳು ಪರದಾಡಿದರು.

ಪೂರ್ಣ ತೋಳಿನ ಶರ್ಟ್ ಧರಿಸಿ ಬಂದಿದ್ದ ಅಭ್ಯರ್ಥಿಯೊಬ್ಬರು ಶರ್ಟ್ ಬದಲಿಸಲು ನಿರಾಕರಿಸಿದರು. ಸಿಬ್ಬಂದಿ ಒಳಗೆ ಬಿಡಲು ಒಪ್ಪಲಿಲ್ಲ. ಕೊನೆಗೆ ಪರೀಕ್ಷಾ ಕೇಂದ್ರದಿಂದಲೇ ಹೊರನಡೆದರು. ಗದಗ ಜಿಲ್ಲೆಯಿಂದ ಬಂದಿದ್ದ ಅಭ್ಯರ್ಥಿಯೊಬ್ಬರು ಕೈಗೆ ಹಾಕಿದ್ದ ಕಡಗ ತೆಗೆಯಲು ಹರಸಾಹಸ ಪಟ್ಟರು. ಶಾಂಪು ಬಳಸಿದರೂ ತೆಗೆಯಲು ಸಾಧ್ಯವಾಗಲಿಲ್ಲ. ಕೊನೆಗೆ ಕಟ್ಟಿಂಗ್ ಪ್ಲೇಯರ್ ಬಳಸಿ ಕಟ್ ಮಾಡುವಾಗ ಕೈಗೆ ಗಾಯವಾಯಿತು. ನಂತರ ಚಿಕಿತ್ಸೆ ಪಡೆದು ಪರೀಕ್ಷೆ ಬರೆದರು. ಹಲವರಿಗೆ ಕೊರಳಿನ ದಾರ ತೆಗೆಸಲಾಯಿತು. ಜೀನ್ಸ್ ಪ್ಯಾಂಟ್ ಬದಲಿಸಿಕೊಂಡು ಬರುವಂತೆ ಸೂಚಿಸಲಾಯಿತು.



ಬೆಂಗಳೂರಿನಲ್ಲಿ ಮಂಗಳವಾರ ನಡೆದ ಪಿಎಸ್‌ಐ ನೇಮಕಾತಿ ಮರು ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳನ್ನು ಪೊಲೀಸರು ತಪಾಸಣೆ ನಡೆಸಿದರು

ಈ ಕಚೇರಿಯಲ್ಲಿ ಕುರ್ಚಿ ಯಾರದು?

ಪ್ರಜಾವಾಣಿ ವಾರ್ತೆ

ಧಾರವಾಡ: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಹುದ್ದೆಯನ್ನು ಇಬ್ಬರು ನಿರ್ವ-ಹಿಸುತ್ತಿದ್ದು, ಗೊಂದಲಕ್ಕೆ ಕಾರಣವಾಗಿದೆ.



ಸರೋಜಾ ಹಳಕಟ್ಟಿ



ಗೋಪಾಲ ಲಮಾಣಿ

ಆ ಹುದ್ದೆಯನ್ನು ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ ಅಧಿಕಾರಿ ಗೋಪಾಲ ಲಮಾಣಿ ಅವರಿಗೆ ಪ್ರಭಾರ ವಹಿಸಲಾಗಿದೆ. ಆದರೆ, ಅಲ್ಲಿಂದ ಹಾವೇರಿ ಜಿಲ್ಲೆಯ ಹಿರೇಕೆರೂರಿಗೆ ವರ್ಗಾವಣೆಯಾದ ಅಧಿಕಾರಿ ಸರೋಜಾ ಹಳಕಟ್ಟಿ ಅವರು ಕೋರ್ಟ್‌ನಿಂದ ತಡೆಯಾಜ್ಞೆ ತಂದು, ಅಲ್ಲಿಯೇ ಕರ್ತವ್ಯ ಮುಂದುವರೆಸಿದ್ದಾರೆ.

ಸರೋಜಾ ಅವರಿಗೆ 2023 ಜುಲೈ 1ರಂದು ಹಾವೇರಿ ಜಿಲ್ಲೆಯ ಹಿರೇಕೆರೂರಿಗೆ ವರ್ಗಾವಣೆಯಾಗಿತ್ತು. ಅವರ ಹುದ್ದೆಗೆ ಗೋಪಾಲ ಲಮಾಣಿ ಅವರನ್ನು ಪ್ರಭಾರಿಯಾಗಿ ನಿಯುಕ್ತಿಗೊಳಿಸಿ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಆದೇಶಿಸಿದ್ದರು.

ಧಾರವಾಡದಲ್ಲಿ ಕರ್ತವ್ಯ ಮುಂದುವರಿಸಲು ಅವಕಾಶ ಕೋರಿ ಸರೋಜಾ ಅವರು ಕೆಎಟಿ (ಕರ್ನಾಟಕ ಆಡಳಿತ ಮಂಡಳಿ) ಮೆಟ್ಟಿಲು ಏರಿದರು. ವರ್ಗಾವಣೆ ಆದೇಶಕ್ಕೆ ಕೆಎಟಿ ತಡೆಯಾಜ್ಞೆ ನೀಡಿತು. ಆದರೆ, ಇದನ್ನು ಹೈಕೋರ್ಟ್ ವಜಾಗೊಳಿಸಿತು. ಸರೋಜಾ ಅವರು ಇದನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್ ಮೊರೆ ಹೋದರು. ಯಥಾಸ್ಥಿತಿ ಕಾಪಾಡಲು ಸುಪ್ರೀಂ ಕೋರ್ಟ್ ಆದೇಶಿಸಿದೆ. ಅವರು ಅದೇ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಸರೋಜಾ ಅವರು ಹಿರೇಕೆರೂರಿನಲ್ಲಿ ಕರ್ತವ್ಯಕ್ಕೆ ವರದಿ ಮಾಡಿಕೊಂಡಿಲ್ಲ. ಈ ಕುರಿತು ಪ್ರತಿಕ್ರಿಯೆ ಪಡೆಯಲು ಯತ್ನಿಸಿದಾಗ ಇಬ್ಬರೂ ಅಧಿಕಾರಿಗಳು ಕರೆ ಸ್ವೀಕರಿಸಲಿಲ್ಲ.

ಕರ್ತವ್ಯದಿಂದ ಸರೋಜಾ ಬಿಡುಗಡೆ: 'ಗೊಂದಲ ಕುರಿತಂತೆ ಸರ್ಕಾರಕ್ಕೆ ಪತ್ರ ಬರೆಯಲಾಗಿದೆ. ವರ್ಗಾವಣೆಯಾದ ಸರೋಜಾ ಅವರನ್ನು ಕರ್ತವ್ಯದಿಂದ ಬಿಡುಗಡೆ ಮಾಡಲಾಗಿದೆ. ಈ ಮಧ್ಯೆ ಅವರು ಕರ್ತವ್ಯಕ್ಕೆ ರಜೆ ಹಾಕಿದ್ದರು. ಬಳಿಕ ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದಾರೆ' ಎಂದು ಜಿಲ್ಲಾಪಂಚಾಯಿತಿ ಮುಖ್ಯಕಾರ್ಯನಿರ್ವಹಣಾಧಿಕಾರಿ ಸ್ವರೂಪಾ ಟಿ.ಕೆ ಅವರು ಮಾಹಿತಿ ನೀಡಿದ್ದಾರೆ.

ರಾಯಣ್ಣ ಪ್ರತಿಮೆ ತೆರವು; ವಾಲ್ಮೀಕಿ ಸಮುದಾಯದ ಧರಣಿ ಅಂತ್ಯ

ಪ್ರಜಾವಾಣಿ ವಾರ್ತೆ

ಕಡರನಾಯ್ಕನಹಳ್ಳಿ (ದಾವಣಗೆರೆ): ಸಮೀಪದ ಭಾನುವಳ್ಳಿ ಗ್ರಾಮದಲ್ಲಿ ಜ.9ರಂದು ಬೆಳಗಿನ ಜಾವ ದಿಢೀರ್ ಪ್ರತಿಷ್ಠಾಪಿಸಲಾಗಿದ್ದ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಜಿಲ್ಲಾಧಿಕಾರಿ ಆದೇಶದ ಮೇರೆಗೆ ಬಿಗಿ ಪೊಲೀಸ್ ಬಂದೋಬಸ್ತ್‌ನೊಂದಿಗೆ ಮಂಗಳವಾರ ತೆರವುಗೊಳಿಸಿ, ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

ಗ್ರಾಮದ ಮದಕರಿ ನಾಯಕ ವೃತ್ತದ ಪಕ್ಕದಲ್ಲಿರುವ ಸಿದ್ದಪ್ಪ ಅವರ ನಿವಾಸದ ಎದುರು ರಾತ್ರೋರಾತ್ರಿ ಸಂಗೊಳ್ಳಿ ರಾಯಣ್ಣನ ಪ್ರತಿಮೆ ಪ್ರತಿಷ್ಠಾಪಿಸಲಾಗಿತ್ತು. ಅನತಿ ದೂರದಲ್ಲಿ ಮದಕರಿ ನಾಯಕ ದ್ವಾರ ಇರುವುದರಿಂದ, ಅಲ್ಲಿ ರಾಯಣ್ಣನ ಪ್ರತಿಮೆ ಇರಿಸದೇ, ತೆರವುಗೊಳಿಸಬೇಕೆಂದು ಆಗ್ರಹಿಸಿ ವಾಲ್ಮೀಕಿ ನಾಯಕ ಸಮುದಾಯದ ಜನ ಜಿಲ್ಲಾಡಳಿತಕ್ಕೆ ಮನವಿ ಸಲ್ಲಿಸಿ ಅಹೋರಾತ್ರಿ ಧರಣಿ ಕೈಗೊಂಡಿದ್ದರು.

ಹೆಚ್ಚುವರಿ ಜಿಲ್ಲಾಧಿಕಾರಿ ಲೋಕೇಶ್, ಉಪ ವಿಭಾಗಾಧಿಕಾರಿ ದುರ್ಗಾಶ್ರೀ, ಹರಿಹರ ತಹಶೀಲ್ದಾರ್ ಗುರುಬಸವರಾಜ, ಎ.ಎಸ್‌ಪಿ ವಿಜಯಕುಮಾರ್ ಸಂತೋಷ್ ನೇತೃತ್ವದಲ್ಲಿ ಪೊಲೀಸ್ ಹಾಗೂ ಕೆಎಸ್‌ಆರ್‌ಪಿ ಸಿಬ್ಬಂದಿ ಬೆಳಿಗ್ಗೆ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ತೆರವುಗೊಳಿಸಿದರು. ಕಾರ್ಯಾಚರಣೆಗೆ ಅಡ್ಡಿಪಡಿಸಿದ 67 ಜನರನ್ನು ಬಂಧಿಸಿ, ಸಂಜೆ ಬಿಡುಗಡೆಗೊಳಿಸಲಾಯಿತು.


ಸಂಗೊಳ್ಳಿ ರಾಯಣ್ಣನ ಪ್ರತಿಮೆ ತೆರವುಗೊಳಿಸಿದ ಹಿನ್ನೆಲೆಯಲ್ಲಿ ವಾಲ್ಮೀಕಿ ನಾಯಕ ಸಮುದಾಯದವರು ಧರಣಿಯನ್ನು ಅಂತ್ಯಗೊಳಿಸಿದರು. ಶಾಂತಿ ಕಾಪಾಡುವ ದೃಷ್ಟಿಯಿಂದ ಜ.25ರ ಸಂಜೆವರೆಗೂ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

'ಜಿಲ್ಲಾಡಳಿತದ ತೀರ್ಮಾನದ ಬಗ್ಗೆ ನಮ್ಮ ವಿರೋಧವಿಲ್ಲ. ಸಮುದಾಯದ ಮುಖಂಡರು, ಹಿರಿಯರು ಚರ್ಚಿಸಿ ಮುಂದಿನ ದಿನಗಳಲ್ಲಿ ಅದೇ ಸ್ಥಳದಲ್ಲಿ ಸಂಗೊಳ್ಳಿ ರಾಯಣ್ಣನ ಪ್ರತಿಮೆಯನ್ನು ಮತ್ತೆ ಪ್ರತಿಷ್ಠಾಪಿಸಲು ಯತ್ನಿಸುತ್ತೇವೆ' ಎಂದು ಕುರುಬ ಸಮುದಾಯದ ಮುಖಂಡರಾದ ಎಚ್.ಕೆ.ಕನ್ನಪ್ಪ, ಯು.ಕೆ.ಅಣ್ಣಪ್ಪ, ಬಲ್ಲೂರ್ ಗಂಗಾಧರ, ಕೆ.ಕೆ.ಪ್ರಶಾಂತ್, ಕೆ.ಚಂದ್ರಪ್ಪ, ಹೇಮಂತರಾಜ್ ತಿಳಿಸಿದ್ದು, ಪರಿಸ್ಥಿತಿ ಬೂದಿ ಮುಚ್ಚಿದ ಕೆಂಡದಂತಿದೆ.

'ಸಂಗೊಳ್ಳಿ ರಾಯಣ್ಣನ ಪ್ರತಿಮೆ ತೆರವುಗೊಳಿಸಿ ಸಾಮಾಜಿಕ ನ್ಯಾಯ ಎತ್ತಿ ಹಿಡಿದ ಜಿಲ್ಲಾಡಳಿತ, ಪೊಲೀಸ್ ಇಲಾಖೆಗೆ ಸಮುದಾಯದ ಪರವಾಗಿ ಧನ್ಯವಾದಗಳನ್ನು ಸಲ್ಲಿಸುತ್ತೇವೆ' ಎಂದು ರಾಜನಹಳ್ಳಿ ವಾಲ್ಮೀಕಿ ಮಠದ ಟ್ರಸ್ಟಿ ಕಳ್ಳಿ ಮಂಜುನಾಥ್, ಗ್ರಾಮ ಪಂಚಾಯಿತಿ ಸದಸ್ಯ ಧನ್ಯಕುಮಾರ್, ಪಾರ್ವತಿ, ಹೇಮಶ್ರೀ ದೊಡ್ಡಮನಿ ತಿಳಿಸಿದರು.

ನಿಧನ ವಾರ್ತೆ

ನಿವೃತ್ತ ಅಧಿಕಾರಿ ಬೈಕೆರೆ ನಾಗೇಶ್



ಬೈಕೆರೆ ನಾಗೇಶ್

ಸಕಲೇಶಪುರ (ಹಾಸನ): ಕೇಂದ್ರ ಸರ್ಕಾರದ ನಿವೃತ್ತ ಅಧಿಕಾರಿ, ತಾಲ್ಲೂಕಿನ ಬೈಕೆರೆ ನಾಗೇಶ್ (73) ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ಮಂಗಳವಾರ ಬೆಳಿಗ್ಗೆ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಬುಧವಾರ ಬೆಳಿಗ್ಗೆ 6 ರಿಂದ ಮಧ್ಯಾಹ್ನ 3 ಗಂಟೆಯವರೆಗೆ ಬೈಕೆರೆ ಗ್ರಾಮದ ಅವರ ತೋಟದ ಮನೆಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿದೆ. ಸಂಜೆ ತೋಟದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

1988ರಲ್ಲಿ ಕೇಂದ್ರ ಸೇವೆಗೆ ಸೇರಿದ ಅವರು ವಿವಿಧ ಸಚಿವಾಲಯಗಳಲ್ಲಿ ಸುಮಾರು 22 ವರ್ಷಗಳ ಕಾಲ ಕಾರ್ಯನಿರ್ವಹಿಸಿದ್ದರು. ರಾಸಾಯನಿಕ ಮತ್ತು ಪೆಟ್ರೋಲಿಯಂ ಸಚಿವರಾಗಿದ್ದ ಎಂ.ಎಸ್. ಗುರುಪಾದಸ್ವಾಮಿ, ಸಂಪರ್ಕ ಸಚಿವರಾಗಿದ್ದ ಡಾ. ಸಂಜಯ ಸಿಂಗ್, ರೈಲ್ವೆ ಸಚಿವರಾಗಿದ್ದ ಸಿ.ಕೆ. ಜಾಫರ್ ಷರೀಫ್, ಸುರೇಶ್ ಕಲ್ಮಾಡಿ, ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ವಾಣಿಜ್ಯ ಸಚಿವರಾಗಿದ್ದ ರಾಮಕೃಷ್ಣ ಹೆಗಡೆ, ವಿ.ಧನಂಜಯ ಕುಮಾರ್, ಕೇಂದ್ರ ಯೋಜನಾ ಸಚಿವರಾಗಿದ್ದ ಎಂ.ವಿ. ರಾಜಶೇಖರಮೂರ್ತಿ ಅವರಿಗೆ ವಿಶೇಷ ಕರ್ತವ್ಯ ಅಧಿಕಾರಿಯಾಗಿದ್ದರು. 2009ರಲ್ಲಿ ಕರ್ನಾಟಕ ಸರ್ಕಾರದ ದೆಹಲಿ ಹೆಚ್ಚುವರಿ (ರಾಜ್ಯ ಸಚಿವ ಸ್ಥಾನ) ಸಮನ್ವಯ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ್ದರು.

ವಕೀಲ ಟಿ.ಎಸ್. ಅನಂತರಾಮ್



ಬೆಂಗಳೂರು: ಕಾರ್ಮಿಕ ಮುಖಂಡ ಹಾಗೂ ಹೈಕೋರ್ಟ್ ವಕೀಲ ಟಿ.ಎಸ್. ಅನಂತರಾಮ್ (78) ಸೋಮವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರಿ ಇದ್ದಾರೆ.

ಎಂ.ಎಸ್ಸಿ ಪದವೀಧರರಾಗಿದ್ದ ಅನಂತರಾಮ್ ಅವರು ಸ್ಟೂಡೆಂಟ್ ಫೆಡರೇಷನ್ ಆಫ್ ಇಂಡಿಯಾ (ಎಸ್‌ಎಫ್‌ಐ) ವಿದ್ಯಾರ್ಥಿ ಸಂಘಟನೆಯ ಮೂಲಕ ಕಾರ್ಮಿಕ ಮುಖಂಡರಾಗಿ ಹೊರಹೊಮ್ಮಿದರು. 1970ರ ದಶಕದಲ್ಲಿ ತುಮಕೂರಿನಲ್ಲಿ ಹೋಟೆಲ್ ಕಾರ್ಮಿಕರನ್ನು ಸಂಘಟಿಸುವ ಮೂಲಕ ಕಾರ್ಮಿಕ ಚಳವಳಿಗೆ ಧುಮುಕಿದರು. ಬೆಂಗಳೂರಿನಲ್ಲಿ ನೂರಾರು ಕಾರ್ಖಾನೆಗಳ ಕಾರ್ಮಿಕರನ್ನು ಸಂಘಟಿಸಿ, ಸಾವಿರಾರೂ ಕಾರ್ಮಿಕರ ಏಳಿಗೆಗಾಗಿ ಅವಿರತವಾಗಿ ಶ್ರಮಿಸಿದ್ದರು.

ಕೇವಲ ಸಂಘಟನಾತ್ಮಕ ಹೋರಾಟ ಮತ್ತು ಬೀದಿ ಚಳವಳಿಯಿಂದಲೇ ಕಾರ್ಮಿಕರಿಗೆ ನ್ಯಾಯ ಒದಗಿಸಲು ಸಾಧ್ಯವಿಲ್ಲ ಎಂಬುದನ್ನು ಅರಿತಿದ್ದ ಅವರು ಕಾನೂನು ಪದವಿ ಪಡೆದು, ಕಾರ್ಮಿಕ ನ್ಯಾಯಾಲಯ, ಔದ್ಯಮಿಕ ನ್ಯಾಯಾಲಯ, ಹೈಕೋರ್ಟ್ ಹಾಗೂ ಸುಪ್ರೀಂ ಕೋರ್ಟ್‌ಗಳಲ್ಲಿ ಕಾರ್ಮಿಕರ ಪರವಾಗಿ ವಾದ ಮಂಡಿಸಿ ಕಾರ್ಮಿಕರಿಗೆ ಐತಿಹಾಸಿಕ ಗೆಲುವುಗಳನ್ನು ತಂದು ಕೊಟ್ಟಿದ್ದರು.

ಚಾಮರಾಜಪೇಟೆಯ ಟಿ.ಆರ್. ಮಿಲ್ ಬಳಿ ಇರುವ ರುದ್ರಭೂಮಿ ಯಲ್ಲಿ ಸೋಮವಾರ ಅಂತ್ಯಕ್ರಿಯೆ ನಡೆಯಿತು ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

'ಗಾಂಧಿ' ಪ್ರಬಂಧ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾತ್ಮ ಗಾಂಧಿಯವರ ಚಿಂತನೆಗಳ ಮೂಲಕ 21ನೇ ಶತಮಾನದ ಸಮಸ್ಯೆಗಳಿಗೆ ಪರಿಹಾರ ಪಡೆಯಲು ಶಾಲಾ–ಕಾಲೇಜು ವಿದ್ಯಾರ್ಥಿ-ಗಳಿಗೆ ಪ್ರಬಂಧ ಸ್ಪರ್ಧೆ ಆಯೋಜಿಸಲು ಸರ್ಕಾರ ನಿರ್ಧರಿಸಿದೆ. ಈ ಕುರಿತು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸೂಚನೆ ನೀಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ, ಪರೀಕ್ಷೆಗೆ ಸಿದ್ಧತೆ ನಡೆಸುತ್ತಿರುವ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳನ್ನು ಹೊರತುಪಡಿಸಿ, 6ನೇ ತರಗತಿ ಮೇಲ್ಪಟ್ಟ ಎಲ್ಲ ಶಾಲಾ–ಕಾಲೇಜು ವಿದ್ಯಾರ್ಥಿ ಗಳಿಗೆ ಪ್ರಬಂಧ ಸ್ಪರ್ಧೆ ನಡೆಸಬೇಕು ಎಂದು ಸಲಹೆ ನೀಡಿದ್ದಾರೆ.

ಉದ್ಯೋಗ ವಾಣಿ

ಆಡಳಿತ ವಿರೋಧಿ ಅಲೆ ಎದುರಿಸುತ್ತಿರುವ ಸಚಿವರು • ಸಮೀಕ್ಷೆ ನಡೆಸಿರುವ ವರಿಷ್ಠರು– ರಾಜ್ಯದಲ್ಲೂ ಪ್ರಯೋಗ

ಸಮರ್ಥ ಅಭ್ಯರ್ಥಿಗಳಿಗೆ ಬಿಜೆಪಿ ಹುಡುಕಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿಯಲ್ಲಿ ವಯೋಕಾರಣಕ್ಕೆ ಸ್ಪರ್ಧಿಸದಿರುವವರು, ಕಾರ್ಯಕರ್ತರು ಹಾಗೂ ಮತದಾರರಿಂದ ವಿರೋಧದ ಅಲೆ ಎದುರಿಸುತ್ತಿರುವವರು ಸೇರಿ ಸುಮಾರು 8ರಿಂದ 10 ಲೋಕಸಭಾ ಕ್ಷೇತ್ರಗಳಿಗೆ ಸಮರ್ಥ ಅಭ್ಯರ್ಥಿಗಳಿಗಾಗಿ ಬಿಜೆಪಿ ಹುಡುಕಾಟ ನಡೆಸಿದೆ.

'ಮೋದಿ ಅಲೆ, ರಾಮಮಂದಿರ ನಿರ್ಮಾಣ ವಿಷಯ ಪಕ್ಷಕ್ಕೆ ಅನುಕೂಲಕರ ವಾತಾವರಣ ಸೃಷ್ಟಿಸಿದೆ. ಆದರೆ ಸಮರ್ಥ ಅಭ್ಯರ್ಥಿಗಳು ಇಲ್ಲದಿದ್ದರೆ ಕಷ್ಟವಾಗುತ್ತದೆ. ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸಿದರೆ 20ಕ್ಕೂ ಹೆಚ್ಚು ಲೋಕಸಭಾ ಕ್ಷೇತ್ರಗಳನ್ನು ನಿರಾಯಾಸವಾಗಿ ಗೆಲ್ಲಬಹುದು' ಎಂಬ ಚರ್ಚೆ ಬಿಜೆಪಿಯಲ್ಲಿ ನಡೆದಿದೆ.

ಅಲ್ಲದೇ, ವರಿಷ್ಠರು ಈ ಬಾರಿ ಕೆಲವು ಕ್ಷೇತ್ರಗಳಲ್ಲಿ ಹೊಸ ಪ್ರಯೋಗಕ್ಕೂ ಮುಂದಾಗಲೂಬಹುದು. ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, ವಿದೇಶಾಂಗ ಸಚಿವ ಎಸ್.ಜೈಶಂಕರ್ ಅಂತಹವರನ್ನು ರಾಜ್ಯದ ಬಿಜೆಪಿಯ ಭದ್ರಕೋಟೆ ಎನಿಸಿರುವ ಕ್ಷೇತ್ರಗಳಲ್ಲಿ ಕಣಕ್ಕೆ ಇಳಿಸಿ, ಸಂಸತ್ತಿಗೆ ಪ್ರವೇಶ ನೀಡುವ ವಿಚಾರವೂ ವರಿಷ್ಠರ ಪರಿಶೀಲನೆಯಲ್ಲಿದೆ ಎಂದು ಮೂಲಗಳು ಹೇಳಿವೆ.

ಚಾಮರಾಜನಗರ, ಚಿತ್ರದುರ್ಗ, ಬೆಂಗಳೂರು ಉತ್ತರ, ಮಂಗಳೂರು, ಉಡುಪಿ- ಚಿಕ್ಕಮಗಳೂರು, ದಾವಣಗೆರೆ, ಬೆಳಗಾವಿ, ವಿಜಯಪುರ, ಚಿಕ್ಕಬಳ್ಳಾಪುರ, ಹಾವೇರಿ, ಬಾಗಲಕೋಟೆ, ಉತ್ತರ ಕನ್ನಡ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಬದಲಾವಣೆ ಸಾಧ್ಯತೆ ಹೆಚ್ಚಾಗಿದೆ. ಈ ಕ್ಷೇತ್ರಗಳ ಬಗ್ಗೆ ಬಿಜೆಪಿ ವರಿಷ್ಠರು ಕೆಲವು ಸುತ್ತಿನ ಸಮೀಕ್ಷೆಯನ್ನೂ ನಡೆಸಿದ್ದು, ಯಾರನ್ನು ಕಣಕ್ಕೆ ಇಳಿಸಿದರೆ ಸೂಕ್ತ ಎಂಬ ಬಗ್ಗೆ ಮಾಹಿತಿ ಕಲೆ ಹಾಕುತ್ತಿದ್ದಾರೆ. ಅಲ್ಲದೇ, ರಾಜ್ಯ ಘಟಕವೂ ಈ ಕ್ಷೇತ್ರಗಳಿಗೆ ಕೆಲವು ಹೆಸರುಗಳನ್ನು ಸೂಚಿಸಲಿದೆ. ವರಿಷ್ಠರ ತೀರ್ಮಾನವೇ ಅಂತಿಮ ಎಂದೂ ಬಿಜೆಪಿಯ ನಾಯಕರೊಬ್ಬರು ತಿಳಿಸಿದರು.

ಫೆಬ್ರುವರಿ 15ರ ಬಳಿಕ ಅಭ್ಯರ್ಥಿ ಮಾಹಿತಿ?: ಫೆಬ್ರುವರಿಯಲ್ಲಿ ಕೇಂದ್ರದ ಬಜೆಟ್ ಅಧಿವೇಶನ ಮುಗಿದ ಬಳಿಕ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ ಆಗುವ ಸಾಧ್ಯತೆ ಇದೆ. ರಾಜ್ಯದಲ್ಲಿ ಅಭ್ಯರ್ಥಿಗಳು ಯಾರು ಎಂಬ ಸೂಚನೆ ನೀಡಿದರೂ ಸಾಕು ತಯಾರಿ ನಡೆಸಲು ಅನುಕೂಲವಾಗುತ್ತದೆ ಎಂದು ರಾಜ್ಯ ಘಟಕವು ವರಿಷ್ಠರಿಗೆ ಮನವಿ ಮಾಡಿದ್ದು, ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮೂಲಗಳು ಹೇಳಿವೆ.

ಕಳೆದ ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ಕೊನೇ ಕ್ಷಣದಲ್ಲಿ ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡಿದ್ದರಿಂದ ಗೊಂದಲ ನಿರ್ಮಾಣವಾಯಿತು. ಪಕ್ಷದ ಸೋಲಿಗೆ ಈ ಅಂಶವೂ ಒಂದು ಕಾರಣ. ಈ ಚುನಾವಣೆಯಲ್ಲಿ ಗೊಂದಲ ಆಗುವುದನ್ನು ತಪ್ಪಿಸಬೇಕಾಗಿದೆ. ಅದರಿಂದ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಅನುಕೂಲವಾಗುತ್ತದೆ ಎಂದು ವರಿಷ್ಠರಿಗೆ ಮನವರಿಕೆ ಮಾಡಲಾಗಿದೆ ಎಂದು ಬಿಜೆಪಿ ನಾಯಕರೊಬ್ಬರು ಹೇಳಿದರು.

ಕೇಂದ್ರ ಸಚಿವರಿಗೆ ಆಡಳಿತ ವಿರೋಧಿ ಅಲೆ?: ಕೇಂದ್ರ ಸಚಿವರಾದ ಭಗವಂತ ಖೂಬಾ, ಶೋಭಾ ಕರಂದ್ಲಾಜೆ ಹಾಗೂ ಪಕ್ಷದ ಹಿಂದಿನ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರಿಗೆ ಆಡಳಿತ ವಿರೋಧಿ ಅಲೆ ಎದುರಿಸುತ್ತಿದ್ದಾರೆ. ಕಾರ್ಯಕರ್ತರೂ ಇವರ ಬಗ್ಗೆ ಬೇಸತ್ತಿದ್ದಾರೆ. ನಾರಾಯಣಸ್ವಾಮಿ ಈ ಬಾರಿ ಚುನಾವಣೆ ಸ್ಪರ್ಧಿಸುವುದಿಲ್ಲ ಎಂಬ ಅರ್ಥದಲ್ಲಿ ಮಾತನಾಡಿದ್ದಾರೆ. ಶೋಭಾ ಯಾವ ಕ್ಷೇತ್ರದಲ್ಲಿ ಸ್ಪರ್ಧಿಸಬೇಕು ಎಂಬ ತಾಕಲಾಟದಲ್ಲಿದ್ದಾರೆ. ವರಿಷ್ಠರೇ ಇವರ ಭವಿಷ್ಯವನ್ನು ನಿರ್ಧರಿಸಲಿದ್ದಾರೆ ಎಂದು ಮೂಲಗಳು ಹೇಳಿವೆ.

ವಿಜಯೇಂದ್ರಗೆ ಅಗ್ನಿಪರೀಕ್ಷೆ

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರಿಗೆ ಲೋಕಸಭಾ ಚುನಾವಣೆ ಮೊದಲ ಅಗ್ನಿಪರೀಕ್ಷೆಯಾಗಿದೆ.

'ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತಿದ್ದ ಬಿಜೆಪಿ ಕಳಾಹೀನವಾಗಿತ್ತು. ವಿಜಯೇಂದ್ರ ನೇಮಕದ ಬಳಿಕ ಕಾರ್ಯಕರ್ತರಲ್ಲಿ ಉತ್ಸಾಹ ಗರಿಗೆದರಿದೆ. ಎಲ್ಲ ಜಿಲ್ಲೆಗಳಲ್ಲೂ ಹೊಸ ಪದಾಧಿಕಾರಿಗಳನ್ನು ನೇಮಕ ಮಾಡಿದ್ದು, ರಾಜ್ಯ ವ್ಯಾಪಿ ಪ್ರವಾಸ ಮಾಡುತ್ತಿದ್ದಾರೆ. ಲೋಕಸಭಾ ಚುನಾವಣೆಯಲ್ಲಿ 20 ಕ್ಕೂ ಹೆಚ್ಚು ಸ್ಥಾನಗಳನ್ನು ಗೆಲ್ಲಿಸುವ ಸವಾಲು ಅವರ ಮುಂದಿದೆ. ಬಿಜೆಪಿ ಬಲ ಕಡಿಮೆಯಾದರೆ, ಪಕ್ಷದೊಳಗಿನ ವಿರೋಧಿಗಳ ಕೈಮೇಲಾಗುವ ಸಾಧ್ಯತೆಯೂ ಇದೆ' ಎಂದು ಮೂಲಗಳು ಹೇಳಿವೆ.

27ರಂದು ರಾಜ್ಯ ಕಾರ್ಯಕಾರಿಣಿ

ಬಿಜೆಪಿ ರಾಜ್ಯ ಘಟಕದ ಕಾರ್ಯಕಾರಿಣಿ ಇದೇ 27 ರಂದು ಅರಮನೆ ಮೈದಾನದಲ್ಲಿ ನಡೆಯಲಿದೆ. ಇದರಲ್ಲಿ ಕೇಂದ್ರ ಸಚಿವ ಭೂಪೇಂದ್ರ ಯಾದವ್ ಭಾಗವಹಿಸಲಿದ್ದಾರೆ. ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಳಿಗ್ಗೆ 9.30 ರಿಂದ ಸಂಜೆ 5.30 ರವರೆಗೆ ಸಭೆ ನಡೆಯಲಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಸುದ್ದಿಗಾರರಿಗೆ ತಿಳಿಸಿದರು.

'ಇದೇ 25 ರಂದು 'ನವ ಮತದಾರರು ಸದೃಢ ಭಾರತದ ಭವಿಷ್ಯದ ರೂವಾರಿಗಳು' ಸಮ್ಮೇಳನವನ್ನು ಪ್ರಧಾನಿ ಮೋದಿಯವರು ಹಮ್ಮಿಕೊಂಡಿದ್ದು, ಅದರಲ್ಲಿ ಎಲ್ಲ ಕಾರ್ಯಕರ್ತರು ಭಾಗಿಯಾಗಬೇಕು ಎಂದು ಬಿ.ವೈ.ವಿಜಯೇಂದ್ರ ಮನವಿ ಮಾಡಿದ್ದಾರೆ.

ಸುದ್ದಿ 2 ನಿಮಿಷ

ಕಾಂಗ್ರೆಸ್ ಸಮಾವೇಶ ನಾಳೆಯಿಂದ

ನವದೆಹಲಿ: ಮುಂಬರುವ ಲೋಕಸಭಾ ಚುನಾವಣೆಗೆ ಕಾರ್ಯಕರ್ತರನ್ನು ಸಜ್ಜುಗೊಳಿಸುವ ಸಲುವಾಗಿ ಕಾಂಗ್ರೆಸ್ ಪಕ್ಷವು ಗುರುವಾರದಿಂದ ರಾಜ್ಯ ಮಟ್ಟದ ಕಾರ್ಯಕರ್ತರ ಸಮಾವೇಶಗಳನ್ನು ನಡೆಸಲಿದೆ.

ಇತ್ತೀಚೆಗೆ ಕಾಂಗ್ರೆಸ್ ಸರ್ಕಾರ ರಚನೆಯಾದ ತೆಲಂಗಾಣದಲ್ಲಿ ಗುರುವಾರ ಸಮಾವೇಶ ನಡೆಯಲಿದೆ. ಜ.28ರಂದು ಉತ್ತರಾಖಂಡ-ದಲ್ಲಿ, 29ರಂದು ಒಡಿಶಾದಲ್ಲಿ, ಫೆಬ್ರುವರಿ 3ರಂದು ದೆಹಲಿಯಲ್ಲಿ, ಫೆ.4ರಂದು ಕೇರಳದಲ್ಲಿ, ಫೆ.10ರಂದು ಹಿಮಾಚಲ ಪ್ರದೇಶದಲ್ಲಿ, 11ರಂದು ಪಂಜಾಬ್‌ನಲ್ಲಿ, 13ರಂದು ತಮಿಳುನಾಡಿನಲ್ಲಿ ಹಾಗೂ 15ರಂದು ಜಾರ್ಖಂಡ್‌ನಲ್ಲಿ ಸಮಾವೇಶ ಜರುಗಲಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ತಿಳಿಸಿದ್ದಾರೆ.

ಸಮಾವೇಶದ ಸಂದರ್ಭದಲ್ಲಿ ಬೂತ್‌ನಿಂದ ರಾಜ್ಯ ಮಟ್ಟದ ಪದಾಧಿಕಾರಿಗಳ ಸಭೆಗಳ ಅಧ್ಯಕ್ಷತೆಯನ್ನು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಹಿಸಲಿದ್ದಾರೆ.

ವೈಎಸ್‌ಆರ್‌ಸಿಪಿ ತೊರೆದ ಶ್ರೀಕೃಷ್ಣ ದೇವರಾಯಲು

ಅಮರಾವತಿ (ಪಿಟಿಐ): ಆಂಧ್ರಪ್ರದೇಶದ ಆಡಳಿತಾರೂಢ ವೈಎಸ್‌ಆರ್‌ಸಿಪಿಯ ಸಂಸದ ಶ್ರೀಕೃಷ್ಣ ದೇವರಾಯಲು ಅವರು ಮಂಗಳವಾರ ಪಕ್ಷಕ್ಕೆ ಹಾಗೂ ಲೋಕಸಭೆಯ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

'ಶೀಘ್ರದಲ್ಲೇ ನಡೆಯಲಿರುವ ಲೋಕಸಭಾ ಚುನಾವಣೆಯಲ್ಲಿ ನನ್ನನ್ನು ಬೇರೆ ಕ್ಷೇತ್ರದಿಂದ ಕಣಕ್ಕಿಳಿಸಲು ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ್ ರೆಡ್ಡಿ ಆರು ತಿಂಗಳಿಂದ ಯೋಚಿಸುತ್ತಿದ್ದರು. 15 ದಿನಗಳ ಹಿಂದೆ ಇದು ಬಹಿರಂಗಗೊಂಡಿತು. ರಾಜೀನಾಮೆ ಮೂಲಕ ನಾನೇ ಇದಕ್ಕೆ ಇತಿಶ್ರೀ ಹಾಡಿರುವೆ. ನರಸರಾವ್‌ಪೇಟ ಕ್ಷೇತ್ರವನ್ನು ಬಿಟ್ಟು ನಾನು ಬೇರೆ ಕಡೆ ಹೋಗಲ್ಲ' ಎಂದು ಅವರು ತಿಳಿಸಿದ್ದಾರೆ.

'ಬೇರೆ ಪಕ್ಷಕ್ಕೆ ಸೇರ್ಪಡೆಯಾಗುವ ಬಗ್ಗೆ ಆಲೋಚಿಸಿಲ್ಲ. ಎಲ್ಲವನ್ನೂ ಸಮಯವೇ ನಿರ್ಧರಿಸಲಿದೆ' ಎಂದು ಹೇಳಿದ್ದಾರೆ.

ದೇವರಾಯಲು ಅವರು ವಿರೋಧ ಪಕ್ಷ ಟಿಡಿಪಿ ನಾಯಕರ ಜೊತೆ ಸಂಪರ್ಕದಲ್ಲಿದ್ದು, ಶೀಘ್ರವೇ ಆ ಪಕ್ಷಕ್ಕೆ ಸೇರ್ಪಡೆಯಾಗಲಿದ್ದಾರೆ ಎಂದು ಹೇಳಲಾಗುತ್ತಿದೆ.

ಕಳೆದ 15 ದಿನಗಳಲ್ಲಿ ದೇವರಾಯಲು ಅವರು ಮೂವರು ವೈಎಸ್‌ಆರ್‌ಸಿಪಿ ಸಂಸದರು ಪಕ್ಷ ತೊರೆದಿದ್ದಾರೆ. ಮಚಲಿಪಟ್ಟಣಂನ ಸಂಸದ ಬಾಲಶೌರಿ ವಲ್ಲಭನೇನಿ ಮತ್ತು ಕರ್ನೂಲ್ ಸಂಸದ ಡಾ.ಎಸ್. ಸಂಜೀವ್ ಕುಮಾರ್ ಪಕ್ಷ ತೊರೆದ ಮತ್ತಿಬ್ಬರು.



ದೀಪ ವೈಭವ ಜಾತ್ರಾ ಮಹೋತ್ಸವ ಅಂಗವಾಗಿ ಕೊಪ್ಪಳದ ಪ್ರಸಿದ್ಧ ಗವಿಸಿದ್ಧೇಶ್ವರ ಮಠದ ಆವರಣವನ್ನು ಅಲಂಕರಿಸಲಾಗಿದ್ದು, ವಿದ್ಯುತ್ ದೀಪಗಳ ಹೊಳಪಿನಲ್ಲಿ ಮಠ ಕಂಗೊಳಿಸಿದ್ದು ಹೀಗೆ
–ಪ್ರಜಾವಾಣಿ ಚಿತ್ರ/ಭರತ್ ಕಂದಕೂರ

'ಗ್ಯಾರಂಟಿ' ಸಭೆಗೆ ಸರ್ಕಾರದ ಕಾಸು!

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಗೂ ಮೊದಲು 'ಪಂಚ ಗ್ಯಾರಂಟಿ' ಯೋಜನೆಗಳನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸುವ ಉದ್ದೇಶದಿಂದ ಸರ್ಕಾರದ ಸಂಪನ್ಮೂಲದಿಂದಲೇ ತಾಲ್ಲೂಕು, ಜಿಲ್ಲಾ ಮಟ್ಟದಲ್ಲಿ 'ಗ್ಯಾರಂಟಿ ಸಮಾವೇಶ'ಗಳನ್ನು ಆಯೋಜಿಸಲು ಮುಂದಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಟಿಪ್ಪಣಿಯಂತೆ, ಇದೇ 27ರಿಂದ ಫೆ. 2ರವರೆಗೆ ಗ್ಯಾರಂಟಿ ಸಮಾವೇಶಗಳನ್ನು ಹಮ್ಮಿಕೊಳ್ಳಲು ಅಗತ್ಯ ಕ್ರಮ ವಹಿಸುವಂತೆ ಎಲ್ಲ ಜಿಲ್ಲಾಧಿಕಾರಿಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಆಡಳಿತ ಸುಧಾರಣೆ-ಕಾರ್ಯಾಧ್ಯಯನ) ಆದೇಶ ನೀಡಿದೆ.

'ಗ್ಯಾರಂಟಿ'ಗಳ ಅನುಷ್ಠಾನ ಮತ್ತು ಮೇಲುಸ್ತುವಾರಿಗೆ ರಾಜ್ಯಮಟ್ಟದಲ್ಲಿ ಅಧ್ಯಕ್ಷರು, ಐದು ಜನ ಉಪಾಧ್ಯಕ್ಷರು, 31 ಸದಸ್ಯರು, ಜಿಲ್ಲಾಮಟ್ಟದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, 21 ಸದಸ್ಯರು, ತಾಲ್ಲೂಕು ಮಟ್ಟದಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, 11 ಸದಸ್ಯರ ಸಮಿತಿ ರಚಿಸಲಾಗುವುದು. ಈ ಸಮಿತಿಗಳಲ್ಲಿ ಕಾರ್ಯಕರ್ತರಿಗೆ ಅವಕಾಶ ನೀಡಲಾಗುವುದು ಎಂದು ಸಿದ್ದರಾಮಯ್ಯ ಅವರು ಪ್ರಕಟಿಸಿದ್ದರು.

ಆದರೆ, ಈ ಸಮಿತಿಗಳನ್ನು ರಚಿಸುವ ಮೊದಲೇ, ಗ್ಯಾರಂಟಿ ಸಮಾವೇಶಗಳನ್ನು ಹಮ್ಮಿಕೊಳ್ಳುವ ಅಗತ್ಯದ ಕುರಿತಂತೆ ಇದೇ 21ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಗೆ ಟಿಪ್ಪಣಿ ಕಳುಹಿಸಿದ್ದಾರೆ.

ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನ ಮತ್ತು ಪ್ರತಿ ಅರ್ಹ ಫಲಾನುಭವಿಗೆ ಈ ಯೋಜನೆಗಳ ಸೌಲಭ್ಯಗಳನ್ನು ಪರಿಣಾಮಕಾರಿಯಾಗಿ ತಲುಪಿಸುವ ಉದ್ದೇಶದಿಂದ ಜಿಲ್ಲಾಮಟ್ಟದಲ್ಲಿ ಆಯಾ ಜಿಲ್ಲೆಯ ಉಸ್ತುವಾರಿ ಸಚಿವರ ಅಧ್ಯಕ್ಷತೆಯ ಸಮಿತಿಯನ್ನು ರಚಿಸಲಾಗಿದೆ. ಸಂಬಂಧಪಟ್ಟ ಜಿಲ್ಲೆಯ ಎಲ್ಲ ಲೋಕಸಭಾ ಸದಸ್ಯರು ಹಾಗೂ ವಿಧಾನಸಭೆ ಮತ್ತು ವಿಧಾನ ಪರಿಷತ್‌ನ ಸದಸ್ಯರು ಈ ಸಮಿತಿಯಲ್ಲಿ ಸದಸ್ಯರಾಗಿರುತ್ತಾರೆ. ಸಮಿತಿಗೆ ಜಿಲ್ಲಾಧಿಕಾರಿ ಸದಸ್ಯ ಕಾರ್ಯದರ್ಶಿ, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಸಹ ಕಾರ್ಯದರ್ಶಿ ಆಗಿರುತ್ತಾರೆ.

ಸಮಾವೇಶ ಆಯೋಜನೆಯ ಸಂಪೂರ್ಣ ಜವಾಬ್ದಾರಿಯನ್ನು ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗೆ ವಹಿಸಲಾಗಿದೆ. ಕಾರ್ಯಕ್ರಮಕ್ಕೆ ತಗಲುವ ವೆಚ್ಚವನ್ನು ಸಂಬಂಧಪಟ್ಟ ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಸ್ವಂತ ಸಂಪನ್ಮೂಲದಿಂದ ಅಥವಾ ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನದಿಂದ ಭರಿಸಬೇಕು. ಈ ಸಮಾವೇಶಕ್ಕೆ ಸಂಬಂಧಪಟ್ಟ ತಾಲ್ಲೂಕು ಮತ್ತು ಹೋಬಳಿಯ ಗ್ಯಾರಂಟಿ ಯೋಜನೆಯ ಫಲಾನುಭವಿಗಳು, ಗ್ರಾಮೀಣ ಮತ್ತು ನಗರ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಮತ್ತು ಸಾರ್ವಜನಿಕರನ್ನು ಆಹ್ವಾನಿಸಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

'ಹಸ್ತ'ಕ್ಷೇಪ: ಸಿಡಿದೆದ್ದ ಸಚಿವರು

ಒಂದನೇ ಪುಟದಿಂದ...

ಆದರೆ, ಕಾರ್ಯಕರ್ತರ ಹೆಸರಿನ ಪಟ್ಟಿಯಲ್ಲಿ ಒಬ್ಬರ ಹೆಸರು ಹೊರತುಪಡಿಸಿ, ಉಳಿದವರಿಗೆ ಯಾವ ನಿಗಮ–ಮಂಡಳಿ ನೀಡಲಾಗಿದೆ ಎಂಬ ಉಲ್ಲೇಖವೇ ಇರಲಿಲ್ಲ.

ಲೋಕಸಭೆ ಚುನಾವಣೆಗೆ ಕಾರ್ಯತಂತ್ರ ರೂಪಿಸಲು ಕೆಪಿಸಿಸಿ ಕಚೇರಿಯಲ್ಲಿ ಇತ್ತೀಚೆಗೆ ನಡೆದ ಚುನಾವಣಾ ಸಮಿತಿ ಸಭೆಯ ಬಳಿಕ ಪಟ್ಟಿ ಪ್ರಕಟಗೊಳ್ಳಬಹುದೆಂದು ನಿರೀಕ್ಷಿಸಲಾಗಿತ್ತು. ಆದರೆ, ಪಟ್ಟಿ ಪ್ರಕಟಗೊಳ್ಳುವ ಬದಲು, ಪಕ್ಷದ ರಾಜ್ಯ ಉಸ್ತುವಾರಿ ರಣದೀಪ ಸಿಂಗ್ ಸುರ್ಜೇವಾಲಾ ಅವರ ಸೂಚನೆಯಂತೆ ತಡೆಹಿಡಿಯಲಾಗಿದೆ ಎಂಬ ಸಂದೇಶ ರವಾನೆಯಾಗಿತ್ತು. ವರಿಷ್ಠರು ಕಳುಹಿಸಿದ್ದ ಪಟ್ಟಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅಸಮಾಧಾನ ವ್ಯಕ್ತಪಡಿಸಿ, ಮರುಪರಿಶೀಲಿಸುವಂತೆ ಸೂಚಿಸಿದ್ದರು. ಈ ಪಟ್ಟಿಗೆ ಬಹುತೇಕ ಸಚಿವರು ಕೂಡಾ ಅಸಮಾಧಾನ ವ್ಯಕ್ತಪಡಿಸಿದ್ದಾರೆ ಎಂದು ಗೊತ್ತಾಗಿದೆ.

'ತಮ್ಮ ಖಾತೆಯ ಅಡಿಯಲ್ಲಿರುವ ನಿಗಮಗಳನ್ನು ಶಾಸಕರಿಗೆ ಹಂಚಿಕೆ ಮಾಡುವಾಗ ಕುಳಿತು ಚರ್ಚಿಸಬೇಕಿತ್ತು. ಸೌಜನ್ಯಕ್ಕಾದರೂ ಅಭಿಪ್ರಾಯ ಕೇಳಬೇಕಿತ್ತು. ಪರಸ್ಪರ ಹೊಂದಿಕೊಂಡು ಹೋಗುವವರನ್ನು ನೇಮಿಸುವ ಬಗ್ಗೆ ಪರಿಶೀಲಿಸಬೇಕಿತ್ತು. ಅದ್ಯಾವುದನ್ನೂ ಮಾಡದೆ, ದೆಹಲಿಯಲ್ಲಿ ಕುಳಿತು ಶಾಸಕರಿಗೆ ನಿಗಮಗಳನ್ನು ಹಂಚಿಕೆ ಮಾಡಲಾಗಿದೆ' ಎಂಬುದು ಸಚಿವರ ತಕರಾರು ಎಂದು ಮೂಲಗಳು ಹೇಳಿವೆ.

ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರ ನಿವಾಸದಲ್ಲಿ ಇತ್ತೀಚೆಗೆ ಸಭೆ ಸೇರಿದ 10ಕ್ಕೂ ಹೆಚ್ಚು ಸಚಿವರು, ನಿಗಮ– ಮಂಡಳಿ ನೇಮಕದ ಬಗ್ಗೆ ಚರ್ಚೆ ನಡೆಸಿದ್ದಾರೆ. ಲೋಕೋಪಯೋಗಿ, ಕೈಗಾರಿಕೆ, ಸಮಾಜ ಕಲ್ಯಾಣ ಸೇರಿದಂತೆ ಕೆಲವು ಖಾತೆಗಳ ಅಡಿಯಲ್ಲಿರುವ ನಿಗಮಗಳಿಗೆ ಹೆಚ್ಚಿನ ಮೊತ್ತದ ಅನುದಾನ ಹಂಚಿಕೆಯಾಗುತ್ತದೆ. ಅದರಲ್ಲೂ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ (ಕೆಆರ್‌ಡಿಸಿಎಲ್), ಮೈಸೂರು ಸೇಲ್ಸ್ ಇಂಟರ್ ನ್ಯಾಷನಲ್ ಲಿಮಿಟೆಡ್ (ಎಂಎಸ್‌ಐಎಲ್), ಅಂಬೇಡ್ಕರ್ ಅಭಿವೃದ್ಧಿ ನಿಗಮಗಳ ಅಧ್ಯಕ್ಷ ಸ್ಥಾನ 'ಆಯಕಟ್ಟು' ಹುದ್ದೆಗಳು ಎಂದೇ ಗುರುತಿಸಿಕೊಂಡಿವೆ. ಇಲಾಖೆಗಳಿಗೆ ಹಂಚಿಕೆಯಾದ ಅನುದಾನದಲ್ಲಿ ದೊಡ್ಡ ಮೊತ್ತ ಇಂತಹ ನಿಗಮಗಳಿಗೆ ಹೋಗುತ್ತದೆ. ಹೀಗಾಗಿ, ಈ ನಿಗಮಗಳಿಗೆ ಶಾಸಕರನ್ನು ನೇಮಿಸುವ ವೇಳೆ ಸಮಾಲೋಚನೆ ನಡೆಸಬೇಕಿತ್ತು ಎಂದು ಸಚಿವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ಎಂದೂ ಗೊತ್ತಾಗಿದೆ.

ಜಿಲ್ಲಾವಾರು ಹಂಚಿಕೆಯಾಗಲಿ: ಉಡುಪಿಯಲ್ಲಿ ಮಂಗಳವಾರ ಮಾತನಾಡಿದ ಸಚಿವ ಶಿವರಾಜ ತಂಗಡಗಿ, 'ನಿಗಮ ಮಂಡಳಿ ನೇಮಕ ವಿಚಾರದಲ್ಲಿ ಕೆಪಿಸಿಸಿ ಅಧ್ಯಕ್ಷರು, ಮುಖ್ಯಮಂತ್ರಿ ಮತ್ತು ಹೈಕಮಾಂಡ್‌ನವರು ಅಂತಿಮ ನಿರ್ಧಾರ ತೆಗೆದುಕೊಳ್ಳಲಿದ್ದಾರೆ. ಅಧಿಕಾರ ಸಮಾನವಾಗಿ ಜಿಲ್ಲಾವಾರು ಹಂಚಿಕೆ ಆಗಬೇಕು' ಎಂದರು.

'ಅಕಾಡೆಮಿಗಳಿಗೆ ಅಧ್ಯಕ್ಷರು ಹಾಗೂ ಸದಸ್ಯರ ನೇಮಕ ಕುರಿತು ಚರ್ಚೆ ನಡೆದಿದ್ದು, ಶೀಘ್ರ ಜವಾಬ್ದಾರಿ ಹಂಚಿಕೆಯಾಗಲಿದೆ' ಎಂದೂ ತಿಳಿಸಿದರು.

ಪ್ರಜ್ವಲ್‌ಗಾಗಿ ಗೌಡರ ಕಸರತ್ತು

ಸೀಟು ಹಂಚಿಕೆಗೂ ಮುನ್ನವೇ ಅಭ್ಯರ್ಥಿ ಘೋಷಣೆ: ಮುಖಂಡರಲ್ಲೂ ಗೊಂದಲ

• ಚಿದಂಬರಪ್ರಸಾದ

ಪ್ರಜಾವಾಣಿ ವಿಶೇಷ

ಹಾಸನ: ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಸೀಟು ಹಂಚಿಕೆ ಅಂತಿಮವಾಗುವ ಮುನ್ನವೇ, ಹಾಸನ ಕ್ಷೇತ್ರಕ್ಕೆ ತಮ್ಮ ಮೊಮ್ಮಗ, ಹಾಲಿ ಸಂಸದ ಪ್ರಜ್ವಲ್ ಹೆಸರು ಘೋಷಿಸಿರುವ ಜೆಡಿಎಸ್ ವರಿಷ್ಠ ಎಚ್‌.ಡಿ.ದೇವೇಗೌಡರು, ಇದೀಗ ಪಕ್ಷದ ಕಾರ್ಯಕರ್ತರಿಗೆ ಅವರ ಉಮೇದುವಾರಿಕೆಯನ್ನು ಮನವರಿಕೆ ಮಾಡಿಕೊಡುವ ಪ್ರಯತ್ನ ಆರಂಭಿಸಿದ್ದಾರೆ.

ಈಗಾಗಲೇ ಬೇಲೂರು, ಹಾಸನ, ಅರಸೀಕೆರೆಯಲ್ಲಿ ಕಾರ್ಯಕರ್ತರು, ಮುಖಂಡರ ಸಭೆ ನಡೆಸಿ, ಪ್ರಜ್ವಲ್ ಅವರ ಉಮೇದುವಾರಿಕೆಯನ್ನು ಪುನರುಚ್ಚರಿಸಿದ್ದಾರೆ. 24 ರಂದು ಚನ್ನರಾಯಪಟ್ಟಣ, 25 ರಂದು ಆಲೂರು ಹಾಗೂ ಸಕಲೇಶಪುರದಲ್ಲಿ ಸಭೆ ಏರ್ಪಾಡಾಗಿದೆ.

ಮೈತ್ರಿಕೂಟದ ಸೀಟು ಹಂಚಿಕೆಯ ಮಾತುಕತೆ ಇನ್ನೂ ಅಂತಿಮವಾಗದಿದ್ದರೂ ದೇವೇಗೌಡರು, 'ಹಾಸನದಿಂದ ಪ್ರಜ್ವಲ್ ಸ್ಪರ್ಧಿಸಲಿದ್ದಾರೆ' ಎಂದು ಘೋಷಿಸಿರುವುದು, ಬಿಜೆಪಿ ಮುಖಂಡರಿಗೆ ಇರಿಸು ಮುರಿಸು ಉಂಟುಮಾಡುತ್ತಿದೆ. ಅಲ್ಲದೇ, 'ಪ್ರಜ್ವಲ್ ಸ್ಪರ್ಧಿಸಿದರೆ, ಗೆಲುವು ಕಷ್ಟವಾಗಬಹುದು' ಎಂಬ ಅಭಿಪ್ರಾಯ ಜೆಡಿಎಸ್ ಮುಖಂಡರಲ್ಲೂ ಇದೆ. ಈ ನಡುವೆಯೇ ದೇವೇಗೌಡರು ಪ್ರವಾಸ ಆರಂಭಿಸಿ, ಪ್ರಜ್ವಲ್ ಬೆಂಬಲಕ್ಕೆ ನಿಂತಿದ್ದಾರೆ.

ಪ್ರಜ್ವಲ್ ಅವರ ಕಾರು ಚಾಲಕ ಕಾರ್ತಿಕ ಮೇಲಿನ ಹಲ್ಲೆ ಹಾಗೂ ಜಮೀನು ಬರೆಸಿಕೊಂಡ ಆರೋಪದ ಪ್ರಕರಣವನ್ನೇ ಮುಂದಿಟ್ಟುಕೊಂಡು ಬಿಜೆಪಿ ಮುಖಂಡರಾದ ಎ.ಟಿ. ರಾಮಸ್ವಾಮಿ ಹಾಗೂ ವಕೀಲ ದೇವರಾಜೇಗೌಡರು, ರೇವಣ್ಣ ಕುಟುಂಬದ ವಿರುದ್ಧ ಮುಗಿ ಬಿದ್ದಿದ್ದಾರೆ. ರಾಮಸ್ವಾಮಿಯವರು, ಪ್ರಜ್ವಲ್ ವಿರುದ್ಧ ಪ್ರತಿಭಟಿಸಿದ್ದಾರೆ. ಆದರೂ ದೇವೇಗೌಡರು ಮಾತ್ರ, 'ಪ್ರಜ್ವಲ್ ರೇವಣ್ಣ ಅವರೇ ಅಭ್ಯರ್ಥಿ' ಎಂದು ಪ್ರತಿಪಾದಿಸುತ್ತಿದ್ದಾರೆ.

ಇನ್ನೊಂದೆಡೆ, ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿಯಾದ ನಂತರ ಪ್ರೀತಂ ಗೌಡರು, ಈ ವಿಷಯದಲ್ಲಿ ಮೃದುಧೋರಣೆ ತೋರಿದಂತಿದ್ದು, 'ಸೀಟು ಹಂಚಿಕೆಯ ಮಾತುಕತೆ ಆಗುವವರೆಗೂ ಕಾದು ನೋಡೋಣ' ಎಂದಿದ್ದಾರೆ.

'ಪ್ರಜ್ವಲ್ ವಿರುದ್ಧ ಆರೋಪಗಳು ಕೇಳಿ ಬರುತ್ತಿದ್ದು, ಅನರ್ಹತೆಯ ತೂಗುಗತ್ತಿಯೂ ಇದೆ. ಅನರ್ಹತೆಯ ಕುರಿತ ಹೈಕೋರ್ಟ್ ತೀರ್ಪಿಗೆ ಸುಪ್ರೀಂ ಕೋರ್ಟ್ ತಡೆ ನೀಡಿದ್ದು, ಅಂತಿಮ ತೀರ್ಪು ಬರಬೇಕಿದೆ. ಇಂತಹ ಸಂದರ್ಭದಲ್ಲಿ ಅವರ ಹೆಸರು ಘೋಷಿಸುವುದು ಸರಿಯಲ್ಲ. ಸುಪ್ರೀಂ ಕೋರ್ಟ್ ಸಹ ಹೈಕೋರ್ಟ್ ತೀರ್ಪನ್ನೇ ಎತ್ತಿ ಹಿಡಿದರೆ, ಅನರ್ಹತೆಯ ಜೊತೆಗೆ, ಮುಂದಿನ ಆರು ವರ್ಷ ಪ್ರಜ್ವಲ್ ಅವರು ಚುನಾವಣೆಗೆ ನಿಲ್ಲಲಾಗದು. ಆಗ ಬೇರೆ ಅಭ್ಯರ್ಥಿ ಯಾರೆಂಬ ಗೊಂದಲವೂ ಮೂಡುತ್ತದೆ. ಹೀಗಾಗಿ ಬಹಳ ಎಚ್ಚರಿಕೆಯಿಂದ ಅಭ್ಯರ್ಥಿ ಘೋಷಿಸಬೇಕು. ದೇವೇಗೌಡರೇ ಹಾಸನದಿಂದ ಸ್ಪರ್ಧಿಸಿದರೆ ಒಳ್ಳೆಯದು' ಎಂಬುದು ಜೆಡಿಎಸ್ ಮುಖಂಡರ ಪ್ರತಿಪಾದನೆ.

ಅರಸೀಕೆರೆ, ಬೇಲೂರು, ಹಾಸನದ ಸಭೆಯಲ್ಲಿ ದೇವೇಗೌಡರು, 'ಪ್ರಜ್ವಲ್ ಸ್ಪರ್ಧಿಸಲಿದ್ದು, ಅವರನ್ನು ಗೆಲ್ಲಿಸಬೇಕು' ಎಂದು ಮನವಿ ಮಾಡಿದ್ದಾರೆ. ಈ ಕುರಿತು ಪ್ರತಿಕ್ರಿಯಿಸಲು ಪ್ರಜ್ವಲ್ ನಿರಾಕರಿಸಿದ್ದಾರೆ.



ನಾವು ರೈತರ ಮಕ್ಕಳು. ಕಾರ್ಯಕರ್ತರನ್ನು ಬಿಟ್ಟು ಎಲ್ಲೂ ಹೋಗಲ್ಲ. ನಾನು ಇಲ್ಲಿಗೇ ನಿಲ್ಲಿಸುವುದಿಲ್ಲ. ಪ್ರತಿ ತಾಲ್ಲೂಕಿಗೆ ಮತ್ತೆ ಬರುತ್ತೇನೆ. ಅಪಪ್ರಚಾರಗಳಿಗೆ ಮಾರುಹೋಗದೇ ಪ್ರಜ್ವಲ್‌ನನ್ನು ಗೆಲ್ಲಿಸಬೇಕು
ಎಚ್‌.ಡಿ. ದೇವೇಗೌಡ, ಜೆಡಿಎಸ್ ವರಿಷ್ಠ



ಸೀಟು ಹಂಚಿಕೆ ಸಂಬಂಧಿಸಿ ಬಿಜೆಪಿ ನಾಯಕರೊಂದಿಗೆ ಎಚ್‌.ಡಿ.ಕುಮಾರಸ್ವಾಮಿ ಮಾತುಕತೆ ನಡೆಸಲಿದ್ದಾರೆ. ದೇಶದ ಉಳಿವಿಗಾಗಿ ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿಯಾಗುವುದು ಮುಖ್ಯ
ಎಚ್‌.ಡಿ. ರೇವಣ್ಣ, ಶಾಸಕ

ಸೋರಿಕೆಯಾದ 'ಟಿಪ್ಪಣಿ' ಚುನಾವಣೆ ಚರ್ಚೆ ಬಿರುಸು

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯ ತಾತ್ಕಾಲಿಕ ದಿನಾಂಕವನ್ನು ಏಪ್ರಿಲ್ 16ಕ್ಕೆ ನಿಗದಿಪಡಿಸಲಾಗಿದೆ ಎಂದು ದೆಹಲಿಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯು 11 ಜಿಲ್ಲಾ ಚುನಾವಣಾ ಅಧಿಕಾರಿಗಳಿಗೆ ಕಳುಹಿಸಿದ ಆಂತರಿಕ ಟಿಪ್ಪಣಿಯು ಮಂಗಳವಾರ ಭಾರಿ ಚರ್ಚೆಗೆ ಗ್ರಾಸವಾಯಿತು.

ಲೋಕಸಭಾ ಚುನಾವಣೆಗೆ ಕೇಂದ್ರ ಚುನಾವಣಾ ಆಯೋಗ ಈಗಾಗಲೇ ಸಿದ್ಧತೆಗಳನ್ನು ಆರಂಭಿಸಿದೆ. ಮತದಾರರ ಪಟ್ಟಿ ಅಂತಿಮಗೊಳಿಸುವುದು, ಅಧಿಕಾರಿಗಳ ವರ್ಗಾವಣೆ ಸೇರಿದಂತೆ ವಿವಿಧ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ರಾಜ್ಯ ಮುಖ್ಯ ಚುನಾವಣಾಧಿಕಾರಿಗಳಿಗೆ ನಿರ್ದೇಶನಗಳನ್ನು ನೀಡಿದೆ. ಚುನಾವಣಾಧಿಕಾರಿ ಕಚೇರಿಯ ಆಂತರಿಕ ಟಿಪ್ಪಣಿಯು ಮಂಗಳವಾರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿತು. ಅದರ ಬೆನ್ನಲ್ಲೇ, ಚುನಾವಣಾಧಿಕಾರಿ ಕಚೇರಿ ಸ್ಪಷ್ಟನೆ ನೀಡಿ, 'ಲೋಕಸಭೆ ಚುನಾವಣೆಯ ವಿವಿಧ ಚಟುವಟಿಕೆಗಳನ್ನು ಯೋಜಿಸಲು ಅಧಿಕಾರಿಗಳಿಗೆ ಸಹಾಯ ಮಾಡಲು ಈ ತಾತ್ಕಾಲಿಕ ದಿನಾಂಕವನ್ನು ನಮೂದಿಸಲಾಗಿದೆ. ಇದು ಉಲ್ಲೇಖಕ್ಕಾಗಿ ಮಾತ್ರ' ಎಂದು ಸ್ಪಷ್ಟಪಡಿಸಿತು. 'ಇದು ಚುನಾವಣಾ ವೇಳಾಪಟ್ಟಿಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ. ಕೇಂದ್ರ ಚುನಾವಣಾ ಆಯೋಗವು ಸೂಕ್ತ ಸಮಯದಲ್ಲಿ ವೇಳಾಪಟ್ಟಿ ಪ್ರಕಟಿಸಲಿದೆ' ಎಂದೂ ಹೇಳಿತು.

2019ರ ಲೋಕಸಭಾ ಚುನಾವಣೆಯ ವೇಳಾಪಟ್ಟಿಯನ್ನು ಮಾರ್ಚ್ 10ರಂದು ಘೋಷಿಸಲಾಗಿತ್ತು. ಏಪ್ರಿಲ್ 11ರಿಂದ ಮೇ 19ರವರೆಗೆ ಏಳು ಹಂತಗಳಲ್ಲಿ ಮತದಾನ ನಡೆದಿತ್ತು. ಮೇ 23ರಂದು ಮತ ಎಣಿಕೆ ನಡೆಸಲಾಗಿತ್ತು.

ಚುನಾವಣಾ ವೇಳಾಪಟ್ಟಿ ಘೋಷಣೆಗೆ ಸುಮಾರು ಮೂರು ತಿಂಗಳ ಮೊದಲು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗಳು ಜಾಗೃತಿ ಅಭಿಯಾನಗಳನ್ನು ನಡೆಸಬೇಕಿದೆ. ಇದಕ್ಕಾಗಿ ಅವರು ಕಳೆದ ಲೋಕಸಭಾ ಚುನಾವಣೆಯ ದಿನಾಂಕವನ್ನು ಪರಿಗಣಿಸಬಹುದು.

ದೇವೇಗೌಡ, ಕುಮಾರಸ್ವಾಮಿ, ನಿಖಿಲ್; ಮೂವರಲ್ಲೊಬ್ಬರು ಸ್ಪರ್ಧಿಸಲಿ: ಒತ್ತಾಯ

ಮಂಡ್ಯ: 'ಲೋಕಸಭಾ ಚುನಾವಣೆಯಲ್ಲಿ ಮಂಡ್ಯ ಕ್ಷೇತ್ರದಿಂದ ಜೆಡಿಎಸ್ ಅಭ್ಯರ್ಥಿಯಾಗಿ ಪಕ್ಷದ ವರಿಷ್ಠರಾದ ಎಚ್‌.ಡಿ.ದೇವೇಗೌಡ, ಎಚ್‌.ಡಿ.ಕುಮಾರಸ್ವಾಮಿ ಹಾಗೂ ಯುವ ನಾಯಕ ನಿಖಿಲ್ ಕುಮಾರಸ್ವಾಮಿ – ಈ ಮೂವರಲ್ಲಿ ಒಬ್ಬರಾದರೂ ಸ್ಪರ್ಧಿಸಬೇಕು' ಎಂದು ಸ್ಥಳೀಯ ಜೆಡಿಎಸ್ ಮುಖಂಡರು ಒತ್ತಾಯಿಸಿದ್ದಾರೆ.

ಮಂಗಳವಾರ ಜೆಡಿಎಸ್ ಜಿಲ್ಲಾ ಘಟಕದ ಅಧ್ಯಕ್ಷ ಡಿ.ರಮೇಶ್ ಪತ್ರಿಕಾ ಪ್ರಕಟಣೆ ಹೊರಡಿಸಿದ್ದು, ಪ್ರಕಟಣೆಗೆ ಶಾಸಕ ಎಚ್‌.ಟಿ.ಮಂಜು, ಮುಖಂಡರಾದ ಡಿ.ಸಿ.ತಮ್ಮಣ್ಣ, ಸಿ.ಎಸ್.ಪುಟ್ಟರಾಜು, ಸುರೇಶ್‌ಗೌಡ, ಕೆ.ಅನ್ನದಾನಿ, ರವೀಂದ್ರ ಶ್ರೀಕಂಠಯ್ಯ, ಕೆ.ಟಿ.ಶ್ರೀಕಂಠೇಗೌಡ, ಬಿ.ಆರ್.ರಾಮಚಂದ್ರು ಸಹಿ ಹಾಕಿದ್ದಾರೆ.

ಕಣ್ಣನ್‌ಗೆ ಮುಜರಾಯಿ ನೋಟಿಸ್

ಪ್ರಜಾವಾಣಿ ವಾರ್ತೆ



ಕಣ್ಣನ್

ಚಿಕ್ಕಮಗಳೂರು: ಹಿರೇಮಗಳೂರಿನ ಕೋದಂಡ ರಾಮಚಂದ್ರ ದೇವಸ್ಥಾನದ ಅರ್ಚಕ ಹಿರೇಮಗಳೂರು ಕಣ್ಣನ್ ಅವರಿಗೆ ತಿಂಗಳಿಗೆ ₹2 ಸಾವಿರ ತಸ್ತೀಕ್ ಪಾವತಿಸುವ ಬದಲು, ₹7500 ರಂತೆ ಒಂಬತ್ತು ವರ್ಷ ಪಾವತಿಸಿದ್ದ ಮುಜರಾಯಿ ಇಲಾಖೆ, ಹೆಚ್ಚುವರಿ ₹4.74 ಲಕ್ಷ ಹಿಂದಿರುಗಿಸುವಂತೆ ನೋಟಿಸ್ ನೀಡಿದೆ.

2013–14ನೇ ಸಾಲಿನಿಂದ 2016–17ನೇ ಸಾಲಿನ ತನಕ ತಿಂಗಳಿಗೆ ₹2 ಸಾವಿರದಂತೆ ವರ್ಷಕ್ಕೆ ₹24 ಸಾವಿರ ಪಾವತಿಸಬೇಕಿತ್ತು. 2017–18ನೇ ಸಾಲಿನಿಂದ 2021–22ನೇ ಸಾಲಿನ ತನಕ ತಿಂಗಳಿಗೆ ₹4 ಸಾವಿರದಂತೆ ವರ್ಷಕ್ಕೆ ₹48 ಸಾವಿರ ಪಾವತಿಸಬೇಕಿತ್ತು. ಆದರೆ, ವರ್ಷಕ್ಕೆ ₹90 ಸಾವಿರದಂತೆ ಒಂಬತ್ತು ವರ್ಷಗಳಿಗೆ ಒಟ್ಟು ₹8.10 ಲಕ್ಷ ಪಾವತಿಸಲಾಗಿದೆ. ಹೆಚ್ಚುವರಿಯಾಗಿ ತಮ್ಮ ಖಾತೆಗೆ ಜಮೆ ಆಗಿರುವ ₹4.74 ಲಕ್ಷ ಹಿಂದಿರುಗಿಸಬೇಕು ಎಂದು ನೋಟಿಸ್‌ನಲ್ಲಿ ತಹಶೀಲ್ದಾರ್ ವಿವರಿಸಿದ್ದಾರೆ.

ಕೋದಂಡ ರಾಮಚಂದ್ರ ದೇಗುಲ 'ಸಿ' ವರ್ಗಕ್ಕೆ ಸೇರಿದ್ದು, ಒಂಬತ್ತು ವರ್ಷಗಳ ಅವಧಿಯಲ್ಲಿ ಹುಂಡಿ ಹಣ ₹5.98 ಲಕ್ಷ ಸಂಗ್ರಹವಾಗಿದೆ. ಈ ಅವಧಿಯಲ್ಲಿ ವಿದ್ಯುತ್ ಶುಲ್ಕ, ರಥೋತ್ಸವ ಖರ್ಚು, ಅರ್ಚಕರ ವೇತನ ಸೇರಿ ಒಟ್ಟಾರೆ ₹12.96 ಲಕ್ಷ ವೆಚ್ಚವಾಗಿದೆ ಎಂಬುದನ್ನೂ ನೋಟಿಸ್‌ನಲ್ಲಿ ದಾಖಲಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಹಿರೇಮಗಳೂರು ಕಣ್ಣನ್ ಅವರು, 'ದೇವಸ್ಥಾನದ ಆದಾಯ ಕಡಿಮೆ ಇದೆ ಎಂಬ ಕಾರಣಕ್ಕೆ ಈ ಹಿಂದೆ ಪಾವತಿಯಾಗಿರುವ ತಸ್ತೀಕ್ ಮೊತ್ತವನ್ನು ಹಿಂದಿರುಗಿಸುವಂತೆ ನೋಟಿಸ್ ನೀಡಿದ್ದಾರೆ. ಆದಾಯ ಕಡಿಮೆ ಇದ್ದ ಕಾರಣಕ್ಕೆ ಹಣ ವಾಪಸ್ ಕೇಳಿದರೆ ಅರ್ಚಕರ ಮನಸ್ಥಿತಿ ಏನಾಗಲಿದೆ' ಎಂದು ಪ್ರಶ್ನಿಸಿದರು.

ನೋಟಿಸ್ ಹಿಂಪಡೆಯಲು ಸೂಚನೆ

ಹಿರೇಮಗಳೂರು ಕಣ್ಣನ್ ಅವರಿಗೆ ನೀಡಿರುವ ನೋಟಿಸ್ ಹಿಂಪಡೆಯಲು ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರು ಚಿಕ್ಕಮಗಳೂರು ಜಿಲ್ಲಾಧಿಕಾರಿಗೆ ಸೂಚನೆ ನೀಡಿದ್ದಾರೆ. 'ತಪ್ಪಾಗಿ ಹೆಚ್ಚುವರಿ ಮೊತ್ತ ಪಾವತಿ ಮಾಡಿದ್ದರೆ ಅಂದಿನ ತಹಶೀಲ್ದಾರ್ ಮತ್ತು ಸಿಬ್ಬಂದಿ ವಿರುದ್ಧ ವಿಚಾರಣೆ ಆರಂಭಿಸಬೇಕು. ಅವರಿಂದಲೇ ಈ ಹಣ ವಸೂಲಿ ಮಾಡಬೇಕು' ಎಂದು ಜಿಲ್ಲಾಧಿಕಾರಿಗೆ ಕಳುಹಿಸಿರುವ ಟಿಪ್ಪಣಿಯಲ್ಲಿ ತಿಳಿಸಿದ್ದಾರೆ.

ತಸ್ತೀಕ್ ಪಾವತಿ ಸ್ಥಗಿತ

ಹಿರೇಮಗಳೂರು ಕಣ್ಣನ್ ಅವರಿಗೆ ಒಂದೂವರೆ ವರ್ಷದಿಂದ ತಸ್ತೀಕ್ ಪಾವತಿಯನ್ನು ಸ್ಥಗಿತಗೊಳಿಸಲಾಗಿದೆ.

'ಸಿ' ವರ್ಗದ ದೇಗುಲ ಆಗಿರುವುದರಿಂದ ತಿಂಗಳಿಗೆ ತಸ್ತೀಕ್ ಮೊತ್ತ ₹2 ಸಾವಿರ ಪಾವತಿಸಬೇಕಿತ್ತು. ಅಂದಿನ ಸಿಬ್ಬಂದಿಯ ಕಣ್ತಪ್ಪಿನಿಂದ ತಿಂಗಳಿಗೆ ₹7,500 ಪಾವತಿಯಾಗಿದೆ. ನಂತರವೂ ಅದನ್ನೇ ಮುಂದುವರಿಸಲಾಗಿದೆ. 2021–22ನೇ ಸಾಲಿನಲ್ಲಿ ಈ ವಿಷಯ ಗೊತ್ತಾದ ಬಳಿಕ ತಸ್ತೀಕ್ ಪಾವತಿ ಸ್ಥಗಿತಗೊಳಿಸಲಾಗಿದೆ. ಈ ಹಿಂದೆ ಪಾವತಿಯಾಗಿರುವ ಹೆಚ್ಚುವರಿ ಮೊತ್ತಕ್ಕೆ ಜಮೆ ಮಾಡಿಕೊಳ್ಳಲಾಗುತ್ತಿದೆ' ಎಂದು ಮುಜರಾಯಿ ಇಲಾಖೆ ಅಧಿಕಾರಿಗಳು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಇಬ್ಬರನ್ನು ವಶಕ್ಕೆ ಪಡೆದ ಪೊಲೀಸರು • ಹೊಸ ಪುತ್ಥಳಿ ನಿರ್ಮಾಣದ ಭರವಸೆ

ಅಂಬೇಡ್ಕರ್ ಪುತ್ಥಳಿಗೆ ಅಪಮಾನ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಇಲ್ಲಿನ ಕೋಟನೂರ (ಡಿ) ಪ್ರದೇಶದ ಲುಂಬಿಣಿ ಉದ್ಯಾನದಲ್ಲಿನ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿದ ಕೃತ್ಯವನ್ನು ಖಂಡಿಸಿ ನಗರದಲ್ಲಿ ಸರಣಿ ಪ್ರತಿಭಟನೆಗಳು ನಡೆದವು. ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇಬ್ಬರನ್ನು ವಶಕ್ಕೆ ಪಡೆದಿದ್ದಾರೆ.

ನಗರದ ಜನನಿಬಿಡ ರಸ್ತೆಯಾದ ರಾಮ ಮಂದಿರ ವೃತ್ತದಿಂದ ಹುಮನಾಬಾದ್ ರಿಂಗ್ ರೋಡ್ ಮಾರ್ಗದಲ್ಲಿನ ಪ್ರಮುಖ ವೃತ್ತಗಳಲ್ಲಿ ಟೈರ್‌ಗೆ ಬೆಂಕಿ ಹಚ್ಚಿದರು.ವಾಹನಗಳ ಸಂಚಾರ ತಡೆದರು. ಯುವಕರ ತಂಡ ಗುಂಪು ಗುಂಪಾಗಿ ಬಡಿಗೆಗಳನ್ನು ಹಿಡಿದು ಬಲವಂತವಾಗಿ ಅಂಗಡಿ–ಮುಂಗಟ್ಟುಗಳನ್ನು ಮುಚ್ಚಿಸಿತು. ಇದರಿಂದಾಗಿ ನಗರದಲ್ಲಿ ಬಿಗುವಿನ ವಾತಾವರಣ ನಿರ್ಮಾಣಗೊಂಡಿತ್ತು.

ನಗರದಲ್ಲಿ ಪ್ರತಿಭಟನೆಯ ಕಾವು ತೀವ್ರಗೊಳ್ಳುತ್ತಿದ್ದಂತೆ ಜಿಲ್ಲಾಧಿಕಾರಿ ಫೌಜಿಯಾ ತರನ್ನುಮ್ ಅವರು ಪ್ರತಿಭಟನಕಾರರ ಮನವಿ ಆಲಿಸಿ ಪುತ್ಥಳಿ ಸ್ಥಳಕ್ಕೆ ತೆರಳಿ ಪೂಜೆ ಸಲ್ಲಿಸಿದರು. ಹೊಸ ಪುತ್ಥಳಿ ನಿರ್ಮಾಣದ ಹಾಗೂ ಆರೋಪಿಗಳನ್ನು ಶೀಘ್ರವೇ ಬಂಧಿಸುವ ಭರವಸೆ ನೀಡಿದ ಬಳಿಕ ಪ್ರತಿಭಟನೆ ಹಿಂದಕ್ಕೆ ಪಡೆಯಲಾಯಿತು. ಸಂಜೆಯವರೆಗೂ ನಗರದ ಮುಖ್ಯ ರಸ್ತೆಗಳಲ್ಲಿ ಅಂಗಡಿಗಳು ಬಂದ್ ಆಗಿದ್ದವು.

'ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿರುವ ಶಂಕೆಯ ಮೇಲೆ ಇಬ್ಬರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ. ಪ್ರಕರಣದ ತನಿಖೆಗಾಗಿ ಮೂರು ತಂಡಗಳನ್ನು ರಚಿಸಲಾಗಿದೆ' ಎಂದು ಡಿಸಿಪಿ ಕನಿಕಾ ಸಿಕ್ರಿವಾಲ್ ಅವರು 'ಪ್ರಜಾವಾಣಿ'ಗೆ ತಿಳಿಸಿದರು.



ಕಲಬುರಗಿಯ ಕೋಟನೂರ (ಡಿ) ಪ್ರದೇಶದಲ್ಲಿದ್ದ ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಅಪಮಾನ ಮಾಡಿರುವುದನ್ನು ಖಂಡಿಸಿ ಜನ ಪ್ರತಿಭಟಿಸಿದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಸ್ಥಳಕ್ಕೆ ಬಂದು ಪುತ್ಥಳಿಗೆ ಪೂಜೆ ಸಲ್ಲಿಸಿದರು
–ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪುತ್ಥಳಿಗೆ ಅಪಮಾನ ಮಾಡಿರುವ ಕೃತ್ಯ ಅತ್ಯಂತ ಖಂಡನೀಯ. ಈ ಕೃತ್ಯವನ್ನು ಗಂಭೀರವಾಗಿ ಪರಿಗಣಿಸಲಾಗಿದೆ
ಜಿ.ಪರಮೇಶ್ವರ, ಗೃಹ ಸಚಿವ

ಅಂಬೇಡ್ಕರ್ ಪ್ರತಿಮೆಗೆ ಅಪಮಾನ ಮಾಡಿ ವಿಕೃತಿ ಮೆರೆದಿರುವ ಘಟನೆ ಹೇಡಿಗಳ ಕೃತ್ಯ. ಕೃತ್ಯ ಎಸಗಿದ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಬೇಕು
ಬಿ.ವೈ.ವಿಜಯೇಂದ್ರ
ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ

ಬಂಡೀಪುರ: ಆನೆ ಕಾರ್ಯಪಡೆ ರಚನೆ

ಸಚಿವ ಈಶ್ವರ ಖಂಡ್ರೆ ಅಭಿಮತ; ರೈಲ್ವೆ ಬ್ಯಾರಿಕೇಡ್ ಅಳವಡಿಕೆ ಕಾಮಗಾರಿ ಪರಿಶೀಲನೆ

ಪ್ರಜಾವಾಣಿ ವಾರ್ತೆ



ನಂಜನಗೂಡು ತಾಲ್ಲೂಕಿನ ಹೆಡಿಯಾಲ ಸಮೀಪದ ಓಂಕಾರ ಅರಣ್ಯ ಪ್ರದೇಶದಲ್ಲಿ ಸಚಿವ ಈಶ್ವರ ಖಂಡ್ರೆ ರೈಲ್ವೆ ಬ್ಯಾರಿಕೇಡ್ ಕಾಮಗಾರಿಯನ್ನು ಪರಿಶೀಲಿಸಿದರು

ನಂಜನಗೂಡು (ಮೈಸೂರು ಜಿಲ್ಲೆ): 'ಬಂಡೀಪುರ ಅರಣ್ಯದಲ್ಲಿ ಅತಿ ಹೆಚ್ಚು ಆನೆಗಳಿದ್ದು, ಕಾಡಂಚಿನ ಗ್ರಾಮಗಳಲ್ಲಿ ಬೆಳೆ ನಾಶ ಹಾಗೂ ಜನರ ಪ್ರಾಣ ಹಾನಿ ತಪ್ಪಿಸಲು ಪ್ರತ್ಯೇಕ ಆನೆ ಕಾರ್ಯಪಡೆ ರಚಿಸಲಾಗುವುದು' ಎಂದು ಅರಣ್ಯ ಮತ್ತು ಪರಿಸರ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ತಾಲ್ಲೂಕಿನ ಹೆಡಿಯಾಲ ಸಮೀಪದ ಓಂಕಾರ ಅರಣ್ಯ ಪ್ರದೇಶಕ್ಕೆ ಮಂಗಳವಾರ ಭೇಟಿ ನೀಡಿದ ಸಚಿವರು ಕಾಡಂಚಿನಲ್ಲಿ ಅಳವಡಿಸಿರುವ ರೈಲ್ವೆ ಬ್ಯಾರಿಕೇಡ್‌ಗಳನ್ನು ಪರಿಶೀಲಿಸಿದ ನಂತರ ಮಾತನಾಡಿದರು.

'ರಾಜ್ಯದಲ್ಲಿ ಪ್ರತಿವರ್ಷ 50ರಿಂದ 60 ಮಂದಿ ಕಾಡುಪ್ರಾಣಿಗಳ ದಾಳಿಯಿಂದ ಮೃತಪಡುತ್ತಿದ್ದಾರೆ. ಆನೆ, ಹುಲಿ ಮುಂತಾದ ವನ್ಯಪ್ರಾಣಿಗಳು ಕಾಡಿನಿಂದ ಹೊರಗೆ ಬರದಂತೆ ಶಾಶ್ವತ ಪರಿಹಾರಕ್ಕೆ ಕ್ರಮವಹಿಸಲಾಗುವುದು. 660 ಕಿ.ಮೀ ಪ್ರದೇಶ ವ್ಯಾಪ್ತಿಯಲ್ಲಿ ಬ್ಯಾರಿಕೇಡ್ ಅಳವಡಿಸಬೇಕಾಗಿದ್ದು, ಈಗಾಗಲೇ 312 ಕಿ.ಮೀ ವ್ಯಾಪ್ತಿಯಲ್ಲಿ ಅಳವಡಿಕೆ ಕಾರ್ಯ ಮುಗಿದಿದೆ. 120 ಕಿ.ಮೀ ಕಾಮಗಾರಿಗೆ ಮಂಜೂರಾತಿ ನೀಡಲಾಗಿದೆ. ಉಳಿದ 220 ಕಿ.ಮೀ ವ್ಯಾಪ್ತಿಯಲ್ಲಿ ರೈಲು ಕಂಬಿಗಳ ತಡೆಗೋಡೆ ನಿರ್ಮಿಸಲು ಮುಂದಿನ ಬಜೆಟ್‌ನಲ್ಲಿ ₹200 ಕೋಟಿ ಅನುದಾನ ನೀಡುವಂತೆ ಪ್ರಸ್ತಾವ ಸಲ್ಲಿಸಲಾಗಿದೆ. ವನ್ಯಜೀವಿ–ಮಾನವ ಸಂಘರ್ಷ ತಪ್ಪಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

ಹೆಡಿಯಾಲ ವಲಯ ಅರಣ್ಯಾಧಿಕಾರಿಗಳ ಕಚೇರಿಯಲ್ಲಿ ನಡೆದ ಜನ ಸಂಪರ್ಕ ಸಭೆಯಲ್ಲಿ ಸಚಿವರ ಗಮನ ಸೆಳೆದ ಗ್ರಾಮಸ್ಥರು, 'ಆನೆ ದಾಳಿಯಿಂದ ಬೆಳೆ ಹಾನಿಯಾದರೆ ಪರಿಹಾರ ದೊರಕುತ್ತದೆ. ಆದರೆ, ಜಿಂಕೆ, ಕಾಡುಹಂದಿಗಳಿಂದ ಹೆಚ್ಚಿನ ಬೆಳೆ ನಾಶವಾದರೂ ಅರಣ್ಯಾಧಿಕಾರಿಗಳು ಕಡಿಮೆ ಪ್ರಮಾಣದ ಹಾನಿ ತೋರಿಸಿ ವಂಚಿಸುತ್ತಿದ್ದಾರೆ' ಎಂದು ದೂರಿದರು.

'ಸಣ್ಣ ಒತ್ತುವರಿದಾರರ ರಕ್ಷಣೆ'

ಮೈಸೂರು: 'ಅರಣ್ಯ ಸಂರಕ್ಷಣಾ ಕಾಯ್ದೆ ಜಾರಿಗೆ ಮುನ್ನ ಅರಣ್ಯ ಭೂಮಿಯಲ್ಲಿ ಮೂರು ಎಕರೆಗಿಂತ ಕಡಿಮೆ ಅರಣ್ಯ ಭೂಮಿಯಲ್ಲಿ ಸಾಗುವಳಿ ಮಾಡುತ್ತಿರುವ ರೈತರನ್ನು ಒಕ್ಕಲೆಬ್ಬಿಸುವುದಿಲ್ಲ' ಎಂದು ಸಚಿವ ಈಶ್ವರ ಖಂಡ್ರೆ ಭರವಸೆ ನೀಡಿದ್ದಾರೆ. ಜಲದರ್ಶಿನಿ ಅತಿಥಿಗೃಹದಲ್ಲಿ ಅಖಂಡ ಕರ್ನಾಟಕ ರೈತ ಒಕ್ಕೂಟದ ಸದಸ್ಯರಿಂದ ಮನವಿ ಸ್ವೀಕರಿಸಿ ಮಾತನಾಡಿ, 'ಕೆಲವರು ಸ್ವಾರ್ಥಕ್ಕಾಗಿ ಹತ್ತಾರು ಎಕರೆ ಅರಣ್ಯ ಒತ್ತುವರಿ ಮಾಡಿದ್ದು, ಅಂತಹವರ ವಿರುದ್ಧ ಕ್ರಮ ವಹಿಸಲಾಗುವುದು. ಅರಣ್ಯ ಸಂಪತ್ತು ಮತ್ತು ವನ್ಯಜೀವಿಗಳ ರಕ್ಷಣೆ ಸರ್ಕಾರದ ಹೊಣೆ. ಅರಣ್ಯ ಭೂಮಿ ಕ್ಷೀಣಿಸಿದರೆ ಮಾನವ- ವನ್ಯಜೀವಿ ಸಂಘರ್ಷ ಹೆಚ್ಚುತ್ತದೆ ಹೀಗಾಗಿ ಸಂರಕ್ಷಣೆ ಜನರ ಕರ್ತವ್ಯವೂ ಆಗಿದೆ' ಎಂದರು.

ಪ್ರತಿಕ್ರಿಯಿಸಿದ ಸಚಿವರು, 'ನಿಮ್ಮ ಸಮಸ್ಯೆಯನ್ನು ಮುಖ್ಯಮಂತ್ರಿಯ ಗಮನಕ್ಕೆತಂದು ಬಗೆಹರಿಸಲಾಗುವುದು' ಎಂದರು.

'ಆರ್.ಧ್ರುವನಾರಾಯಣ ಹಾಗೂ ಮಹದೇವ ಪ್ರಸಾದ್ ಬದುಕಿದ್ದರೆ ಸಂಪುಟ ದರ್ಜೆಯ ಸಚಿವರಾಗಿ ಸೇವೆ ಸಲ್ಲಿಸುತ್ತಿದ್ದರು. ಅವರ ಮಕ್ಕಳಾದ, ಶಾಸಕರಾದ ದರ್ಶನ್ ಧ್ರುವನಾರಾಯಣ ಹಾಗೂ ಗಣೇಶ್ ಪ್ರಸಾದ್ ಅವರಿಗೆ ರಾಜಕೀಯದಲ್ಲಿ ಉಜ್ವಲ ಭವಿಷ್ಯವಿದೆ. ಈ ಇಬ್ಬರ ಆಶಯದಂತೆ ಕಾಡಂಚಿನ ಗ್ರಾಮಗಳಿಗೆ ಭೇಟಿ ನೀಡಿ ಸಮಸ್ಯೆಗೆ ಪರಿಹಾರ ದೊರಕಿಸಲಾಗುತ್ತಿದೆ' ಎಂದು ಹೇಳಿದರು.

ತಾಲ್ಲೂಕಿನ ಬಳ್ಳೂರು ಹುಂಡಿಯಲ್ಲಿ ಇತ್ತೀಚೆಗೆ ಹುಲಿ ದಾಳಿಯಿಂದ ಮೃತಪಟ್ಟ ರತ್ನಮ್ಮ ಅವರ ನಿವಾಸಕ್ಕೆ ಭೇಟಿ ನೀಡಿದ ಸಚಿವರು ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದರು.

ನಿವೃತ್ತರ ಬಿಡುಗಡೆಗೆ ಸಿಎಸ್ ನಿರ್ದೇಶನ

ಬೆಂಗಳೂರು: ಗುತ್ತಿಗೆ ಅಥವಾ ಹೊರ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡಿರುವ ಸರ್ಕಾರದ ನಿವೃತ್ತ ಅಧಿಕಾರಿಗಳು ಹಾಗೂ ನೌಕರರನ್ನು ಕೂಡಲೇ ಕರ್ತವ್ಯದಿಂದ ಬಿಡುಗಡೆಗೊಳಿಸುವಂತೆ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಅವರು ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಮಂಗಳವಾರ ನಿರ್ದೇಶನ ನೀಡಿದ್ದಾರೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ನಿವೃತ್ತ ಅಧಿಕಾರಿಗಳು, ನೌಕರರು ಗುತ್ತಿಗೆ ಅಥವಾ ಹೊರ ಗುತ್ತಿಗೆ ಆಧಾರದಲ್ಲಿ ಮುಂದುವರಿದಿರುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ಬಂದಿತ್ತು. ಈ ಕುರಿತು ಜ.9ರಂದು ಮುಖ್ಯ ಕಾರ್ಯದರ್ಶಿಯವರಿಗೆ ಟಿಪ್ಪಣಿ ಹೊರಡಿಸಿದ್ದ ಮುಖ್ಯಮಂತ್ರಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯೂ ಸೇರಿದಂತೆ ಎಲ್ಲ ಇಲಾಖೆಗಳು ಹಾಗೂ ಸಚಿವಾಲಯದಲ್ಲಿ ಕೆಲಸ ಮಾಡುತ್ತಿರುವ ನಿವೃತ್ತ ಅಧಿಕಾರಿಗಳು, ನೌಕರರನ್ನು ಬಿಡುಗಡೆ ಮಾಡುವಂತೆ ಸೂಚಿಸಿದ್ದರು.

'ಸರ್ಕಾರದ ಇಲಾಖೆಗಳು ಹಾಗೂ ಸಚಿವಾಲಯದಲ್ಲಿ ಗುತ್ತಿಗೆ ಮತ್ತು ಹೊರ ಗುತ್ತಿಗೆ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ನಿವೃತ್ತ ಅಧಿಕಾರಿಗಳು, ನೌಕರರನ್ನು ಕೂಡಲೇ ಬಿಡುಗಡೆಗೊಳಿಸಬೇಕು. ಆ ಹುದ್ದೆಗಳಿಗೆ ಸೇವೆಯಲ್ಲಿರುವ ಅಧಿಕಾರಿಗಳು ನೌಕರರನ್ನು ನಿಯೋಜನೆ ಮಾಡಬೇಕು. ಈ ಕುರಿತು ವರದಿ ಸಲ್ಲಿಸಬೇಕು' ಎಂದು ಇಲಾಖೆಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಪ್ರಧಾನ ಕಾರ್ಯದರ್ಶಿಗಳು ಮತ್ತು ಕಾರ್ಯದರ್ಶಿಗಳಿಗೆ ಗೋಯಲ್ ನಿರ್ದೇಶನ ನೀಡಿದ್ದಾರೆ.

ಚಿತ್ರದುರ್ಗ ಬಂದ್‌ಗೆ ಉತ್ತಮ ಪ್ರತಿಕ್ರಿಯೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಭದ್ರಾ ಮೇಲ್ದಂಡೆ ಯೋಜನೆಯ ತ್ವರಿತ ಅನುಷ್ಠಾನಕ್ಕೆ ಒತ್ತಾಯಿಸಿ ಜಿಲ್ಲಾ ನೀರಾವರಿ ಅನುಷ್ಠಾನ ಹೋರಾಟ ಸಮಿತಿ ಮಂಗಳವಾರ ಕರೆ ನೀಡಿದ್ದ ಚಿತ್ರದುರ್ಗ ನಗರ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ವ್ಯಾಪಾರಿ ಸಮೂಹ ಸಹಕಾರ ನೀಡಿ ಮಾರುಕಟ್ಟೆ ವಹಿವಾಟು ನಡೆಸಲಿಲ್ಲ. ಕಾಮಗಾರಿ ಕುರಿತಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ವಿಳಂಬ ನೀತಿಯನ್ನು ವಿರೋಧಿಸಿ ನಡೆಸಿದ ಬಂದ್‌ಗೆ ಆಡಳಿತಾರೂಢ ಕಾಂಗ್ರೆಸ್ ಮತ್ತು ವಿರೋಧ ಪಕ್ಷ ಬಿಜೆಪಿ ಬೆಂಬಲ ಸೂಚಿಸಿದ್ದವು. ಬಹಿರಂಗ ಬೆಂಬಲ ವ್ಯಕ್ತಪಡಿಸಿದ್ದ ಬಿಜೆಪಿ ಬಂದ್‌ನಿಂದ ದೂರ ಉಳಿಯಿತು. ಕಾಂಗ್ರೆಸ್ ಶಾಸಕರು ಹೋರಾಟದಲ್ಲಿ ಪಾಲ್ಗೊಂಡು ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದರು.

ನಗರದಲ್ಲಿ ಖಾಸಗಿ ಬಸ್ ಸಂಚಾರ ಸ್ಥಗಿತಗೊಂಡಿತ್ತು. ಕೆಎಸ್‌ಆರ್‌ಟಿಸಿ ಬಸ್‌ಗಳು ನಗರದ ಹೊರಭಾಗದ ಹೆದ್ದಾರಿಯಲ್ಲಿ ಮಾತ್ರ ಸಂಚರಿಸಿದವು. ಆಟೊ ಮತ್ತಿತರ ವಾಹನಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಿತ್ತು. ಕೆಲ ಖಾಸಗಿ ಶಿಕ್ಷಣ ಸಂಸ್ಥೆಗಳು ಶಾಲೆ–ಕಾಲೇಜುಗಳಿಗೆ ರಜೆ ಘೋಷಿಸಿದ್ದವು.

ಗಾಂಧಿ ವೃತ್ತದಿಂದ ಜಿಲ್ಲಾಧಿಕಾರಿ ಕಚೇರಿಯವರೆಗೆ ಮೆರವಣಿಗೆ ನಡೆಸಿದ ಹೋರಾಟಗಾರರು ಮುಖ್ಯಮಂತ್ರಿಗೆ ಮನವಿ ಪತ್ರ ರವಾನಿಸಿದರು. '2025ಕ್ಕೆ ಯೋಜನೆಯ ಕಾಮಗಾರಿ ಪೂರ್ಣಗೊಳಿಸುವುದಾಗಿ ರಾಜ್ಯ ಸರ್ಕಾರ ಕೇಂದ್ರಕ್ಕೆ ಭರವಸೆ ನೀಡಿದೆ. ಬಾಕಿ ಉಳಿದಿರುವ ಕಾಮಗಾರಿ ಗಮನಿಸಿದರೆ ಇದು ಅಸಾಧ್ಯ ಎಂಬುದು ಖಚಿತವಾಗಲಿದೆ. ಅನುಷ್ಠಾನದಲ್ಲಿ ಆಗುತ್ತಿರುವ ವಿಳಂಬ ಮುಂದಿಟ್ಟುಕೊಂಡು ಕೇಂದ್ರ ಸರ್ಕಾರ ₹ 5,300 ಕೋಟಿ ಅನುದಾನ ಬಿಡುಗಡೆಗೆ ಹಿಂದೇಟು ಹಾಕುವ ಸಾಧ್ಯತೆ ಇದೆ. ಕೇಂದ್ರದ ಅನುದಾನಕ್ಕೆ ಕಾಯದೇ ಸರ್ಕಾರ ಕಾಮಗಾರಿಗೆ ವೇಗ ನೀಡಬೇಕು' ಎಂದು ಆಗ್ರಹಿಸಿದರು.

27ರಿಂದ ರಾಷ್ಟ್ರಮಟ್ಟದ ಮಹಿಳಾ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಳಗಾವಿ: 'ಜಾಗತಿಕ ಲಿಂಗಾಯತ ಮಹಾಸಭಾದಿಂದ ಜನವರಿ 27 ಮತ್ತು 28ರಂದು ಇಲ್ಲಿನ ಶಿವಬಸವ ನಗರದ ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್ ಆವರಣದಲ್ಲಿ ರಾಷ್ಟ್ರೀಯ ಪ್ರಥಮ ಮಹಿಳಾ ಸಮಾವೇಶ ಆಯೋಜಿಸಲಾಗಿದೆ' ಎಂದು ಮಹಾಸಭಾದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಎಸ್.ಎಂ.ಜಾಮದಾರ ಹೇಳಿದರು. 'ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ಮತ್ತಿತರ ರಾಜ್ಯಗಳಿಂದ 5,000 ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸುವರು. ಕೂಡಲಸಂಗಮದ ಬಸವಧರ್ಮ ಪೀಠದ ಅಧ್ಯಕ್ಷೆ ಗಂಗಾ ಮಾತಾಜಿ ಅವರನ್ನು ಸಮಾವೇಶದ ಅಧ್ಯಕ್ಷೆಯಾಗಿ ಆಯ್ಕೆ ಮಾಡಲಾಗಿದೆ' ಎಂದು ಅವರು ತಿಳಿಸಿದರು.

ನೋಂದಣಿಗೆ 9448046555 ಅಥವಾ 9448122034 ಸಂಖ್ಯೆಗೆ ಸಂಪರ್ಕಿಸಬಹುದು.

ಬಂಡೆ ಉರುಳಿ ಇಬ್ಬರು ಸಾವು

ತುಮಕೂರು: ತಾಲ್ಲೂಕಿನ ಕೌತಮಾರನಹಳ್ಳಿ ಬಳಿ ಮಂಗಳವಾರ ಕರ್ನಾಟಕ ಜಲ್ಲಿ ಕ್ರಷರ್ ಘಟಕದಲ್ಲಿ ಕಾರ್ಮಿಕರು ಕೆಲಸ ಮಾಡುತ್ತಿದ್ದಾಗ ಕಲ್ಲು ಬಂಡೆ ಉರುಳಿ ಬಿದ್ದು ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಮತ್ತೊಬ್ಬರ ಕಾಲು ಮುರಿದಿದೆ.

ಬಿಹಾರ ಮೂಲದ ಮೊಹಮ್ಮದ್ ಅಬೂಲ್ (29), ಛತ್ತೀಸಗಡ ಮೂಲದ ಮನು (25) ಮೃತರು. ಈರ ಎಂಬುವರು ತೀವ್ರವಾಗಿ ಗಾಯಗೊಂಡಿದ್ದು, ಚಿಕಿತ್ಸೆಗಾಗಿ ಬೆಂಗಳೂರಿನ ಸಂಜಯ ಗಾಂಧಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಕ್ರಷರ್ ಮಾಲೀಕ ತಲೆಮರೆಸಿಕೊಂಡಿದ್ದಾರೆ. ಕ್ಯಾತ್ಸಂದ್ರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಜಾವಾಣಿ
ಬುಧವಾರ • ಜನವರಿ 24, 2024

ಯಾತ್ರಾ ಕೇಂದ್ರವಾಗಿ ಬದಲಾದ ಅಯೋಧ್ಯೆ

ಪ್ರಜಾವಾಣಿ ವಾರ್ತೆ

ಲಖನೌ: ಸೋಮವಾರ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ನೆರವೇರಿದ ಬಳಿಕ ಅಯೋಧ್ಯೆಯು ಯಾತ್ರಾ ಕೇಂದ್ರದ ರೂಪ ಧರಿಸಿದಂತೆ ಕಾಣುತ್ತಿದೆ.

ಈ ಬದಲಾವಣೆಯನ್ನು ಅಯೋಧ್ಯೆ ನಿವಾಸಿಗಳಲ್ಲಿ ಸ್ಪಷ್ಟವಾಗಿ ಕಾಣಬಹುದು. ಅಲ್ಲದೇ ಬಾಲರಾಮನ ದರ್ಶನಕ್ಕಾಗಿ ಬರುತ್ತಿರುವ ಅಸಂಖ್ಯಾತ ಭಕ್ತರಲ್ಲೂ ಈ ಭಾವನೆ ಮೂಡಿರುವುದನ್ನು ನೋಡಬಹುದು.

'ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಬಳಿಕ ಅಯೋಧ್ಯೆ ದೈವತ್ವವನ್ನು ಪಡೆದಿದೆ' ಎಂದು ರಾಮ ಮಂದಿರದ ಮುಖ್ಯ ಅರ್ಚಕ ಆಚಾರ್ಯ ಸತ್ಯೇಂದ್ರ ದಾಸ್ ಹೇಳಿದ್ದಾರೆ.

'ರಾಮ ಮಂದಿರ ನಿರ್ಮಾಣವಾಗಿರುವುದರಿಂದ ಅಯೋಧ್ಯೆ ರೂಪಾಂತರ ಆಗಬಹುದಾಗಿದೆ. ದೇಶದ ಆಧ್ಯಾತ್ಮಿಕ ಕೇಂದ್ರಗಳಾಗಿರುವ ವಾರಾಣಸಿ, ಉಜ್ಜಯಿನಿ, ಹರಿದ್ವಾರ ಹಾಗೂ ಇತರೆ ಸ್ಥಳಗಳಂತೆ ಇದೂ (ಅಯೋಧ್ಯೆ) ಆಧ್ಯಾತ್ಮಿಕ ಕೇಂದ್ರವಾಗಲಿದೆ' ಎಂದು ಹನುಮಾನ್‌ಗಢಿ ದೇವಸ್ಥಾನದ ಬಳಿಯ ನಿವಾಸಿಯೊಬ್ಬರು ಹೇಳಿದರು.

ಅಯೋಧ್ಯೆಯಲ್ಲಿರುವ ಸಾಧು–ಸಂತರ ಅಭಿಪ್ರಾಯವೂ ಇದೇ ಆಗಿದೆ.

'ದೇಶ ಮತ್ತು ಜಗತ್ತಿನಾದ್ಯಂತ ಬೃಹತ್ ಪ್ರಮಾಣದ ಭಕ್ತರ ಸಮೂಹವನ್ನು ಅಯೋಧ್ಯೆ ಆಕರ್ಷಿಸಬಹುದು' ಎಂದು ಅವರು ನಿರೀಕ್ಷಿಸಿದ್ದಾರೆ. ಉತ್ತರಪ್ರದೇಶ ಸರ್ಕಾರವು ಸರಯೂ ನದಿಯಲ್ಲಿ ಒಳನಾಡು ಜಲ ಸಾರಿಗೆ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಈಗಾಗಲೇ ಕೆಲಸ ಪ್ರಾರಂಭಿಸಿದೆ.

'ಬಾಲರಾಮನ ಪ್ರಾಣ ಪ್ರತಿಷ್ಠಾಪನೆಯು ಅಯೋಧ್ಯೆಯನ್ನು ಸಂಪೂರ್ಣವಾಗಿ ಬದಲಾಯಿಸಿದೆ. 10ರಿಂದ 20 ವರ್ಷಗಳ ಹಿಂದೆ ಬಂದಿದ್ದವರು ಈಗ ಮತ್ತೆ ಭೇಟಿ ನೀಡಿದರೆ ಅವರಿಂದ ಅಯೋಧ್ಯೆಯನ್ನು ಗುರುತಿಸಲು ಸಾಧ್ಯವಿಲ್ಲ' ಎಂದು ಬಿಜೆಪಿ ಸಂಸದ ದೇವರಿಯಾ ರಮಾಪತಿ ರಾಮ್ ತ್ರಿಪಾಠಿ ಅವರು ಹೇಳಿದ್ದಾರೆ.



ಬಾಲರಾಮನ ದರ್ಶನಕ್ಕಾಗಿ ಅಯೋಧ್ಯೆಯಲ್ಲಿ ಮಂಗಳವಾರ ಸೇರಿದ್ದ ಜನಸ್ತೋಮ –ಪಿಟಿಐ ಚಿತ್ರ

ತೆಲಂಗಾಣ: ಅಯೋಧ್ಯೆಗೆ ವಿಶೇಷ ರೈಲಿನ ವ್ಯವಸ್ಥೆ ಕಲ್ಪಿಸಿದ ಬಿಜೆಪಿ

ಹೈದರಾಬಾದ್ (ಪಿಟಿಐ): ತೆಲಂಗಾಣ ಬಿಜೆಪಿ ಘಟಕವು ಅಯೋಧ್ಯೆಯ ರಾಮಮಂದಿರ ದರ್ಶನ ಮಾಡಲು ಬಯಸುವ ತನ್ನ ಕಾರ್ಯಕರ್ತರಿಗೆ ವಿಶೇಷ ರೈಲಿನ ವ್ಯವಸ್ಥೆ ಮಾಡಿದೆ.

'ಶ್ರೀ ರಾಮಮಂದಿರ ದರ್ಶನ ಅಭಿಯಾನದ ಅಂಗವಾಗಿ ಜನವರಿ 29ರಿಂದ 17 ವಿಶೇಷ ರೈಲುಗಳು ರಾಜ್ಯದಿಂದ ಅಯೋಧ್ಯೆಗೆ ಸಂಚರಿಸಲಿವೆ' ಎಂದು ಬಿಜೆಪಿ ಮೂಲಗಳು ಮಂಗಳವಾರ ತಿಳಿಸಿವೆ.

17 ಲೋಕಸಭಾ ಕ್ಷೇತ್ರಗಳಿಗೆ ತಲಾ ಒಂದು ರೈಲು ಮೀಸಲಿರಿಸಲಾಗಿದೆ. ಈ ರೈಲುಗಳಿಗೆ ಆಸ್ಥ ಎಂದು ಹೆಸರಿಡಲಾಗಿದೆ.

ಸಿಕಂದರಾಬಾದ್ ಜಿಲ್ಲೆಯಿಂದ ಅಯೋಧ್ಯೆಗೆ ಜನವರಿ 29ರಂದು ಮೊದಲ ವಿಶೇಷ ರೈಲು ಹೊರಡಲಿದ್ದು, ಫೆಬ್ರುವರಿ 2ರಂದು ರಾಜ್ಯಕ್ಕೆ ಹಿಂತಿರುಗಲಿದೆ. ಝಹೀರಾಬಾದ್ ಕ್ಷೇತ್ರದ ಕಾರ್ಯಕರ್ತರಿರುವ ಕೊನೆಯ ರೈಲು ಫೆಬ್ರುವರಿ 15ರಂದು ಹೊರಡಲಿದ್ದು, ಫೆ.19ಕ್ಕೆ ಹಿಂದಿರುಗಲಿದೆ.

ಅಯೋಧ್ಯೆಯಲ್ಲಿ ಮಂಡಲೋತ್ಸವ ಆರಂಭ; ಪೇಜಾವರಶ್ರೀ ನೇತೃತ್ವ

ಪ್ರಜಾವಾಣಿ ವಾರ್ತೆ

ಉಡುಪಿ: ಅಯೋಧ್ಯೆಯ ರಾಮ ಮಂದಿರದಲ್ಲಿ ಪ್ರಾಣ ಪ್ರತಿಷ್ಠೆಯ ಬಳಿಕ 48 ದಿನಗಳ ಮಂಡಲೋತ್ಸವ ಮಂಗಳವಾರದಿಂದ ಆರಂಭವಾಗಿದ್ದು, ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ನೇತೃತ್ವ ವಹಿಸಿದ್ದಾರೆ.

ವಿವಿಧ ಮಂತ್ರಗಳಿಂದ ರಾಮನ ಪ್ರತಿಮೆಗೆ ತತ್ವನ್ಯಾಸಾದಿಗಳನ್ನು ನೆರವೇರಿಸಿ ಕಲಶಪೂಜೆ, ಚಾಮರಸೇವೆ ಹಾಗೂ ಮಂಗಳಾರತಿಯ ನಂತರ ಪೂಜೆ ಸಲ್ಲಿಸಿದರು.

ಇದಕ್ಕೂ ಮುನ್ನ ಪೂರ್ಣಪ್ರಜ್ಞ ವಿದ್ಯಾಪೀಠದ ಪ್ರಾಚಾರ್ಯ ವಿದ್ವಾನ್ ಸತ್ಯನಾರಾಯಣಾಚಾರ್ಯ, ವಿಷ್ಣುಮೂರ್ತಿ ಆಚಾರ್ಯ, ಶಶಾಂಕ್ ಭಟ್, ಲಕ್ಷ್ಮೀನಾರಾಯಣ ಭಟ್ ನೇತೃತ್ವದಲ್ಲಿ ಹೋಮ-ಹವನಾದಿಗಳು, ಕಲಶಾರಾಧನೆ ನೆರವೇರಿತು.

ವಾಡಿಯಲ್ಲಿ ಮೂರು ದಿನ ನಿಷೇಧಾಜ್ಞೆ

ಪ್ರಜಾವಾಣಿ ವಾರ್ತೆ

ವಾಡಿ (ಕಲಬುರಗಿ ಜಿಲ್ಲೆ): ಅಯೋಧ್ಯೆಯಲ್ಲಿನ ಶ್ರೀರಾಮ ಮಂದಿರ ಉದ್ಘಾಟನೆ ನಿಮಿತ್ತ ವಾಡಿ ಪಟ್ಟಣದಲ್ಲಿ ಸೋಮವಾರ ಆಯೋಜಿಸಿದ್ದ ಶೋಭಾಯಾತ್ರೆ ಹಾಗೂ ಶ್ರೀರಾಮನ ಮೂರ್ತಿ ಮೆರವಣಿಗೆ ವೇಳೆಯಲ್ಲಿ ಗದ್ದಲ ಉಂಟಾಗಿದ್ದರಿಂದ ಚಿತ್ತಾಪುರ ತಹಶೀಲ್ದಾರ್ ಅವರು ಜನವರಿ 25ರವರೆಗೆ ಪಟ್ಟಣದಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿದ್ದಾರೆ.

ಮೆರವಣಿಗೆ ಬಸ್ ನಿಲ್ದಾಣದ ಬಳಿ ಬರುತ್ತಿದ್ದಂತೆಯೇ ಜಹೂರ್ ಖಾನ್ ಎಂಬುವವರಿಗೆ ಸೇರಿದ ರೆಸ್ಟೋರೆಂಟ್ ಒಳಗೆ ನುಗ್ಗಿದ ಕೆಲ ಯುವಕರು ರೆಸ್ಟೋರೆಂಟ್ ಮುಚ್ಚದೇ ಇರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. 'ಜೈ ಶ್ರೀರಾಮ್' ಘೋಷಣೆ ಕೂಗುತ್ತಾ ಬಲವಂತವಾಗಿ ಮುಚ್ಚಿಸಲು ಯತ್ನಿಸಿದ್ದಾರೆ ಎನ್ನಲಾಗಿದೆ. ನಂತರ ನೂರಾರು ಸಂಖ್ಯೆಯಲ್ಲಿ ಮುಸ್ಲಿಂ ಯುವಕರು ಜಮಾಯಿಸಿದ್ದರಿಂದ ಪರಿಸ್ಥಿತಿ ವಿಕೋಪಕ್ಕೆ ತಿರುಗಿತು. ತಕ್ಷಣ ಸ್ಥಳಕ್ಕೆ ಬಂದ ಪೊಲೀಸರು ಎರಡೂ ಸಮುದಾಯದ ಯುವಕರನ್ನು ಚದುರಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ನಿಷೇಧಾಜ್ಞೆ ಅವಧಿಯಲ್ಲಿ ವಾಡಿ ಪುರಸಭೆ ವ್ಯಾಪ್ತಿಯಲ್ಲಿ ಮದ್ಯ ಮಾರಾಟಕ್ಕೂ ನಿರ್ಬಂಧ ವಿಧಿಸಲಾಗಿದೆ.

ರಾಮಮಂದಿರ: ಜೋಶಿ ಭಿತ್ತಿಪತ್ರಕ್ಕೆ ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆಗೆ ಸಂಬಂಧಿಸಿ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ, ಅಭಿನಂದನೆ ಸಲ್ಲಿಸಿ ಹಂಚಿಕೊಂಡಿದ್ದ ಭಿತ್ತಿಪತ್ರಕ್ಕೆ ಸಾಹಿತಿಗಳೂ ಸೇರಿ ಕೆಲವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಭಿತ್ತಿಪತ್ರದಲ್ಲಿ ಕಸಾಪ ಲಾಂಛನ ಬಳಸಿಕೊಂಡಿರುವುದಕ್ಕೆ ಕವಿಗಳಾದ ಪ್ರೊ. ಎಸ್.ಜಿ. ಸಿದ್ಧರಾಮಯ್ಯ, ಎಲ್.ಎನ್. ಮುಕುಂದರಾಜ್, ಪತ್ರಕರ್ತ ಜಾಣಗೆರೆ ವೆಂಕಟರಾಮಯ್ಯ, ಲೇಖಕರಾದ ಕಾ.ತ. ಚಿಕ್ಕಣ್ಣ, ಆರ್.ಜಿ.ಹಳ್ಳಿ ನಾಗರಾಜ್, ಪ್ರಕಾಶಕ ನಿಡಸಾಲೆ ಪುಟ್ಟಸ್ವಾಮಯ್ಯ ಹಾಗೂ ವಿಮರ್ಶಕ ದಂಡಪ್ಪ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

'ಮಹೇಶ ಅವರು ಅಭಿನಂದನೆ ಸಲ್ಲಿಸಿರುವುದಕ್ಕೆ ನಮ್ಮ ಅಭ್ಯಂತರವಿಲ್ಲ. ಆದರೆ, ಕಸಾಪ ಲಾಂಛನ ಬಳಸಿಕೊಂಡು, ಪರಿಷತ್ತಿನ ಸ್ವಾಯತ್ತತೆಗೆ ಕುಂದುತರುವ ರೀತಿ ಯಲ್ಲಿ ಚಿತ್ರಾಭಿನಂದನೆ ಸಲ್ಲಿಸಿರುವುದು ಕಸಾಪ ಅಧ್ಯಕ್ಷತೆಗೆ ತಕ್ಕ ನಡವಳಿಕೆಯಲ್ಲ. ಕನ್ನಡ ಕವಿಗಳು ಚಿತ್ರಿಸಿರುವ ಶ್ರೀರಾಮಚಂದ್ರ ಬೇರೆ, ಈ ದ್ವೇಷ ರಾಜಕಾರಣದ ಶ್ರೀರಾಮನ ಬಳಕೆಯೇ ಬೇರೆ' ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

'ಗಾಂಧೀಜಿ, ಲೋಹಿಯಾ ಅವರ ಶ್ರೀರಾಮನನ್ನು ಕನ್ನಡ ಕವಿಗಳು ಚಿತ್ರಿಸಿದ್ದಾರೆ. ಗೋಪಾಲಕೃಷ್ಣ ಅಡಿಗರು ಹೇಳುವಂತೆ 'ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು ಪುರುಷೋತ್ತಮನ ಆ ಅಂಥ ರೂಪು ರೇಖೆ?' ಈ ಬಗೆಯಲ್ಲಿ ಲೋಕೋತ್ತರ ವ್ಯಕ್ತಿತ್ವ ಸಂಪನ್ನ ಪುರುಷೋತ್ತಮ ಶ್ರೀರಾಮ. ಬಿಜೆಪಿ ಅವರ ರಾಜಕಾರಣದ ಶ್ರೀರಾಮ ದ್ವೇಷ ಬಿತ್ತುವ ರಾಜಕಾರಣದಲ್ಲಿ ಹುಟ್ಟಿದವನಾಗಿದ್ದಾನೆ. ಕಸಾಪ ಅಧ್ಯಕ್ಷರು ಈ ಸೂಕ್ಷ್ಮಗಳನ್ನು ಅರಿತು, ಸಮಾಹಿತ ನಡೆಯ ಮುಖೇನ ಕನ್ನಡ ಪ್ರಜ್ಞೆಯನ್ನು ಮುನ್ನಡೆಸುವ ಹೊಣೆಗಾರಿಕೆಯಿಂದ ನಡೆದುಕೊಳ್ಳ ಬೇಕಾಗುತ್ತದೆ. ಪಕ್ಷ ರಾಜಕಾರಣಿಯಂತೆ ವರ್ತಿಸುವುದು ಅಧ್ಯಕ್ಷತೆಯ ಘನತೆಗೆ ಕುಂದುಂಟು ಮಾಡುತ್ತದೆ' ಎಂದು ತಿಳಿಸಿದ್ದಾರೆ.

ಜೋಶಿ ಅವರು ತಮ್ಮ ಭಿತ್ತಿಪತ್ರದಲ್ಲಿ ಕನ್ನಡ ಸಾಹಿತ್ಯ ಲೋಕವು ಹಳಗನ್ನಡ ಕಾವ್ಯ ಹಾಗೂ ಗದ್ಯಾನುವಾದದ ಮೂಲಕ ರಾಮಾಯಣ ಕೃತಿಗಳ ಕೊಡುಗೆ ಬಗ್ಗೆ ಉಲ್ಲೇಖಿಸಿದ್ದರು. 'ಶ್ರೀರಾಮನ ಉದಾತ್ತ ಮೌಲ್ಯಗಳು, ಸಾಮಾಜಿಕ ನಿಲುವುಗಳು, ತಾತ್ವಿಕ ವಿಚಾರಗಳು ವಿಶ್ವದಾದ್ಯಂತ ಪಸರಿಸಲಿ. ಅಯೋಧ್ಯೆಯ ರಾಮ ಮಂದಿರದಲ್ಲಿ ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಭಾರತದ ಶ್ರೇಷ್ಠತೆಯ ಸಂಕೇತ' ಎಂದು ಹೇಳಿದ್ದರು.

'ಕನ್ನಡ ಸಾಹಿತ್ಯ ಕೃತಿಗಳ ಉಲ್ಲೇಖ ತಪ್ಪೇ?'

'ಕನ್ನಡಕ್ಕೆ ಮೊದಲ ಜ್ಞಾನಪೀಠ ಪ್ರಶಸ್ತಿ ತಂದು ಕೊಟ್ಟ ಕುವೆಂಪು ಅವರ 'ಶ್ರೀ ರಾಮಾಯಣ ದರ್ಶನಂ' ಸೇರಿ, ರಾಮಾಯಣಕ್ಕೆ ಸಂಬಂಧಿಸಿದಂತೆ ಕನ್ನಡದಲ್ಲಿ ಬಂದಿರುವ ಸಾಹಿತ್ಯ ಕೃತಿಗಳ ಬಗ್ಗೆ ಉಲ್ಲೇಖಿಸಿ, ಶುಭಾಶಯ ಹೇಳಿದ್ದೇನೆ. ರಾಮನಿಲ್ಲದೆ ರಾಮಾಯಣವಿಲ್ಲ. ಕ್ರಿಸ್‌ಮಸ್, ಈದ್ ಮಿಲಾದ್‌ಗೂ ಶುಭಾಶಯ ಕೋರಿರುವೆ. ಹಾಗಂತ, ನನ್ನನ್ನು ಕ್ರಿಶ್ಚಿಯನ್, ಮುಸ್ಲಿಂ ಎಂದು ಹೇಳಲು ಬರುತ್ತದೆಯೇ? ನಾನು ಎಡ ಪಂಥದವನೂ ಅಲ್ಲ, ಬಲ ಪಂಥದವನೂ ಅಲ್ಲ' ಎಂದು ಮಹೇಶ ಜೋಶಿ ತಿಳಿಸಿದರು.

ಕೇಸರಿ ಧ್ವಜ, ಫ್ಲೆಕ್ಸ್ ತೆರವು ಖಂಡಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಅಯೋಧ್ಯೆಯಲ್ಲಿ ನಡೆದ ಶ್ರೀರಾಮನ ಮೂರ್ತಿಯ ಪ್ರಾಣ ಪ್ರತಿಷ್ಠಾಪನೆ ಹಿನ್ನೆಲೆಯಲ್ಲಿ ನಗರದಲ್ಲಿ ಸೋಮವಾರ ಅಳವಡಿಸಿದ್ದ ಬ್ಯಾನರ್, ಬಂಟಿಂಗ್ಸ್, ಫ್ಲೆಕ್ಸ್ ಹಾಗೂ ಕೇಸರಿ ಧ್ವಜಗಳನ್ನು ತೆರವುಗೊಳಿಸಿದ್ದನ್ನು ಖಂಡಿಸಿ ಬಿಜೆಪಿ ಮತ್ತು ಶ್ರೀರಾಮ ಸೇನೆ ಕಾರ್ಯಕರ್ತರು ಮಂಗಳವಾರ ಪ್ರತಿಭಟನೆ ನಡೆಸಿದರು.

ವಿನೋಬನಗರದ 3ನೇ ಮುಖ್ಯ ರಸ್ತೆಯಲ್ಲಿ ಅಳವಡಿಸಿದ್ದ ಬ್ಯಾನರ್ ಹಾಗೂ ಬಂಟಿಂಗ್‌ಗಳನ್ನು ಏಕಾಏಕಿ ತೆರವುಗೊಳಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಕಾರ್ಯಕರ್ತರು ಪಾಲಿಕೆ ಸದಸ್ಯ ಶಿವಾನಂದ ನೇತೃತ್ವದಲ್ಲಿ ಪಿ.ಬಿ. ರಸ್ತೆಯಲ್ಲಿ ಪ್ರತಿಭಟನೆ ನಡೆಸಿದರು. ನಂತರ ಮೆರವಣಿಗೆ ಮೂಲಕ ಸಾಗಿ 'ಹಿಂದೂ ವಿರೋಧಿ ಮಹಾನಗರ ಪಾಲಿಕೆ ಹಾಗೂ ಆಯುಕ್ತರಿಗೆ ಧಿಕ್ಕಾರ' ಎಂದು ಘೋಷಣೆ ಕೂಗಿದರು.

ಪಾಲಿಕೆ ಕಚೇರಿಗೆ ಮುತ್ತಿಗೆ ಹಾಕಿ ಆಕ್ರೋಶ ವ್ಯಕ್ತಪಡಿಸಿದರು. ಸ್ಥಳಕ್ಕೆ ಬಂದ ಪಾಲಿಕೆ ಆಯುಕ್ತೆ ರೇಣುಕಾ ಈ ಸಂಬಂಧ ಕ್ಷಮೆ ಯಾಚಿಸಿದ ಬಳಿಕ ಪ್ರತಿಭಟನೆ ಹಿಂದಕ್ಕೆ ಪಡೆಯಲಾಯಿತು.

'ಪಾಲಿಕೆ ಸದಸ್ಯರ ಗಮನಕ್ಕೆ ತಾರದೇ ಯಾವುದೇ ಫ್ಲೆಕ್ಸ್ ತೆರವುಗೊಳಿಸಬಾರದು ಎಂದು ಈ ಹಿಂದೆ ಮೂರು ಬಾರಿ ಮನವಿ ಮಾಡಿದ್ದರೂ ಏಕಾಏಕಿ ತೆರವುಗೊಳಿಸಿರುವುದು ಖಂಡನೀಯ. ಸರ್ಕಾರದ ಮಾರ್ಗಸೂಚಿಯಲ್ಲಿ ಫ್ಲೆಕ್ಸ್ ತೆರವುಗೊಳಿಸಿರುವ ಬಗ್ಗೆ ಮಾಹಿತಿ ಇಲ್ಲ. ಆದರೂ ಆಯುಕ್ತರು ಏಕಾಏಕಿ ತೆರವಿನ ನಿರ್ಧಾರ ತೆಗೆದುಕೊಂಡಿದ್ದಾರೆ' ಎಂದು ಪಾಲಿಕೆ ಸದಸ್ಯ ಆರ್. ಶಿವಾನಂದ್ ಅವರು ಆರೋಪಿಸಿದರು.

> **ಮಹಾನಗರ ಪಾಲಿಕೆ ಅಧಿಕಾರಿಗಳ ನಡುವಿನ ಸಂವಹನ ಕೊರತೆಯಿಂದ ಈ ಘಟನೆ ನಡೆದಿದೆ. ತಪ್ಪಾಗಿದ್ದರೆ ಕ್ಷಮೆ ಕೇಳುತ್ತೇನೆ**
> **ರೇಣುಕಾ,** ಮಹಾನಗರ ಪಾಲಿಕೆ ಆಯುಕ್ತೆ

'ರಾಮ ಭಕ್ತನಲ್ಲ, ಸಂವಿಧಾನ ಭಕ್ತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮೊದಲಿನಿಂದಲೂ ದೇವಸ್ಥಾನಗಳಿಗೆ ಹೋಗುವುದು ಕಡಿಮೆ. ರಾಮನ ಬಗ್ಗೆ ಭಕ್ತಿ ಇಲ್ಲದ ಕಾರಣ ರಾಮ ಮಂದಿರಕ್ಕೆ ಹೋಗುವುದಿಲ್ಲ' ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಯಾರಾದರೂ ಆಹ್ವಾನಿಸಿದರೆ ಕಲಿಕೆಗಾಗಿ ಹೋಗುತ್ತೇನೆ. ಜನತಾ ಜನಾರ್ದನನಲ್ಲಿ ನಂಬಿಕೆ ಇಟ್ಟವನಾಗಿದ್ದು, ನಾನು ಸಂವಿಧಾನದ ಭಕ್ತ' ಎಂದರು.

'ಭಕ್ತಿ ಎಂಬುದು ವೈಯಕ್ತಿಕ ವಿಚಾರ ಎಂದು ಎಐಸಿಸಿ ಅಧ್ಯಕ್ಷರು ಮತ್ತು ರಾಹುಲ್ ಗಾಂಧಿ ಹೇಳಿದ್ದಾರೆ. ಹಾಗೆಯೇ ಹೋಗುವವರನ್ನು ತಡೆಯುವುದಿಲ್ಲ ಎಂದೂ ಹೇಳಿದ್ದಾರೆ ಎಂದರು.

'ಉಪವಾಸ ಮಾಡದೆ ಗರ್ಭಗುಡಿಗೆ ಹೋಗಿದ್ದರೆ ಅಪವಿತ್ರ'

ಪ್ರಜಾವಾಣಿ ವಾರ್ತೆ

ಚಿಕ್ಕಬಳ್ಳಾಪುರ: 'ಬಾಲರಾಮನ ಪ್ರಾಣ ಪ್ರತಿಷ್ಠಾಪನೆ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ 11 ದಿನಗಳ ಉಪವಾಸ ವ್ರತ ನಡೆಸಿದ್ದರು ಎನ್ನಲಾಗುತ್ತದೆ. ಆದರೆ, ನಾನು ವೈದ್ಯರನ್ನು ಈ ಬಗ್ಗೆ ಕೇಳಿದೆ. ಇಷ್ಟು ದಿನ ಉಪವಾಸ ಮಾಡಿದರೆ ಬದುಕಲು ಸಾಧ್ಯವಿಲ್ಲ ಎಂದರು. ಉಪವಾಸ ಮಾಡದೆ ಪ್ರಧಾನಿ ಗರ್ಭಗುಡಿ ಪ್ರವೇಶಿಸಿದ್ದರೆ ಅದು ಅಪವಿತ್ರವಾಗುತ್ತದೆ' ಎಂದು ಕಾಂಗ್ರೆಸ್ ನಾಯಕ ಎಂ.ವೀರಪ್ಪ ಮೊಯಿಲಿ ತಿಳಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಅಯೋಧ್ಯೆಯಲ್ಲಿ ರಾಮಮಂದಿರ ಸ್ಥಾಪಿಸುತ್ತೇವೆ ಎಂದು ಬೇರೆ ಬೇರೆ ರಾಜ್ಯಗಳಲ್ಲಿ ಅಧಿಕಾರ ಪಡೆದರು. ಇನ್ನು ಮುಂದೆ ಬಿಜೆಪಿಯವರಿಗೆ ಹೇಳಲು ಯಾವುದೇ ವಿಷಯ ಇಲ್ಲ' ಎಂದು ಟೀಕಿಸಿದರು.

'ಮೋದಿ ಪ್ರಧಾನಿಯಾದರೆ ದೇಶ ಬಿಟ್ಟು ಹೋಗುವೆ ಎಂದು ಈ ಹಿಂದೆ ದೇವೇಗೌಡ ಅವರು ಹೇಳಿದ್ದರು. ಆದರೆ, ಈಗ ಪುತ್ರ ಕುಮಾರಸ್ವಾಮಿ ಅವರನ್ನು ಕೇಂದ್ರದಲ್ಲಿ ಸಚಿವರನ್ನಾಗಿಸಲು ನರೇಂದ್ರ ಮೋದಿಯೇ ಪ್ರಧಾನಿಯಾಗುವರು ಎಂದು ಹೇಳುತ್ತಿದ್ದಾರೆ. ಆದರೆ, 2024ರ ಲೋಕಸಭೆ ಚುನಾವಣೆ ನಂತರ ನರೇಂದ್ರ ಮೋದಿ ಮಾಜಿ ಆಗುವರು' ಎಂದರು.

'ಹಿಂದುಳಿದವರು ಎಂಬ ಕಾರಣಕ್ಕೆ ಮೋದಿಗೆ ಅಪಮಾನ': ಪ್ರಧಾನಿ ನರೇಂದ್ರಮೋದಿ ಅವರು ಹಿಂದುಳಿದ ವರ್ಗಕ್ಕೆ ಸೇರಿದವರು ಎಂಬ ಕಾರಣಕ್ಕೆ ಕಾಂಗ್ರೆಸ್ ನಾಯಕ ವೀರಪ್ಪ ಮೊಯಿಲಿ ಸೇರಿ ಇನ್ನಿತರ ನಾಯಕರು ನಿರಂತರ ಅಪಮಾನ ಮಾಡುತ್ತಿದ್ದಾರೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ಆರ್. ಅಶೋಕ ಹರಿಹಾಯ್ದಿದ್ದಾರೆ.

ಮಂದಿರದತ್ತ ಭಕ್ತಸಾಗರ

ಒಂದನೇ ಪುಟದಿಂದ...

ಪ್ರವಾಹದೋಪಾದಿಯಲ್ಲಿ ಮಂದಿರದ ಕಡೆ ಬರುತ್ತಿದ್ದ ಭಕ್ತರನ್ನು ನಿಯಂತ್ರಿಸಲು ಭದ್ರತಾ ಸಿಬ್ಬಂದಿ ಕಷ್ಟಪಡುತ್ತಿದ್ದ ದೃಶ್ಯಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿವೆ. ನೆಲಕ್ಕೆ ಬಿದ್ದ ಕೆಲವು ಭಕ್ತರನ್ನು ಭದ್ರತಾ ಸಿಬ್ಬಂದಿ ಮೇಲಕ್ಕೆತ್ತಿರುವುದು ಕೂಡ ದೃಶ್ಯಗಳಲ್ಲಿ ಇದೆ. ಸೂರ್ಯ ಮೇಲಕ್ಕೇರುತ್ತಿದ್ದಂತೆ ಭಕ್ತರ ಸಂಖ್ಯೆಯೂ ಹೆಚ್ಚತೊಡಗಿತು. ಮಧ್ಯಾಹ್ನ ವೇಳೆಗೆ ಅಯೋಧ್ಯೆಯು ಭಕ್ತರಿಂದ ತುಂಬಿಹೋಗಿತ್ತು.

ಸಹಸ್ರಾರು ಮಂದಿ ಭಕ್ತರು ಎರಡು–ಮೂರು ದಿನಗಳ ಹಿಂದೆಯೇ ಅಯೋಧ್ಯೆಗೆ ಬಂದು, ಬೇರೆ ಬೇರೆ ಕಡೆಗಳಲ್ಲಿ ಉಳಿದುಕೊಂಡಿದ್ದರು. ಪ್ರಾಣ ಪ್ರತಿಷ್ಠಾಪನೆ ಕಾರ್ಯಕ್ರಮಕ್ಕಾಗಿ ಶುಕ್ರವಾರ ರಾತ್ರಿಯಿಂದ ಮಂದಿರದ ಬಾಗಿಲು ಮುಚ್ಚಲಾಗಿತ್ತು. ಹೀಗಾಗಿ ಈ ಭಕ್ತರಿಗೆ ಮಂದಿರಕ್ಕೆ ಬರಲು ಸಾಧ್ಯವಾಗಿರಲಿಲ್ಲ.

ಭಕ್ತರನ್ನು ನಿಯಂತ್ರಿಸಲು ಕೈಗೊಂಡಿರುವ ಕ್ರಮಗಳ ಮೇಲ್ವಿಚಾರಣೆಗೆ ಉತ್ತರ ಪ್ರದೇಶ ಸರ್ಕಾರವು ಗೃಹ ಇಲಾಖೆಯ ಪ್ರಧಾನ ಕಾರ್ಯದರ್ಶಿ ಮತ್ತು ಪೊಲೀಸ್ ಮಹಾನಿರ್ದೇಶಕರನ್ನು ಅಯೋಧ್ಯೆಗೆ ಕಳುಹಿಸಿತ್ತು.

ಅಯೋಧ್ಯೆಯ ಕಡೆ ಸಾಗುವ ರಸ್ತೆಗಳಲ್ಲಿ ಸಂಚಾರ ದಟ್ಟಣೆ ಉಂಟಾಗಿತ್ತು. ಪಾಸ್ ಇಲ್ಲದ ಯಾವ ವಾಹನವನ್ನೂ ಅಯೋಧ್ಯೆಯೊಳಕ್ಕೆ ಬಿಡುತ್ತಿರಲಿಲ್ಲ ಎಂದು ಮೂಲಗಳು ಹೇಳಿವೆ. ಮಂದಿರದಲ್ಲಿ ಬಾಲರಾಮನ ದರ್ಶನವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ ಎಂದು ಕೆಲವು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ಸುದ್ದಿಯು ಸುಳ್ಳು ಎಂದು ಅಯೋಧ್ಯೆಯ ಪೊಲೀಸರು ಸ್ಪಷ್ಟಪಡಿಸಿದ್ದಾರೆ.

'ಬಾಲರಾಮನ ದರ್ಶನ ಪಡೆಯದೆ ಯಾವ ಭಕ್ತನೂ ಅಯೋಧ್ಯೆಯಿಂದ ಮರಳುವಂತೆ ಆಗಬಾರದು ಎಂಬುದು ನಮ್ಮ ಬದ್ಧತೆ... ಬಾಲರಾಮನ ದರ್ಶನ ಪಡೆಯಲು ಭಕ್ತರನ್ನು ಮಂದಿರದೊಳಕ್ಕೆ ಬಿಡಲಾಗುತ್ತಿದೆ' ಎಂದು ಪೊಲೀಸರು ಸ್ಪಷ್ಟಪಡಿಸಿದ್ದಾರೆ.

ನೆರೆಯ ಬಾರಾಬಂಕಿ ಜಿಲ್ಲೆಯಲ್ಲಿ, ಅಯೋಧ್ಯೆಯ ಮೂಲಕ ಸಾಗುವ ವಾಹನಗಳಿಗೆ ಬೇರೊಂದು ಮಾರ್ಗ ಬಳಸುವಂತೆ ಹೇಳಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಅಯೋಧ್ಯೆಗೆ ಸಾಗುವ ವಾಹನಗಳ ಮೇಲೆ ನಿರ್ಬಂಧ ಹೇರಲು, ಜಿಲ್ಲೆಯ ಗಡಿಗಳಲ್ಲಿ ತಡೆಗೋಡೆ ಅಳವಡಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಅಯೋಧ್ಯೆಗೆ ಬಂದಿರುವ ಭಕ್ತರು ಬಾಲರಾಮನ ದರ್ಶನ ಪಡೆದು, ಅಯೋಧ್ಯೆಯಿಂದ ತಮ್ಮ ಊರುಗಳಿಗೆ ಮರಳಲು ಶುರುವಾದ ನಂತರದಲ್ಲಿ, ಇನ್ನು ಒಂದೆರಡು ದಿನಗಳಲ್ಲಿ ಪರಿಸ್ಥಿತಿ ಸುಧಾರಿಸಬಹುದು ಎಂದು ಅಧಿಕಾರಿಗಳು ನಿರೀಕ್ಷಿಸಿದ್ದಾರೆ.

ರಾಮ ಮಂದಿರ ಅಭಿವೃದ್ಧಿಗೆ ಸ್ಫೂರ್ತಿ: ಪ್ರಧಾನಿ ಮೋದಿ

ಪ್ರಜಾವಾಣಿ ವಾರ್ತೆ

ನವದೆಹಲಿ (ಪಿಟಿಐ): ಅಯೋಧ್ಯೆಯಲ್ಲಿನ ಭವ್ಯವಾದ ರಾಮ ಮಂದಿರವು 'ನಮಗೆ ಅಭಿವೃದ್ಧಿ ಮತ್ತು ಯಶಸ್ಸಿಗೆ ಹೊಸ ಮಾದರಿಗಳನ್ನು ಸೃಷ್ಟಿಸಲು ಸ್ಫೂರ್ತಿಯಾಗಿರುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಮಂಗಳವಾರ ಬರೆದಿರುವ ಪತ್ರದಲ್ಲಿದೆ ಹೇಳಿದ್ದಾರೆ.

'ನನ್ನ ಜೀವನದ ಅತ್ಯಂತ ಅವಿಸ್ಮರಣೀಯ ಕ್ಷಣಗಳನ್ನು ಕಂಡು ಅಯೋಧ್ಯೆಯಿಂದ ಮರಳಿದ ನಂತರ ನಾನು ಈ ಪತ್ರವನ್ನು ನಿಮಗೆ ಬರೆಯುತ್ತಿದ್ದೇನೆ. ನನ್ನ ಹೃದಯದಲ್ಲಿ ಅಯೋಧ್ಯೆಯನ್ನು ಇರಿಸಿಕೊಂಡು ಬಂದಿದ್ದೇನೆ, ನನ್ನಿಂದ ಯಾವತ್ತಿಗೂ ಬೇರೆಯಾಗದ ಅಯೋಧ್ಯೆ ಅದು' ಎಂದು ಅವರು ಬರೆದಿದ್ದಾರೆ.

ರಾಮ ಮಂದಿರದ ಉದ್ಘಾಟನೆಗೂ ಮೊದಲು ಮುರ್ಮು ಅವರು ಪ್ರಧಾನಿಗೆ ಪತ್ರ ಬರೆದಿದ್ದರು. ಇದಕ್ಕೆ ಉತ್ತರವಾಗಿ ಪ್ರಧಾನಿ ಈ ಪತ್ರ ಬರೆದಿದ್ದಾರೆ. ದೇಶದ 140 ಕೋಟಿ ಜನರೊಂದಿಗೆ ಸೇರಿ ಬಾಲರಾಮನನ್ನು ಸ್ವಾಗತಿಸುವುದು ಅದ್ಭುತ ಅನುಭವ ಆಗಿತ್ತು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದ್ದಾರೆ.

ಮಹಾರಾಷ್ಟ್ರ: ಎರಡು ಕೋಮಿನ ಗುಂಪುಗಳ ನಡುವೆ ಭಾನುವಾರ ಸಂಘರ್ಷ

ಬುಲ್ಡೋಜರ್ ಬಳಸಿ ಅಂಗಡಿಗಳ ಧ್ವಂಸ

ಥಾಣೆ (ಪಿಟಿಐ): ಇಲ್ಲಿನ ಮೀರಾರಸ್ತೆಯಲ್ಲಿ ಕಾನೂನುಬಾಹಿರವಾಗಿ ನಿರ್ಮಿಸಿದ್ದ ಅಂಗಡಿಗಳನ್ನು ನಗರಾಡಳಿತವು ಮಂಗಳವಾರ ಬುಲ್ಡೋಜರ್ ಬಳಸಿ ನೆಲಸಮಗೊಳಿಸಿತು.

ಭಾನುವಾರ ಮತ್ತು ಸೋಮವಾರ ಈ ಪ್ರದೇಶವು ಕೋಮು ಸಂಘರ್ಷಕ್ಕೆ ಸಾಕ್ಷಿಯಾಗಿತ್ತು. ಈ ಬೆನ್ನಲ್ಲೇ ಉತ್ತರ ಪ್ರದೇಶ ಮಾದರಿಯಲ್ಲಿ 'ಬುಲ್ಡೋಜರ್ ಕಾರ್ಯಾಚರಣೆ' ನಡೆಸಲಾಗಿದೆ.

ಕಾನೂನುಬಾಹಿರವಾಗಿ ನಿರ್ಮಿಸಿದ್ದ 12–15 ಅಂಗಡಿಗಳನ್ನು ಧ್ವಂಸಮಾಡಲಾಗಿದೆ.

ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಕ್ಷಿಪ್ರ ಕಾರ್ಯಪಡೆ ಸೇರಿದಂತೆ ಪೊಲೀಸ್ ಸಿಬ್ಬಂದಿಯನ್ನು ಭಾರಿ ಸಂಖ್ಯೆಯಲ್ಲಿ ಸ್ಥಳದಲ್ಲಿ ನಿಯೋಜಿಸಲಾಗಿತ್ತು.

ಗಲಭೆಕೋರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಮಹಾರಾಷ್ಟ್ರ ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಎಚ್ಚರಿಕೆ ನೀಡಿದ್ದ ಬೆನ್ನಲ್ಲೇ ಈ ಕ್ರಮ ಜರುಗಿಸಲಾಗಿದೆ.

ಅಂಗಡಿಗಳನ್ನು ನೆಲಸಮ ಮಾಡಿರುವ ವಿಡಿಯೊ ಜಾಲತಾಣಗಳಲ್ಲಿ ಹರಿದಾಡುತ್ತಿದ್ದು, ನೆಟ್ಟಿಗರಿಂದ ಪರ–ವಿರೋಧ ಅಭಿಪ್ರಾಯ ವ್ಯಕ್ತವಾಗುತ್ತಿದೆ.

> **ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಪೊಲೀಸರಿಗೆ ಸೂಚಿಸಲಾಗಿದೆ. ಕಾನೂನು ಸುವ್ಯವಸ್ಥೆ ಹಾಳುಮಾಡುವವರ ವಿರುದ್ಧ ಶೂನ್ಯಸಹಿಷ್ಣು ಕ್ರಮ ಜರುಗಿಸಲಾಗುವುದು**
> **ದೇವೇಂದ್ರ ಫಡಣವೀಸ್,** ಉಪ ಮುಖ್ಯಮಂತ್ರಿ

ಅಯೋಧ್ಯೆಯಲ್ಲಿ ಬಾಲರಾಮನ ಪ್ರಾಣಪ್ರತಿಷ್ಠಾಪನೆಗೂ ಮುನ್ನ, ಭಾನುವಾರ ರಾತ್ರಿ ನಯಾ ನಗರದಲ್ಲಿ ರ್‍ಯಾಲಿ ಆಯೋಜಿಸಲಾಗಿತ್ತು. ಈ ವೇಳೆ ಎರಡು ಸಮುದಾಯಗಳ ಮಧ್ಯೆ ಸಂಘರ್ಷ ನಡೆದಿತ್ತು. ಉದ್ರಿಕ್ತ ಗುಂಪು ಕಬ್ಬಿಣದ ಸಲಾಕೆ, ಬಡಿಗೆ, ಬ್ಯಾಟ್‌ಗಳನ್ನು ಹಿಡಿದು ಧಾರ್ಮಿಕ ಘೋಷಣೆಗಳನ್ನು ಕೂಗಿತ್ತು. ರ್‍ಯಾಲಿಯಲ್ಲಿ ಪಾಲ್ಗೊಂಡಿದ್ದ ವ್ಯಕ್ತಿಯೊಬ್ಬರ ಮೇಲೆ ಹಲ್ಲೆ ಮಾಡಿತ್ತು. ಕಲ್ಲು ತೂರಾಟ ನಡೆಸಿ ಕಾರಿಗೆ ಹಾನಿ ಮಾಡಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಘಟನೆ ನಂತರ ಕೊಲೆ ಯತ್ನದ ಆರೋಪದ ಮೇಲೆ 50–60 ಜನರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, 13 ಜನರನ್ನು ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



ಮೀರಾರಸ್ತೆಯಲ್ಲಿ ಕಾನೂನುಬಾಹಿರವಾಗಿ ನಿರ್ಮಿಸಿದ್ದ ಅಂಗಡಿಗಳನ್ನು ನಗರಾಡಳಿತವು ಮಂಗಳವಾರ ಬುಲ್ಡೋಜರ್ ಬಳಸಿ ನೆಲಸಮಗೊಳಿಸಿತು

ಎಫ್‌ಟಿಐಐನಲ್ಲಿ ಪ್ರಕ್ಷುಬ್ಧ ವಾತಾವರಣ

ಮುಂಬೈ: ಪುಣೆಯ ಭಾರತೀಯ ಚಲನಚಿತ್ರ ಮತ್ತು ದೂರದರ್ಶನ ಸಂಸ್ಥೆಯ (ಎಫ್‌ಟಿ ಐಐ) ಕ್ಯಾಂಪಸ್‌ನಲ್ಲಿ 'ರಿಮೆಂಬರ್ ಬಾಬರಿ: ಡೆತ್ ಆಫ್ ಕಾನ್‌ಸ್ಟಿಟ್ಯೂಷನ್' (ಸಂವಿಧಾನ ಅಂತ್ಯವಾದ ಬಾಬರಿ ಮಸೀದಿ ಧ್ವಂಸ ಘಟನೆ ನೆನಪಿನಲ್ಲಿಡಿ) ಎಂದು ಬರೆದಿರುವ ಬ್ಯಾನರ್ ಅಳವಡಿಕೆ ಬಳಿಕ ಉಂಟಾದ ಸಂಘರ್ಷದಿಂದ ಕ್ಯಾಂಪಸ್‌ನಲ್ಲಿ ಪ್ರಕ್ಷುಬ್ಧತೆ ಮನೆಮಾಡಿದೆ.

ಪುಣೆ ಪೊಲೀಸರು ಮಧ್ಯಪ್ರವೇಶಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದ್ದಾರೆ. ಬ್ಯಾನರ್ ಅಳವಡಿಸಿದ್ದು ಎಫ್‌ಟಿಐಐ ವಿದ್ಯಾರ್ಥಿ ಸಂಘಟನೆಗಳು ಎಂದು ಹೇಳಲಾಗುತ್ತಿದೆ. ಬಲಪಂಥೀಯ ಕಾರ್ಯಕರ್ತರು ಕ್ಯಾಂಪಸ್ ಒಳಗೆ ಧಾವಿಸಿ ಬ್ಯಾನರ್ ಹರಿದು ಸುಟ್ಟುಹಾಕಿದರು. ಈ ವೇಳೆ ಪೊಲೀಸರು ಸ್ಥಳಕ್ಕೆ ಧಾವಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದರು.

ಪರಿಶಿಷ್ಟ ಜಾತಿ ವಿದ್ಯಾರ್ಥಿ ಮೇಲೆ ಹಲ್ಲೆ; ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೀದರ್: ಪರಿಶಿಷ್ಟ ಜಾತಿಗೆ ಸೇರಿದ ವಿದ್ಯಾರ್ಥಿಯನ್ನು ಬಲವಂತವಾಗಿ ಹನುಮನ ದೇವಸ್ಥಾನಕ್ಕೆ ಕರೆದೊಯ್ದು ಒತ್ತಾಯಪೂರ್ವಕವಾಗಿ 'ಜೈ ಶ್ರೀರಾಮ್' ಎಂದು ಹೇಳಿಸಿ ಹಲ್ಲೆ ನಡೆಸಿ, ಜಾತಿ ನಿಂದನೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಹುಮನಾಬಾದ್ ಪೊಲೀಸರು ಮಂಗಳವಾರ ನಾಲ್ವರನ್ನು ಬಂಧಿಸಿದ್ದಾರೆ.

ಹುಮನಾಬಾದ್ ಪಟ್ಟಣದ ಅಭಿಷೇಕ್, ರಿತೇಶ ರೆಡ್ಡಿ, ಸುನೀಲ ರೆಡ್ಡಿ ಹಾಗೂ ಅಭಿಷೇಕ ತೆಲಂಗ ಬಂಧಿತರು. ಹುಮನಾಬಾದ್ ತಾಲ್ಲೂಕಿನ ಹುಣಸಗೇರಾ ಗ್ರಾಮದ ದ್ವಿತೀಯ ಪಿಯು ವಿದ್ಯಾರ್ಥಿ ದರ್ಶನ್ ಲಕ್ಷ್ಮಣ ಕಟ್ಟಿಮನಿ ಹಲ್ಲೆಗೊಳಗಾದವರು.

'ದರ್ಶನ್ ಎಂಬ ವಿದ್ಯಾರ್ಥಿ ಜ.22 'ರಾಮ ದೇವರಲ್ಲ, ಡಾ.ಬಿ.ಆರ್. ಅಂಬೇಡ್ಕರ್ ದೇವರು' ಎಂದು ವಾಟ್ಸ್ಆ್ಯಪ್‌ನಲ್ಲಿ ಸ್ಟೇಟಸ್ ಇಟ್ಟುಕೊಂಡಿದ್ದ. ಇದನ್ನು ನೋಡಿದ ಅಭಿಷೇಕ್, ರಿತೇಶ ರೆಡ್ಡಿ, ಸುನೀಲ ರೆಡ್ಡಿ ಹಾಗೂ ಅಭಿಷೇಕ ತೆಲಂಗ ಅವರು ದರ್ಶನ್‌ನನ್ನು ವಾಹನದಲ್ಲಿ ಹನುಮಾನ ದೇವಸ್ಥಾನಕ್ಕೆ ಕರೆದೊಯ್ದು, ಜೈ ಶ್ರೀರಾಮ್ ಎಂದು ಹೇಳಿಸಿ ಕಪಾಳಕ್ಕೆ ಹೊಡೆದಿದ್ದಾರೆ' ಎಂದು ಎಸ್‌ಪಿ ತಿಳಿಸಿದ್ದಾರೆ.

ಸರ್ಕಾರಗಳಿಗೆ ಎನ್‌ಎಂಸಿ ಸೂಚನೆ

'ಬಾಂಡ್ ಪದ್ಧತಿ ಕೈಬಿಡಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳು ಕೋರ್ಸ್‌ನ ನಡುವಿನಲ್ಲಿ ಯಾವುದೇ ಕಾರಣಕ್ಕೆ ಕಾಲೇಜು ತೊರೆದರೆ, ಅವರಿಂದ ಭಾರಿ ಪ್ರಮಾಣದಲ್ಲಿ ಶುಲ್ಕ ವಸೂಲು ಮಾಡಲು ಅವಕಾಶ ಕಲ್ಪಿಸುವಂತಹ ಬಾಂಡ್ ಬರೆಸಿಕೊಳ್ಳುವ ಪ್ರವೃತ್ತಿಯನ್ನು ಕೊನೆಗೊಳಿಸಬೇಕು ಎಂದು ರಾಷ್ಟ್ರೀಯ ವೈದ್ಯಕೀಯ ಆಯೋಗವು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳಿಗೆ ತಿಳಿಸಿದೆ.

ಸ್ನಾತಕೋತ್ತರ ವೈದ್ಯಕೀಯ ಕಾಲೇಜುಗಳು ಇಂತಹ ಬಾಂಡ್ ಬರೆಸಿಕೊಳ್ಳುತ್ತಿವೆ ಎಂಬ ದೂರುಗಳನ್ನು ಆಧರಿಸಿ ಆಯೋಗವು ಈ ಸೂಚನೆ ನೀಡಿದೆ.

ಇಂತಹ ಬಾಂಡ್‌ಗಳು ವಿದ್ಯಾರ್ಥಿಗಳಲ್ಲಿ, ಅವರ ಕುಟುಂಬದವರಲ್ಲಿ ಮಾನಸಿಕ ಒತ್ತಡ, ಆತಂಕ ಮತ್ತು ಖಿನ್ನತೆಗೆ ಕಾರಣವಾಗುತ್ತವೆ, ಕೆಲವರು ಆತ್ಮಹತ್ಯೆ ಮಾಡಿಕೊಳ್ಳುವ ಸಾಧ್ಯತೆಯೂ ಇದೆ ಎಂದು ಆಯೋಗವು ಹೇಳಿದೆ.

ಕಳೆದ ಹತ್ತು ವರ್ಷಗಳಲ್ಲಿ ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಸೀಟುಗಳ ಸಂಖ್ಯೆಯಲ್ಲಿ ಶೇಕಡ 117ರಷ್ಟು ಏರಿಕೆ ಆಗಿದೆ. ಹೀಗಾಗಿ, ಈ ದಿನಗಳಲ್ಲಿ ಸೀಟುಗಳು ವ್ಯರ್ಥವಾಗುವ ಸಾಧ್ಯತೆ ಕಡಿಮೆ ಎಂದು ಆಯೋಗದ ಪದವಿ ವಿಭಾಗದ ಅಧ್ಯಕ್ಷೆ ಅರುಣಾ ವಣಿಕರ್ ಅವರು ಪತ್ರದಲ್ಲಿ ಹೇಳಿದ್ದಾರೆ. ವಿದ್ಯಾರ್ಥಿಗಳು ನಡುವಿನಲ್ಲಿಯೇ ಕೋರ್ಸ್ ತೊರೆದರೆ ಸೀಟುಗಳು ವ್ಯರ್ಥವಾಗುತ್ತವೆ ಎಂಬ ಕಾರಣಕ್ಕಾಗಿ ಈ ಬಗೆಯ ಬಾಂಡ್ ಬರೆಸಿಕೊಳ್ಳುವ ಪದ್ಧತಿ ಆರಂಭವಾಗಿತ್ತು.

ಕೇಂದ್ರ ಆರೋಗ್ಯ ಸಚಿವಾಲಯದ ಬಳಿ ಇರುವ ಅಂಕಿ–ಅಂಶಗಳ ಪ್ರಕಾರ ವೈದ್ಯಕೀಯ ಸ್ನಾತಕೋತ್ತರ ಸೀಟುಗಳ ಸಂಖ್ಯೆಯು 2014ರಲ್ಲಿ 31,185 ಇದ್ದಿದ್ದು 2023ರ ಆಗಸ್ಟ್ ವೇಳೆಗೆ 67,802ಕ್ಕೆ ಹೆಚ್ಚಳವಾಗಿದೆ.

ಕೆಲವು ಪ್ರಕರಣಗಳಲ್ಲಿ ವಿದ್ಯಾರ್ಥಿಗಳು ₹30 ಲಕ್ಷ ದಂಡ ಪಾವತಿಸಬೇಕಾಗಿತ್ತು. ಇದರಿಂದಾಗಿ ವಿದ್ಯಾರ್ಥಿಯೊಬ್ಬನ ಕುಟುಂಬವು ತನ್ನ ಜಮೀನು ಮಾರಾಟ ಮಾಡಬೇಕಾಯಿತು. ಇನ್ನೊಬ್ಬ ವಿದ್ಯಾರ್ಥಿಯ ಕುಟುಂಬವು ಪ್ರಧಾನಿಗೆ ಪತ್ರ ಬರೆದಿತ್ತು ಎಂದು ಆಯೋಗವು ವಿವರಿಸಿದೆ.

ಬಿಹಾರದ ಹೃದಯಸ್ಪರ್ಶಿ ಜನಸೇವಕ

ಬೆಂಗಳೂರು: ದೇಶಕ್ಕಾಗಿ ನಿಸ್ವಾರ್ಥ ಸೇವೆ ಸಲ್ಲಿಸಿದ ಮುಂಚೂಣಿ ನಾಯಕರಲ್ಲಿ ಕರ್ಪೂರಿ ಠಾಕೂರ್ ಅವರೂ ಒಬ್ಬರು. ಅವರಿಗೀಗ ಮರಣೋತ್ತರ ಭಾರತರತ್ನ ಪುರಸ್ಕಾರದ ಗೌರವ.

ಸ್ವಾತಂತ್ರ್ಯ ಹೋರಾಟದಲ್ಲಿ ತೊಡಗಿದ್ದೇ ಅಲ್ಲದೆ ಶಿಕ್ಷಣ, ರಾಜಕೀಯ ಕ್ಷೇತ್ರಗಳಲ್ಲಿಯೂ ಸೇವೆ ಸಲ್ಲಿಸಿದ ಅವರು ಎರಡು ಅವಧಿಯಲ್ಲಿ ಬಿಹಾರದ ಮುಖ್ಯಮಂತ್ರಿ ಆಗಿದ್ದವರು.

ಲಾಲು ಪ್ರಸಾದ್, ನಿತೀಶ್ ಕುಮಾರ್, ರಾಮ್ ವಿಲಾಸ್ ಪಾಸ್ವಾನ್ ಹಾಗೂ ಸುನಿಲ್ ಕುಮಾರ್ ಮೋದಿ ರಾಜಕೀಯದಲ್ಲಿ ಅವರ ಶಿಷ್ಯರು.

ಕರ್ಪೂರಿ ಠಾಕೂರ್ ಹುಟ್ಟಿದ್ದು 1924ರ ಜನವರಿ 24ರಂದು. ತಂದೆ ಶ್ರೀ ಕೋಗುಲ್ ಠಾಕೂರ್, ತಾಯಿ ರಾಮ್‌ದುಲಾರಿ ದೇವಿ. ಅವರ ತಂದೆ ಕ್ಷೌರಿಕ ವೃತ್ತಿ ಮಾಡುತ್ತಿದ್ದರು. ಕೃಷಿಕರೂ ಆಗಿದ್ದರು.

ಪಟ್ನಾ ವಿಶ್ವವಿದ್ಯಾಲಯದಿಂದ 1940ರಲ್ಲಿ ಮೆಟ್ರಿಕ್ಯುಲೇಷನ್‌ನಲ್ಲಿ ತೇರ್ಗಡೆಯಾದ ಅವರು, ಆಮೇಲೆ ದರ್ಭಾಂಗದಲ್ಲಿನ ಚಂದ್ರಧರಿ ಮಿಥಿಲಾ ಕಾಲೇಜಿನಲ್ಲಿ 'ಇಂಟರ್‌ಮೀಡಿಯೇಟ್ ಆರ್ಟ್ಸ್' ಕಲಿತರು. ಬಿ.ಎ. ಪದವಿಯನ್ನು ಕೂಡ ಪಡೆದರು. ಮುಂದೆ ತಮ್ಮದೇ ಹಳ್ಳಿಯ ಶಾಲೆಯಲ್ಲಿ ಮೇಷ್ಟರಾದರು. ಕ್ವಿಟ್ ಇಂಡಿಯಾ ಚಳವಳಿ ಪ್ರಾರಂಭವಾದಾಗ ಓದನ್ನು ಬದಿಗೊತ್ತಿ, ಅದರಲ್ಲಿ ಕರ್ಪೂರಿ ಪಾಲ್ಗೊಂಡರು. ಜಯಪ್ರಕಾಶ್ ನಾರಾಯಣ್ ರಚಿಸಿದ್ದ 'ಆಜಾದ್ ದಾಸ್ತಾ'ದ ಸಕ್ರಿಯ ಸದಸ್ಯರಾದರು.

ಪಟ್ನಾದ ಕೃಷ್ಣಾ ಟಾಕೀಸಿನ ಬಳಿ ಅವರು ಮೊದಲು ನೀಡಿದ ಭಾಷಣ ಮಹತ್ವದ್ದಾಗಿತ್ತು. 'ನಮ್ಮ ದೇಶದ ಜನಸಂಖ್ಯೆ ಎಷ್ಟಿದೆ ಎಂದರೆ, ಎಲ್ಲರೂ ಸೇರಿ ಜೋರಾಗಿ ಉಗಿದರೆ ಬ್ರಿಟಿಷರು ಓಡಿಹೋಗುತ್ತಾರೆ' ಎಂದಿದ್ದರು. ಆ ಭಾಷಣದ ನಂತರ ಬ್ರಿಟಿಷ್ ಸರ್ಕಾರ ಅವರನ್ನು ಶಿಕ್ಷೆಗೆ ಒಳಪಡಿಸಿತ್ತು. ಕ್ವಿಟ್ ಇಂಡಿಯಾ ಚಳವಳಿ ಸಂದರ್ಭದಲ್ಲಿ 26 ತಿಂಗಳು ಅವರು ಜೈಲುವಾಸ ಅನುಭವಿಸಿದ್ದರು. ಸ್ವಾತಂತ್ರ್ಯ ಬರುವ ಮೊದಲು ಎರಡು ಸಲ ಹಾಗೂ ಬಂದ ನಂತರ 18 ಸಲ ಅವರು ಜೈಲು ಶಿಕ್ಷೆ ಕಂಡಿದ್ದರು.

ಲೋಹಿಯಾ ಅವರ ನಿಲುವಿಗೆ ವಿರುದ್ಧವಾಗಿ, 1967ರಲ್ಲಿ ಜನ ಸಂಘ–ಕಮ್ಯುನಿಸ್ಟ್‌ನ ಮಹಾಮಾಯಾ ಪ್ರಸಾದ್ ಸಿನ್ಹಾ ಮುಖ್ಯಮಂತ್ರಿಯಾಗಲು ಕರ್ಪೂರಿ ಅವರ ಜಾಣತನವೇ ಕಾರಣ.

ಶಿಕ್ಷಣದಲ್ಲಿ ಸುಧಾರಣೆ: ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರ 1952ರಲ್ಲಿ ಬಿಹಾರದ ತೈಪುರ್ ಕ್ಷೇತ್ರದಿಂದ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧಿಸಿ, ಮೊದಲ ಬಾರಿಗೆ ಕರ್ಪೂರಿ ಗೆಲುವು ಸಾಧಿಸಿದರು. ಸಮಾಜವಾದಿಯಾಗಿದ್ದ ಅವರು ಹಲವು ಸಮಸ್ಯೆಗಳ ಕುರಿತು ಸೊಲ್ಲೆತ್ತಿದರು. 1967ರಲ್ಲಿ ಮಹಾಮಾಯಾ ಪ್ರಸಾದ್ ಅವರ ಸಚಿವ ಸಂಪುಟದಲ್ಲಿ ಶಿಕ್ಷಣ ಸಚಿವ ಹಾಗೂ ಉಪ ಮುಖ್ಯಮಂತ್ರಿಯಾಗಿ ಕೆಲಸ ಮಾಡಿದರು. ಮೆಟ್ರಿಕ್ಯುಲೇಷನ್ ತೇರ್ಗಡೆಯಾಗಲು ಇದ್ದ ಇಂಗ್ಲಿಷ್‌ನ ಅಗತ್ಯವನ್ನು ತಪ್ಪಿಸಿದರು. 1970ರಲ್ಲಿ ಕರ್ಪೂರಿ ಠಾಕೂರ್ ಅವರ ಸರ್ಕಾರ ಬಿಹಾರದಲ್ಲಿ ಅಧಿಕಾರಕ್ಕೆ ಬಂದಿತು. ಎಂಟನೇ ತರಗತಿಯವರೆಗೆ ಉಚಿತ ಶಿಕ್ಷಣ, ಉರ್ದು ಭಾಷೆಗೆ ರಾಜ್ಯದಲ್ಲಿ ಎರಡನೆ ಸ್ಥಾನಮಾನ ನೀಡಿ ಸದ್ದು ಮಾಡಿದರು. ಬಡತನ, ನಿರುದ್ಯೋಗ, ಭ್ರಷ್ಟಾಚಾರದ ನಿವಾರಣೆಗೆ ಕ್ರಮಗಳನ್ನು ತೆಗೆದುಕೊಂಡರು. ಅವರ ಕೆಲಸಗಳಿಂದ 'ಜನಸೇವಕ್' ಎಂದೇ ಹೆಸರಾದರು.

ದಮನಿತರಿಗೆ ಮೀಸಲಾತಿ: 1978ರಲ್ಲಿ ಅವರು ಮುಖ್ಯಮಂತ್ರಿಯಾಗಿದ್ದಾಗ ಸರ್ಕಾರಿ ಉದ್ಯೋಗದಲ್ಲಿ ದಮನಿತರಿಗೆ ಶೇ 26ರಷ್ಟು ಮೀಸಲಾತಿಯನ್ನು ಜಾರಿಗೆ ತಂದರು. ಅದಕ್ಕೆ ಅನೇಕ ಟೀಕೆಗಳನ್ನೂ ಎದುರಿಸಿದರು.

ರಾಜ್ಯದ ಸರ್ಕಾರಿ ನೌಕರರಿಗೆಲ್ಲ ಸಮಾನ ವೇತನ ಪದ್ಧತಿಯನ್ನು ವೇತನ ಆಯೋಗದ ಮೂಲಕ ಜಾರಿಗೆ ತಂದರು. ಏಕಕಾಲದಲ್ಲಿ 9000 ಎಂಜಿನಿಯರ್‌ಗಳು ಹಾಗೂ ವೈದ್ಯರಿಗೆ ಶಿಬಿರವೊಂದರಲ್ಲಿ ಉದ್ಯೋಗ ದೊರಕುವಂತೆ ಮಾಡಿದರು. ಅಂತರ್ಜಾತಿ ವಿವಾಹಗಳನ್ನು ಪ್ರೋತ್ಸಾಹಿಸಿದರು. 1988ರಲ್ಲಿ ಅವರು ಹೃದಯಾಘಾತದಿಂದ ನಿಧನರಾದರು.

ರಾಜಕಾರಣಿಗಳ ಭ್ರಷ್ಟಾಚಾರದ ಪ್ರಸಂಗಗಳನ್ನೇ ಪುಂಖಾನುಪುಂಖವಾಗಿ ನೋಡುವ ನಮಗೆ ಅವರು ತಮಗಾಗಿ ಒಂದು ಮನೆಯನ್ನೂ ಕಟ್ಟಿಕೊಳ್ಳಲಿಲ್ಲ ಎನ್ನುವುದು ಅಚ್ಚರಿಯಾಗಿ ಕಾಣಬಹುದು. ಅವರು ಹಳ್ಳಿಯಲ್ಲಿ ಸರಳ ವಿವಾಹವಾದಾಗ, ತಮ್ಮ ಸಚಿವ ಸಂಪುಟದವರನ್ನೂ ಆಹ್ವಾನಿಸಿರಲಿಲ್ಲ.

ಮಗನಿಗೆ ಎಚ್ಚರಿಕೆ ಪತ್ರ

ಮೊದಲ ಬಾರಿಗೆ ಬಿಹಾರ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿ ಆದಾಗ ಕರ್ಪೂರಿ ತಮ್ಮ ಮಗ ರಾಮನಾಥ್ ಠಾಕೂರ್ ಅವರಿಗೆ ಪತ್ರವೊಂದನ್ನು ಬರೆದರು. 'ರಾಜಕೀಯದಲ್ಲಿ ಯಾವ ಕಾರಣಕ್ಕೂ ದುರಾಸೆಪಡಬಾರದು' ಎಂದು ಎಚ್ಚರಿಸಿದ್ದರು. ತಾವು ರಾಜಕೀಯ ಪ್ರವೇಶಿಸಲು ತಮ್ಮ ತಂದೆ ಸ್ಫೂರ್ತಿ ನೀಡಿದವರೇ ಅಲ್ಲ ಎಂದು ರಾಮನಾಥ್ ಠಾಕೂರ್ ಕೂಡ ಹೇಳಿದ್ದರು.

ಜಾತಿಯ ಕಹಿ

ಮೆಟ್ರಿಕ್ಯುಲೇಷನ್‌ನಲ್ಲಿ ತೇರ್ಗಡೆಯಾದ ಮೇಲೆ ಕರ್ಪೂರಿ ಅವರ ತಂದೆ ಶ್ರೀಮಂತರೊಬ್ಬರ ಮನೆಗೆ ಕರೆದುಕೊಂಡು ಹೋದರು. ಆಗ ಆ ಶ್ರೀಮಂತರು ತಮ್ಮ ಕಾಲನ್ನು ಮೇಜಿನ ಮೇಲೆ ಇಟ್ಟು, 'ನೀನು ಮೊದಲ ದರ್ಜೆಯಲ್ಲಿ ತೇರ್ಗಡೆಯಾದೆಯಾ? ಹಾಗಿದ್ದರೆ ನನ್ನ ಕಾಲನ್ನು ಮುಟ್ಟು' ಎಂದಿದ್ದರು.

ಕರ್ಪೂರಿಗೆ 'ಭಾರತ ರತ್ನ'

ಒಂದನೇ ಪುಟದಿಂದ....

1970ರ ದಶಕದ ಕೊನೆಯಲ್ಲಿ ಮುಂಗೇರಿ ಲಾಲ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸುವ ಮೂಲಕ ಸರ್ಕಾರಿ ಉದ್ಯೋಗದಲ್ಲಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಪ್ರಯತ್ನವನ್ನು ಕರ್ಪೂರಿ ಮಾಡಿದ್ದರು. ಲೋಕಸಭೆ ಚುನಾವಣೆಗೆ ಕೆಲವೇ ತಿಂಗಳು ಇರುವಾಗ ಈ ಅಚ್ಚರಿಯ ಆಯ್ಕೆ ನಡೆದಿದೆ. ವಿರೋಧ ಪಕ್ಷಗಳು ಸಾಮಾಜಿಕ ನ್ಯಾಯದ ವಿಷಯವನ್ನು ಅದರಲ್ಲೂ ಮುಖ್ಯವಾಗಿ ಜಾತಿ ಗಣತಿಯನ್ನು ಮುನ್ನೆಲೆಗೆ ತರಲು ಪ್ರಯತ್ನಿಸುತ್ತಿರುವ ಸಮಯದಲ್ಲೇ ಈ ಬೆಳವಣಿಗೆ ನಡೆದಿದೆ.

ಸ್ವಾತಂತ್ರ್ಯ ಹೋರಾಟದಲ್ಲಿ ಪಾಲ್ಗೊಂಡಿದ್ದ ಅವರು 1952ರಲ್ಲಿ ಸಮಾಜವಾದಿ ಪಕ್ಷದ ಶಾಸಕರಾಗಿ ಬಿಹಾರ ವಿಧಾನಸಭೆ ಪ್ರವೇಶಿಸಿದ್ದರು. ಚುನಾವಣೆಯಲ್ಲಿ ಒಮ್ಮೆಯೂ ಸೋಲದ ಅವರು ಉಪಮುಖ್ಯಮಂತ್ರಿ ಹುದ್ದೆಗೇರಿದರಲ್ಲದೆ, ಬಿಹಾರದ ಮೊದಲ ಕಾಂಗ್ರೆಸ್ಸೇತರ ಮುಖ್ಯಮಂತ್ರಿಯೂ ಆದರು.

ವಾಹನ ದಟ್ಟಣೆಯ ನೆಪ– ಗುವಾಹಟಿ ಪ್ರವೇಶಿಸದಂತೆ ನಿರ್ಬಂಧ ಹೇರಿದ ಅಸ್ಸಾಂ ಸರ್ಕಾರ

‘ನ್ಯಾಯಯಾತ್ರೆ’ಗೆ ತಡೆ, ಜಟಾಪಟಿ

ಪ್ರಜಾವಾಣಿ ವಾರ್ತೆ/ ಪಿಟಿಐ

ಗುವಾಹಟಿ: ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ನೇತೃತ್ವದ ‘ಭಾರತ ಜೋಡೊ ನ್ಯಾಯ ಯಾತ್ರೆ’ಯು ಗುವಾಹಟಿ ನಗರ ಪ್ರವೇಶಿಸಂತೆ ಅಸ್ಸಾಂ ಸರ್ಕಾರ ಮಂಗಳವಾರ ತಡೆಯೊಡ್ಡಿದೆ. ಇದು, ರಾಜ್ಯ ಸರ್ಕಾರ ಮತ್ತು ಕಾಂಗ್ರೆಸ್ ನಡುವೆ ಜಟಾಪಟಿಗೆ ಕಾರಣವಾಗಿದೆ.

ಯಾತ್ರೆಯನ್ನು ತಡೆದ ಪೊಲೀಸರ ಕ್ರಮಕ್ಕೆ ಆಕ್ರೋಶ ವ್ಯಕ್ತಪಡಿಸಿದ ಕಾಂಗ್ರೆಸ್ ಕಾರ್ಯಕರ್ತರು ಬ್ಯಾರಿಕೇಡ್‌ಗಳನ್ನು ಮುರಿದು ಆಕ್ರೋಶ ವ್ಯಕ್ತಪಡಿಸಿ, ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ಪೊಲೀಸರೂ ಹೆಚ್ಚಿನ ಸಂಖ್ಯೆಯಲ್ಲಿದ್ದು, ಬಿಗುವಿನ ಪರಿಸ್ಥಿತಿ ನಿರ್ಮಾಣವಾಗಿತ್ತು. ಈ ವೇಳೆ ಚಕಮಕಿಯಲ್ಲಿ ಕೆಲ ನಾಯಕರು, ಕಾರ್ಯಕರ್ತರು ಗಾಯಗೊಂಡರು.

ಈ ಬೆಳವಣಿಗೆ ಹಿಂದೆಯೇ ರಾಹುಲ್‌ಗಾಂಧಿ ವಿರುದ್ಧ ಪ್ರಕರಣ ದಾಖಲಿಸಲು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ ಅವರು ಸೂಚಿಸಿದ್ದರೆ, ‘ದೆಹಲಿ ಸೂಚನೆಯಂತೆ ಯಾತ್ರೆಯನ್ನು ತಡೆಯಲಾಗಿದೆ’ ಎಂದು ರಾಹುಲ್‌ಗಾಂಧಿ ಆರೋಪಿಸಿದ್ದಾರೆ.

ನಗರದಲ್ಲಿ ವಾಹನ ದಟ್ಟಣೆಯಾಗಲಿದೆ ಎಂಬ ಕಾರಣ ನೀಡಿದ್ದ ಮುಖ್ಯಮಂತ್ರಿಯವರ, ಯಾತ್ರೆಯು ನಗರ ಪ್ರವೇಶಿಸಲು ಅನುಮತಿ ನಿರಾಕರಿಸಿದ್ದರು. ಇದಾದ ಬಳಿಕ ಪೊಲೀಸರು ಹೊರ ವಲಯದಲ್ಲೇ ಎರಡು ಕಡೆ ಬ್ಯಾರಿಕೇಡ್ ಅಳವಡಿಸಿದ್ದರು.

ರಾಹುಲ್‌ಗಾಂಧಿ ಸ್ವಾಗತಕ್ಕೆ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ಬ್ಯಾರಿಕೇಡ್ ಕಿತ್ತೆಸೆದು ಮುನ್ನುಗ್ಗಲು ಯತ್ನಿಸಿದರು. ಪೊಲೀಸರು ಪ್ರತಿರೋಧ ತೋರಿದರು. ಈ ತಿಕ್ಕಾಟದಲ್ಲಿ ಹಲವು ಕಾರ್ಯಕರ್ತರು ಗಾಯಗೊಂಡರು.

ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಭೂಪೇನ್ ಬೊರ್ರಾ ಮತ್ತು ರಾಜ್ಯ ವಿಧಾನಸಭೆಯ ವಿರೋಧಪಕ್ಷದ ನಾಯಕ ದೇಬಬ್ರತಾ ಸೈಕಿಯಾ ಅವರು ಗಾಯಗೊಂಡರು. ಅಸ್ಸಾಂನಲ್ಲಿ ನ್ಯಾಯಯಾತ್ರೆಯ ಗುರುವಾರದವರೆಗೂ ಸಂಚರಿಸಲಿದೆ.

ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ. ಶ್ರೀನಿವಾಸ್ ಅವರು, ಘಟನೆಗೆ ಸಂಬಂಧಿಸಿ ವಿಡಿಯೊ ಅನ್ನು ಎಕ್ಸ್ ಜಾಲತಾಣದಲ್ಲಿ ಹಂಚಿಕೊಂಡಿದ್ದರು. ಪೊಲೀಸರು ಯಾತ್ರೆ ತಡೆದಿದ್ದ ಸ್ಥಳದಲ್ಲಿ ಬಸ್ ಮೇಲೆ ನಿಂತು ಭಾಷಣ ಮಾಡಿದ ರಾಹುಲ್‌ಗಾಂಧಿ, ‘ನಾವು ಬ್ಯಾರಿಕೇಡ್ ಮುರಿದಿರಬಹುದು. ಯಾವುದೇ ಕಾರಣಕ್ಕೂ ಕಾನೂನು ಉಲ್ಲಂಘಿಸುವುದಿಲ್ಲ’ ಎಂದು ಹೇಳಿದರು.

ಈ ಮೊದಲು ಬಿಜೆಪಿಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರಿಗೆ ಇದೇ ಮಾರ್ಗದಲ್ಲಿ ತೆರಳಲು ಅವಕಾಶ ನೀಡಲಾಗಿದೆ. ಆದರೆ, ಕಾಂಗ್ರೆಸ್ ಪಕ್ಷಕ್ಕೆ ಅವಕಾಶ ನಿರಾಕರಿಸಲಾಗಿದೆ ಎಂದು ಆರೋಪಿಸಿದರು.

ಪೂರ್ವನಿಗದಿಯಂತೆ ನ್ಯಾಯಯಾತ್ರೆ ಮೇಘಾಲಯದಿಂದ ಕಮ್ರೂಪ್ ಮಾರ್ಗವಾಗಿ ಗುವಾಹಟಿಗೆ ತೆರಳಬೇಕಿತ್ತು. ಇದಕ್ಕಾಗಿ ಎರಡು ಮಾರ್ಗಗಳಿದ್ದು, ಚರ್ಚೆಯ ಬಳಿಕ ಒಂದು ಮಾರ್ಗದಲ್ಲಿ ತೆರಳಲು ಅನುಮತಿ ನೀಡಲಾಗಿತ್ತು.

‘ಸಾರ್ವಜನಿಕರು, ವಾಹನ ಚಾಲಕರಿಗೆ ಸಮಸ್ಯೆ ಆಗದಂತೆ ಚಿಂತಿಸಿ ಅನುಮತಿ ನೀಡಲಾಗಿತ್ತು. ಆದರೆ, ಕಾರ್ಯಕರ್ತರು ಮಾರ್ಗ ಬದಲಿಸಲು ಮುಂದಾದರು. ಇದು, ವಾಹನ ದಟ್ಟಣೆಗೆ ಕಾರಣವಾಗಲಿತ್ತು‘ ಎಂದು ಯಾತ್ರೆಯನ್ನು ತಡೆದ ಕ್ರಮವನ್ನು ಸಮರ್ಥಿಸಿಕೊಂಡು ಡಿಜಿಪಿ ಜಿ.ಪಿ.ಸಿಂಗ್ ಅವರು ಎಕ್ಸ್‌ನಲ್ಲಿ ಸಂದೇಶ ಹಂಚಿಕೊಂಡಿದ್ದಾರೆ.

ಘಟನೆಗೆ ಸಂಬಂಧಿಸಿ ಪೊಲೀಸರು ಯಾವುದೇ ಪ್ರಕರಣ ದಾಖಲಿಸಿಲ್ಲ. ‘ಆದರೆ, ಲೋಕಸಭೆ ಚುನಾವಣೆಯ ನಂತರ ರಾಹುಲ್ ಅವರನ್ನು ಬಂಧಿಸಲಾಗುವುದು’ ಎಂದು ಮುಖ್ಯಮಂತ್ರಿ ಶರ್ಮ ಅವರು ತಿಳಿಸಿದರು.




ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಅವರು ಮಂಗಳವಾರ ಅಸ್ಸಾಂನ ಬರ್‌ಪೆಟಾದಲ್ಲಿ ನಡೆಸಿದ ಭಾರತ್ ಜೋಡೊ ನ್ಯಾಯಯಾತ್ರೆಯಲ್ಲಿ ಪಾಲ್ಗೊಂಡಿದ್ದ ಪಕ್ಷದ ಕಾರ್ಯಕರ್ತರು (ಎಡಚಿತ್ರ) ಕಾರ್ಯಕರ್ತರು ಅಸ್ಸಾಂನ ಬರ್‌ಪೆಟಾ ಬಳಿ ಭದ್ರತೆ ಭೇದಿಸಿ ಮುನ್ನುಗ್ಗಲು ಯತ್ನಿಸಿದಾಗ ಪೊಲೀಸರು ತಡೆದರು —ಪಿಟಿಐ ಚಿತ್ರ

‘ಧೃತಿಗೆಡುವುದಿಲ್ಲ, ಹೋರಾಟ ನಿಲ್ಲಲ್ಲ’

ಹಜೊ, ಅಸ್ಸಾಂ (ಪಿಟಿಐ): ‘ನಾನು ಧೃತಿಗೆಡುವುದಿಲ್ಲ. ಇಡೀ ಜಗತ್ತು ನನ್ನ ವಿರುದ್ಧ ನಿಂತರೂ ಸತ್ಯಕ್ಕಾಗಿ ಹೋರಾಟ ನಡೆಸುತ್ತೇನೆ’ ಎಂದು ಕಾಂಗ್ರೆಸ್ ಮುಖಂಡ ರಾಹುಲ್‌ಗಾಂಧಿ ಹೇಳಿದ್ದಾರೆ.

ಗುವಾಹಟಿ ಬಳಿ ನ್ಯಾಯಯಾತ್ರೆ ತಡೆದ ವೇಳೆ ಘರ್ಷಣೆ ಕುರಿತು ಪ್ರತಿಕ್ರಿಯಿಸಿರುವ ಅವರು, ‘ನನಗೆ ಸಂತಸವಾಗಿದೆ. ಬಿಜೆಪಿ ಯಾತ್ರೆಗೆ ಅಡ್ಡಿಪಡಿಸಲಿ ಎಂದು ನಾನು ಬಯಸುತ್ತೇನೆ. ಇದು, ಹೆಚ್ಚಿನ ಪ್ರಚಾರ ನೀಡಲಿದೆ’ ಎಂದರು.

‘ಯಾತ್ರೆಗೆ ಅಡ್ಡಿಪಡಿಸುವ ಮೂಲಕ ಬಿಜೆಪಿ ನಮಗೆ ಅಂತಿಮವಾಗಿ ಸಹಾಯವನ್ನೇ ಮಾಡುತ್ತಿದೆ. ಇದನ್ನು ಹಿಂಸೆ ಎಂದು ಹೇಳುವುದಿಲ್ಲ. ರಾಜ್ಯ ಕಾಂಗ್ರೆಸ್ ಅಧ್ಯಕ್ಷರಿಗೆ ಸ್ವಲ್ಪ ಪೆಟ್ಟಾಗಿದೆ. ಅದನ್ನು ನಾವು ಎದುರಿಸುತ್ತೇವೆ. ಇದು, ಚಿಂತಿಸುವ ವಿಷಯವೇ ಅಲ್ಲ. ಒಮ್ಮೆ ಮನಸ್ಸು ಮಾಡಿದ್ದೇನೆ. ನನ್ನ ಸಿದ್ಧಾಂತಕ್ಕಾಗಿ ಹೋರಾಡುತ್ತೇನೆ ಎಂದರು.

ಇದಕ್ಕೆ ಮುನ್ನ ಗುವಾಹಟಿಯಲ್ಲಿ ಮಾತನಾಡಿದ ಅವರು, ‘ಮೇಘಾಲಯದಲ್ಲಿ ಖಾಸಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಜೊತೆಗೆ ಸಂವಾದ ನಡೆಸದಂತೆಯೂ ತಡೆಯಲಾಯಿತು’ ಎಂದು ಆರೋಪಿಸಿದ್ದಾರೆ.

‘ಈ ಸಂಬಂಧ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ನಿರ್ದೇಶನವನ್ನು ಮುಖ್ಯಮಂತ್ರಿಯವರ ಕಚೇರಿ ಮೂಲಕ ವಿಶ್ವವಿದ್ಯಾಲಯದ ಆಡಳಿತಕ್ಕೆ ರವಾನಿಸಲಾಗಿದೆ’ ಎಂದು ಆರೋಪಿಸಿದರು.

ವಿ.ವಿ ಕ್ಯಾಂಪಸ್‌ನ ಹೊರಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದ ಅವರು, ‘ರಾಹುಲ್‌ಗಾಂಧಿಗೆ ಮಾತನಾಡಲು ಅವಕಾಶ ಸಿಗುವುದಾ ಎಂಬುದು ಮುಖ್ಯವಲ್ಲ. ನೀವು ಬಯಸಿದ್ದನ್ನು ಕೇಳಲು ಅವಕಾಶ ನೀಡುತ್ತಿಲ್ಲ ಎಂಬುದು ಗಮನಿಸಬೇಕು. ಅವರು ನಿಮ್ಮನ್ನು ಗುಲಾಮರಾಗಿಸಲು ಬಯಸುತ್ತಿದ್ದಾರೆ. ಇಂಥ ಬೆಳವಣಿಗೆ ಅಸ್ಸಾಂನಲ್ಲಿ ಯಷ್ಟೇ ಅಲ್ಲ. ಎಲ್ಲ ಶಾಲೆ, ಕಾಲೇಜು, ವಿಶ್ವವಿದ್ಯಾಲಯಗಳಲ್ಲೂ ನಡೆಯುತ್ತಿದೆ’ ಎಂದರು.

‘ರಾಹುಲ್ ವಿರುದ್ಧ ಪ್ರಕರಣ ದಾಖಲಿಸಿ’

ಗುವಾಹಟಿ (ಪಿಟಿಐ): ಘರ್ಷಣೆಗೆ ಕಾರ್ಯಕರ್ತರಿಗೆ ಪ್ರಚೋದನೆ ನೀಡಿದ್ದಕ್ಕಾಗಿ ರಾಹುಲ್‌ಗಾಂಧಿ ವಿರುದ್ಧ ದೂರು ದಾಖಲಿಸಲು ಮುಖ್ಯಮಂತ್ರಿ ಹಿಮಂತ ಬಿಸ್ವ ಶರ್ಮ, ರಾಜ್ಯ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದ್ದಾರೆ.

ಯುವ ಕಾಂಗ್ರೆಸ್ ಅಧ್ಯಕ್ಷ ಬಿ.ವಿ.ಶ್ರೀನಿವಾಸ್ ಅವರು ಎಕ್ಸ್ ಜಾಲತಾಣದಲ್ಲಿ ಹಂಚಿಕೊಂಡಿದ್ದ ವಿಡಿಯೋವನ್ನೇ ಸಾಕ್ಷ್ಯವಾಗಿ ಬಳಸಲೂ ಸೂಚಿಸಿದರು. ವಿಡಿಯೊದಲ್ಲಿ ಬಿ.ವಿ.ಶ್ರೀನಿವಾಸ್, ‘ಯಾತ್ರೆ ತಡೆಯಲು ಅವಕಾಶ ಕೊಡುವುದಿಲ್ಲ. ನೀವು ಎಷ್ಟಾದರೂ ಲಾಠಿಗಳನ್ನು ಬಳಸಿ. ಈ ಯುದ್ಧ ಮುಂದುವರಿಯಲಿದೆ’ ಎಂದು ಹೇಳಿದ್ದರು.

‘ರಾಹುಲ್‌ಗಾಂಧಿ ಮತ್ತು ಕಾಂಗ್ರೆಸ್‌ನ ಹಿರಿಯ ನಾಯಕ ಜಿತೇಂದ್ರ ಸಿಂಗ್ ಅವರು, ಅಸ್ಸಾಂ ಪೊಲೀಸ್ ಸಿಬ್ಬಂದಿ ಕೊಲ್ಲುವಂತೆ ಹೇಗೆ ಪ್ರಚೋದಿಸಿದರು ಎಂಬುದು ವಿಡಿಯೊದಲ್ಲಿದೆ. ಪೊಲೀಸರು ಜನಸೇವಕರು. ರಾಜಮನೆತನಕ್ಕೆ ಸೇರಿದವರಲ್ಲ. ಅಲ್ಲದೆ, ಕಾನೂನಿನ ಬಾಹು ದೊಡ್ಡದು. ಖಂಡಿತವಾಗಿ ನಿಮ್ಮವರೆಗೂ ತಲುಪಲಿದೆ’ ಎಂದಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ರಾಜ್ಯ ಪೊಲೀಸ್ ಮಹಾನಿರ್ದೇಶಕ ಜಿ.ಪಿ. ಸಿಂಗ್, ಪ್ರಚೋದನೆ ನೀಡಿದ ನಾಯಕರು ಮತ್ತು ಘರ್ಷಣೆಯಲ್ಲಿ ತೊಡಗಿದ್ದವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ನ್ಯಾಯಾಂಗ ತನಿಖೆಗೆ ಕಾಂಗ್ರೆಸ್ ಆಗ್ರಹ

ಗುವಾಹಟಿ (ಪಿಟಿಐ): ನ್ಯಾಯಯಾತ್ರೆ ವೇಳೆ ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಭೂಪೇನ್ ಬೊರಾ ಮೇಲೆ ನಡೆದಿರುವ ಹಲ್ಲೆ ಕುರಿತು ನ್ಯಾಯಾಂಗ ತನಿಖೆಗೆ ವಿಧಾನಸಭೆ ಪ್ರತಿಪಕ್ಷದ ನಾಯಕ ದೇಬಬ್ರತಾ ಸೈಕಿಯಾ ಒತ್ತಾಯಿಸಿದ್ದಾರೆ.

ಈ ಕುರಿತು ರಾಜ್ಯಪಾಲರಿಗೆ ಮನವಿ ಸಲ್ಲಿಸಿರುವ ಅವರು, ಹಿಮಂತ ಬಿಸ್ವ ಶರ್ಮ ನೇತೃತ್ವದ ಸರ್ಕಾರವು ಶಾಂತಿಯುತ ಭಾರತ್ ಜೋಡೊ ನ್ಯಾಯಯಾತ್ರೆಗೆ ಅಡ್ಡಿ ಪಡಿಸುತ್ತಿದೆ. ನಾಯಕರ ವಿರುದ್ಧ ಕ್ರಿಮಿನಲ್ ದಾಳಿಗೆ ಉತ್ತೇಜನ ನೀಡುತ್ತಿದೆ’ ಎಂದು ಆರೋಪಿಸಿದ್ದಾರೆ.

ಇದು, ಅಸ್ಸಾಂ ಸಂಸ್ಕೃತಿಯಲ್ಲ. ನಿಮ್ಮ ಅನುಚಿತ ವರ್ತನೆ ಹಾಗೂ ನಿಯಮಗಳ ಉಲ್ಲಂಘನೆಯಿಂದಾಗಿ ವಾಹನ ದಟ್ಟಣೆ ಆಗಿದೆ
ಹಿಮಂತ ಬಿಸ್ವ ಶರ್ಮ, ಮುಖ್ಯಮಂತ್ರಿ, ಅಸ್ಸಾಂ

ನ್ಯಾಯಯಾತ್ರೆ ತಡೆಯಲು ಬಿಜೆಪಿ ಸಂಚು ನಡೆಸಿದೆ. ಈಗ ಬ್ಯಾರಿಕೇಡ್ ಮುರಿದಿದ್ದೇವೆ. ಆದರೆ, ಕಾನೂನು ಉಲ್ಲಂಘಿಸುವುದಿಲ್ಲ.
ರಾಹುಲ್‌ಗಾಂಧಿ ಕಾಂಗ್ರೆಸ್ ಮುಖಂಡ

ಕಾಂಗ್ರೆಸ್: ₹16 ಕೋಟಿ ಸಂಗ್ರಹ

ತಿಂಗಳು ಕಳೆದರೂ ವೇಗ ಪಡೆಯದ ದೇಣಿಗೆ ಸಂಗ್ರಹ ಅಭಿಯಾನ

ಪ್ರಜಾವಾಣಿ ವಾರ್ತೆ



ಅಜಯ್ ಮಾಕನ್

ನವದೆಹಲಿ: ಕಾಂಗ್ರೆಸ್‌ನ ಆನ್‌ಲೈನ್ ದೇಣಿಗೆ ಸಂಗ್ರಹ ಅಭಿಯಾನ ಜಾರಿಯಾಗಿ ತಿಂಗಳು ಕಳೆದರೂ ವೇಗ ಪಡೆದಿಲ್ಲ. ಮೂರು ಲಕ್ಷ ದಾನಿಗಳಿಂದ ಇದುವರೆಗೆ ಕೇವಲ ₹16 ಕೋಟಿ ಅಷ್ಟೇ ದೇಣಿಗೆ ಸಂಗ್ರಹವಾಗಿದೆ.

ದೇಶದಾದ್ಯಂತ ಕಳೆದ ಡಿ.28ರಿಂದ ಆರಂಭಿಸಲು ಯೋಜಿಸಿದ್ದ, ಪ್ರತಿ ಬೂತ್‌ನ ಹತ್ತು ಮನೆಗಳಿಂದ ಕನಿಷ್ಠ ತಲಾ ₹138 ದೇಣಿಗೆ ಸಂಗ್ರಹಿಸುವ ಯೋಜನೆಯನ್ನು ಪಕ್ಷವು ಗಂಭೀರವಾಗಿ ಪರಿಗಣಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಪಕ್ಷದ ವರಿಷ್ಠ ರಾಹುಲ್ ಗಾಂಧಿ ಸಹಿಯುಳ್ಳ ಟೀಶರ್ಟ್, ಟೋಪಿ ಇನ್ನಿತರೆ ವಸ್ತುಗಳನ್ನು ಮಾರಾಟ ಮಾಡಿ ದೇಣಿಗೆ ಸಂಗ್ರಹಿಸುವ ಯೋಜನೆಗೂ ಚಾಲನೆ ಸಿಕ್ಕಿಲ್ಲ ಎನ್ನಲಾಗಿದೆ.

ಎಐಸಿಸಿಯ ಪದಾಧಿಕಾರಿಗಳು ಸೇರಿದಂತೆ ರಾಜ್ಯ, ಜಿಲ್ಲಾ ಘಟಕದ ಪದಾಧಿಕಾರಿಗಳು ಕನಿಷ್ಠ ತಲಾ ₹1,380 ದೇಣಿಗೆ ನೀಡುವಂತೆ ಪಕ್ಷವು ಕೋರಿತ್ತು. ಈ ಯೋಜನೆಗಳ ಅನುಷ್ಠಾನಕ್ಕಾಗಿಯೇ ಖಜಾಂಚಿಯಾಗಿ ಅಜಯ್ ಮಾಕನ್ ಅವರನ್ನು ನೇಮಿಸಿದ್ದರೂ, ದೇಣಿಗೆ ಸಂಗ್ರಹ ಪ್ರಕ್ರಿಯೆ ಚುರುಕುಗೊಂಡಿಲ್ಲ.

‘ಪಕ್ಷದ 138 ನಾಯಕರನ್ನು ಜೈಪುರದಲ್ಲಿರುವ ತಮ್ಮ ಮನೆಗೆ ಕರೆಸಿಕೊಂಡಿದ್ದ ಸಚಿನ್ ಪೈಲಟ್, ಅವರೆಲ್ಲರಿಂದಲೂ ತಲಾ ₹1.38 ಲಕ್ಷವನ್ನು ದೇಣಿಗೆ ಕೊಡಿಸಿದ್ದಾರೆ. ದೇಣಿಗೆ ಕೊಡುವುದರಲ್ಲಿ ರಾಜಸ್ಥಾನ ಘಟಕ ಮುಂಚೂಣಿಯಲ್ಲಿದೆ’ ಎಂದು ಮಾಕನ್ ಮಂಗಳವಾರ ‘ಎಕ್ಸ್’ ಜಾಲತಾಣದಲ್ಲಿ ಉಲ್ಲೇಖಿಸಿದ್ದಾರೆ.

‘ಈ ಅಭಿಯಾನವು ನಮಗೆ ಹಲವು ಪಾಠಗಳನ್ನು ಕಲಿಸಿದೆ. ಸ್ವಚ್ಛ ರಾಜಕಾರಣದ ಮಾರ್ಗವನ್ನು ತೋರಿಸಿದೆ. ಇದು ಯಶಸ್ವಿಯಾಗಿದೆ. ರಾಜಸ್ಥಾನದ 181 ಜನರು ತಲಾ ₹1ಲಕ್ಷಕ್ಕೂ ಹೆಚ್ಚಿನ ದೇಣಿಗೆ ನೀಡಿದ್ದಾರೆ. ಹರಿಯಾಣ (73), ಪಂಜಾಬ್ (38), ಮಹಾರಾಷ್ಟ್ರ (31), ಬಿಹಾರದ 28 ಜನರು ₹1 ಲಕ್ಷಕ್ಕೂ ಹೆಚ್ಚಿನ ದೇಣಿಗೆ ನೀಡಿದ್ದರೆ, ಕರ್ನಾಟಕದಿಂದ 11 ಜನರು ಕೊಟ್ಟಿದ್ದಾರೆ’ ಎಂದು ಹೇಳಿದ್ದಾರೆ.

ಈಚೆಗೆ ನಡೆದ ಕಾಂಗ್ರೆಸ್ ಕಾರ್ಯಕಾರಿಣಿಯಲ್ಲೂ ನಿಧಾನಗತಿಯ ದೇಣಿಗೆ ಸಂಗ್ರಹದ ಬಗ್ಗೆ ಹಲವರು ರಾಹುಲ್ ಗಾಂಧಿ ಬಳಿ ಪ್ರಸ್ತಾಪಿಸಿದ್ದರು ಎಂದು ಮೂಲಗಳು ತಿಳಿಸಿವೆ.

ಕಾಂಗ್ರೆಸ್ ದೇಣಿಗೆ ಸಂಗ್ರಹಕ್ಕಾಗಿ ವೆಬ್‌ಸೈಟ್ ಆರಂಭಿಸಿದ ಮೊದಲ ಎರಡು ದಿನಗಳಲ್ಲೇ 20,400 ಬಾರಿ ಸೈಬರ್ ದಾಳಿ ನಡೆದಿತ್ತು.

ಸಂಕ್ಷಿಪ್ತ ಸುದ್ದಿ

ಗುಜರಾತ್ ಪೊಲೀಸರಿಗೆ ‘ಸುಪ್ರೀಂ’ ಛೀಮಾರಿ

ನವದೆಹಲಿ (ಪಿಟಿಐ): ಮುಸ್ಲಿಂ ಸಮುದಾಯಕ್ಕೆ ಸೇರಿದ ಐವರನ್ನು ಸಾರ್ವಜನಿಕವಾಗಿ ಥಳಿಸಿದ್ದ ಕೃತ್ಯದಲ್ಲಿ ಭಾಗಿಯಾಗಿದ್ದ ಗುಜರಾತ್ ಪೊಲೀಸರಿಗೆ ಸುಪ್ರೀಂ ಕೋರ್ಟ್ ಮಂಗಳವಾರ ಛೀಮಾರಿ ಹಾಕಿದೆ. ‘ಜನರನ್ನು ಕಂಬಕ್ಕೆ ಕಟ್ಟಿ ಹಾಕಿ ಥಳಿಸಲು ನಿಮಗೆ ಅಧಿಕಾರ ಕೊಟ್ಟವರು ಯಾರು’ ಎಂದು ಖಾರವಾಗಿ ಪ್ರಶ್ನಿಸಿದೆ.

ಇನ್‌ಸ್ಪೆಕ್ಟರ್ ಎ.ವಿ. ಪರ್ಮಾರ್, ಸಬ್‌ಇನ್‌ಸ್ಪೆಕ್ಟರ್ ಡಿ.ಬಿ.ಕುಮಾವತ್ ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್.ಗವಾಯಿ ಹಾಗೂ ಸಂದೀಪ್ ಮೆಹ್ತಾ ಅವರಿದ್ದ ಪೀಠ ನಡೆಸಿತು.

ಆರೋಪಿಗಳನ್ನು ಬಂಧಿಸುವ ಮತ್ತು ವಿಚಾರಣೆಗೆ ಒಳಪಡಿಸುವ ಕುರಿತ ಸುಪ್ರೀಂ ಕೋರ್ಟ್‌ನ ಮಾರ್ಗಸೂಚಿಗಳನ್ನು ಉಲ್ಲಂಘಿಸಿದ್ದಕ್ಕಾಗಿ ಗುಜರಾತ್ ಹೈಕೋರ್ಟ್, 2023ರ ಅಕ್ಟೋಬರ್ 19ರಂದು ಈ ನಾಲ್ವರಿಗೆ 14 ದಿನಗಳ ಜೈಲು ಶಿಕ್ಷೆ ವಿಧಿಸಿತ್ತು. ಆದೇಶವನ್ನು ಪ್ರಶ್ನಿಸಲು ಪೊಲೀಸರಿಗೆ ಅವಕಾಶ ನೀಡುವ ಉದ್ದೇಶದಿಂದ ಹೈಕೋರ್ಟ್, ತನ್ನ ಆದೇಶದ ಅನುಷ್ಠಾನಕ್ಕೆ ಮೂರು ತಿಂಗಳ ತಡೆಯಾಜ್ಞೆ ನೀಡಿತ್ತು. ಹೈಕೋರ್ಟ್ ಆದೇಶ ಪ್ರಶ್ನಿಸಿ ಪೊಲೀಸರು ಸುಪ್ರಿಂ ಕೋರ್ಟ್ ಮೊರೆ ಹೋಗಿದ್ದರು.

‘ಜನರನ್ನು ಕಂಬಕ್ಕೆ ಕಟ್ಟಿ ಅವರಿಗೆ ಥಳಿಸಲು ಕಾನೂನಿನಲ್ಲಿ ನಿಮಗೆ ಅಧಿಕಾರವಿದೆಯೇ? ಹೋಗಿ ಜೈಲು ಶಿಕ್ಷೆ ಅನುಭವಿಸಿ’ ಎಂದು ನ್ಯಾಯಮೂರ್ತಿ ಗವಾಯಿ ಅವರು ಕೋಪದಿಂದ ಹೇಳಿದರು.

ಪೊಲೀಸರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡ ನ್ಯಾಯಮೂರ್ತಿ ಮೆಹ್ತಾ, ‘ಜನರನ್ನು ಕಂಬಕ್ಕೆ ಕಟ್ಟಿ, ಸಾರ್ವಜನಿಕವಾಗಿ ಥಳಿಸಿದ್ದು ಅಲ್ಲದೆ ಅದರ ವಿಡಿಯೊ ಮಾಡಿದ್ದೀರಿ. ಈ ರೀತಿಯ ದೌರ್ಜನ್ಯ ನಡೆಸಿ ಇದೀಗ ನೀವು ನ್ಯಾಯಾಲಯ ಮಧ್ಯಪ್ರವೇಶಿಸಬೇಕೆಂದು ಬಯಸುತ್ತೀರಿ’ ಎಂದು ಕೇಳಿದರು.

ಪೊಲೀಸರ ಪರ ವಕೀಲ ಸಿದ್ಧಾರ್ಥ್ ದವೆ ಅವರ ಮನವಿ ಆಲಿಸಿದ ಪೀಠ, ಮೇಲ್ಮನವಿಯ ವಿಚಾರಣೆಗೆ ಒಪ್ಪಿಕೊಂಡಿತು.

ವಿಚಾರಣೆಗೆ ಹಾಜರಾಗಿ ವಕೀಲ ದೆಹಾದ್ರಾಯ್‌ಗೆ ಸಿಬಿಐ ಸೂಚನೆ

ನವದೆಹಲಿ (ಪಿಟಿಐ): ಟಿಎಂಸಿ ಮಾಜಿ ಸಂಸದೆ ಮಹುವಾ ಮೊಯಿತ್ರಾ ವಿರುದ್ಧದ ಭ್ರಷ್ಟಾಚಾರ ಪ್ರಕರಣದ ತನಿಖೆ ಭಾಗವಾಗಿ ಗುರುವಾರ ವಿಚಾರಣೆಗೆ ಹಾಜರಾಗುವಂತೆ ವಕೀಲ ಜೈ ಅನಂತ್ ದೆಹಾದ್ರಾಯ್ ಅವರಿಗೆ ಸಿಬಿಐ ಸೂಚಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೆಹಾದ್ರಾಯ್ ಅವರು ಮಹುವಾ ಅವರ ನಿಕಟವರ್ತಿಯಾಗಿದ್ದರು. ಬಳಿಕ ಅವರು ಮಹುವಾ ವಿರುದ್ಧ ಗಂಭೀರ ಭ್ರಷ್ಟಾಚಾರ ಆರೋಪ ಮಾಡಿದ್ದಾರೆ ಎಂದು ಅವರು ಹೇಳಿದ್ದಾರೆ.

ಮಹುವಾ ಅವರು ಸಂಸತ್‌ನಲ್ಲಿ ಪ್ರಶ್ನೆ ಕೇಳಲು ಹಣ ಹಾಗೂ ಉಡುಗೊರೆಗಳನ್ನು ಪಡೆದಿದ್ದಾರೆ ಎಂದು ಆರೋಪಿಸಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಅವರು ಲೋಕಪಾಲದಲ್ಲಿ ದೂರು ದಾಖಲಿಸಿದ್ದರು. ಲೋಕಪಾಲರ ಶಿಫಾರಸಿನ ಅನ್ವಯ ಸಿಬಿಐ ಪ್ರಕರಣದ ತನಿಖೆ ನಡೆಸುತ್ತಿದೆ.

ಸಂಸತ್ ಭದ್ರತೆ: ಸಿಐಎಸ್‌ಎಫ್ ತಂಡದ ನಿಯೋಜನೆ

ನವದೆಹಲಿ (ಪಿಟಿಐ): ಕೇಂದ್ರೀಯ ಕೈಗಾರಿಕಾ ಮೀಸಲು ಪಡೆಯ (ಸಿಐಎಸ್‌ಎಫ್) 140 ಸಿಬ್ಬಂದಿಯನ್ನು ಸಂಸತ್ತಿನ ಭದ್ರತಾ ವ್ಯವಸ್ಥೆಯ ಭಾಗವಾಗಿ ಸಂಸತ್ ಆವರಣದಲ್ಲಿ ನಿಯೋಜಿಸಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಜನವರಿ 31ರಿಂದ ಕೇಂದ್ರ ಸರ್ಕಾರದ ಬಜೆಟ್ ಅಧಿವೇಶನ ಆರಂಭವಾಗಲಿರುವ ಹಿನ್ನಲೆಯಲ್ಲಿ ಈ ವ್ಯವಸ್ಥೆ ಕಲ್ಪಿಸಲಾಗಿದೆ.

ಸಿಐಎಸ್‌ಎಫ್ ಸಿಬ್ಬಂದಿ ಸೋಮವಾರದಿಂದಲೇ ಕರ್ತವ್ಯವಹಿಸಿಕೊಂಡಿದ್ದಾರೆ. ಅವರು ಸಂಸತ್ ಆವರಣದೊಳಗೆ ಪ್ರವೇಶಿಸುವ ಸಂದರ್ಶಕರು ಮತ್ತು ಅವರ ಬಳಿಯಿರುವ ಚೀಲಗಳ ಪರಿಶೀಲನೆ ನಡೆಸುವರು ಹಾಗೂ ಕಟ್ಟಡಕ್ಕೆ ಅಗ್ನಿ ಸುರಕ್ಷತಾ ವ್ಯವಸ್ಥೆ ಕಲ್ಪಿಸುವರು ಎಂದು ಮೂಲಗಳು ತಿಳಿಸಿವೆ. ಇಬ್ಬರು ಯುವಕರು ಕಳೆದ ವರ್ಷ ಡಿಸೆಂಬರ್ 13ರಂದು ಲೋಕಸಭೆಯಲ್ಲಿ ಸ್ಮೋಕ್ ಕ್ಯಾನ್ ಬಳಸಿ ದಾಂದಲೆ ಎಬ್ಬಿಸಿದ್ದರು. ಈ ಪ್ರಕರಣವು ಸಂಸತ್ತಿಗೆ ಒದಗಿಸಲಾಗಿರುವ ಭದ್ರತೆ ಕುರಿತು ಪ್ರಶ್ನೆಗಳು ಮೂಡುವಂತೆ ಮಾಡಿತ್ತು. ಈ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವಾಲಯವು ಸಂಸತ್ ಭದ್ರತೆಗಾಗಿ ಸಿಐಎಸ್‌ಎಫ್‌ನ 140 ಮಂದಿ ಸಿಬ್ಬಂದಿಯ ವ್ಯವಸ್ಥೆ ಮಾಡಿದೆ.

ತಂಡದಲ್ಲಿ 36 ಮಂದಿ ಅಗ್ನಿವೀರರಿದ್ದಾರೆ. ಸೇನೆಯ ಸಹಾಯಕ ಕಮಾಂಡ್ ಶ್ರೇಣಿಯ ಅಧಿಕಾರಿಯು ಈ ತಂಡವನ್ನು ಮುನ್ನಡೆಸಲಿದ್ದಾರೆ.

ಫೆ. 1ರಿಂದ ಜೈಪುರ ಸಾಹಿತ್ಯ ಉತ್ಸವ

ಜೈಪುರ (ಪಿಟಿಐ): ಪ್ರತಿಷ್ಠಿತ ಜೈಪುರ ಸಾಹಿತ್ಯ ಉತ್ಸವದ (ಜೆಎಲ್‌ಎಫ್) 17ನೇ ಆವೃತಿಯು ಫೆಬ್ರುವರಿ 1ರಿಂದ ಆರಂಭವಾಗಲಿದ್ದು, ದೇಶ, ವಿದೇಶಗಳ ಸುಮಾರು 550 ಲೇಖಕರು ಮತ್ತು ಕಲಾವಿದರು ಇದರಲ್ಲಿ ಪಾಲ್ಗೊಳ್ಳಲಿದ್ದಾರೆ.

ಐದು ದಿನಗಳ ಸಾಹಿತ್ಯ ಉತ್ಸವ ಇದಾಗಿದ್ದು, ಈ ಬಾರಿಯ ವಸ್ತುವಿಷಯ ‘ಸ್ಟೋರೀಸ್ ಯುನೈಟ್ ಅಸ್’ (ಕಥೆಗಳು ನಮ್ಮನ್ನು ಒಗ್ಗೂಡಿಸುತ್ತವೆ) ಎಂಬುದಾಗಿದೆ. ಸಾಹಿತ್ಯಕ್ಕಿರುವ ಪರಿವರ್ತನಾ ಶಕ್ತಿ, ಸಾಹಿತ್ಯವು ಹೇಗೆ ಸಮಾಜವನ್ನು ಪ್ರತಿಬಿಂಬಿಸುತ್ತದೆ ಮತ್ತು ಜನರನ್ನು ಹೇಗೆ ಒಗ್ಗೂಡಿಸುತ್ತದೆ ಎಂಬ ಅಂಶಗಳನ್ನು ಅನ್ವೇಷಿಸುವ ಗುರಿಯನ್ನು ಈ ಬಾರಿಯ ಜೆಎಲ್‌ಎಫ್ ಹೊಂದಿದೆ.

ಅಸ್ಸಾಂ: 44 ವರ್ಷದ ನಂತರ ‘ಉಲ್ಫಾ’ ವಿಸರ್ಜನೆ

ಗುವಾಹಟಿ: ಅಸ್ಸಾಂನಲ್ಲಿ 44 ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿದ್ದ ಬಂಡುಕೋರರ ಸಂಘಟನೆ ‘ಉಲ್ಫಾ’ ಮಂಗಳವಾರ ಅಧಿಕೃತವಾಗಿ ವಿಸರ್ಜನೆಗೊಂಡಿದೆ. ಉಲ್ಫಾ ಮುಖಂಡರು ಈಚೆಗೆ ಸರ್ಕಾರದೊಂದಿಗೆ ಒಪ್ಪಂದಕ್ಕೆ ಸಹಿ ಹಾಕಿದ್ದರು.

‘ಇಂದು ನಮಗೆ ಭಾವನಾತ್ಮಕ ಮತ್ತು ನೋವಿನ ದಿನ. 1979ರಲ್ಲಿ ನಿರ್ದಿಷ್ಟ ಉದ್ದೇಶದೊಂದಿಗೆ ಸ್ಥಾಪಿಸಿದ್ದ ಸಂಘಟನೆಯನ್ನು ಇಂದು ಉದ್ದೇಶ ಸಾಧನೆಯಾಗದೇ ವಿಸರ್ಜಿಸಲಾಗಿದೆ. ಶಸ್ತ್ರಸಜ್ಜಿತ ಹೋರಾಟದಲ್ಲಿ ನಾವು ಸೋತಿದ್ದೇವೆ’ ಎಂದು ಸಂಘಟನೆಯ ಸ್ಥಾಪಕರಲ್ಲಿ ಒಬ್ಬರಾದ ಅನೂಪ್ ಚೆಟಿಯಾ ಅವರು ದೂರವಾಣಿ ಮೂಲಕ ಪ್ರತಿಕ್ರಿಯಿಸಿದರು.

ಲಂಚ: ರೈಲ್ವೆ ಅಧಿಕಾರಿಗಳ ವಿರುದ್ಧ ಪ್ರಕರಣ

ನವದೆಹಲಿ (ಪಿಟಿಐ): ಈಶಾನ್ಯ ಫ್ರಾಂಟಿಯರ್ ರೈಲ್ವೆ ವಲಯದಲ್ಲಿ 2016–23ರ ಅವಧಿಯಲ್ಲಿ ನಡೆದಿದೆ ಎನ್ನಲಾದ ₹60 ಕೋಟಿ ಲಂಚ ಪ್ರಕರಣಕ್ಕೆ ಸಂಬಂಧಿಸಿದಂತೆ ರೈಲ್ವೆಯ ಏಳು ಅಧಿಕಾರಿಗಳು ಹಾಗೂ ಭಾರತೀಯ ಇನ್ಫ್ರಾ ಪ್ರಾಜೆಕ್ಟ್ಸ್ ಲಿಮಿಟೆಡ್ (ಬಿಐಪಿಎಲ್) ಎನ್ನುವ ಖಾಸಗಿ ಕಂಪನಿ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲೇ ಬೃಹತ್ ಎನ್ನಲಾಗುವ ಈ ಹಗರಣದ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಸಿಬಿಐ, ಅಸ್ಸಾಂ, ತ್ರಿಪುರಾ, ಮಣಿಪುರ ಮತ್ತು ದೆಹಲಿಯಲ್ಲಿ ಆರೋಪಿಗಳು, ಕಂಪನಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಿತು.

ಈ ವೇಳೆ ಹಗರಣದ ಪ್ರಮುಖ ಸಾಕ್ಷ್ಯಗಳು ಹಾಗೂ ಆರೋಪಿಗಳ ಆಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಮೇ 2016 ಮತ್ತು ಜುಲೈ 2023ರ ನಡುವೆ ರೈಲ್ವೆ ಅಧಿಕಾರಿಗಳು ಬಿಐಪಿಎಲ್‌ನಿಂದ ನಗದಿನ ಮೂಲಕ ಹಾಗೂ ತಮ್ಮ ಸಂಬಂಧಿಕರ ಬ್ಯಾಂಕ್ ಖಾತೆಗಳ ಮೂಲಕ ಹಣ ಪಡೆದಿರುವುದು ಬಹಿರಂಗಗೊಂಡಿತ್ತು ಎಂದು ಅಧಿಕಾರಿಗಳು ಹೇಳಿದ್ದಾರೆ. ‘ಬಿಲ್‌ಗಳನ್ನು ಪಾವತಿಸಲು‘ ಅಧಿಕಾರಿಗಳು ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ.





❦ ಸುಭಾಷಿತ ❦

ನಿಮಗೆ ಖುಷಿಯಾಗದ ಕೆಲಸವನ್ನು ಮಾಡಬೇಡಿ. ಏನು ಮಾಡುತ್ತೀರೋ ಅದನ್ನು ನೀವು ಪ್ರೀತಿಸಲೇಬೇಕು.

-ರಿಚರ್ಡ್ ಬ್ರಾನ್ಸನ್

ಪ್ರತಿಜೈವಿಕಗಳ ಅತಿಯಾದ ಬಳಕೆ ಮತ್ತೊಂದು ಆರೋಗ್ಯ ಸಮಸ್ಯೆಯ ಭೀತಿ

ಪ್ರತಿಜೈವಿಕಗಳ (ಆ್ಯಂಟಿಬಯಾಟಿಕ್ಸ್) ಬಳಕೆಯ ವಿಚಾರವಾಗಿ ಆರೋಗ್ಯಸೇವೆಗಳ ಮಹಾನಿರ್ದೇಶನಾಲಯವು (ಡಿಜಿಎಚ್‌ಎಸ್) ವೈದ್ಯರು ಮತ್ತು ಔಷಧಾಲಯಗಳ ನಿರ್ವಾಹಕರಿಗೆ ನೀಡಿರುವ ಮಾರ್ಗಸೂಚಿಯು ದೇಶದಲ್ಲಿ ಅವುಗಳ ಬಳಕೆಯನ್ನು ನಿಯಂತ್ರಿಸಲು ನೆರವಾಗಬಹುದು ಎಂಬ ಆಶಾಭಾವ ಮೂಡಿಸುವಂತಿದೆ. ಪ್ರತಿಜೈವಿಕಗಳು ಸೇರಿದಂತೆ 'ಸೂಕ್ಷ್ಮಾಣು ನಿರೋಧಕ' ಔಷಧಗಳನ್ನು ತೆಗೆದುಕೊಳ್ಳುವಂತೆ ಸೂಚಿಸುವಾಗ ವೈದ್ಯರು ಸಂಬಂಧಪಟ್ಟ 'ಲಕ್ಷಣಗಳನ್ನು, ಕಾರಣಗಳನ್ನು ಹಾಗೂ ಸಮರ್ಥನೆಗಳನ್ನು' ಉಲ್ಲೇಖಿಸಬೇಕು ಎಂದು ಡಿಜಿಎಚ್‌ಎಸ್ ಹೇಳಿದೆ. ವೈದ್ಯರ ಶಿಫಾರಸು ಇದ್ದಾಗ ಮಾತ್ರ ಪ್ರತಿಜೈವಿಕಗಳನ್ನು ಮಾರಾಟ ಮಾಡಬೇಕು ಎಂದು ಕೂಡ ಅದು ಔಷಧಾಲಯ ನಿರ್ವಾಹಕರಿಗೆ ಸೂಚನೆ ನೀಡಿದೆ. ಮಾರ್ಗಸೂಚಿಯಲ್ಲಿ ಇರುವ ಸೂಕ್ಷ್ಮಾಣು ಔಷಧಗಳ ಪಟ್ಟಿಯಲ್ಲಿ ಪ್ರತಿಜೈವಿಕಗಳು, ವೈರಾಣು ನಿರೋಧಕ ಔಷಧಗಳು, ಶಿಲೀಂಧ್ರ ನಿರೋಧಕಗಳು ಸೇರಿದಂತೆ ಕೆಲವು ವರ್ಗಗಳಿಗೆ ಸೇರಿದ ಔಷಧಗಳು ಇವೆ. ಔಷಧ ಮತ್ತು ಸೌಂದರ್ಯವರ್ಧಕಗಳ ನಿಯಮ– 1945, ಪ್ರತಿಜೈವಿಕಗಳನ್ನು ಕೂಡ ಒಳಗೊಂಡಿದೆ. ನೋಂದಾಯಿತ ವೈದ್ಯರ ಶಿಫಾರಸು ಇಲ್ಲದೆ ಇವುಗಳನ್ನು ಮಾರಾಟ ಮಾಡುವಂತೆ ಇಲ್ಲ ಎಂದು ನಿಯಮ ಹೇಳುತ್ತದೆ. ಆದರೆ, ಈ ನಿಯಮಗಳನ್ನು ಬಿಗಿಯಾಗಿ ಅನುಷ್ಠಾನಕ್ಕೆ ತಂದಿಲ್ಲ. ನಿಯಮಗಳ ಬಗ್ಗೆ ಜನರಲ್ಲಿ ಹೆಚ್ಚಿನ ಅರಿವು ಕೂಡ ಇಲ್ಲ. ಇದರಿಂದಾಗಿ, ಪ್ರತಿಜೈವಿಕಗಳ ಅನಿಯಂತ್ರಿತ ಬಳಕೆಯ ಅಪಾಯವು ಹೆಚ್ಚಾಗಿದೆ. ಈ ಔಷಧಗಳನ್ನು ಯಾವ ವೈದ್ಯರ ಶಿಫಾರಸು ಕೂಡ ಇಲ್ಲದೆ, ಔಷಧಾಲಯಗಳಲ್ಲಿ ಹಾಗೇ ಮಾರಾಟ ಮಾಡುವುದೂ ಇದೆ. ಈಗ ಮಹಾನಿರ್ದೇಶನಾಲಯವು ಹೊರಡಿಸಿರುವ ಮಾರ್ಗಸೂಚಿಯು ನೆನಪೋಲೆಯಂತೆ ಇದೆ. ಇಂಥವನ್ನು ಹಿಂದೆ ಕೂಡ ಹೊರಡಿಸಲಾಗಿತ್ತು.



ಎಲ್ಲ ಬಗೆಯ ಔಷಧಗಳ ಅನಗತ್ಯ ಬಳಕೆಯಿಂದ ಆಗುವ ಅಪಾಯಗಳ ಬಗ್ಗೆ ಅರಿವು ಮೂಡಿಸುವ ಕೆಲಸ ಆಗಬೇಕು

ಭಾರತದಲ್ಲಿ ಹಾಗೂ ವಿಶ್ವದ ಇತರೆಡೆಗಳಲ್ಲಿ ರೋಗಕಾರಕಗಳು ಪ್ರತಿಜೈವಿಕಗಳಿಗೆ ನಿರೋಧಕ ಶಕ್ತಿಯನ್ನು ಬೆಳೆಸಿಕೊಂಡಿರುವುದು ಬಹಳ ದೊಡ್ಡ ಆರೋಗ್ಯ ಸಮಸ್ಯೆಯಾಗಿ ಪರಿಣಮಿಸಿದೆ. ಪ್ರತಿಜೈವಿಕಗಳನ್ನು ಅತಿಯಾಗಿ ಹಾಗೂ ವಿವೇಚನೆ ಇಲ್ಲದೆ ಬಳಸಿದರೆ, ರೋಗಕಾರಕಗಳು ಅವುಗಳಿಗೆ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತವೆ. ಕೆಲವು ಸಂದರ್ಭಗಳಲ್ಲಿ ಕಾಯಿಲೆಯು ತ್ವರಿತವಾಗಿ ಗುಣವಾಗಲಿ ಎಂಬ ಉದ್ದೇಶದಿಂದ ವೈದ್ಯರು ಪ್ರತಿಜೈವಿಕಗಳ ಬಳಕೆಗೆ ಶಿಫಾರಸು ಮಾಡುವುದಿದೆ. ಅಲ್ಲದೆ, ರೋಗಿಗಳು ಕೂಡ ಪ್ರತಿಜೈವಿಕ ನೀಡುವಂತೆ ವೈದ್ಯರಲ್ಲಿ ಕೇಳುವುದಿದೆ. ಬಳಕೆಯಲ್ಲಿ ಇರುವ ಪ್ರತಿಜೈವಿಕಗಳ ಸಂಖ್ಯೆ ಸೀಮಿತ. ಇವು ತಮ್ಮ ಪರಿಣಾಮವನ್ನು ಕಳೆದುಕೊಂಡಲ್ಲಿ, ಹಲವು ಬಗೆಯ ಕಾಯಿಲೆಗಳಿಗೆ ಮದ್ದು ಇರುವುದೇ ಇಲ್ಲ. ಅಂದರೆ, ವಿಶ್ವವು ಪ್ರತಿಜೈವಿಕಗಳನ್ನು ಅಭಿವೃದ್ಧಿಪಡಿಸುವುದಕ್ಕೂ ಮೊದಲು ಇದ್ದ ಸ್ಥಿತಿಗೆ ಮರಳಬಹುದು ಎಂಬ ಭೀತಿ ಒಂದೆಡೆ ಇದೆ. ಈ ವಿಚಾರವಾಗಿ ವಿಶ್ವ ಆರೋಗ್ಯ ಸಂಸ್ಥೆಯು (ಡಬ್ಲ್ಯುಎಚ್‌ಒ) ಹಲವು ವರ್ಷಗಳಿಂದ ಕಳವಳ ವ್ಯಕ್ತಪಡಿಸುತ್ತಾ ಬಂದಿದೆ. ಅಷ್ಟೇ ಅಲ್ಲ, ಡಬ್ಲ್ಯುಎಚ್‌ಒ ಕಾಲಕಾಲಕ್ಕೆ ಈ ವಿಚಾರವಾಗಿ ಸಲಹೆಗಳನ್ನು ಕೂಡ ನೀಡುತ್ತಾ ಬಂದಿದೆ. ಯಾವ ರೋಗಕಾರಕಗಳಿಗೆ ಪ್ರತಿಜೈವಿಕಗಳನ್ನು ತ್ವರಿತವಾಗಿ ಅಭಿವೃದ್ಧಿಪಡಿಸಬೇಕಿದೆ ಎಂಬ ಪಟ್ಟಿಯನ್ನು ಕೂಡ ಅದು ಕಾಲಕಾಲಕ್ಕೆ ಪ್ರಕಟಿಸುತ್ತಿದೆ. ಹೊಸ ಪ್ರತಿಜೈವಿಕಗಳ ಸಂಶೋಧನೆ ಮತ್ತು ಅಭಿವೃದ್ಧಿಗೆ ಉತ್ತೇಜನ ಕೊಡುವ ಉದ್ದೇಶವನ್ನು ಅದು ಹೊಂದಿದೆ. 2019ರಲ್ಲಿ ವಿಶ್ವದಲ್ಲಿ ಸಂಭವಿಸಿದ 12.7 ಲಕ್ಷ ಜನರ ಸಾವಿಗೆ ರೋಗಕಾರಕಗಳು ಬೆಳೆಸಿಕೊಂಡ ನಿರೋಧಕ ಶಕ್ತಿಯೇ ನೇರ ಕಾರಣ ಎಂಬ ಅಂದಾಜು ಇದೆ.

ರೋಗಕಾರಕಗಳು ಪ್ರತಿಜೈವಿಕಗಳಿಗೆ ನಿರೋಧಕ ಶಕ್ತಿಯನ್ನು ಬೆಳೆಸಿಕೊಂಡರೆ, ರೋಗಶಮನವು ನಿಧಾನವಾಗುತ್ತದೆ ಹಾಗೂ ರೋಗಿಯು ಸಾಯುವ ಸಾಧ್ಯತೆ ಹೆಚ್ಚಿರುತ್ತದೆ ಎಂದು ಮಹಾನಿರ್ದೇಶನಾಲಯವು ಎಚ್ಚರಿಸಿದೆ. 2016ರಲ್ಲಿ ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು 'ಕೆಂಪು ರೇಖೆ' ಅಭಿಯಾನವನ್ನು ಆರಂಭಿಸಿತ್ತು, ಲಂಬವಾಗಿ ಕೆಂಪು ರೇಖೆ ಇರುವ ಔಷಧಗಳನ್ನು (ಇದರಲ್ಲಿ ಪ್ರತಿಜೈವಿಕಗಳೂ ಸೇರಿವೆ) ವೈದ್ಯರ ಶಿಫಾರಸು ಇಲ್ಲದೆ ಬಳಸಬಾರದು ಎಂದು ಜನರಲ್ಲಿ ಮನವಿ ಮಾಡಿತ್ತು. ಮಾರ್ಗಸೂಚಿಗಳನ್ನು ಹಾಗೂ ನಿರ್ದೇಶನಗಳನ್ನು ಹೊರಡಿಸುವುದಷ್ಟೇ ಅಲ್ಲದೆ, ಅವುಗಳ ಅನುಷ್ಠಾನವು ಸರಿಯಾಗಿ ಆಗುತ್ತಿದೆ ಎಂಬುದನ್ನು ಕೂಡ ಆರೋಗ್ಯ ಸಚಿವಾಲಯದ ಅಧಿಕಾರಿಗಳು ಖಾತರಿಪಡಿಸಿಕೊಳ್ಳಬೇಕು. ಮಾರ್ಗಸೂಚಿಗಳ ಪಾಲನೆ ಸರಿಯಾಗಿ ಆಗುತ್ತಿದೆಯೇ ಎಂಬುದನ್ನು ಅಧಿಕಾರಿಗಳು ಪರಿಶೀಲಿಸುತ್ತಿದ್ದಾರೆಯೇ, ನಿಯಮ ಉಲ್ಲಂಘಿಸುವವರಿಗೆ ದಂಡ ವಿಧಿಸಲಾಗುತ್ತಿದೆಯೇ ಎಂಬ ಬಗ್ಗೆ ಮಾಹಿತಿ ಇಲ್ಲ. ಪ್ರತಿಜೈವಿಕಗಳ ಅತಿಯಾದ ಬಳಕೆಯ ಅಪಾಯಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದ ಅಭಿಯಾನಗಳು ವ್ಯಾಪಕವಾಗಿ ನಡೆಯಬೇಕು. ಅಷ್ಟೇ ಅಲ್ಲ, ಎಲ್ಲ ಬಗೆಯ ಔಷಧಗಳ ಅನಗತ್ಯ ಬಳಕೆಯಿಂದ ಆಗುವ ಅಪಾಯಗಳ ಬಗ್ಗೆಯೂ ಅರಿವು ಮೂಡಿಸುವ ಕೆಲಸ ಆಗಬೇಕು. ದೇಶದ ಸಾರ್ವಜನಿಕ ಆರೋಗ್ಯ ಸೇವಾ ವಲಯವು ಈಗಾಗಲೇ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಪ್ರತಿಜೈವಿಕಗಳಿಗೆ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುವ ಸಮಸ್ಯೆಯನ್ನು ಹತ್ತಿಕ್ಕದೇ ಇದ್ದಲ್ಲಿ, ಈಗಾಗಲೇ ಇರುವ ಸಮಸ್ಯೆಗಳ ಪಟ್ಟಿಯಲ್ಲಿ ಇದು ಇನ್ನೊಂದಾಗಿ, ನಿಭಾಯಿಸಲು ಅಸಾಧ್ಯವಾಗುವ ಮಟ್ಟವನ್ನು ತಲುಪಿಬಿಡಬಹುದು.

ದಿನದ ಟ್ವೀಟ್

ವಿವೇಚನೆ ಇರಲಿ



ಶರಣಾಗತಿಯ ಸ್ಥಿತಿಯಲ್ಲಿ ರಾಮ ಎಂದು ಕರೆಯುವುದು ಮತ್ತು ಪ್ರತೀಕಾರದ ತೃಪ್ತಿಯಿಂದ ಅವನ ಹೆಸರನ್ನು ಕೂಗುವುದರ ನಡುವೆ ಇರುವ ವ್ಯತ್ಯಾಸವನ್ನು ವಿವೇಚಿಸಿ ಅರಿಯುವ ಸಾಮರ್ಥ್ಯವನ್ನು ನಾವು ಕಳೆದುಕೊಂಡಿದ್ದೇವೆ.

ಟಿ.ಎಂ.ಕೃಷ್ಣ, ಗಾಯಕ

ಕಿಡಿನುಡಿ



ಕರ್ನಾಟಕದಲ್ಲಿ ಲಂಚ ಪಡೆಯುತ್ತಿದ್ದಾಗಲೇ ಬೆಸ್ಕಾಂನ ಮತ್ತೊಬ್ಬ ಉದ್ಯೋಗಿಯನ್ನು ಹಿಡಿಯಲಾಗಿದೆ. ಕರ್ನಾಟಕದಲ್ಲಿ ಭ್ರಷ್ಟಾಚಾರದ ಹಾವಳಿ ಯಾಕೆ ಈ ಪರಿ ಇದೆ ಎಂದು ಅಚ್ಚರಿಯಾಗುತ್ತದೆ. ಸರ್ಕಾರದ ವ್ಯಾಪ್ತಿಯಲ್ಲಿರುವ ಬಿಬಿಎಂಪಿ, ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂ, ಕಂದಾಯ ಇಲಾಖೆಯಂತಹ ಎಲ್ಲೆಡೆ ಇದು ಕಂಡುಬರುತ್ತದೆ. ಲಂಚ ತೆಗೆದುಕೊಳ್ಳುವುದರಲ್ಲಿ ಎಲ್ಲ ನಾಯಕರೂ ಸಿದ್ಧಹಸ್ತರು. ಆದರೆ, ಇಂತಹ ಬೆಳವಣಿಗೆಗಳಿಗೆ ಸಂಬಂಧಿಸಿದಂತೆ ಸಿಬ್ಬಂದಿಯ ಅಮಾನತು ಹೊರತುಪಡಿಸಿದರೆ ಇನ್ಯಾವುದೇ ಕ್ರಮ ಜರುಗುವುದಿಲ್ಲ.

ಸಹನಾ

25 ವರ್ಷಗಳ ಹಿಂದೆ

ಭಾನುವಾರ, 24-1-1999

- **ಒರಿಸ್ಸಾ: ಕ್ರೈಸ್ತ ಧರ್ಮ ಪ್ರಚಾರಕ ಇಬ್ಬರು ಮಕ್ಕಳ ಸಜೀವ ದಹನ**

ಮನೋಹರಪುರ (ಒರಿಸ್ಸಾ), ಜ. 23 (ಪಿಟಿಐ)– ಒರಿಸ್ಸಾದ ಕೇವಂಜಾರ್ ಜಿಲ್ಲೆಯ ಬುಡಕಟ್ಟು ಹಳ್ಳಿಯಾದ ಇಲ್ಲಿ ನಿನ್ನೆ ಮಧ್ಯರಾತ್ರಿ ನಂತರ ಆಸ್ಟ್ರೇಲಿಯಾದ ಒಬ್ಬ ಕ್ರೈಸ್ತ ಧರ್ಮ ಪ್ರಚಾರಕ ಮತ್ತು ಅವರ ಇಬ್ಬರು ಮಕ್ಕಳನ್ನು ಬಜರಂಗದಳ ಕಾರ್ಯಕರ್ತರು ಜೀವಂತವಾಗಿ ಸುಟ್ಟುಹಾಕಿದ ಆಘಾತಕಾರಿ ಘಟನೆ ನಡೆದಿದೆ.

ಈ ಹಳ್ಳಿಯಲ್ಲಿ ಜನರನ್ನು ಕ್ರೈಸ್ತ ಧರ್ಮಕ್ಕೆ ಮತಾಂತರಗೊಳಿಸಲಾಗುತ್ತಿದೆ ಎಂದು ಆಪಾದಿಸಿ ಈ ಕೃತ್ಯ ಎಸಗಲಾಗಿದೆ. ಬಿಲ್ಲು ಮತ್ತು ಬಾಣಗಳನ್ನು ಹಿಡಿದಿದ್ದ ಕಾರ್ಯಕರ್ತರು ಜೀಪಿನೊಳಗೆ ನಿದ್ರಿಸುತ್ತಿದ್ದ 58 ವರ್ಷ ವಯಸ್ಸಿನ ಗ್ರಹಾಂ ಸ್ಟಿವರ್ಟ್ ಸ್ಟೇನ್ಸ್ ಮತ್ತು ಅವರ ಇಬ್ಬರು ಪುತ್ರರಾದ ಫಿಲಿಪ್ಸ್ (9) ಮತ್ತು ತಿಮೋಥಿ (7) ಅವರನ್ನು ಜೀವಂತವಾಗಿ ದಹಿಸಿದರು ಎಂದು ಪೊಲೀಸರು ತಿಳಿಸಿದ್ದಾರೆ.

- **ರಾಜೀನಾಮೆ ಕೊಟ್ಟಿದ್ದು ನಿಜ: ಸಚಿವ**

ಬೆಂಗಳೂರು, ಜ. 23– ಗ್ರಾಮ ಪಂಚಾಯ್ತಿಗಳ ಚುನಾವಣೆ ಮುಂದೂಡಿದುದನ್ನು ವಿರೋಧಿಸಿ ತಾವು ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿದ್ದು ನಿಜವೆಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಎಂ.ಪಿ. ಪ್ರಕಾಶ್ ಇಂದು ಇಲ್ಲಿ ಹೇಳಿದರು.

ಇತ್ತೀಚೆಗೆ ನಡೆದ ಸಚಿವ ಸಂಪುಟದ ಸಭೆಯಲ್ಲಿ, ಚುನಾವಣೆಯನ್ನು ಮುಂದೂಡುವ ಬಗ್ಗೆ ಪ್ರಸ್ತಾಪ ಬಂದಾಗ ತಾವು ಅದನ್ನು ಪ್ರಬಲವಾಗಿ ವಿರೋಧಿಸಿದುದಾಗಿ ಪತ್ರಕರ್ತರಿಗೆ ತಿಳಿಸಿದರು.

50 ವರ್ಷಗಳ ಹಿಂದೆ

ಗುರುವಾರ, 24-1-1974

- **ದೀಕ್ಷಿತ್ ಆರೋಪ 'ರಾಜಕೀಯಪ್ರೇರಿತ' ಎಂದ ಅಡ್ವಾಣಿ: ನ್ಯಾಯಾಂಗ ತನಿಖೆಗೆ ಆಗ್ರಹ**

ಅಹಮದಾಬಾದ್, ಜ. 23– ಗುಜರಾತ್ ಗಲಭೆಗಳಿಗೆ ತಮ್ಮ ಪಕ್ಷದ ಕುಮ್ಮಕ್ಕೇ ಕಾರಣ ಎಂಬ ಕೇಂದ್ರ ಗೃಹ ಸಚಿವ ಉಮಾಶಂಕರ್ ದೀಕ್ಷಿತರ ಆರೋಪವನ್ನು ಜನಸಂಘದ ಅಧ್ಯಕ್ಷ ಎಲ್.ಕೆ. ಅಡ್ವಾಣಿ ಅವರು ಇಂದು ಸ್ಪಷ್ಟವಾಗಿ ನಿರಾಕರಿಸಿ, ಕಳೆದೆರಡು ವಾರಗಳಲ್ಲಿ ನಡೆದ 'ಎಲ್ಲ ಘಟನೆಗಳ' ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಆಗ್ರಹಪಡಿಸಿದರು.

'ಜನತೆಯಲ್ಲಿ ಕುದಿಯುತ್ತಿರುವ ತಳಮಳವೇ' ಈಗಿನ ಹಿಂಸಾಕಾಂಡಕ್ಕೆ ನೇರ ಕಾರಣವೆಂಬುದನ್ನು ತನಿಖೆ ಸ್ಪಷ್ಟಪಡಿಸುತ್ತದೆಂಬ ಭರವಸೆ ತಮಗಿದೆಯೆಂದು ಅವರು ನುಡಿದರು.

- **ಯಥಾಸ್ಥಿತಿಯಿಂದ ರಾಜ್ಯಕ್ಕೆ ಸಮಸ್ಯೆ ಇಲ್ಲ; ಅರಸು ಸ್ಪಷ್ಟನೆ**

ಬೆಂಗಳೂರು, ಜ. 23– ಕರ್ನಾಟಕ ಹಾಗೂ ಮಹಾರಾಷ್ಟ್ರ ಗಡಿಗೆ ಸಂಬಂಧಿಸಿದಂತೆ ಯಥಾಸ್ಥಿತಿ ಮುಂದುವರಿದರೆ ಕರ್ನಾಟಕಕ್ಕೆ ಯಾವ ಸಮಸ್ಯೆಯೂ ಇಲ್ಲ.

ಈ ಅಂಶವನ್ನು ಮುಖ್ಯಮಂತ್ರಿ ಅರಸು, ಕೇಂದ್ರ ಗೃಹ ಸಚಿವ ಉಮಾಶಂಕರ್ ದೀಕ್ಷಿತ್ ಅವರಿಗೆ ಮನವರಿಕೆ ಮಾಡಿಕೊಟ್ಟು ನಗರಕ್ಕೆ ಹಿಂದಿರುಗಿದ್ದಾರೆ.

ದಸಂಸ: ಐದು ದಶಕಗಳ ಹಾದಿಯ ಆತ್ಮವಿಮರ್ಶೆ, ಬಣಗಳ ಒಗ್ಗೂಡುವಿಕೆಗೆ ಸಕಾಲ

'ಹೋರಾಟದ ಹಣತೆ'ಗೆ 50



ವಿಶ್ಲೇಷಣೆ

ಗುರುಪ್ರಸಾದ್ ಕಂಟಲಗೆರೆ

ಕರ್ನಾಟಕ ದಲಿತ ಸಂಘರ್ಷ ಸಮಿತಿಗೆ ಇಂದಿಗೆ (ಜ. 24) ಐವತ್ತು ವರ್ಷ ತುಂಬಿದೆ. ಸಮಾಜವಾದಿಗಳು, ಸಮತಾವಾದಿಗಳು, ಗಾಂಧಿವಾದಿಗಳೊಳಗೆ ಹರಿದು ಹಂಚಿಹೋಗಿದ್ದ ದಮನಿತ ದಲಿತರಿಗೆ ಅಂಬೇಡ್ಕರ್ ತತ್ವ, ಸಿದ್ಧಾಂತದ ಅಡಿಯಲ್ಲಿ ಪ್ರತ್ಯೇಕ ವೇದಿಕೆ ಕಲ್ಪಿಸಿ ಸ್ವಂತಿಕೆ ತಂದುಕೊಟ್ಟದ್ದು ಪ್ರೊ. ಬಿ.ಕೃಷ್ಣಪ್ಪ ಅವರು ಸ್ಥಾಪಿಸಿದ ಇದೇ ದಲಿತ ಸಂಘರ್ಷ ಸಮಿತಿ (ದಸಂಸ).

ದಸಂಸ ಕರಪತ್ರಗಳಲ್ಲಿ ಎದ್ದುಕಾಣುವ ಈ ಮೂಲ ಮಾತೃ ಸಮಿತಿ ನೋಂದಣಿ ಆಗಿರುವುದು 1974ರ ಜನವರಿ 24ರಂದು. ಹಲವು ಚಳವಳಿಗಳ ಉಗಮ ಸ್ಥಾನವಾದ ಶಿವಮೊಗ್ಗ ಜಿಲ್ಲೆಯೇ ದಲಿತ ಸಂಘರ್ಷ ಸಮಿತಿ ಎಂಬ ನೀಲಿ ಕಡಲಿಗೂ ಒಡಲು ನೀಡಿದೆ.

ಭದ್ರಾವತಿಯ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ (ವಿಐಎಸ್‌ಎಲ್) ಹಾಗೂ ಎಂಪಿಎಂ ಕಾಗದ ಕಾರ್ಖಾನೆಯ ಪರಿಶಿಷ್ಟ ಜಾತಿಯ ನೌಕರರು, ತಾವು ಅದಾಗಲೇ ಸಾಮಾಜಿಕ ಚಟುವಟಿಕೆಗಳ ಮೂಲಕ ಸಕ್ರಿಯವಾಗಿದ್ದ ಸಂಘವನ್ನು ಭದ್ರಾವತಿಯಲ್ಲಿ ಅಧಿಕೃತವಾಗಿ ನೋಂದಾಯಿಸಿಕೊಳ್ಳುತ್ತಾರೆ. ಇದರ ಸಂಸ್ಥಾಪಕ ಅಧ್ಯಕ್ಷ ಎನ್.ಗಿರಿಯಪ್ಪ ಅವರಾದರೆ, ಪ್ರೊ. ಬಿ.ಕೃಷ್ಣಪ್ಪ ಕಾರ್ಯದರ್ಶಿಯಾಗುತ್ತಾರೆ. ಹನುಮಂತಪ್ಪ, ಸಿಂಗಾರಾಮ, ಎಸ್.ಜಿ.ರಾಜು, ಸಿ.ಚನ್ನಕೇಶವ, ಬೋರಯ್ಯ, ನಂಜಪ್ಪ, ಪುಟ್ಟಸ್ವಾಮಿ ಅವರನ್ನೊಳಗೊಂಡ ಏಳು ಜನರು ಆರಂಭಿಕ ಸದಸ್ಯರಾಗುತ್ತಾರೆ. ಅಧ್ಯಕ್ಷ, ಕಾರ್ಯದರ್ಶಿ ಎಂದಿದ್ದ ಸ್ಥಾನಗಳಿಗೆ 1992ರಲ್ಲಿ ಬೈಲಾಗೆ ತಿದ್ದುಪಡಿ ತಂದು, ಈಗಿರುವಂತೆ ಸಂಚಾಲಕ, ಸಂಘಟನಾ ಸಂಚಾಲಕ ಎಂದು ಮರುನಾಮಕರಣ ಮಾಡಲಾಗುತ್ತದೆ.

ಈ ನೋಂದಣಿಗೆ ಮುನ್ನವೇ, ಬೂಸಾ ಪ್ರಕರಣದಲ್ಲಿ ಬಸವಲಿಂಗಪ್ಪನವರ ಪರವಾಗಿ ಧ್ವನಿ ಎತ್ತಿದ್ದೂ ಸೇರಿದಂತೆ ರಾಜ್ಯದ ನಾನಾ ಕಡೆಗಳಲ್ಲಿ ದಲಿತರು ಪ್ರತ್ಯೇಕವಾದ ಗುಂಪುಗಳಲ್ಲಿ ಸಾಮಾಜಿಕ ದೌರ್ಜನ್ಯಗಳನ್ನು ಪ್ರಶ್ನಿಸುತ್ತಿದ್ದರು. ಇಂತಹ ವಿದ್ಯಮಾನಗಳಿಗೆ, ದಲಿತರೇ ಹೊರತರುತ್ತಿದ್ದ 'ಪಂಚಮ' ಪತ್ರಿಕೆಯೂ ವೇದಿಕೆಯಾಗಿತ್ತು. ಆದರೆ, ಹೀಗೆ ಚೆಲ್ಲಾಪಿಲ್ಲಿಯಾಗಿದ್ದ ದಲಿತರ ಆಕ್ರೋಶ, ನೋವು, ದುಡುಕು, ದುಮ್ಮಾನವನ್ನು ಒಂದು ಸಾಂಸ್ಥಿಕ ವೇದಿಕೆಯಡಿಗೆ ತಂದದ್ದು ಮಾತ್ರ ಗಿರಿಯಪ್ಪ ಮತ್ತು ಪ್ರೊ. ಕೃಷ್ಣಪ್ಪ ಅವರ ಬಳಗ. ಇದಕ್ಕೆ ಸಾಹಿತಿಗಳು, ಕಲಾವಿದರ ಹೆಗಲು ಸಿಕ್ಕಿದ್ದು ದಸಂಸ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಳ್ಳಲು ಅನುವಾಯಿತು. ಹೀಗೆ ಸ್ಥಾಪನೆಯಾದ ದಸಂಸ, ಶ್ರಮ ಮತ್ತು ಸ್ವಚ್ಛತೆಯ ಸಂಕೇತವಾಗಿ ಪಿಕಾಸಿ ಹಾಗೂ ಕಸಪೊರಕೆಯನ್ನು ಒಳಗೊಂಡ ಚಿತ್ರವನ್ನು ತನ್ನ ಚಿಹ್ನೆಯನ್ನಾಗಿಸಿಕೊಂಡು, ಅಂಬೇಡ್ಕರ್ ಹೇಳಿದ ಶಿಕ್ಷಣ, ಸಂಘಟನೆ, ಹೋರಾಟವನ್ನು ಮೂಲಮಂತ್ರವನ್ನಾಗಿಸಿಕೊಂಡಿತು. ರಾಜ್ಯದಾದ್ಯಂತ ದಲಿತರ ಮೇಲಿನ ದೌರ್ಜನ್ಯ, ದಬ್ಬಾಳಿಕೆಗಳನ್ನು ಪ್ರಶ್ನಿಸುತ್ತಲೇ ಸರಣಿ ಅಧ್ಯಯನ ಶಿಬಿರಗಳನ್ನು ಏರ್ಪಡಿಸಿ, ತನ್ನ ಕಾರ್ಯಕರ್ತರನ್ನು ಜಾಗೃತಗೊಳಿಸುವುದು ಅದರ ಮೂಲ ಉದ್ದೇಶವಾಗಿತ್ತು. ಆದ್ದರಿಂದಲೇ ಎಪ್ಪತ್ತರ ದಶಕದಲ್ಲಿ ರಾಜ್ಯದಾದ್ಯಂತ ಬಹಳಷ್ಟು ಅಧ್ಯಯನ ಶಿಬಿರಗಳು ನಡೆದಿರುವ ಉದಾಹರಣೆಗಳು ಸಿಗುತ್ತವೆ. ಭದ್ರಾವತಿಯಲ್ಲಿ 1976ರಲ್ಲಿ ನಡೆದ 'ದಲಿತ ಲೇಖಕ, ಕಲಾವಿದರ ಒಕ್ಕೂಟ'ದ ರಾಜ್ಯ ಮಟ್ಟದ ಶಿಬಿರ ಈವರೆಗೆ ಒಂದು ಮೈಲಿಗಲ್ಲಾಗಿ ನಿಂತಿದೆ.

ದಲಿತರು ಎಂದರೆ ಬರೀ ಹೊಲೆ-ಮಾದಿಗರಲ್ಲ ಎಲ್ಲ 'ದಮನಿತರು' ಎಂಬ ವಿಶಾಲ ಅರ್ಥ ದಲಿತ ಸಂಘರ್ಷ ಸಮಿತಿಗೆ ಇತ್ತು. ಹೀಗಾಗಿ, ಅದು ತನ್ನ ಒಡಲೊಳಗೆ ಹಿಂದುಳಿದವರು, ರೈತರು, ಸ್ತ್ರೀಯರು ಎಲ್ಲರನ್ನೂ ಪೊರೆಯುವ ತಾಯಿಗುಣ ಹೊಂದಿತ್ತು. ಆದ್ದರಿಂದಲೇ ಮೇಲ್ವರ್ಗದ ಅನೇಕರು 'ನಾನು ದಸಂಸ ಕಾರ್ಯಕರ್ತ' ಎಂದು ಅಭಿಮಾನದಿಂದ ಇದರ ಕೊಡೆ ಅಡಿಯಲ್ಲಿ ಬರುವಂತಾಯಿತು. ಕೋಲಾರದ 'ಅನಸೂಯಮ್ಮ ಅತ್ಯಾಚಾರ ಮತ್ತು ಶೇಷಗಿರಿಯಪ್ಪ ಕೊಲೆ ಪ್ರಕರಣ' ದಸಂಸದ ಒಳಗೊಳ್ಳುವಿಕೆಗೆ ಉತ್ತಮ ನಿದರ್ಶನ.

ವೈಚಾರಿಕತೆಯ ತಳಹದಿಯ ಮೇಲೆ ಅಪರಿಮಿತ ವಿಶ್ವಾಸದಿಂದಲೇ ಕಾರ್ಯಾರಂಭ ಮಾಡಿದ ದಸಂಸ, ತಾನು ಎತ್ತುತ್ತಿದ್ದ ನೈತಿಕ ಪ್ರಶ್ನೆಗಳಿಂದ ಮತ್ತು ತೋರಿದ ಎದೆಗಾರಿಕೆಯಿಂದ ದೌರ್ಜನ್ಯ ಎಸಗುವವರ ಎದೆ ನಡುಗಿಸಿದ್ದು ಮಾತ್ರವಲ್ಲದೆ ಸರ್ಕಾರಗಳಿಗೂ ನಡೆಯಬೇಕಾದ ದಾರಿಯನ್ನು ತೋರಿಸಿಕೊಟ್ಟಿತು. ಇದರ ಫಲವಾಗಿ, ಚಂದ್ರಗುತ್ತಿಯಲ್ಲಿ ನಡೆಯುತ್ತಿದ್ದ ಬೆತ್ತಲೆ ಸೇವೆಯ ನಿರ್ಮೂಲನೆಗೆ ಕಾನೂನು ಅಸ್ತಿತ್ವಕ್ಕೆ ಬಂದಿತು. ಪರಿಶಿಷ್ಟ ಜಾತಿ, ಪಂಗಡಗಳ ಭೂಮಿ ವರ್ಗಾವಣೆ ನಿಷೇಧ (ಪಿಟಿಸಿಎಲ್) ಕಾಯ್ದೆ ಜಾರಿಗೆ ಬಂದಿತು. ಭೂಸುಧಾರಣೆ ಕಾಯ್ದೆಯಾದ 'ಉಳುವವನೇ ಭೂಮಿಯ ಒಡೆಯ' ಪರಿಣಾಮಕಾರಿಯಾಗಿ ಜಾರಿಯಾಗಲು ಸಾಧ್ಯವಾಯಿತು.

ಕವಿಗಳು ಬರೆದ ಹಾಡುಗಳು ದಸಂಸ ಹೋರಾಟಗಾರರ ಕೊರಳ ದನಿಯಾದವು. ಕೆಲ ಸಾಹಿತಿ, ಕಲಾವಿದರಿಗೆ 'ದಲಿತ' ಕೋಟಾದಡಿ ಸರ್ಕಾರ ಬಾಗಿಲು ತೆರೆಯಿತು. ಅಂದು ದಸಂಸ 'ಹೆಂಡ ಬೇಡ, ಹೋಬಳಿಗೊಂದು ವಸತಿಶಾಲೆ ಕೊಡಿ' ಎಂದು ಹೋರಾಡಿದ್ದರ ಫಲವಾಗಿ ಇಂದು ಸಾವಿರಾರು ವಸತಿಶಾಲೆಗಳ ಮುಖಾಂತರ ಲಕ್ಷಾಂತರ ಬಡವರು, ಹಿಂದುಳಿದವರ ಮಕ್ಕಳು ಗುಣಮಟ್ಟದ ಶಿಕ್ಷಣ ಪಡೆಯುವಂತಾಗಿದೆ.

ಹೀಗೆ ಅನೇಕ ಭರವಸೆಗಳನ್ನು ಮೂಡಿಸಿ ಆಶಾದಾಯಕವಾಗಿದ್ದ ದಸಂಸ ತಾನು ತೆಗೆದುಕೊಂಡ ರಾಜಕೀಯ ನಿಲುವಿನ ಕಾರಣದಿಂದಾಗಿಯೂ ಮೊದಲಿನಿಂದ ತನ್ನೊಳಗೆ ಗುಪ್ತಗಾಮಿನಿಯಾಗಿ ಹುದುಗಿಸಿಕೊಂಡಿದ್ದ ಒಳಜಾತಿ ಸಂಚಿನಿಂದಾಗಿಯೂ ಬರಬರುತ್ತ ವಿಘಟನೆಯ ದಾರಿ ಹಿಡಿಯಿತು. ಅದರಲ್ಲೂ ಗದಗದಲ್ಲಿ ನಡೆದ ಸಭೆಯೊಂದರಲ್ಲಿ ಭಾಷಣ ಮಾಡುತ್ತಿರುವಾಗಲೇ ಕುಸಿದುಬಿದ್ದು ಹೃದಯಾಘಾತದಿಂದ ಸಾವನ್ನಪ್ಪಿದ ಪ್ರೊ. ಬಿ.ಕೃಷ್ಣಪ್ಪ ಅವರ ನಂತರದಲ್ಲಿ ಚಳವಳಿಯನ್ನು ಮುನ್ನಡೆಸುವ ಅಂತಃಕರಣದ, ತಾಯಿ ಹೃದಯದ ಇನ್ನೊಬ್ಬ ನಾಯಕ ಸಿಗದ ಕಾರಣ ಚಳವಳಿ ದಿಕ್ಕುತಪ್ಪಿತು. ಒಂದೆರಡು ದಶಕ ಕಳೆದ ನಂತರವೂ ಯಾವುದೇ ಸಂಘಟನೆ ಮೊದಲಿನ ಸ್ವರೂಪದಲ್ಲೇ ಇದ್ದರೆ ಅದು ಚಲನೆಯನ್ನು ಕಳೆದುಕೊಂಡಂತೆ, ಒಡಕು, ಬಿರುಕು ಜೀವಂತಿಕೆಯ ಸಂಕೇತ ಎಂದು ಬಣ್ಣಿಸುವವರೂ ಇದ್ದಾರೆ.


ದಸಂಸ ಐವತ್ತು ವರ್ಷ ಪೂರೈಸುತ್ತಿರುವ ಸಂದರ್ಭದಲ್ಲೇ ದಲಿತ ಎಡಗೈ ಸಮುದಾಯದ ಬಹುಕಾಲದ ಬೇಡಿಕೆಯಾದ ಒಳಮೀಸಲಾತಿ ಸಂಬಂಧ ಸಂವಿಧಾನಕ್ಕೆ ತಿದ್ದುಪಡಿ ತರುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಇತ್ತ ಕೇಂದ್ರದಿಂದಲೂ ಒಳಮೀಸಲು ಅಧ್ಯಯನಕ್ಕೆ ಸಂಬಂಧಿಸಿದಂತೆ ಉಪ ಸಮಿತಿ ರಚನೆಯಾಗಿರುವ ಬಗ್ಗೆ ವರದಿಗಳಿವೆ. ದಲಿತ ಉಪಜಾತಿಗಳ ನಡುವಿನ ಒಡಕಿಗೆ ಕಾರಣವಾಗಿದ್ದ ಮೀಸಲಿನ ಪಾಲು ಕೆಲವೇ ಜಾತಿಗಳ ಸ್ವತ್ತಾಗಿದೆ, ಜಾತಿ ಜನಸಂಖ್ಯಾವಾರು ಸಮರ್ಪಕವಾಗಿ ಹಂಚಿಕೆಯಾಗಿಲ್ಲ ಎಂಬ ವಾದ, ಅನುಮಾನಗಳಿಗೆ ತೆರೆ ಬೀಳುವ ಕಾಲ ಸನ್ನಿಹಿತವಾದಂತಿದೆ. ಆಯಾ ಜಾತಿ ಜನಸಂಖ್ಯಾವಾರು ಮೀಸಲಾತಿ ಹಂಚಿಕೆಯಾಗುವುದರಿಂದ ಉಪಜಾತಿಗಳ ನಡುವಿನ ಬಿರುಕು ದೂರವಾಗಿ, ದಲಿತರೆಲ್ಲ ಒಂದೇ ಎಂಬ ಮನೋಭಾವದಿಂದ ಒಗ್ಗೂಡಲು ಅವಕಾಶವಿದೆ. ಸುವರ್ಣ ಮಹೋತ್ಸವದ ಸಂಭ್ರಮದಲ್ಲಿರುವ ದಸಂಸಕ್ಕೆ ಇದೊಂದು ಆಶಾದಾಯಕ ಬೆಳವಣಿಗೆಯಾಗಿ ಕಾಣುತ್ತಿದೆ.

ಭಿನ್ನಾಭಿಪ್ರಾಯಗಳ ನಡುವೆಯೂ ಇಂದಿಗೂ ನಗರ, ಜಿಲ್ಲೆ, ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲೆಲ್ಲ ದಸಂಸ ತನ್ನ ಶಾಖೆಗಳನ್ನು ಹೊಂದಿದೆ. ಹಿಂದೆ ಒಂದೇ ಆಗಿದ್ದ ದಸಂಸದಲ್ಲಿ ಈಗ ನಾಲ್ಕಾರು ಬಣಗಳಿವೆ. ಆದರೆ ದಸಂಸ ತನ್ನ ಬುಡಕ್ಕೆ ಕೊಡಲಿಪೆಟ್ಟು ಬಿದ್ದಾಗಲೆಲ್ಲ ಮತ್ತೆ ಕೊಡವಿ ಒಂದೇ ಆಗಿ ಎದ್ದು ನಿಂತಿದೆ. ಸಂವಿಧಾನ ಬದಲಾಯಿಸುತ್ತೇವೆ ಎಂಬ ಮಾತು ಕೇಳಿಬಂದಾಗ, ದಲಿತ ಹೆಣ್ಣುಮಕ್ಕಳಿಗೆ ಅನ್ಯಾಯವಾದಾಗಲೆಲ್ಲ ಸಾಂಘಿಕವಾಗಿ ಹೋರಾಡಿದೆ. ರಾಜಕೀಯ ಪಕ್ಷಗಳಿಗೆ ಅಧಿಕಾರವನ್ನು ಕೊಟ್ಟೂ ನೋಡಿದೆ, ಕೆಡವಿಯೂ ನೋಡಿದೆ. ದಲಿತರ ಮೇಲಿನ ದೌರ್ಜನ್ಯ ಪ್ರಕರಣಗಳು ಕೋರ್ಟ್ ಮೆಟ್ಟಿಲು ಹತ್ತಬೇಕು, ಪೊಲೀಸರಲ್ಲಿ ದೂರು ದಾಖಲಾಗಬೇಕು ಎಂದರೆ ದಸಂಸ ಅಲ್ಲಿ ಇರಲೇಬೇಕು ಎನ್ನುವ ನಂಬಿಕೆಯನ್ನು ಇಂದಿಗೂ ಉಳಿಸಿಕೊಂಡಿದೆ. ದಸಂಸ ಇರದೇ ಹೋಗಿದ್ದರೆ ಇವೆಲ್ಲವೂ 'ನ್ಯಾಯ ಪಂಚಾಯಿತಿ'ಯಲ್ಲೇ ಮುಗಿದು ಹೋಗುತ್ತಿದ್ದವು.

ದಲಿತ ಸಂಘರ್ಷ ಸಮಿತಿಯ ಸುವರ್ಣ ಮಹೋತ್ಸವವನ್ನು ಆಚರಿಸುವಂತೆ ಸಮಿತಿಯ ರಾಜ್ಯ ಸಂಚಾಲಕ ಎಂ.ಗುರುಮೂರ್ತಿ ಕರೆ ಕೊಟ್ಟಿದ್ದಾರೆ. ಕಾರ್ಯಕರ್ತರಲ್ಲಿ ಹುಮ್ಮಸ್ಸು ಹೆಚ್ಚಾಗಿದೆ. ದಲಿತರಿಗೆ ಮಾತ್ರವಲ್ಲದೆ ಎಲ್ಲ ದುಡಿಯುವ ವರ್ಗಗಳಿಗೂ ಹಿಂದಿಗಿಂತಲೂ ಹೆಚ್ಚು ಸಂಕೀರ್ಣವಾದ ಸಮಸ್ಯೆಗಳನ್ನು ಪ್ರಭುತ್ವ ತಂದೊಡ್ಡಿದೆ. ಇಂತಹ ಎಲ್ಲಾ ಸಂಗತಿಗಳ ಬಗ್ಗೆ ಆತ್ಮವಿಮರ್ಶೆ ಮಾಡಿಕೊಂಡು ದಸಂಸ ಮುಂದಡಿ ಇಟ್ಟರೆ, ಸುವರ್ಣ ಸಂಭ್ರಮಕ್ಕೊಂದು ಸಾರ್ಥಕತೆ ಬರುತ್ತದೆ. ಕೃಷ್ಣಪ್ಪ ಅವರು ಹಚ್ಚಿದ ಹೋರಾಟದ ಹಣತೆ ಆರದಂತೆ ಕಾಪಾಡುವ ಜವಾಬ್ದಾರಿ ಎಲ್ಲರ ಮೇಲಿದೆ.



ಚುರುಮುರಿ



ಪಾರ್ಲಿಮೆಂಟ್ ಪಾಠ

• ಮಣ್ಣೆ ರಾಜು

ಪರೀಕ್ಷಾಪಟುಗಳಿಗೆ ಪಾರ್ಲಿಮೆಂಟ್ ಪಾಠ ಹೇಳಲು ದೆಹಲಿಯ ದೊಡ್ಡ ಮೇಷ್ಟ್ರು ಬಂದಿದ್ದರು.

'ಪಕ್ಷದ ಗುರಿ, ತತ್ವ, ಸಿದ್ಧಾಂತವನ್ನು ಆಳವಾಗಿ ಅಧ್ಯಯನ ಮಾಡಿ ಅಳವಡಿಸಿಕೊಳ್ಳಬೇಕು. ಪಾರ್ಲಿಮೆಂಟ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿ 'ಪದವೀಧರ'ರಾಗಿ ದೇಶಾಡಳಿತದ ಕೀರ್ತಿಪತಾಕೆ ಹಾರಿಸುತ್ತೇನೆ ಎಂದು ಗಣರಾಜ್ಯೋತ್ಸವದ ಸಂದರ್ಭದಲ್ಲಿ ನೀವೆಲ್ಲರೂ ಸಂಕಲ್ಪ ಮಾಡಬೇಕು...' ಅಂದರು ದೊಡ್ಡ ಮೇಷ್ಟ್ರು.

'ಸಾರ್, ನಮ್ಮಲ್ಲಿ ಬಣಗಳ ವ್ಯಾಜ್ಯೋತ್ಸವ ವಿಜೃಂಭಿಸಿದೆ. ಒಗ್ಗಟ್ಟಾಗಿ ಪಕ್ಷದ ಧ್ವಜ ಹಾರಿಸಬೇಕಾದವರು ಪರಸ್ಪರ ಭುಜ ಹಾರಿಸಿ ಜಗಳ ಆಡುತ್ತಿದ್ದಾರೆ. ಭಿನ್ನಮತ, ಗುನ್ನಮತವನ್ನು ದಯವಿಟ್ಟು ನಿವಾರಿಸಿ' ಕೇಳಿಕೊಂಡರು ಒಬ್ಬರು.

'ಡೋಂಟ್ ವರಿ, ಗುನ್ನಮತೀಯರನ್ನು ಮುಲಾಜಿಲ್ಲದೆ ಡಿಬಾರ್ ಮಾಡಿ ಪಕ್ಷದಲ್ಲಿ ಶಿಸ್ತು, ಸಂಯಮ ಕಾಪಾಡ್ತೀವಿ' ಎಂದರು.

'ಸಾರ್, ಪಾಠ ಪ್ರವಚನದ ಜೊತೆಗೆ ಪಠ್ಯೇತರ ಚಟುವಟಿಕೆಗಳನ್ನೂ ಕಲಿಯಬೇಕಲ್ವಾ?' ಇನ್ನೊಬ್ಬರು ಕೇಳಿದರು.

'ಹೌದು, ಇಂಡೋರ್‌ನಲ್ಲಿ ಶಿಸ್ತಿನ ಪಾಠ, ಔಟ್‌ಡೋರ್‌ನಲ್ಲಿ ಕುಸ್ತಿ ಆಟ ಕಲಿಯಬೇಕು. ಸಾಂಸ್ಕೃತಿಕ ಚಟುವಟಿಕೆಯಾಗಿ ಭಾಷಣ ಕಲೆಯನ್ನು ಕರಗತ ಮಾಡಿಕೊಂಡರೆ ಪರೀಕ್ಷಾರ್ಥಿಗೆ ಗೆಲುವು ಸುಲಭವಾಗುತ್ತದೆ'.

'ಸಾರ್, ಪರಪಕ್ಷದವರು ನಮ್ಮ ಪಕ್ಷ ಸೇರಲು ಬಂದರೆ ಪ್ರವೇಶ ನೀಡಬಹುದಾ?'

'ಅವರ ಪ್ರೋಗ್ರೆಸ್ ರಿಪೋರ್ಟ್, ಕ್ಯಾರೆಕ್ಟರ್ ಸರ್ಟಿಫಿಕೇಟ್ ಆಧಾರದ ಮೇಲೆ ಅಡ್ಮಿಷನ್ ಕೊಡಿ. ಲಾಭದಾಯಕ ನಾಯಕ ಎನಿಸಿದರೆ ಯಾವ ರಿಪೋರ್ಟೂ ಪರಿಗಣಿಸದೆ ಅಡ್ಮಿಷನ್ ಮಾಡಿಕೊಳ್ಳಿ, ಆಪರೇಷನ್ ಮಾಡಿಯಾದರೂ ಪಕ್ಷಕ್ಕೆ ಎಳೆದುತಂದು ಶಕ್ತಿ ಹೆಚ್ಚಿಸಿಕೊಳ್ಳಿ'.

'ಸಾರ್, ಕೊನೆಯ ಪ್ರಶ್ನೆ, ಯಾವ ಯಾವ ಪರೀಕ್ಷಾರ್ಥಿಗಳಿಗೆ ಹಾಲ್ ಟಿಕೆಟ್ ಕೊಡ್ತೀರಿ?'

'ಷಟಪ್!... ಪಕ್ಷದ ಸಿಲೆಬಸ್‌ನಲ್ಲಿ ಇಲ್ಲದ ಉದ್ಧಟತನದ ಪ್ರಶ್ನೆ ಕೇಳಕೂಡದು. ಟಿಕೆಟ್ ಪ್ರಶ್ನೆ ಬಿಟ್ಟು ಹಾರ್ಡ್‌ವರ್ಕ್ ಕಡೆಗೆ ಗಮನಹರಿಸಿ' ಎಂದು ರೇಗಿದ ದೊಡ್ಡ ಮೇಷ್ಟ್ರು ಪಾಠ ಮುಗಿಸಿ ಹೊರಟರು.

ಸಂಗತ

ಗುರು ಪರಂಪರೆ: ಬದಲಾಯಿತೇ ವ್ಯಾಖ್ಯಾನ?!

ಶಿಕ್ಷಕರ ಬಗ್ಗೆ ಮಕ್ಕಳಿಗೆ ಗೌರವ ಇಲ್ಲದಿದ್ದಲ್ಲಿ, ಆ ಮಕ್ಕಳು ತರಗತಿಯಲ್ಲಿ ಶಾಂತಚಿತ್ತದಿಂದ ಪಾಠ ಕೇಳಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ

• ದೀಪಾ ಹಿರೇಗುತ್ತಿ

ಮಲೆನಾಡಿನ ತಾಲ್ಲೂಕು ಕೇಂದ್ರವೊಂದರ ಖಾಸಗಿ ಶಾಲೆಯೊಂದರಲ್ಲಿ ತಮ್ಮ ಮಗುವನ್ನು ಓದಿಸುತ್ತಿರುವ ಸ್ನೇಹಿತರೊಬ್ಬರು ಹೇಳಿದ ಸಂಗತಿಯನ್ನು ಕೇಳಿ, ನಿಂತ ನೆಲವೇ ಒಂದು ಕ್ಷಣ ಕುಸಿದಂತಾಯಿತು. ಅದೆಂದರೆ, ಅಲ್ಲಿ ಮಕ್ಕಳನ್ನು ಶಾಲೆಗೆ ಕರೆತರಲು ಇರುವ ಬಸ್ಸುಗಳಲ್ಲಿ ಆ ದಾರಿಯಲ್ಲಿಯೇ ಮನೆಯಿರುವ ಕೆಲವು ಶಿಕ್ಷಕ, ಶಿಕ್ಷಕಿಯರೂ ಪ್ರಯಾಣಿಸುತ್ತಾರೆ. ಯಾರಾದರೂ ಶಿಕ್ಷಕಿ ಬಸ್ಸು ಹತ್ತಿದ ಕೂಡಲೇ ಮಕ್ಕಳು ಗಡಿಬಿಡಿಯಿಂದ ಎದ್ದು 'ಮಿಸ್ ಇಲ್ಲಿ ಕುಳಿತುಕೊಳ್ಳಿ' ಎಂದು ಅವರಿಗೆ ಸೀಟು ಬಿಟ್ಟುಕೊಡಲು ನಾಮುಂದು ತಾಮುಂದು ಎನ್ನುತ್ತಾರೇನೋ ಎಂದು ನೀವು ಅಂದುಕೊಂಡಿದ್ದರೆ, ನೀವಿನ್ನೂ ಹಳೆಯ ಕಾಲದಲ್ಲಿಯೇ ಇದ್ದೀರಿ ಎಂದರ್ಥ.

ಇಲ್ಲಿ ಹಾಗಾಗುವುದಿಲ್ಲ. ಮಕ್ಕಳಿಗೆ ಕುಳಿತುಕೊಳ್ಳಲು ಸೀಟುಗಳು ಖಾಲಿಯಿದ್ದರೆ ಶಿಕ್ಷಕರು ಕುಳಿತೇ ಇರಬಹುದು. ಒಂದು ವೇಳೆ ಜಾಗ ಖಾಲಿ ಇರದಿದ್ದರೆ ಆಗ ಶಿಕ್ಷಕರು ಎದ್ದು ನಿಂತು ಮಕ್ಕಳಿಗೆ ಸೀಟು ಬಿಟ್ಟುಕೊಡುವುದು ಕಡ್ಡಾಯ. ಒಂದು ವೇಳೆ ಯಾರಾದರೂ ಶಿಕ್ಷಕರು ಮಕ್ಕಳಿಗೆ ಸೀಟು ಬಿಟ್ಟುಕೊಡಲಿಲ್ಲ ಎನ್ನಿ, 'ನಮ್ಮ ಮಕ್ಕಳು ಹತ್ತಿದಾಗ ಜಾಗ ಇರಲಿಲ್ಲ. ಇಂತಹ ಶಿಕ್ಷಕರು ಸೀಟು ಬಿಟ್ಟುಕೊಡಲಿಲ್ಲ' ಎಂದು ಅದೇ ಸಂಜೆ ಪಾಲಕರಿಂದ ಪ್ರಾಂಶುಪಾಲರಿಗೋ ಶಾಲಾ ಆಡಳಿತ ಮಂಡಳಿಗೋ ಕರೆ ಹೋಗುತ್ತದೆ.

ಎಷ್ಟೆಂದರೂ ಮಕ್ಕಳು ಹಣ ಕೊಟ್ಟು ಬಸ್ಸಿಗೆ ಬರುವವರು, ಶಿಕ್ಷಕರು ಪುಕ್ಕಟೆ ಬರುವವರಲ್ಲವೇ? ಹ್ಞಾಂ, ಯಾರೋ ಒಬ್ಬರೋ ಇಬ್ಬರೋ ಆ ರೀತಿಯ ಪಾಲಕರು ಇರಬಹುದು ಎಂದುಕೊಂಡು ಸಮಾಧಾನ ಮಾಡಿಕೊಳ್ಳುವ ಹಾಗಿಲ್ಲ. ಅರ್ಧಕ್ಕಿಂತಲೂ ಜಾಸ್ತಿ ಜನರು ಈ ಥರದವರೇ ಎಂಬುದನ್ನು ಕೇಳಿದರೆ ದಿಗಿಲಾಗದೇ ಇರದು!

ಇದು ಕಾಲ್ಪನಿಕವಾದ ಸಂಗತಿಯಲ್ಲ. ಆದರೆ ಇಂತಹ ವಿಷಯಗಳನ್ನು ನಂಬಲು ಸಂಕಟ ಆಗುತ್ತದೆ. ಒಂದೆರಡು ದಿನ ನನಗೆ ಈ ಸಂಗತಿಯನ್ನು ಅರಗಿಸಿಕೊಳ್ಳುವುದಕ್ಕೇ ಆಗಲಿಲ್ಲ. ಬೇರೆ ಬೇರೆ ಮೂಲಗಳಿಂದ ಖಚಿತಪಡಿಸಿಕೊಂಡ ಮೇಲಷ್ಟೇ, ಇದು ಒಂದೆರಡು ಶಾಲೆಗಳಲ್ಲಿ ಮಾತ್ರವಲ್ಲ ಹಲವು ಶಾಲೆಗಳಲ್ಲಿ ಕಂಡುಬರುತ್ತಿರುವ ವಿದ್ಯಮಾನ ಎಂಬುದು ತಿಳಿಯಿತು. ಸಾರ್ವಜನಿಕ ಸಾರಿಗೆಯಲ್ಲೂ ಶಿಕ್ಷಕರನ್ನು ಕಂಡರೆ ವಿದ್ಯಾರ್ಥಿಗಳು ಸೀಟುಗಳನ್ನು ಬಿಟ್ಟುಕೊಡುವ ಪ್ರವೃತ್ತಿ ನಿಧಾನವಾಗಿ ಮರೆಯಾಗುತ್ತಿದೆ.

ಗುರುವನ್ನು ಉನ್ನತ ಸ್ಥಾನದಲ್ಲಿಟ್ಟ ಸಂಸ್ಕೃತಿ ನಮ್ಮದು. ಶಾಲಾ ಕಾಲೇಜು ಮುಗಿದು ದಶಕಗಳೇ ಕಳೆದರೂ ಶಿಕ್ಷಕರ ಪಕ್ಕ ಕೂರಲೂ ಸಂಕೋಚಪಡುವ ನಮ್ಮಂತಹ ಮತ್ತು ನಮ್ಮ ಹಿಂದಿನ ಪೀಳಿಗೆಯಂತಹವರಿಗೆ ಇಂತಹ ಸುದ್ದಿ ಆಘಾತವನ್ನೇ ಉಂಟುಮಾಡುವುದು ತೀರಾ ಸಹಜ.

ವಿದ್ಯಾರ್ಥಿ, ಶಿಕ್ಷಕರ ನಡುವೆ ಮುಖ್ಯವಾಗಿ ಇರಬೇಕಾದದ್ದು ಗೌರವ. ಪ್ರೌಢಶಾಲೆ ಮತ್ತು ಕೆಳಹಂತದ ತರಗತಿಗಳಲ್ಲಿ ಗೌರವದ ಜತೆಗೆ ಕೊಂಚ ಭಯವೂ ಇರಬೇಕಾಗುತ್ತದೆ. ಹಾಗೆಂದು ಭಯವೆಂದರೆ ಭೀತಿ ಹುಟ್ಟಿಸುವುದಲ್ಲ, ಒಂದು ಹಂತದ ಗೌರವಮಿಶ್ರಿತ ಭಯ ಮಕ್ಕಳಲ್ಲಿ ಶಿಸ್ತು ತರಲು ಅನಿವಾರ್ಯ. ಇತ್ತೀಚೆಗಂತೂ ಕೋವಿಡ್‌ನ ಎರಡು ವರ್ಷಗಳನ್ನು ಮನೆಯಲ್ಲಿಯೇ ಕಳೆದಿರುವ ವಿದ್ಯಾರ್ಥಿಗಳಿಗೆ ಓದಿ, ಬರೆಸಲು ಹರಸಾಹಸ ಪಡುತ್ತಿರುವ ಶಿಕ್ಷಕರಿಗಷ್ಟೇ ಅದರ ಗಂಭೀರ ಸ್ಥಿತಿ ಅರ್ಥವಾಗಲು ಸಾಧ್ಯ.

ಶಿಕ್ಷಕರು ಸ್ನೇಹಿತರಂತೆ ಇರಬೇಕು ಎಂಬ ವಾದವಿದ್ದರೂ ಆ ಸ್ನೇಹದ ನಡುವೆ ಗಾಂಭೀರ್ಯ, ಗೌರವದ ಎಲ್ಲೆ ಇರಲೇಬೇಕು. ಪರಿಸ್ಥಿತಿ ಹೀಗಿರುವಾಗ, ಬಸ್ಸಿನಲ್ಲಿ ತಮಗೆ ಸೀಟು ಬಿಟ್ಟುಕೊಟ್ಟು ಎದ್ದು ನಿಂತು ತಮ್ಮ ಜತೆಗೇ ಪಯಣಿಸುವ ಶಿಕ್ಷಕರ ಬಗ್ಗೆ ಮಕ್ಕಳಿಗೆ ಗೌರವ ಇರಲು ಸಾಧ್ಯವೇ? ಗೌರವ ಇಲ್ಲದಿದ್ದಲ್ಲಿ ಆ ಮಕ್ಕಳು ಶಾಂತಚಿತ್ತದಿಂದ ಪಾಠ ಕೇಳಲು ಸಾಧ್ಯವೇ? ಅಕಸ್ಮಾತ್ ಕೇಳಿದರೂ ಅವರ ವ್ಯಕ್ತಿತ್ವ ಏನಾಗಬಹುದು? ಶಿಕ್ಷಕರಿಗೆ ಏನೆನಿಸಬಹುದು?

ಮಕ್ಕಳ ಕಥೆ ಬಿಡಿ. ಶಿಕ್ಷಕರು ತಮ್ಮ ಮಕ್ಕಳಿಗೆ ಸೀಟು ಬಿಟ್ಟುಕೊಡಬೇಕು ಎಂದು ಬಯಸುವ ಪಾಲಕರ ಮನಃಸ್ಥಿತಿ ಎಂತಹದ್ದಿರಬಹುದು? ಹಿಂದೆಲ್ಲ ಶಾಲೆಗೆ ಬಂದರೆ ಶಿಕ್ಷಕರ ಹತ್ತಿರ 'ಏನಾದರೂ ಮಾಡಿ, ಬೇಕಾದರೆ ಚೆನ್ನಾಗಿ ನಾಲ್ಕು ಬಿಡಿ. ನಾವಂತೂ ಕೇಳಲು ಬರುವುದಿಲ್ಲ' ಎಂದೇ ಪಾಲಕರು ಹೇಳುತ್ತಿದ್ದರು. ಆದರೆ ತಾವು ಮಕ್ಕಳನ್ನು ಶಾಲೆಗೆ ದುಡ್ಡು ಕೊಟ್ಟು ಸೇರಿಸಿರುವುದರಿಂದ, ಶಿಕ್ಷಕರೆಂದರೆ ತಮ್ಮ ಮಕ್ಕಳ ಸೇವೆಗೆ ಇರುವ ಗುಲಾಮರು ಎಂದು ತಿಳಿದುಕೊಂಡಿರುವ ಈ ಆಧುನಿಕ ಪಾಲಕರಿಗೆ ಏನೆನ್ನೋಣ!



ಯಾವುದೋ ಶಿಕ್ಷಕರು ಕಲಿಸಿದ ನಾಲ್ಕಕ್ಷರದಿಂದಲೇ ನಾಲ್ಕು ಕಾಸು ಸಂಪಾದಿಸುತ್ತ ಜೀವನ ನಡೆಸುತ್ತಿರುವ ಇಂತಹ ಪಾಲಕರಿಗೆ ಗೊತ್ತಿಲ್ಲದೇ ಇರುವುದೇನೆಂದರೆ, ತಮ್ಮ ಕೃತ್ಯದ ಮೂಲಕ ತಾವೇ ತಮ್ಮ ಮಗುವಿನ ವ್ಯಕ್ತಿತ್ವವನ್ನು ನಾಶ ಮಾಡುತ್ತಿದ್ದೇವೆ ಎನ್ನುವ ಸತ್ಯ! ಮನೆಯಲ್ಲಿ ಶಿಕ್ಷಕರ ಬಗ್ಗೆ ಅಗೌರವ ಮೂಡಿಸುವ ಮಾತುಗಳನ್ನಾಡುವ ಪಾಲಕರಿಗೂ ಈ ಮಾತು ಅನ್ವಯವಾಗುತ್ತದೆ.

ಹಣ, ಆರೋಗ್ಯಕ್ಕಿಂತ ಹೆಚ್ಚಾಗಿ, ವ್ಯಕ್ತಿತ್ವ ನಾಶವಾದರೆ ಎಲ್ಲವೂ ನಾಶವಾದಂತೆ ಎಂಬ ಮಾತಿದೆ. ಕೃತಜ್ಞತೆ, ಕರುಣೆ, ಗೌರವ, ವಿಶ್ವಾಸ, ಪ್ರೀತಿಯಂತಹ ಕೋಮಲ ಭಾವನೆಗಳ ಜತೆ ಬೆಳೆಯಬೇಕಾದ ಮಕ್ಕಳು ಉಡಾಫೆ, ಅಸಹನೆ, ಅಪನಂಬಿಕೆಯ ಜತೆ ಬೆಳೆದರೆ ಮುಂದೆ ಅವರ ವೈಯಕ್ತಿಕ, ಸಾಮಾಜಿಕ ಬದುಕಿನ ಭವಿಷ್ಯವೇನು? ಯೋಚಿಸಿದಷ್ಟೂ ಪ್ರಶ್ನಾರ್ಥಕ ಚಿಹ್ನೆ ದೊಡ್ಡದಾಗುತ್ತಲೇ ಹೋಗುತ್ತದೆ.

ವಾಚಕರ ವಾಣಿ

ಅರ್ಹ ನಿರುದ್ಯೋಗಿಗಳಿಗೆ ಆಗದಿರಲಿ ವಂಚನೆ

ವಿವಿಧ ಇಲಾಖೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ ನಿವೃತ್ತ ಸರ್ಕಾರಿ ನೌಕರರನ್ನು ನೇಮಕ ಮಾಡಿಕೊಳ್ಳುವುದಕ್ಕೆ ಕಡಿವಾಣ ಹಾಕುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮುಖ್ಯ ಕಾರ್ಯದರ್ಶಿಗೆ ಸೂಚಿಸಿರುವುದು (ಪ್ರ.ವಾ., ಜ. 23) ಅತ್ಯಂತ ಸ್ವಾಗತಾರ್ಹ ಮತ್ತು ತೃಪ್ತಿದಾಯಕ. ನಿವೃತ್ತರನ್ನು ವಿವಿಧ ರೂಪಗಳಲ್ಲಿ ಸರ್ಕಾರಿ ಇಲಾಖೆಗಳಿಗೆ ನೇಮಕ ಮಾಡಿಕೊಳ್ಳುವ ಪರಿಪಾಟ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರನ್ನು ಅದರಲ್ಲೂ ಅರ್ಹ ನಿರುದ್ಯೋಗಿಗಳನ್ನು ವಂಚಿಸುವಂತಹ ಕೃತ್ಯವೇ ಸರಿ.

ಒಂದೆಡೆ, ನಿವೃತ್ತರಿಗೆ ಕೆಂಪುಹಾಸು ಹಾಕಿ ಅವರಿಗೆ ಪಿಂಚಣಿ ಜೊತೆಗೆ ಹೆಚ್ಚುವರಿಯಾಗಿ ಮರುನೇಮಕಾತಿ ಆಧಾರಿತ ಗುತ್ತಿಗೆ ವೇತನ, ಇನ್ನೊಂದೆಡೆ, ನಿರುದ್ಯೋಗಿ ಪದವೀಧರರಿಗೆ ನಿರುದ್ಯೋಗ ಭತ್ಯೆ ನೀಡಿಕೆಯಿಂದಾಗಿ ಸರ್ಕಾರದ ಬೊಕ್ಕಸಕ್ಕೆ ಕಂಡೂ ಕಾಣದಂತೆ ಅನೇಕ ರಂಧ್ರಗಳು. ಇಂತಹ ಸ್ಥಿತಿಯಲ್ಲಿ, ಮುಖ್ಯಮಂತ್ರಿ ನಿಧಾನವಾಗಿ ಆದರೂ ಇದನ್ನರಿತು ಕ್ರಮಕ್ಕೆ ಮುಂದಾಗಿರುವುದು ಎಷ್ಟೋ ನಿರುದ್ಯೋಗಿಗಳಿಗೆ ನೆಮ್ಮದಿ ನೀಡುವ ಸಂಗತಿ.

ರಮೇಶ್, ಬೆಂಗಳೂರು

ಅರಿಯಿರಿ ಪ್ರವಾಸಿಗರ ಅಗತ್ಯ

ಕುವೆಂಪು ಅವರ ಹುಟ್ಟೂರಾದ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳಿ ಈಗ ಆ ಭಾಗದ ಖ್ಯಾತ ಪ್ರವಾಸಿ ಸ್ಥಳ. ರಾಜ್ಯದ ಮೂಲೆಮೂಲೆಯಿಂದ ದಾರ್ಶನಿಕ ಕವಿಯ ಓದುಗರು, ಸಾಹಿತಿಗಳು ಮತ್ತು ಅಭಿಮಾನಿ ಕನ್ನಡಿಗರು ಪ್ರತಿದಿನವೂ ಸಾವಿರಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಅಲ್ಲಿಗೆ ಭೇಟಿ ನೀಡುತ್ತಿದ್ದಾರೆ. ಕವಿಮನೆ, ಕವಿಶೈಲ, ಕುವೆಂಪು ಮತ್ತು ಪೂರ್ಣಚಂದ್ರ ತೇಜಸ್ವಿ ಸ್ಮಾರಕಗಳನ್ನು ಸಂದರ್ಶಿಸಿ ಕನಿಷ್ಠ ಎರಡು ಗಂಟೆಗೂ ಹೆಚ್ಚು ಕಾಲ ಅಲ್ಲಿ ಕಳೆದು ಧನ್ಯತೆಯ ಭಾವ ಪಡೆಯುತ್ತಿದ್ದಾರೆ. ಆದರೆ ಮಲೆನಾಡಿನ ಕಾಡಿನ ಒಳಗೆ ಇರುವ ಆ ಸ್ಥಳದಲ್ಲಿ ಪ್ರವಾಸಿಗರಿಗೆ ತೀರಾ ಅಗತ್ಯವಾದ ನೀರು, ಪಾನೀಯ, ತಿಂಡಿ ಮಾರಾಟದ ವ್ಯವಸ್ಥೆ ಇಲ್ಲ.

ಇತ್ತೀಚಿನವರೆಗೂ ಕವಿಮನೆಯ ಮುಂದಿದ್ದ ಕ್ಯಾಂಟೀನ್ ಈಗ ಕಾರಣಾಂತರಗಳಿಂದ ಮುಚ್ಚಿರುವುದರಿಂದ ಪ್ರವಾಸಿಗರಿಗೆ, ಅದರಲ್ಲಿಯೂ ಮಕ್ಕಳು, ಮಧುಮೇಹಿಗಳು ಹಾಗೂ ವೃದ್ಧರಿಗೆ ಬಹಳ ಅನನುಕೂಲ ಆಗಿದೆ ಮತ್ತು ಅದು ಪ್ರವಾಸಿಗರ ಮನಸ್ಸಿನ ಮೇಲೆ ಕಹಿ ಭಾವನೆ ಉಂಟುಮಾಡುತ್ತದೆ. ಸರ್ಕಾರ ಮತ್ತು ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನದವರು ಕೂಡಲೇ ಈ ಬಗ್ಗೆ ಗಮನಹರಿಸಿ, ಕವಿಮನೆಯ ಬಳಿ ತಕ್ಷಣವೇ ಹಿಂದಿನಂತೆ ತಿಂಡಿ, ಪಾನೀಯದ ಮಾರಾಟ ವ್ಯವಸ್ಥೆಯನ್ನು ಕಲ್ಪಿಸಬೇಕು. ಈ ಮೂಲಕ ಪ್ರವಾಸಿಗರಿಗೆ ಅನುಕೂಲ ಮಾಡಿಕೊಡಬೇಕಾದುದು ಅವರ ಜವಾಬ್ದಾರಿಯೂ ಆಗಿರುತ್ತದೆ.

ರವಿ ಕೃಷ್ಣಾರೆಡ್ಡಿ, ಬೆಂಗಳೂರು

ಮಾದರಿಯಾಗಲಿ ಮೌಲ್ಯ

ಅತ್ತ ಅಯೋಧ್ಯೆಯಲಿ
ರಾಮಮೂರ್ತಿ ಪ್ರಾಣಪ್ರತಿಷ್ಠಾಪನೆ
ನಡೆದಿರೆ ಸಡಗರ, ಸಂಭ್ರಮದಲಿ
ಇತ್ತ ಕರ್ನಾಟಕದ ಕೊಪ್ಪಳ, ಗದಗ ಜಿಲ್ಲೆಗಳ
ಮಂದಿರ, ಮಸೀದಿಗಳಲಿ ಹಿಂದೂ
ಮುಸ್ಲಿಂ ಬಂಧುಗಳು ಒಟ್ಟಿಗೆ ಪೂಜೆ, ಜಪ
ಮಾಡಿರುವುದು ವಿಶೇಷ, ಸಂತಸದ ಸಂಗತಿ,
ಪ್ರೀತಿ, ತ್ಯಾಗ, ಸಾಮರಸ್ಯ, ಸೌಹಾರ್ದದ
ಪ್ರತೀಕ ನಮ್ಮ ರಾಮ ಮಾದರಿಯಾಗಲಿ
ನಮ್ಮನ್ನಾಳುವವರಿಗೆ ಅವನ
ಮೌಲ್ಯಾದರ್ಶಗಳು ಸದಾ

ಸಿ.ಪಿ.ಸಿದ್ಧಾಶ್ರಮ, ಮೈಸೂರು

ಬಸ್‌ಗಳಲ್ಲಿ ಒಡಮೂಡಲಿ ಚಿಂತನ ಬರಹ

ರಾಜ್ಯದ ಸಾರಿಗೆ ನಿಗಮಗಳ ಬಸ್‌ಗಳಲ್ಲಿ ಪರಿಸರ, ಶಿಕ್ಷಣ, ನಾಡು– ನುಡಿಯ ಅಭಿಮಾನದ ಕುರಿತು ಪರಿಣಾಮಕಾರಿಯಾಗಿ ಜನರನ್ನು ಉದ್ದೀಪಿಸುವ ನಾಣ್ಣುಡಿಗಳು, ಚಿಂತನ ಬರಹಗಳು ಹಾಗೂ ಸೂಕ್ತಿಗಳನ್ನು ಅಳವಡಿಸುವುದು ಒಳ್ಳೆಯದು. ಈ ಮೂಲಕ ವ್ಯಾಪಕವಾಗಿ ಜನಜಾಗೃತಿ ಮೂಡಿಸಲು ಸಾಧ್ಯವಾಗುತ್ತದೆ. ಈ ಬಸ್‌ಗಳಲ್ಲಿ ಪ್ರಯಾಣಿಸುವವರ ಮೇಲೆ ಇದು ಉತ್ತಮ ಪ್ರಭಾವ ಬೀರಬಲ್ಲದು ಹಾಗೂ ಸಕಾರಾತ್ಮಕ ಪ್ರೇರಣೆ ನೀಡಬಲ್ಲದು. ಸಾರಿಗೆ ಇಲಾಖೆಯ ಉನ್ನತ ಅಧಿಕಾರಿಗಳು ಈ ದಿಸೆಯಲ್ಲಿ ಕಾರ್ಯಪ್ರವೃತ್ತರಾಗಬೇಕಾಗಿದೆ.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

ದಕ್ಷ ಅಧಿಕಾರಿಗಳು ಅಭಿನಂದನಾರ್ಹರು

ಕೇಂದ್ರ ಚುನಾವಣಾ ಆಯೋಗ ನೀಡುವ ರಾಷ್ಟ್ರ ಮಟ್ಟದ ವಿಶೇಷ ಪ್ರಶಸ್ತಿಗಳಿಗೆ ರಾಜ್ಯದ ಇಬ್ಬರು ಮಹಿಳಾ ಅಧಿಕಾರಿಗಳಾದ ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ.ಶಿಖಾ ಮತ್ತು ಚಿತ್ರದುರ್ಗ ಜಿಲ್ಲಾಧಿಕಾರಿ ದಿವ್ಯಾ ಪ್ರಭು ಜಿ.ಆರ್. ಅವರು ಭಾಜನರಾಗಿರುವುದು (ಪ್ರ.ವಾ., ಜ. 18) ಸಂತೋಷದ ಸಂಗತಿ. 2023ರ ವಿಧಾನಸಭಾ ಚುನಾವಣೆಯಲ್ಲಿ ಉಚಿತ ಉಡುಗೊರೆಗಳ ವಿತರಣೆಯನ್ನು ತಡೆಯಲು ಕೈಗೊಂಡ ಕ್ರಮಗಳಿಗಾಗಿ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿದ ಸರ್ಕಾರಿ ಇಲಾಖೆಯ ವಿಭಾಗದಲ್ಲಿ ಶಿಖಾ ಆಯ್ಕೆಯಾಗಿದ್ದರೆ, ಮತದಾರರ ಪಟ್ಟಿ ನಿರ್ವಹಣೆ, ಯುವ ಮತ್ತು ವಿಶೇಷ ಮತದಾರರ ನೋಂದಣಿ ಸೇರಿದಂತೆ ಅತ್ಯುತ್ತಮವಾಗಿ ಕಾರ್ಯನಿರ್ವಹಿಸಿರುವುದನ್ನು ಗುರುತಿಸಿ ರಾಷ್ಟ್ರ ಮಟ್ಟದ ಸಾಮಾನ್ಯ ವಿಭಾಗದಲ್ಲಿ ದಿವ್ಯಾ ಆಯ್ಕೆಯಾಗಿದ್ದಾರೆ. ಈ ಮೂಲಕ ಕರ್ನಾಟಕದಲ್ಲಿ ಮಹಿಳೆಯರು ಶಿಕ್ಷಣದಲ್ಲಿ ಮಾತ್ರವಲ್ಲ ಆಡಳಿತದಲ್ಲಿಯೂ ದಕ್ಷತೆಯಲ್ಲಿ ಮುಂದಿರುವುದು ಶ್ಲಾಘನೀಯ. ಇತರ ಅಧಿಕಾರಿಗಳಿಗೆ ಮಾದರಿಯಾಗಿರುವ ಈ ಮಹಿಳಾ ಅಧಿಕಾರಿಗಳು ಅಭಿನಂದನಾರ್ಹರು.

ಕೆ.ಎಂ.ನಾಗರಾಜು, ಮೈಸೂರು

ಅನಕ್ಷರಸ್ಥರಾದರೇನು?

ರಾಜ್ಯದಲಿರುವರಂತೆ ಸಾವಿರಾರು ಅನಕ್ಷರಸ್ಥ
ಗ್ರಾಮ ಪಂಚಾಯಿತಿ ಸದಸ್ಯರು,
ಆದರೇನಂತೆ? ಅದಕೇಕೆ ಚಿಂತೆ?
ವಿದ್ಯೆ ಇಲ್ಲದಿದ್ದರೂ ರಾಜಕಾರಣ
ಮಾಡುವುದರಲವರು
ಅಕ್ಷರಸ್ಥರಷ್ಟೇ ಸಮರ್ಥರು!
ಅಕ್ಷರಸ್ಥರಾದರೇನು? ಆಗದಿದ್ದರೇನು?
ಬಹುಪಾಲು ರಾಜಕಾರಣಿಗಳು
ಕುಬೇರರಾಗುವುದಕ್ಕೆ ಅಡ್ಡಿಯಾಗಿಲ್ಲ
ಅದೇನು!

ತಿಪ್ಪೂರು ಪುಟ್ಟೇಗೌಡ, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸ್ವಯಂಸೇವಾ ಸಂಸ್ಥೆಗಳ ವಿದೇಶಿ ದೇಣಿಗೆಗೆ ಕತ್ತರಿ

ಪ್ರಜಾವಾಣಿ ವಾರ್ತೆ

ಚಿಂತಕರ ಚಾವಡಿ 'ಸೆಂಟರ್ ಫಾರ್ ಪಾಲಿಸಿ ರಿಸರ್ಚ್–ಸಿಪಿಆರ್'ಗೆ ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆ ಅಡಿ ನೀಡಿದ್ದ ಪರವಾನಗಿಯನ್ನು ಕಳೆದ ವಾರದಲ್ಲಿ ಕೇಂದ್ರ ಸರ್ಕಾರ ರದ್ದು ಮಾಡಿದೆ. ಕಳೆದ 50 ವರ್ಷಗಳಿಂದ ದೇಶದಲ್ಲಿ ಈ ಸ್ವಯಂಸೇವಾ ಸಂಸ್ಥೆ ಕೆಲಸ ಮಾಡುತ್ತಿತ್ತು. 'ವಿದೇಶಗಳಿಂದ ಪಡೆದ ದೇಣಿಗೆಯನ್ನು ದುರುಪಯೋಗ ಪಡಿಸಿಕೊಂಡಿದ್ದೀರಿ. ಅಭಿವೃದ್ಧಿ ಯೋಜನೆಗಳ ವಿರುದ್ಧ ಕಾನೂನು ಹೋರಾಟ ನಡೆಸುವುದು, ಆ ಮೂಲಕ ದೇಶದ ಆರ್ಥಿಕತೆಗೆ ಹೊಡೆತ ಕೊಡುವ ಉದ್ದೇಶವಿದೆ, ಪ್ರತಿಭಟನೆಗಳಿಗೆ ದೇಣಿಗೆ ನೀಡುತ್ತಿದ್ದೀರಿ ಎನ್ನುವ ಕಾರಣ ನೀಡಿ ಸಿಪಿಆರ್ ಪರವಾನಗಿಯನ್ನು ರದ್ದು ಮಾಡಲಾಗಿದೆ' ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ.

ಸರ್ಕಾರಗಳ ನೀತಿಗಳಲ್ಲಿನ ವೈಫಲ್ಯಗಳನ್ನು ತನ್ನ ವರದಿ ಮೂಲಕ ಸಿಪಿಆರ್ ಎತ್ತಿ ತೋರಿಸುತ್ತಿತ್ತು. ಮಾಜಿ ಪ್ರಧಾನಿ ಮನಮೋಹನ್ ಸಿಂಗ್, ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ವೈ.ವಿ.ಚಂದ್ರಚೂಡ್, ಹಿರಿಯ ಪತ್ರಕರ್ತ ಬಿ.ಜಿ. ವರ್ಗೀಸ್ ಸೇರಿದಂತೆ ಹಲವು ಗಣ್ಯರು ಈ ಸಂಸ್ಥೆಯ ಸದಸ್ಯರಾಗಿದ್ದರು. 'ನಿಮ್ಮ ಸಂಶೋಧನಾ ವರದಿಗಳನ್ನು ನಿಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸುತ್ತೀರಿ ಎನ್ನುವ ಕಾರಣಕ್ಕೂ ನಿಮ್ಮ ಪರವಾನಗಿಯನ್ನು ರದ್ದು ಮಾಡಲಾಗಿದೆ ಎಂದು ಗೃಹ ಸಚಿವಾಲಯ ಹೇಳಿದೆ' ಎಂದು ಸಿಪಿಆರ್ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದೆ. ಇದು ದೊಡ್ಡ ಚರ್ಚೆಗೆ ಗ್ರಾಸವಾಗಿದೆ.

ಯಾವುದೇ ವಿಚಾರಧಾರೆಯ ಸರ್ಕಾರವು ಕೇಂದ್ರ ಸರ್ಕಾರದಲ್ಲಿ ಆಡಳಿತ ನಡೆಸಿದಾಗಲೂ, ನೂರಾರು ಸಂಖ್ಯೆಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಪರವಾನಗಿಯನ್ನು ರದ್ದು ಮಾಡಲಾಗಿದೆ. ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಕೇಂದ್ರದಲ್ಲಿ ಅಧಿಕಾರ ವಹಿಸಿಕೊಂಡ ಬಳಿಕ, ಸ್ವಯಂಸೇವಾ ಸಂಸ್ಥೆಗಳ ಪರವಾನಗಿಯನ್ನು ರದ್ದು ಮಾಡುವ ಪ್ರವೃತ್ತಿ ಹೆಚ್ಚಾಗಿದೆ. ಈ ಕಾಯ್ದೆಗೆ ತಿದ್ದುಪಡಿ ತರುವುದರ ಮೂಲಕ ಸ್ವಯಂಸೇವಾ ಸಂಸ್ಥೆಗಳು ವಿದೇಶಗಳಿಂದ ದೇಣಿಗೆ ಪಡೆದುಕೊಳ್ಳುವ ಹಾಗೂ ಆ ದೇಣಿಗೆಗಳನ್ನು ಹೇಗೆಲ್ಲಾ ಬಳಸಿಕೊಳ್ಳಬೇಕು ಎಂಬುದರ ಮೇಲೆ ಹೆಚ್ಚು ಹೆಚ್ಚು ನಿರ್ಬಂಧ ಹೇರಲಾಗುತ್ತಿದೆ.

ದೇಣಿಗೆ ಸಂಗ್ರಹ ಹಾಗೂ ವಿನಿಯೋಗದಲ್ಲಿ ಅಕ್ರಮ: ಕೇಂದ್ರ ಗೃಹ ಸಚಿವಾಲಯವು 2019ರಿಂದಲೂ ವಿವಿಧ ಸ್ವಯಂಸೇವಾ ಸಂಸ್ಥೆಗಳ ಮೇಲೆ ಆದಾಯ ತೆರಿಗೆ ಇಲಾಖೆ ಪರಿಶೋಧನೆ ನಡೆಸುತ್ತಿದೆ. ಈ ವೇಳೆ ದೊರೆತ ಸಾಕ್ಷ್ಯಗಳು ಹಾಗೂ ಅಧಿಕಾರಿಗಳು ಸಲ್ಲಿಸಿದ ವರದಿಗಳ ಆಧಾರದಲ್ಲಿ ಸ್ವಯಂಸೇವಾ ಸಂಸ್ಥೆಗಳ ಪರವಾನಗಿಗಳನ್ನು ರದ್ದು ಮಾಡಲಾಗುತ್ತಿದೆ. ಚೀನಾದಿಂದ ದೇಣಿಗೆ ಸಂಗ್ರಹಿಸುತ್ತಿವೆ ಎನ್ನುವ ಕಾರಣಕ್ಕೆ ಕೆಲವು ಸಂಸ್ಥೆಗಳ ಪರವಾನಗಿ ರದ್ದಾಗಿವೆ. ಕಾಯ್ದೆಯಲ್ಲಿ ಹೇಳಿರುವಂತೆ ದೇಣಿಗೆಯ ವಿನಿಯೋಗ ನಡೆಯುತ್ತಿಲ್ಲ ಎನ್ನುವ ಕಾರಣಕ್ಕೆ ಕೆಲವು ಸಂಸ್ಥೆಗಳ ಪರವಾನಗಿಯನ್ನು ರದ್ದು ಮಾಡಲಾಗಿವೆ.

ಕೇಂದ್ರದ ಹಗೆತನದ ವರ್ತನೆ–ಆರೋಪ: ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವೈಫಲ್ಯಗಳನ್ನು ಬೆಳಕಿಗೆ ತರುವ ವರದಿಗಳನ್ನು ಸಿದ್ಧಪಡಿಸಿದ, ಆರ್‌ಟಿಐ ಮೂಲಕ ಮಾಹಿತಿ ಪಡೆದುಕೊಳ್ಳಲು ಯತ್ನಿಸಿದ, ಧಾರ್ಮಿಕ ಕಾರಣಗಳಿಗಾಗಿ ಕೆಲವು ಧಾರ್ಮಿಕ ಸ್ವಯಂಸೇವಾ ಸಂಸ್ಥೆಗಳ ಪರವಾನಗಿಯನ್ನು ರದ್ದು ಮಾಡಲಾಗಿದೆ ಎಂಬಂಥ ಆರೋಪಗಳನ್ನು ಮಾಡಲಾಗಿದೆ.

ಹಲವು ಪ್ರಮುಖ ಸ್ವಯಂಸೇವಾ ಸಂಸ್ಥೆಗಳ ಪರವಾನಗಿಯನ್ನು ರದ್ದು ಮಾಡಿರುವುದನ್ನು ತೀವ್ರವಾಗಿ ವಿರೋಧಿಸಿ, 'ಕಾನ್‌ಸ್ಟಿಟ್ಯೂಷನಲ್ ಕಂಡಕ್ಟ್ ಗ್ರೂಪ್' ಎನ್ನುವ ಸ್ವಯಂಸೇವಾ ಸಂಸ್ಥೆಯು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಬಹಿರಂಗ ಪತ್ರವನ್ನು ಬರೆದಿತ್ತು. 'ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯನ್ನು ಮುಂದಿಟ್ಟುಕೊಂಡು ಸ್ವಯಂಸೇವಾ ಸಂಸ್ಥೆಗಳಿಗೆ ಕೇಂದ್ರ ಸರ್ಕಾರವು ಕಿರುಕುಳ ನೀಡುತ್ತಿದೆ' ಎಂದು ಪತ್ರದಲ್ಲಿ ಆರೋಪಿಸಲಾಗಿತ್ತು.

ವಿದೇಶಿ ದೇಣಿಗೆ ಪರವಾನಗಿ ರದ್ದಾದ ಕೆಲವು ಪ್ರಮುಖ ಸಂಸ್ಥೆಗಳ ಕುರಿತ ವಿವರ ಇಲ್ಲಿವೆ.

ಆಕ್ಸ್‌ಫಾಮ್ ಇಂಡಿಯಾ: ಸಂಪತ್ತಿನ ಅಸಮಾನ ಹಂಚಿಕೆ, ಶಿಕ್ಷಣ, ಯುವ ಸಬಲೀಕರಣ ಸೇರಿ ಹಲವು ಪ್ರಮುಖ ವಿಷಯಗಳ ಕುರಿತು ವರದಿಗಳನ್ನು ಸಿದ್ಧಪಡಿಸಿತ್ತು. ಇವುಗಳಲ್ಲಿ ಹಲವು ವರದಿಗಳು ಕೇಂದ್ರ ಸರ್ಕಾರದ ವಿರುದ್ಧ ಇದ್ದವು. ಕೋವಿಡ್ ಸಮಯದಲ್ಲಿ ದೇಶದಲ್ಲಿ ಮಾನವೀಯ ನೆರವು ಕಾರ್ಯವನ್ನು ಸಂಸ್ಥೆ ನಡೆಸಿತ್ತು.

ಅಮ್ನೆಸ್ಟಿ ಇಂಟರ್‌ನ್ಯಾಷನಲ್: ಮಾನವಹಕ್ಕುಗಳ ರಕ್ಷಣೆ ಸಂಬಂಧ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೆಲಸ ಮಾಡುವ ಸಂಸ್ಥೆ ಇದಾಗಿದೆ. ಈ ಸಂಸ್ಥೆಯ ಭಾರತದ ಶಾಖೆಯನ್ನು ಸರ್ಕಾರವು ಮುಚ್ಚಿಸಿತು. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸುದ್ದಿಯಾಯಿತು. 'ಹಾಲ್ಟ್ ದಿ ಹೇಟ್' ಎನ್ನುವ ಅಭಿಯಾನವನ್ನು ಆರಂಭಿಸಿ, ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿದ್ದ ದ್ವೇಷಪೂರಿತ ಹಲ್ಲೆಗಳನ್ನು ದಾಖಲಿಸುತ್ತಿತ್ತು.

ಗ್ರೀನ್‌ಪೀಸ್ ಇಂಡಿಯಾ: 'ಗೌತಮ್ ಅದಾನಿ ಅವರ ಕಲ್ಲಿದ್ದಲು ಗಣಿಗಾರಿಕೆ ಕಂಪನಿ ಹಾಗೂ ಕೋಲ್ ಇಂಡಿಯಾ ಎನ್ನುವ ಕಂಪನಿಗಳ ವಿರುದ್ಧ ಹಲವು ವರದಿಗಳನ್ನು ಗ್ರೀನ್‌ಪೀಸ್ ಸಂಸ್ಥೆ ಸಿದ್ಧಪಡಿಸಿತ್ತು. ಇದರಿಂದ ಈ ಸಂಸ್ಥೆಯು ಕೇಂದ್ರ ಸರ್ಕಾರದ ಕೆಂಗಣ್ಣಿಗೆ ಗುರಿಯಾಗಿತ್ತು' ಎಂದು ಬಿಬಿಸಿ ವರದಿ ಮಾಡಿತ್ತು.

ಕಾಮನ್‌ವೆಲ್ತ್ ಹ್ಯೂಮನ್ ರೈಟ್ಸ್ ಇನಿಷಿಯೇಟಿವ್: ಈ ಅಂತರರಾಷ್ಟ್ರೀಯ ಸಂಸ್ಥೆಯು ಮಾನವಹಕ್ಕುಗಳ ಸಂಬಂಧ ಕೆಲಸ ಮಾಡುತ್ತಿತ್ತು. ಆರ್‌ಟಿಐ ಮೂಲಕ ಹಲವು ಮಾಹಿತಿಗಳನ್ನು ಕಲೆಹಾಕಿ ವರದಿಗಳನ್ನು ಸಿದ್ಧಪಡಿಸುತ್ತಿತ್ತು. ಪಿಎಂ ಕಿಸಾನ್ ಯೋಜನೆ ಅಡಿಯಲ್ಲಿ 20 ಲಕ್ಷ ಅನರ್ಹ ಫಲಾನುಭವಿಗಳಿಗೆ ಕೇಂದ್ರ ಸರ್ಕಾರವು ₹1.36 ಕೋಟಿ ಹಣವನ್ನು ನೀಡಿದೆ ಎನ್ನುವ ಮಾಹಿತಿಯನ್ನು ಸಂಸ್ಥೆ ಬಹಿರಂಗಪಡಿಸಿತ್ತು. ಈ ಮಾಹಿತಿಯನ್ನು ಸಂಸ್ಥೆಯು ಆರ್‌ಟಿಐ ಮೂಲಕ ಕೇಂದ್ರ ಸರ್ಕಾರದಿಂದಲೇ ಪಡೆದುಕೊಂಡಿತ್ತು.


ಚೀನಾದಿಂದ ದೇಣಿಗೆ ಸಂಗ್ರಹಿಸಲಾಗುತ್ತಿದೆ ಎನ್ನುವ ಆರೋಪದ ಮೇಲೆ 'ರಾಜೀವ್ ಗಾಂಧಿ ಫೌಂಡೇಷನ್' ಹಾಗೂ 'ರಾಜೀವ್ ಗಾಂಧಿ ಚಾರಿಟೆಬಲ್ ಟ್ರಸ್ಟ್' ಸ್ವಯಂಸೇವಾ ಸಂಸ್ಥೆಯ ಪರವಾನಗಿಯನ್ನು ರದ್ದು ಮಾಡಲಾಗಿದೆ.

ದೇಶದಲ್ಲಿ ಈವರೆಗೆ 51,287 ಸ್ವಯಂಸೇವಾ ಸಂಸ್ಥೆಗಳು ವಿದೇಶಿ ದೇಣಿಗೆ ಪರವಾನಗಿ ಪಡೆದುಕೊಂಡಿದ್ದವು. ಆದರೆ ಈಗ ಅವುಗಳಲ್ಲಿ ಪರವಾನಗಿ ಚಾಲ್ತಿಯಲ್ಲಿರುವುದು 17,008 ಸ್ವಯಂಸೇವಾ ಸಂಸ್ಥೆಗಳದ್ದು ಮಾತ್ರ. ಉಳಿದ 34,279 ಸ್ವಯಂಸೇವಾ ಸಂಸ್ಥೆಗಳ ಪರವಾನಗಿಗಳನ್ನು ಕೇಂದ್ರ ಸರ್ಕಾರವೇ ರದ್ದುಪಡಿಸಿದೆ. ಇಲ್ಲವೇ ಕೇಂದ್ರ ಸರ್ಕಾರವೇವು ನವೀಕರಣ ಮಾಡದೇ ಇದ್ದ ಕಾರಣಕ್ಕೆ ಅಂತಹ ಪರವಾನಗಿಗಳು ಸ್ವಯಂಚಾಲಿತವಾಗಿ ರದ್ದಾಗಿವೆ.

ಹೀಗೆ ಕೇಂದ್ರ ಸರ್ಕಾರವೇ ಪರವಾನಗಿ ರದ್ದುಪಡಿಸಿದ ಸ್ವಯಂಸೇವಾ ಸಂಸ್ಥೆಗಳಲ್ಲಿ ಹೆಚ್ಚಿನವು ದಕ್ಷಿಣ ಭಾರತದ ರಾಜ್ಯಗಳದ್ದೇ ಆಗಿವೆ. ದಕ್ಷಿಣದ ನಾಲ್ಕು ರಾಜ್ಯಗಳಿಂದ ಒಟ್ಟು 8,139 ಸಂಸ್ಥೆಗಳ ವಿದೇಶಿ ದೇಣಿಗೆ ಪರವಾನಗಿಯನ್ನು ಕೇಂದ್ರ ಸರ್ಕಾರವು ರದ್ದುಪಡಿಸಿದೆ. ಹೀಗೆ ಪರವಾನಗಿ ಕಳೆದುಕೊಂಡ ಒಟ್ಟು ಸಂಸ್ಥೆಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳ ಸಂಸ್ಥೆಗಳ ಪ್ರಮಾಣ ಶೇ 40ರಷ್ಟು. ದೇಶದ ಬೇರೆಲ್ಲಾ ರಾಜ್ಯಗಳಿಗೆ ಹೋಲಿಸಿದರೆ ಅತಿಹೆಚ್ಚು ಸ್ವಯಂಸೇವಾ ಸಂಸ್ಥೆಗಳ ಪರವಾನಗಿ ರದ್ದಾಗಿದ್ದು ತಮಿಳುನಾಡಿನಲ್ಲಿ.

ನವೀಕರಣ ಆಗದೇ ಇದ್ದ ಕಾರಣಕ್ಕೆ ಪರವಾನಗಿ ಕಳೆದುಕೊಂಡ ಒಟ್ಟು 13,583 ಸ್ವಯಂಸೇವಾ ಸಂಸ್ಥೆಗಳಲ್ಲಿ ದಕ್ಷಿಣ ಭಾರತದ ರಾಜ್ಯಗಳಲ್ಲಿನ ಸಂಸ್ಥೆಗಳ ಪ್ರಮಾಣ ಶೇ 36ರಷ್ಟು. ಇದೇ ಅವಧಿಯಲ್ಲಿ ಪಶ್ಚಿಮ ಬಂಗಾಳದ 1,717 ಸ್ವಯಂಸೇವಾ ಸಂಸ್ಥೆಗಳ ಪರವಾನಗಿಯನ್ನು ಕೇಂದ್ರ ಸರ್ಕಾರವು ರದ್ದುಪಡಿಸಿದ್ದರೆ, 1,405 ಸಂಸ್ಥೆಗಳ ಪರವಾನಗಿಯನ್ನು ನವೀಕರಿಸಿಲ್ಲ.

ದಕ್ಷಿಣ ಭಾರತದ ಎನ್‌ಜಿಒಗಳಿಗೇ ಕುತ್ತು



ಬಿಗಿ ನಿಯಮ

ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯನ್ನು ಕೇಂದ್ರ ಸರ್ಕಾರವು ಹಲವು ಬಾರಿ ಬಿಗಿಗೊಳಿಸಿದೆ. ಕಾಯ್ದೆಯನ್ನು ಅತಿಹೆಚ್ಚು ಕಠಿಣಗೊಳಿಸಿದ್ದು 2020ರಲ್ಲಿ. 2022ರಲ್ಲಿ ಜಾರಿಗೆ ತಂದ ತಿದ್ದುಪಡಿಯಲ್ಲಿ ಕಾಯ್ದೆಗೆ ಗಣನೀಯ ಬದಲಾವಣೆಗಳನ್ನು ಮಾಡಲಾಗಿತ್ತು, ಅವುಗಳಲ್ಲಿ ಅತ್ಯಂತ ಪ್ರಮುಖವಾದುದು 'ಆಡಳಿತ ವೆಚ್ಚ'ದ್ದು.

ಈ ಹಿಂದೆ ಇದ್ದ ಕಾಯ್ದೆಯ ಪ್ರಕಾರ ಯಾವುದೇ ಸ್ವಯಂಸೇವಾ ಸಂಸ್ಥೆಯು ಪಡೆದುಕೊಂಡ ವಿದೇಶಿ ದೇಣಿಗೆಯಲ್ಲಿ ಗರಿಷ್ಠ ಶೇ 50ರಷ್ಟು ಮೊತ್ತವನ್ನು ಆಡಳಿತ ವೆಚ್ಚ ಎಂದು ಬಳಸಿಕೊಳ್ಳಬಹುದಿತ್ತು. 2020ರಲ್ಲಿ ಜಾರಿಗೆ ತಂದ ತಿದ್ದುಪಡಿಯಲ್ಲಿ ಈ ಸ್ವರೂಪದ ಬಳಕೆಯ ಪ್ರಮಾಣಕ್ಕೆ ಭಾರಿ ಮಿತಿ ಹೇರಲಾಯಿತು. ವಿದೇಶಿ ದೇಣಿಗೆಯಲ್ಲಿ ಆಡಳಿತ ವೆಚ್ಚದ ಗರಿಷ್ಠ ಪ್ರಮಾಣವನ್ನು ಶೇ 20ಕ್ಕೆ ಇಳಿಸಲಾಯಿತು. ಈ ಹಿಂದೆ ಆಡಳಿತ ವೆಚ್ಚವಾಗಿ ವಿದೇಶಿ ದೇಣಿಗೆಯಲ್ಲಿ ಹೆಚ್ಚು ಪ್ರಮಾಣವನ್ನು ಬಳಸುತ್ತಿದ್ದ ಸ್ವಯಂಸೇವಾ ಸಂಸ್ಥೆಗಳ ಕಾರ್ಯನಿರ್ವಹಣೆಗೆ ಈ ಮಿತಿಯು ಭಾರಿ ತೊಡಕಾಯಿತು. ಈ ಮಿತಿಯನ್ನು ಮೀರಿದ ಸ್ವಯಂಸೇವಾ ಸಂಸ್ಥೆಗಳ ವಿದೇಶಿ ದೇಣಿಗೆ ಪರವಾನಗಿಯನ್ನು ಕೇಂದ್ರ ಸರ್ಕಾರವು ರದ್ದು ಮಾಡಿತು. ಇಲ್ಲವೇ ಅವುಗಳ ಪರವಾನಗಿಯನ್ನು ವಿವಿಧ ಕಾರಣಗಳೊಡ್ಡಿ, ನವೀಕರಿಸದೇ ಇದ್ದುದ್ದರಿಂದ ಅವು ನಿಷ್ಕ್ರಿಯವಾದವು.

ಇದಲ್ಲದೇ, ಯಾವ ಉದ್ದೇಶಕ್ಕೆ ಎಂದು ದೇಣಿಗೆ ಪಡೆಯಲಾಗಿರುತ್ತದೆಯೋ ಅದೇ ಉದ್ದೇಶಕ್ಕೆ ದೇಣಿಗೆಯನ್ನು ಬಳಸಬೇಕು ಎಂಬುದು 2020ರಲ್ಲಿ ಜಾರಿಗೆ ತಂದ ಮತ್ತೊಂದು ಕಠಿಣ ನಿಯಮ. ಉದಾಹರಣೆಗೆ ನೆರೆ ಸಂತ್ರಸ್ತರಿಗೆ ಆಶ್ರಯ ಕಲ್ಪಿಸಲೆಂದು ಸ್ವಯಂಸೇವಾ ಸಂಸ್ಥೆಯೊಂದು ದೇಣಿಗೆ ಪಡೆದುಕೊಂಡಿದೆ. ಆ ದೇಣಿಗೆಯನ್ನು ಸಂಪೂರ್ಣವಾಗಿ ನೆರೆ ಸಂತ್ರಸ್ತರಿಗೆ ಆಶ್ರಯ ಕಲ್ಪಿಸಲೇ ಬಳಸಬೇಕು. ಅದನ್ನು ನೆರೆ ಸಂತ್ರಸ್ತರಿಗೆ ಉದ್ಯೋಗಾವಕಾಶ ಕಲ್ಪಿಸಲು ಅಥವಾ ಸ್ವಯಂಉದ್ಯೋಗ ಕಲ್ಪಿಸಲು ಬಳಸುವಂತಿಲ್ಲ. ಈ ಸ್ವರೂಪದ ಬಳಕೆಗಳನ್ನೂ ನೂತನ ನಿಯಮವು ಉಲ್ಲಂಘನೆ ಎಂದೇ ಪರಿಗಣಿಸುತ್ತದೆ.

ಒಂದು ಸ್ವಯಂಸೇವಾ ಸಂಸ್ಥೆಯು ಪಡೆದುಕೊಂಡ ವಿದೇಶಿ ದೇಣಿಗೆಯನ್ನು ಬೇರೊಂದು ಸ್ವಯಂಸೇವಾ ಸಂಸ್ಥೆಯೊಂದಿಗೆ ಹಂಚಿಕೊಳ್ಳಬಾರದು ಎಂಬುದು 2020ರಲ್ಲಿ ಜಾರಿಗೆ ತರಲಾದ ಕಠಿಣ ನಿಯಮಗಳಲ್ಲಿ ಒಂದು. ಅಂದರೆ ಎರಡು ಸ್ವಯಂಸೇವಾ ಸಂಸ್ಥೆಗಳು ಯಾವುದೋ ಒಂದು ಕಾರ್ಯಕ್ರಮಕ್ಕಾಗಿ ಒಟ್ಟಿಗೇ ದುಡಿಯುತ್ತಿದ್ದರೆ, ಅವು ಆ ಕಾರ್ಯಕ್ರಮದ ವೆಚ್ಚವನ್ನು ಪರಸ್ಪರ ಹಂಚಿಕೊಳ್ಳುವಂತಿಲ್ಲ. ಸಾಮಾನ್ಯವಾಗಿ ದೊಡ್ಡ ಸ್ವಯಂಸೇವಾ ಸಂಸ್ಥೆಯೊಂದು, ಹಲವು ಸಣ್ಣ ಸ್ವಯಂಸೇವಾ ಸಂಸ್ಥೆಗಳೊಟ್ಟಿಗೆ ಸಾಮಾಜಿಕ ಕಾರ್ಯ ನಡೆಸುತ್ತಿರುತ್ತದೆ. ಆದರೆ ಕಠಿಣ ನಿಯಮದ ಕಾರಣ ಆ ಸಣ್ಣ ಸಂಸ್ಥೆಗಳಿಗೆ ದೊಡ್ಡ ಸಂಸ್ಥೆಯು ವಿದೇಶಿ ದೇಣಿಗೆಯನ್ನು ನೀಡಲು ಅವಕಾಶವಿಲ್ಲ.

ಆಧಾರ: ಪಿಟಿಐ, ವಿದೇಶಿ ದೇಣಿಗೆ ನಿಯಂತ್ರಣ (ತಿದ್ದುಪಡಿ) ಕಾಯ್ದೆ–2020, ಎಫ್‌ಸಿಆರ್‌ಎ ಸೇವಾ ಪೋರ್ಟಲ್ ಮತ್ತು ಡ್ಯಾಶ್‌ಬೋರ್ಡ್

ವಿಜಯ್‌ಗೆ ಜಡೇಶ್ ಆ್ಯಕ್ಷನ್, ಕಟ್





ದುನಿಯಾ ವಿಜಯ್



ಜಡೇಶ್ ಕೆ.ಹಂಪಿ

ವಿಜಯ ಕುಮಾರ್(ದುನಿಯಾ ವಿಜಯ್) 'ಭೀಮ' ಸಿನಿಮಾ ರಿಲೀಸ್‌ಗೆ ಎದುರು ನೋಡುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಅವರ ಹೊಸ ಸಿನಿಮಾದ ಪೋಸ್ಟರ್ ಬಿಡುಗಡೆಯಾಗಿದೆ. 'ಕಾಟೇರ' ಕಥೆಗಾರ ಜಡೇಶ್ ಕೆ.ಹಂಪಿ ಸ್ಯಾಂಡಲ್‌ವುಡ್ 'ಸಲಗ'ನಿಗೆ ಆ್ಯಕ್ಷನ್, ಕಟ್ ಹೇಳಲಿದ್ದಾರೆ.

ಪ್ರಜ್ವಲ್ ದೇವರಾಜ್ ನಟನೆಯ 'ಜಂಟಲ್‌ಮ್ಯಾನ್' ಸಿನಿಮಾದಿಂದ ಚಂದನವನದಲ್ಲಿ ಜಡೇಶ್ ಖ್ಯಾತಿ ಪಡೆದಿದ್ದರು. ಇದಾದ ಬಳಿಕ ಶರಣ್ ನಟನೆಯ 'ಗುರು ಶಿಷ್ಯರು' ಸಿನಿಮಾ ಮೂಲಕ ತಮ್ಮ ನಿರ್ದೇಶನದ ಸಾಮರ್ಥ್ಯವನ್ನು ಅವರು ಸಾಬೀತುಪಡಿಸಿದ್ದರು. ಇತ್ತೀಚೆಗೆ ತೆರೆಕಂಡ 'ಕಾಟೇರ' ಸಿನಿಮಾದ ಕಥೆಗಾರ ಜಡೇಶ್, ನೈಜ ಘಟನೆಗಳನ್ನು ಆಧರಿಸಿದ ಮತ್ತೊಂದು ಕಥೆ ಹೆಣೆದಿದ್ದಾರೆ. ವಿಜಯ್ ಅವರ 29ನೇ ಸಿನಿಮಾ ಇದಾಗಿರುವ ಕಾರಣ, ಸದ್ಯಕ್ಕೆ ಚಿತ್ರಕ್ಕೆ 'VK29' ಎಂಬ ಶೀರ್ಷಿಕೆ ಇಡಾಗಿದ್ದು, 'ಇದು ಆಳಿದವರ ಕಥೆಯಲ್ಲ, ಅಳಿದು ಉಳಿದವರ ಕಥೆ..!' ಎನ್ನುವ ಅಡಿಬರಹ ನೀಡಲಾಗಿದೆ. 'ಕಾಟೇರ' ಸಿನಿಮಾಗೂ ಇದೇ ರೀತಿ 'ಹಿಂದಿರೋವ್ರಿಗೆ ದಾರಿ, ಮುಂದಿರೋವ್ನದ್ದು ಜವಾಬ್ದಾರಿ' ಎಂಬ ಪಂಚಿಂಗ್ ಅಡಿಬರಹವನ್ನು ನೀಡಲಾಗಿತ್ತು.

'VK29'ನಲ್ಲಿ ವಿಜಯ್ ಅವರ ಹಿರಿಯ ಮಗಳು ಮೋನಿಕಾ ತಂದೆಯ ಜೊತೆಗೆ ಮಗಳ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂದಿದೆ ಚಿತ್ರತಂಡ. 'ಭೀಮ' ಸಿನಿಮಾಗೆ ಬಂಡವಾಳ ಹೂಡಿರುವ ಜಗದೀಶ್ ಗೌಡ 'VK29' ಸಿನಿಮಾ ನಿರ್ಮಾಣ ಮಾಡಲಿದ್ದಾರೆ.

'ಕ್ಲಿಕ್'ಗೆ ನವೀನ್ ಶಂಕರ್ ಸಾಥ್



ಚಿತ್ರತಂಡದೊಂದಿಗೆ ನವೀನ್ ಶಂಕರ್

ಸಂಗೀತ ನಿರ್ದೇಶಕ ರವಿ ಬಸ್ರೂರು ಪುತ್ರ ಪವನ್ ಬಸ್ರೂರು ನಾಯಕನಾಗಿ ಅಭಿನಯಿಸಿರುವ 'ಕ್ಲಿಕ್' ಚಿತ್ರದ ಟ್ರೇಲರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ನವೀನ್ ಶಂಕರ್ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭ ಕೋರಿದರು.

ನ್ಯೂಯಾರ್ಕ್ ಟೈಮ್ಸ್ ಸ್ಕ್ವೇರ್‌ನ ಪರದೆಯಲ್ಲಿಯೂ ಈ ಟ್ರೇಲರ್ ಬಿಡುಗಡೆಗೊಂಡು ಗಮನ ಸೆಳೆದಿದೆ. 'ಮಕ್ಕಳಲ್ಲಿರುವ ಪ್ರತಿಭೆಯನ್ನು ಪೋಷಕರು ಗುರುತಿಸಬೇಕೆಂದು ಚಿತ್ರದಲ್ಲಿ ತೋರಿಸಿದ್ದಾರೆ. ಒಂದೇ ಸಲಕ್ಕೆ ಇಷ್ಟವಾಗುವ ಟ್ರೇಲರ್' ಎಂದರು ನವೀನ್ ಶಂಕರ್.

ಶಶಿಕುಮಾರ್ ಆ್ಯಕ್ಷನ್, ಕಟ್ ಹೇಳಿರುವ ಚಿತ್ರಕ್ಕೆ ಶಶಿಕಿರಣ್ ಬಂಡವಾಳ ಹೂಡಿದ್ದಾರೆ. ವಿಶ್ವಾಸ್ ಕೌಶಿಕ್ ಸಂಗೀತ, ಆಕಾಶ್ ಪರ್ವ ಹಿನ್ನೆಲೆ ಸಂಗೀತವಿದೆ. ಜೀವನ್ ಗೌಡ ಅವರ ಛಾಯಾಚಿತ್ರಗ್ರಹಣ, ವಿನಯ್ ಕುಮಾರ್ ಅವರ ಸಂಕಲನವಿದೆ. ಮಾ.ಕಾರ್ತಿಕ್, ಚಂದ್ರಕಲಾ ಮೋಹನ್, ರಚನಾ ದಶರತ್, ಸಂಜು ಬಸಯ್ಯ ಸೇರಿದಂತೆ ಹಲವರು ಚಿತ್ರದ ತಾರಾಬಳಗದಲ್ಲಿದ್ದಾರೆ.

'ನಾವು ಯಾವ ಕೆಲಸ ಮಾಡುತ್ತೇವೋ ಅದರಲ್ಲಿ ಕ್ಲಿಕ್ ಆಗಬೇಕು. ನಮ್ಮ ಆಸೆಗಿಂತಲೂ ಮಕ್ಕಳ ಮನದಲ್ಲೇನಿದೆ, ಅವರಿಗೆ ಯಾವುದರಲ್ಲಿ ಆಸಕ್ತಿ ಇದೆ ಎಂದು ಗುರುತಿಸಿ, ಪ್ರೋತ್ಸಾಹಿಸಿದರೆ ಅವರು ಸಾಧನೆ ಮಾಡುತ್ತಾರೆ ಎನ್ನುವ ಸಂದೇಶ ಚಿತ್ರದಲ್ಲಿದೆ' ಎಂದರು ಚಂದ್ರಕಲಾ ಮೋಹನ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಕಾಂಗ್ರೆಸ್ ಸಂಸದ ಮತ್ತು ನಾಯಕ ರಾಹುಲ್ ಗಾಂಧಿ ಅವರು, ಬಿಜೆಪಿಯ ಚಿಹ್ನೆಯಾದ 'ಕಮಲ'ದ ಚಿತ್ರ ಇರುವ ಟಿ–ಶರ್ಟ್ ಧರಿಸಿರುವ ಫೋಟೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗುತ್ತಿದೆ. ಅದರೊಟ್ಟಿಗೆ, 'ನಾವು ಮೊದಲೇ ಹೇಳುತ್ತಿದ್ದೆವು, ರಾಹುಲ್ ಗಾಂಧಿ ಬಿಜೆಪಿಯ ಏಜೆಂಟ್ ಎಂದು. ಈಗ ಅದು ಸಾಬೀತಾಗಿದೆ' ಎಂಬ ಸಂದೇಶವನ್ನೂ ಹಂಚಿಕೊಳ್ಳಲಾಗಿದೆ. ಆದರೆ ಇದು ತಿರುಚಲಾದ ಚಿತ್ರ.



ಇದು ಮೂಲ ಚಿತ್ರ. ಕಾಂಗ್ರೆಸ್‌ನ ಐಟಿ ವಿಭಾಗದ ಮುಖ್ಯಸ್ಥೆ ಸುಪ್ರಿಯಾ ಶ್ರೀನೆತ್ ಅವರು ಜನವರಿ 14ರಂದು ಈ ಚಿತ್ರವನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದರು. ಮೂಲಚಿತ್ರದಲ್ಲಿ ರಾಹುಲ್ ಗಾಂಧಿ ಧರಿಸಿರುವ ಟಿ–ಶರ್ಟ್‌ನ ಹಿಂಭಾಗದಲ್ಲಿ ಯಾವುದೇ ಚಿತ್ರ ಇಲ್ಲ.



ಗುಂಡಣ್ಣ



ನುಡಿ ಬೆಳಗು





ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

ನಾನು ಎಂಬುದು ನಾನಲ್ಲ

ಪುನೀತ್ ರಾಜ್ ಕುಮಾರ್ ಅವರು ತಮ್ಮ ಕೊನೆಯ ಚಿತ್ರ ಗಂಧದಗುಡಿ ಚಿತ್ರೀಕರಣಕ್ಕೆ ಈ ಪಾತಗುಡಿ ಎಂಬ ಸ್ಥಳಕ್ಕೆ ಬಂದಿದ್ದರು. ಅಣಶಿ ಅಭಯಾರಣ್ಯದ ದಟ್ಟ ಶೋಲಾ ಕಾಡಿನ ನಡುವೆ ಈ ಪುಟಾಣಿ ಹಳ್ಳಿ ನೆಲೆಸಿದೆ. ಕಚ್ಚಾ ರಸ್ತೆ ಹಿಡಿದು ಇಪ್ಪತ್ತೆರಡು ಮೈಲಿ ಹೋದರೆ ಇಲ್ಲಿಗೆ ತಲುಪಬಹುದು. ಕುಣಬಿ ಬುಡಕಟ್ಟು ಜನಾಂಗದ ಹದಿಮೂರು ಮನೆಗಳು ಇಲ್ಲಿವೆ. ನಗರ ಪ್ರಪಂಚದ ಕಿಂಚಿತ್ತೂ ಒಡನಾಟ ಇಲ್ಲದ ಇಲ್ಲೊಂದು ಪುಟ್ಟ ಶಾಲೆ ಇದೆ. ಅದಕ್ಕೊಂದು ಶೀಟಿನ ಚಾವಣಿ. ಪ್ರಶಾಂತ್ ಎಂಬ ಸ್ಥಳೀಯ ಯುವಕ ಇಲ್ಲಿನ ಮೇಷ್ಟ್ರು.

ಪುನೀತ್ ಈ ಶಾಲೆಗೆ ಭೇಟಿ ಕೊಟ್ಟು ಅಲ್ಲಿನ ಮಕ್ಕಳಿಗೆ 'ನಾನು ಯಾರು ನಿಮಗೆ ಗೊತ್ತೇ?' ಎಂದು ಕೇಳಿದಾಗ ಚಿಣ್ಣರು ಗೊತ್ತಿಲ್ಲ ಎಂದು ತಲೆಯಾಡಿಸಿದರು. 'ನಮ್ಮ ತಂದೆ ಯಾರೆಂದು ಗೊತ್ತೆ?' ಎಂದಾಗ ಅದಕ್ಕೂ ಇಲ್ಲ ಎಂಬುದೇ ಉತ್ತರ. ಸಿನಿಮಾ, ಟಿವಿಗಳ ಸಂಪರ್ಕವಿಲ್ಲದ ಈ ನಿಸರ್ಗದತ್ತ ಪ್ರದೇಶದಲ್ಲಿ ಸಿಕ್ಕ ಉತ್ತರದಿಂದ ಪುನೀತ್ ಒಮ್ಮೆ ನಕ್ಕರಂತೆ. 'ನಾವು ಮಹಾನ್ ಪ್ರಸಿದ್ಧರು' ಎಂಬ ಭ್ರಮೆಯಲ್ಲಿ ಬದುಕುತ್ತೇವೆ. ಈ ಮಕ್ಕಳ ಉತ್ತರ ನಾನು ಎಂಬ ಸಣ್ಣ ಅಹಂಕಾರವನ್ನೂ ಕರಗಿಸಿತು ಎಂದರಂತೆ. ಮಕ್ಕಳ ಜೊತೆ ಆಡಿ ನಲಿದು ಎರಡು ದಿನ ಒಬ್ಬ ಸಾಮಾನ್ಯ ಮನುಷ್ಯನಾಗಿ ಈ ಹಾಡಿಯಲ್ಲಿ ಕಾಲಕಳೆದರು ಪುನೀತ್. ಅವರು ಆ ದಿನ ಪಡೆದ ದಿವ್ಯ ಜ್ಞಾನ ಎಂದರೆ ನಾನೆಂಬ ಅಹಮ್ಮಿಕೆಯ ನಾಶ.

ನಿರ್ಮಲ ಚಿತ್ತ ಇದ್ದವರಿಗಷ್ಟೇ ಈ ಹೊಳಹು ಸಿಗುವುದು. ಮಾನವೀಯತೆ ಖನಿಯಾಗಿದ್ದ ಪುನೀತ್ ಈ ಸಣ್ಣ ಘಟನೆಯಿಂದ ಒಂದು ಸತ್ಯದ ಸಾಕ್ಷಾತ್ಕಾರ ಕಂಡುಕೊಂಡರು. 'ನಾನು ಯಾರು' ಎಂಬ ಆತ್ಮದ ಪ್ರಶ್ನೆಗೆ ಪ್ರಕೃತಿ ಒಮ್ಮೆ ಮಾತ್ರ ಕೊಡಬಲ್ಲ ಮೌನದ ಉತ್ತರವಿದು.

ಲಂಕೇಶರ ನಾಟಕದಲ್ಲಿ ದೊರೆ ನಾದಿರ್ ತಾನೇ ಸರ್ವಶ್ರೇಷ್ಠನೆಂಬ ಅಹಂಕಾರದ ತುತ್ತ ತುದಿಯಲ್ಲಿರುತ್ತಾನೆ. ಇವನ ದೇಹದ ಕಾಯಿಲೆ ವಾಸಿಮಾಡಲು ಹಕೀಮ್ ಅಲವಿ ಖಾನ್ ಬರುತ್ತಾನೆ. ದೇಹದ ಜಾಡ್ಯಕ್ಕಿಂತ ರಾಜನ ಮನಸ್ಸಿಗೆ ಅಪಾಯಕಾರಿ ಸೊಕ್ಕಿನ ಕಾಯಿಲೆ ಅಂಟಿರುವ ಸಂಗತಿ ಆತನಿಗೆ ಗೊತ್ತಾಗುತ್ತದೆ. ರಾಜ ನಿನ್ನ ಅಹಂ ಬಿಟ್ಟು, ಮಾಮೂಲಿ ಮನುಷ್ಯನಾದರಷ್ಟೇ ನೀನು ಗುಣಮುಖನಾಗಲು ಸಾಧ್ಯ ಎಂದು ವಿವರಿಸುತ್ತಾನೆ. ಮೊದಮೊದಲು ಹಟಮಾರಿಯಾಗುವ ದೊರೆ ತನ್ನ ಪ್ರಾಣ ಉಳಿಸಿಕೊಳ್ಳಲು ಕೊನೆಗೆ ಗರ್ವ ತ್ಯಜಿಸಿ ಸಾಮಾನ್ಯ ವ್ಯಕ್ತಿಯಾಗಿ ವಾಸಿಯಾಗುತ್ತಾನೆ.

ಹೆಸರು, ಹಣ, ವಿದ್ಯೆ, ಪ್ರಸಿದ್ಧಿ ಎಲ್ಲವನ್ನೂ ಪಡೆದವರು ಮತ್ತೆ ಮತ್ತೆ ಅದನ್ನೇ ಗಳಿಸಲು ಹಂಬಲಿಸುತ್ತಾರೆ. ಜಗತ್ತು ತನ್ನ ಗುರುತಿಸುವಲ್ಲಿ ಕೊಂಚ ತಡ ಮಾಡಿದರೂ ಮಾನ ಹೋಯಿತೆಂಬಂತೆ ಎಗರಾಡುತ್ತಾರೆ. ಉನ್ನತಿ ಗಳಿಸಿದಷ್ಟೂ ನಡೆ ನುಡಿಯಲ್ಲಿ ಅಹಂಕಾರ ನುಸುಳುತ್ತದೆ. ತಮ್ಮನ್ನು ತಾವೇ ವೈಭವೀಕರಿಸಿಕೊಂಡು ಬದುಕುವ ಜನ ಮಾನವೀಯ ಮೌಲ್ಯಗಳನ್ನೇ ಮರೆಯುತ್ತಾರೆ. ಹೊಗಳಿಕೆ ದುಶ್ಚಟವಾಗುತ್ತದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ಜನವರಿ 24, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಹೇಮಂತ ಋತು ತಿಥಿ: ಪುಷ್ಯ ಶುಕ್ಲ ಚತುರ್ದಶಿ ಗಂ. 21-51 ನಕ್ಷತ್ರ: ಪುನರ್ವಸು ಅಹೋರಾತ್ರ ಯೋಗ: ವೈಧೃತಿ ಗಂ. 07-39 ಕರಣ: ಗರ ಗಂ. 09-12, ಮಕರ ಮಾಸದ 09 ನೇ ದಿನ, ಮಳೆನಕ್ಷತ್ರ: ಉತ್ತರಾಷಾಢ 4.

ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 07-01 ಸೂರ್ಯಾಸ್ತ : 06-23
ಮುಸ್ಲಿಂ ದಿನಾಂಕ : 12 ರಜಬ್
ಅದೃಷ್ಟ ಸಂಖ್ಯೆ : 5, 9

ಮೇಷ: ತೆಗೆದುಕೊಂಡಿರುವ ನಿರ್ಧಾರ ಸರಿಯಾದುದೆಂದು ನಿಮಗೆ ಮನವರಿಕೆಯಾಗುವುದು. ನಿಮ್ಮ ಲೇಖನಗಳಿಗೆ ತೀಕ್ಷ್ಣ ಪ್ರತಿಕ್ರಿಯೆ ವ್ಯಕ್ತವಾಗುತ್ತದೆ. ಲಾಭಕ್ಕಾಗಿ ಇನ್ನೊಬ್ಬರಿಗೆ ಮೋಸ ಮಾಡಬೇಡಿ.

ವೃಷಭ: ಜೀವನಕ್ಕೆ ಆದರ್ಶಗಳ ಜತೆಗೆ ಹಿರಿಯರ ಅನುಭವ ಸಲಹೆ ಅಳವಡಿಸಿಕೊಳ್ಳುವಿರಿ. ಚರ್ಮದ ವಸ್ತುಗಳ ತಯಾರಿ ಅಥವಾ ಮಾರಾಟದಿಂದ ಲಾಭ ಬರಲಿದೆ. ಹೆಂಡತಿಯ ಆರೋಗ್ಯದಲ್ಲಿ ವ್ಯತ್ಯಾಸಗಳಾಗಬಹುದು.

ಮಿಥುನ: ಹಿಂದೆ ಕೈಗೊಂಡ ನಿರ್ಧಾರಗಳಲ್ಲಿ ಕೆಲ ಬದಲಾವಣೆಗಳನ್ನು ಮಾಡಿಕೊಳ್ಳುವುದರಿಂದ ವ್ಯವಹಾರಗಳಲ್ಲಿ ಉತ್ತಮ ಧನಲಾಭ ಕಾಣುವಿರಿ. ಕಾನೂನು ವಿದ್ಯಾರ್ಥಿಗಳಿಗೆ ಪರಿಶ್ರಮದಿಂದ ಯಶಸ್ಸು ಲಭಿಸಲಿದೆ.

ಕರ್ಕಾಟಕ: ಜೀವನಕ್ರಮದಲ್ಲಿ ಬದಲಾವಣೆಗಳನ್ನು ಮಾಡಿಕೊಳ್ಳಬೇಕಾದ ಅನಿವಾರ್ಯತೆ ಈ ದಿನ ನಿಮಗಿದೆ. ಹಳೆಯ ವಾಹನ ಮಾರಾಟದ ವಿಷಯ ಕೈಬಿಡುವುದು ಉತ್ತಮ. ಸಂತಾನದ ಶುಭ ಸುದ್ದಿ ಕೇಳಿ ಸಂತಸ ಪಡುವಿರಿ.

ಸಿಂಹ: ಸರಕು ಸಾಗಣೆದಾರರಿಗೆ ಆದಾಯದಲ್ಲಿ ಗಣನೀಯ ಹೆಚ್ಚಳ ಕಂಡು ಬಂದರೂ ಕಾರ್ಯದ ಒತ್ತಡದಿಂದ ವೃತ್ತಿಯಲ್ಲಿ ನಿರಾಶೆಯಾಗುವುದು. ಕಾಫಿ ಬೆಳೆಗಾರರಿಗೆ ಉತ್ತಮ ಆದಾಯವಿದ್ದು, ವರಮಾನದಲ್ಲಿ ಕೊರತೆ ಕಾಣದು.

ಕನ್ಯಾ: ಸರ್ಕಾರಿ ಗುತ್ತಿಗೆ ಕೆಲಸದ ವಿಪುಲ ಅವಕಾಶಗಳು ಒದಗಿ ಬರುವ ಸೂಚನೆ ಕಾಣುವಿರಿ. ಆದಾಯದಲ್ಲಿ ಹೆಚ್ಚಳವಿರುವುದು. ಪತ್ನಿಯೊಂದಿಗೆ ಅಭಿಪ್ರಾಯ ವಿನಿಮಯಗಳಿಂದ ಮನಸ್ಸಿಗೆ ನೆಮ್ಮದಿ ಮೂಡುವುದು.

ತುಲಾ: ತಾಂತ್ರಿಕ ಕ್ಷೇತ್ರದಲ್ಲಿ ಜೀವನ ನಡೆಸುವವರು ಉದ್ಯೋಗದಲ್ಲಿ ದಂಡ ಕಟ್ಟುವ ಸ್ಥಿತಿ ಈ ದಿನ ಎದುರಾಗಬಹುದು ಜಾಗ್ರತೆಯಿಂದ ಕೆಲಸ ಮಾಡಿ. ಉತ್ತಮವಾಗಿ ಲೆಕ್ಕ ಪತ್ರಗಳ ಪರಿಶೀಲನೆ ನಡೆಸುವಿರಿ.

ವೃಶ್ಚಿಕ: ಅಪರೂಪದ ಅತಿಥಿಗಳ ಆಗಮನದಿಂದ ಮನೆಯಲ್ಲಿ ಸಂತಸದ ವಾತಾವರಣ. ಕಂಟ್ರಾಕ್ಟರ್‌ರಿಗೆ ಬಾಕಿ ಇದ್ದಂತಹ ಹಣ ಕೈಸೇರಲಿದೆ. ಸಂಘ ಸಂಸ್ಥೆಯಲ್ಲಿ ಸ್ಥಾನಮಾನ ಲಭ್ಯವಾಗುವುದು.

ಧನು: ಅವಕಾಶವನ್ನು ವ್ಯರ್ಥವಾಗದಂತೆ ಪಡೆದುಕೊಳ್ಳಲು ಪ್ರಯತ್ನಪಡುವುದು ಅಗತ್ಯ. ಬರಬೇಕಿದ್ದ ಹಣ ಹಿಂದಿರುಗಿ ಬಂದು ಕೈ ಸೇರಲಿದೆ. ಮಕ್ಕಳ ವಿಷಯದಲ್ಲಿ ಅಸಡ್ಡೆ ತೋರಿಸಬೇಡಿ.

ಮಕರ: ಮಾತಿನ ಬುದ್ಧಿವಂತಿಕೆ, ಮಾತಿನ ಚತುರತೆಯಿಂದ ಇತರರನ್ನು ಗೆಲ್ಲುವ ಸಾಮರ್ಥ್ಯ ನಿಮ್ಮಲ್ಲಿದೆ. ತೀಕ್ಷ್ಣವಾದ ಮಾತುಗಳು ಬೇರೆಯವರ ದುಃಖಕ್ಕೆ ಕಾರಣವಾಗದಂತೆ ಗಮನಿಸಿ. ಪರಿಹಾರ ಧನ ಕೈ ಸೇರಲಿದೆ.

ಕುಂಭ: ವಿದ್ಯಾಭ್ಯಾಸದಲ್ಲಿ ಉದಾಸೀನ ತೋರುತ್ತಿದ್ದ ವಿದ್ಯಾರ್ಥಿಗಳಿಗೆ ವ್ಯಾಸಂಗದಲ್ಲಿ ಆಸಕ್ತಿ ಉಂಟಾಗಲಿದೆ. ಆಹಾರ ಪದಾರ್ಥದ ವ್ಯಾಪಾರ ಮಾಡುವವರಿಗೆ ಆದಾಯ ಲಭಿಸಲಿದೆ.


ಮೀನ: ಉದ್ಯೋಗಕ್ಕೆ ಸಂಬಂಧಿಸಿದಂತೆ ಹೊಸ ಜನರ ಸಂಪರ್ಕವು ಧನಲಾಭ ತರಲಿದೆ. ವೈಯಕ್ತಿಕ ಜೀವನದ ಸಮಸ್ಯೆಗಳು ಬಗೆಹರಿದು ಮನಸ್ಸಿಗೆ ನೆಮ್ಮದಿ ಮೂಡಲಿದೆ. ಕುಲದೇವರ ಸೇವೆಯಿಂದ ಹೆಚ್ಚಿನ ಫಲ ಲಭಿಸಲಿದೆ.

ಪದಬಂಧ 5570

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಮೆಲುನಗೆ ಸೂಸುತ್ತಾ ಆಡಿದ ನಯವಾದ ಮಾತು (4)
4.ಆಳಿನ ಹತ್ತಿರವಿರುವ ಇಣಚಿ (3)
5.ಭಂಡ ಧೈರ್ಯವುಳ್ಳವನ ಅಸಲು (4)
6.ಸಂದರ್ಭಕ್ಕೆ ಸರಿಯಾಗಿ ಕಾಣಿಸಿದ ಕತ್ತೆ (3)
8.ಕೊನೆಗೆ ಜಯವಿದ್ದರೂ ಇದು ಸೋಲು! (4)
9.ವರ ಪಡೆದಿರುವ ಬೇಡ (4)
11.ದನದ ಸಲುವಾಗಿ ನಡೆದ ಯುದ್ಧ (3)
14.ವನದ ನಡುವೆಯೇ ಕೀಲುದೆಸೆ (4)
16.ಸನಿಹದಲ್ಲಿರುವ ಒಳ್ಳೆಯ ಸ್ನೇಹಿತ (3)
17.ಪರವಾಗಿಯೇ ಇತರರಿಗೆ ವಹಿಸಿಕೊಡುವುದು! (4)

ಮೇಲಿಂದ ಕೆಳಕ್ಕೆ
1.ಅರೆ ಜೀರ್ಣವಾದ ಆಹಾರವನ್ನು ಮತ್ತೆ ತಿನ್ನುವಿಕೆ (3)
2.ಬಡಿದಾಗ ಗಾಡಿ ತಿರುಗಿತಲ್ಲಾ! (2)
3.ಕಟ ಕಟ ಶಬ್ದ ಮಾಡುವ ಬಾಗಿಲು (3)
4.ಅಪ್ಪನ ಈ ರೂಪ ಬಲು ವಿರಳ! (4)
6.ಗಾಯಗೊಂಡಿರುವ ಹಾಡುಗಾರ (3)
7.ವನದ ತುದಿಯಲ್ಲಿರುವ ಮನೆ (3)
10.ಪುಸ್ತಕದ ಮೇಲುಹೊದಿಕೆ (4)
12.ತೆವಳುತ್ತಿರುವವನ ಉತ್ಕಟವಾದ ಇಚ್ಛೆ (3)
13.ಆ ಸಾರೆ ಸಿಕ್ಕಿದ ಆಶ್ರಯ (3)
15.ಪದಾತಿಯಲ್ಲಿರುವ ಗಂಡ ತಿರುಗಿದ್ದಾನಲ್ಲಾ? (2)



5569ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉತ್ತೇಜನ 3.ಜನನಿ
5.ಸಮೀಪ 7.ನಯನ
8.ವಿಧಾನಸೌಧ
11.ಅಬಲೆ 12.ನಿಯಮ
15.ಗುಲಾಬಿ 16.ಕಟ್ಟುಕತೆ

ಮೇಲಿಂದ ಕೆಳಕ್ಕೆ:
1.ಉಲ್ಲಾಸ 2.ನಲ್ಲಿ
3.ಜನಾನ 4.ನಿಬಿಡ
6.ಪದವಿ 7.ನರ್ತನಶಾಲೆ
9.ಧಮನಿ 10.ಬೆರಗು
11.ಅಮಲು 13.ಮಮತೆ
14.ಮಂಕ

ಸುಡೊಕು 5955

3					8	2		6
	5		4	9				3
		8			2		5	
	3			4				1
		1	7		5	6	2	
	6			1				
6			5	2		1		7
	1				4		6	
9		5		7		3		8


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5954 ಸುಡೊಕು

2	5	4	8	7	6	1	3	9
7	9	1	2	5	3	6	4	8
8	3	6	1	4	9	7	2	5
4	7	3	5	1	2	8	9	6
6	1	5	9	8	4	3	7	2
9	2	8	6	3	7	4	5	1
1	4	9	3	6	5	2	8	7
3	6	2	7	9	8	5	1	4
5	8	7	4	2	1	9	6	3

ಷೇರುಪೇಟೆ ವಹಿವಾಟು 1053



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	21,571
ಇಂದಿನ ಅಂತ್ಯ	21,238
▼	333
ದಿನದ ಕನಿಷ್ಠ	21,192

ವಿನಿಮಯ ದರ

$ ಡಾಲರ್	83.15
£ ಪೌಂಡ್	105.85
€ ಯುರೊ	90.58
¥ ಯೆನ್ (100ಕ್ಕೆ)	56

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹572

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ನೆನ್ನೆಯ ದರ)

ಶೇಂಗಾ (ರಿಫೈನ್ಡ್)	₹1530 (1550)
ಸೋಯಾ (ರಿಫೈನ್ಡ್)	₹905 (905)
ಸೂರ್ಯಕಾಂತಿ (ರಿಫೈನ್ಡ್)	₹920 (920)
ಪಾಮೋಲಿನ್	₹855 (848)

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1600-1800
ಮಧ್ಯಮ	₹1000-1500
ಸಣ್ಣ	₹500-1000

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹158
ಆರ್‌ಎಸ್‌ಎಸ್-5	₹152
ಗುಡ್ ಲಾಟ್	₹136

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹122-472
ದ್ವಿತಳಿ (ಬಿ.ವಿ)	₹177-560

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7800-9650
ಪುತ್ತೂರು	₹5500-9200

ಆಭರಣ ತಯಾರಿಕೆ ಸಾಧನಗಳ ಆಮದು ಸುಂಕ ಶೇ 15ಕ್ಕೆ ಏರಿಕೆ

ನವದೆಹಲಿ (ಪಿಟಿಐ): ಚಿನ್ನ ಮತ್ತು ಬೆಳ್ಳಿಯ ಆಭರಣ ತಯಾರಿಕೆಯಲ್ಲಿ ಬಳಸುವ ಪಿನ್, ವೈರ್, ಮಣಿಗಳಂತಹ ವಸ್ತುಗಳ ಮೇಲಿನ ಆಮದು ಸುಂಕವನ್ನು ಹಣಕಾಸು ಸಚಿವಾಲಯ ಶೇ 10ರಿಂದ ಶೇ 15ಕ್ಕೆ ಹೆಚ್ಚಿಸಿದೆ. ಇದಲ್ಲದೇ ಈ ಲೋಹಗಳಿಂದ ತಯಾರಿಸಿದ ನಾಣ್ಯಗಳ ಮೇಲಿನ ಕಸ್ಟಮ್ ಸುಂಕವನ್ನೂ ಹೆಚ್ಚಿಸಲಾಗಿದೆ. ಜನವರಿ 22ರಿಂದ ಅನ್ವಯ ಆಗುವಂತೆ ಇದು ಜಾರಿಗೆ ಬಂದಿದೆ.

ಈ ಸುಂಕವು ಮೂಲ ಕಸ್ಟಮ್ ಸುಂಕ ಶೇ 10 (ಬಿಸಿಡಿ) ಮತ್ತು ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್ (ಎಐಡಿಸಿ) ಶೇ 5 ಒಳಗೊಂಡಿರುತ್ತದೆ. ಆದರೆ, ಸಮಾಜ ಕಲ್ಯಾಣ ಸೆಸ್‌ನಿಂದ (ಎಸ್‌ಡಬ್ಲ್ಯುಎಸ್) ವಿನಾಯಿತಿ ನೀಡಲಾಗಿದೆ.

ಸೆನ್ಸೆಕ್ಸ್ 1,053, ನಿಫ್ಟಿ 333 ಅಂಶ ಇಳಿಕೆ: ಕರಗಿದ ಸಂಪತ್ತು

₹8.50 ಲಕ್ಷ ಕೋಟಿ ಇಳಿಕೆ

ಮುಂಬೈ (ಪಿಟಿಐ): ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ ಮಂಗಳವಾರ 1,053 ಅಂಶ ಇಳಿಕೆ ಆಗಿದ್ದರಿಂದ ಒಂದೇ ದಿನ ಹೂಡಿಕೆದಾರರ ಸಂಪತ್ತು ₹8.50 ಲಕ್ಷ ಕೋಟಿ ಕರಗಿದೆ.

ಎಚ್‌ಡಿಎಫ್‌ಸಿ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್ ಮತ್ತು ಎಸ್‌ಬಿಐ ಷೇರುಗಳ ಇಳಿಕೆಯಿಂದ ಸೆನ್ಸೆಕ್ಸ್ 70,370 ಅಂಶಕ್ಕೆ ಅಂತ್ಯಗೊಂಡಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 333 ಅಂಶ ಇಳಿಕೆ ಕಂಡು 21,238ಕ್ಕೆ ಮುಟ್ಟಿತ್ತು.

ಉದ್ಯಮ ಸಂಸ್ಥೆಗಳ ತ್ರೈಮಾಸಿಕ ಫಲಿತಾಂಶವು ಆಶಾದಾಯಕವಾಗಿಲ್ಲದ ಕಾರಣ ಷೇರು ಮಾರಾಟದ ಒತ್ತಡ ಸೃಷ್ಟಿಯಾಯಿತು ಎಂದು ಷೇರು ದಲ್ಲಾಳಿಗಳು ಹೇಳಿದ್ದಾರೆ.

'ಇಂದು ಮಾರುಕಟ್ಟೆಯು ಸಕಾರಾತ್ಮಕವಾಗಿಯೇ ಆರಂಭವಾದರೂ ಬಳಿಕ ನಿರಂತರ ಕುಸಿತವನ್ನೇ ದಾಖಲಿಸಿತು. ಹಣಕಾಸಿನಂತಹ ಪ್ರಮುಖ ಕ್ಷೇತ್ರಗಳು ಭಾರಿ ನಷ್ಟಕ್ಕೆ ಒಳಗಾದವು. ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಭಾರಿ ಪ್ರಮಾಣದಲ್ಲಿ ಷೇರು ಮಾರಾಟಕ್ಕೆ ಇಳಿದರು. ಮಧ್ಯಪ್ರಾಚ್ಯದಲ್ಲಿನ ಸಂಘರ್ಷ, ಮಾರುಕಟ್ಟೆಯು ಇತ್ತೀಚೆಗೆ ಸ್ವಲ್ಪ ಮಟ್ಟಿನ ಏರಿಕೆ ಕಂಡದ್ದರ ಲಾಭ ಪಡೆಯುವ ಧಾವಂತದಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಷೇರು ಮಾರಾಟ ಮಾಡಿದರು' ಎಂದು ಜಿಯೊಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ವಿನೋದ್ ನಾಯರ್ ಹೇಳಿದ್ದಾರೆ.

ಇಂಡಸ್‌ಇಂಡ್ ಬ್ಯಾಂಕ್ (ಶೇ 6.13), ಎಸ್‌ಬಿಐ (ಶೇ 3.99), ಹಿಂದೂಸ್ತಾನ್ ಯೂನಿಲಿವರ್ (ಶೇ 3.82), ಆಕ್ಸಿಸ್ ಬ್ಯಾಂಕ್ (ಶೇ 3.41) ಮತ್ತು ಎಚ್‌ಡಿಎಫ್‌ಸಿ ಬ್ಯಾಂಕ್ (ಶೇ 3.23) ಷೇರುಗಳು ಇಳಿಕೆ ಆಗಿವೆ. ಸನ್‌ಫಾರ್ಮಾ, ಭಾರ್ತಿ ಏರ್‌ಟೆಲ್, ಐಸಿಐಸಿಐ ಬ್ಯಾಂಕ್, ಪವರ್‌ಗ್ರಿಡ್, ಟಿಸಿಎಸ್ ಮತ್ತು ಬಜಾಜ್ ಫಿನ್‌ಸರ್ವ್ ಗಳಿಕೆ ಕಂಡಿವೆ.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 2.95ರಷ್ಟು ಇಳಿದಿದೆ. ರಿಯಾಲ್ಟಿ (ಶೇ 5.46), ಸೇವೆ (ಶೇ 4.06), ಲೋಹ (ಶೇ 3.97), ತೈಲ ಮತ್ತು ಅನಿಲ (ಶೇ 3.96), ಇಂಧನ (ಶೇ 3.70) ಸರಕು, ಎಫ್‌ಎಂಸಿಜಿ, ಹಣಕಾಸು ಸೇವೆ ಇಳಿಕೆ ಕಂಡಿವೆ. ಹೆಲ್ತ್‌ಕೇರ್ ಸೂಚ್ಯಂಕ ಶೇ 1.02ರಷ್ಟು ಏರಿಕೆ ಆಗಿದೆ.

ಹಾಂಗ್‌ಕಾಂಗ್‌ನ ಹ್ಯಾಂಗ್ ಶೆಂಗ್ ಶೇ 2.63, ಚೀನಾದ ಶಾಂಘೈ ಕಾಂಪೋಸಿಟ್ ಶೇ 0.52ರಷ್ಟು ಏರಿದ್ದರೆ, ಜಪಾನ್‌ನ ನಿಕೇಯ್ ಶೇ 0.8ರಷ್ಟು ಇಳಿದಿದೆ. ಬ್ರೆಂಟ್ ಕಚ್ಚಾ ತೈಲ ಪ್ರತಿ ಬ್ಯಾರಲ್‌ಗೆ ಶೇ 0.40ರಷ್ಟು ಕಡಿಮೆ ಆಗಿ, 79.74 ಡಾಲರ್ ಆಗಿದೆ.

ಗಳಿಕೆ ಕಂಡ ಕಂಪನಿಗಳು (ಶೇಕಡಾವಾರು)

7.05	ಸಿಪ್ಲಾ
3.93	ಸನ್‌ಫಾರ್ಮಾ
3.05	ಭಾರ್ತಿ ಏರ್‌ಟೆಲ್
2.02	ಐಸಿಐಸಿಐ ಬ್ಯಾಂಕ್
0.97	ಹೀರೊ ಮೋಟೊಕಾರ್ಪ್

ಇಳಿಕೆ ಕಂಡ ಕಂಪನಿಗಳು

-6.10	ಇಂಡಸ್‌ಇಂಡ್ ಬ್ಯಾಂಕ್
-5.89	ಕೋಲ್ ಇಂಡಿಯಾ
-5.02	ಒಎನ್‌ಜಿಸಿ
-4.69	ಅದಾನಿ ಪೋರ್ಟ್ಸ್
-4.62	ಎಸ್‌ಬಿಐ ಲೈಫ್ ಇನ್ಶೂರೆನ್ಸ್

ಜೀ ಮಾರುಕಟ್ಟೆ ಮೌಲ್ಯ ₹5,500 ಕೋಟಿ ಇಳಿಕೆ

ನವದೆಹಲಿ (ಎಎಫ್‌ಪಿ): ಜಪಾನ್‌ನ ಸೋನಿ ಮತ್ತು ಭಾರತದ ಜೀ ಎಂಟರ್‌ಟೈನ್‌ಮೆಂಟ್ ನಡುವಣ ವಿಲೀನದ ಒಪ್ಪಂದವು ಮುರಿದು ಬಿದ್ದಿದ್ದರಿಂದ ಜೀ ಷೇರುಗಳ ಮೌಲ್ಯವು ಮಂಗಳವಾರ ಶೇ 30ರಷ್ಟು ಕುಸಿದಿವೆ. ಇದರಿಂದ ಕಂಪನಿಯ ಮಾರುಕಟ್ಟೆ ಮೌಲ್ಯವು ₹5,500 ಕೋಟಿಯಷ್ಟು ಕುಸಿದಿದೆ.

ವಿಲೀನದ ಬಳಿಕ ಹೊಸ ಸಂಸ್ಥೆಯನ್ನು ಯಾರು ಮುನ್ನಡೆಸುತ್ತಾರೆ ಎಂಬುದರ ಕುರಿತ ಭಿನ್ನಾಭಿಪ್ರಾಯಗಳ ಕಾರಣದಿಂದ ವಿಲೀನ ಒಪ್ಪಂದವು ಮುರಿದು ಬಿತ್ತು. ಇದರಿಂದಾಗಿ, ಅತ್ಯಂತ ಸ್ಪರ್ಧಾತ್ಮಕವಾಗಿರುವ ಮನೋರಂಜನಾ ಮಾರುಕಟ್ಟೆಯಲ್ಲಿ ಜೀ ಸಂಸ್ಥೆಯ ಉಳಿವಿನ ಬಗ್ಗೆಯೇ ಪ್ರಶ್ನೆಗಳನ್ನು ಹುಟ್ಟುಹಾಕಿದೆ.

ಉದ್ಯಮಿ ಮುಕೇಶ್ ಅಂಬಾನಿ ನೇತೃತ್ವದ ರಿಲಯನ್ಸ್ ಇಂಡಸ್ಟ್ರೀಸ್, ಡಿಸ್ನಿಯ ಭಾರತ ಘಟಕದೊಂದಿಗೆ ವಿಲೀನದ ಮಾತುಕತೆ ನಡೆಸುತ್ತಿದೆ. ಈ ಸಂದರ್ಭದಲ್ಲಿಯೇ ಸೋನಿ-ಜೀ ಒಪ್ಪಂದವು ಮುರಿದು ಬಿದ್ದಿದೆ. ಇದು ಎರಡೂ ಕಂಪನಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು ಎಂದು ಬ್ಲೂಮ್‌ಬರ್ಗ್ ನ್ಯೂಸ್ ವರದಿ ಮಾಡಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	1000-1100
ನಡುಗೋಲು	1250-1300
ರಾಶಿ	1350-1400
ರಾಶಿ ಉತ್ತಮ	1450-1500
ಹೆರಕಿದ್ದು	2000-2100
ಹಸಿರು ಸಾಧಾರಣ	1300-1400
ಹಸಿರು ಉತ್ತಮ	1800-1850
ಹಸಿರು ಅತಿ ಉತ್ತಮ	2200-2300
ಕಾಳು ಮೆಣಸು	570
ಬಂಟ್ವಾಳ (ಅಡಿಕೆ)	
ಕೋಕ	18000-28500
ಹೊಸತು	28500-36500
ಹಳತು	42000-44500
ಸಾಗರ	
ಬಿಳಿಗೋಟು	27739-27739
ಚಾಲಿ	32989-38019
ಕೋಕ	33989-33989
ಕೆಂಪುಗೋಟು	36439-36439
ರಾಶಿ	32899-48969
ಸಿಪ್ಪೆಗೋಟು	21099-21099
ಶಿವಮೊಗ್ಗ	
ಬೆಟ್ಟೆ	40100-55719
ಗೊರಬಲು	16709-39555
ರಾಶಿ	31609-49209
ಸರಕು	51159-76810
ರಾಶಿ	44600-49469
ಯಲ್ಲಾಪುರ	
ಅಪಿ	56269-60379
ಬಿಳಿಗೋಟು	24699-35090
ಚಾಲಿ	35950-40070
ಕೋಕ	18201-31599

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14100	14500	-	192.25 ಸೆಂಟ್ಸ್
ಎಸಿ	7840	7,800	-	
ಆರ್‌ಪಿ	11500	12,500	-	ಲಂಡನ್
ಆರ್‌ಸಿ	7210	270 Kg on OT	-	3,220 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ
23-1-2024

ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	11000-11100
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10500-10600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1540 (1560)
ಒಂದು ವಾರದ ಡೆಲಿವರಿ	1535 (1555)
ಸೋಯಾ ಕಚ್ಚಾ	865 (860)
ಪಾಮ್ ವಾರದ ಡೆಲಿವರಿ	853 (850)
ಸೂರ್ಯಕಾಂತಿ ಎಣ್ಣೆ ಕಚ್ಚಾ	870 (875)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹62,200 (62,100)
ಬೆಳ್ಳಿ ಕೆ.ಜಿ ₹70,400 (70,500)
ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ವಾಣಿ ಗುಪ್ತಾ, ಊರು ತಿಳಿಸಿಲ್ಲ

- **ಪ್ರಶ್ನೆ:** ನಾನು 82 ವರ್ಷದ ನಿವೃತ್ತ ಪ್ರಾಧ್ಯಾಪಕಿ. ನನ್ನ ವಾರ್ಷಿಕ ಆದಾಯ ₹13.07 ಲಕ್ಷ ಹಾಗೂ ಟಿಡಿಎಸ್ ₹1.06 ಲಕ್ಷ. ಇದಲ್ಲದೆ ₹1.50 ಲಕ್ಷದ ಹೂಡಿಕೆಯನ್ನೂ ಮಾಡಿದ್ದೇನೆ. ಇದು ಸೆಕ್ಷನ್ 80ಸಿ ವಿನಾಯಿತಿಯಡಿ ಬರುವ ಮೊತ್ತವಾಗಿದೆ. ನನ್ನ ಪ್ರಶ್ನೆ ಏನೆಂದರೆ, ಯಾವ ತೆರಿಗೆ ಪದ್ಧತಿ ನನಗೆ ಸಮಂಜಸ ಹಾಗೂ ಈ ಹೂಡಿಕೆ ತೆರಿಗೆ ಉಳಿಸಲು ಲಾಭದಾಯಕವೇ?

ಉತ್ತರ: ನಿಮ್ಮ ಆದಾಯವನ್ನು ಎರಡೂ ತೆರಿಗೆ ಪದ್ಧತಿಯಡಿ ತುಲನೆ ಮಾಡಿದಾಗ ಹೊಸ ತೆರಿಗೆ ಪದ್ಧತಿ ಸೂಕ್ತ. ಪ್ರಸ್ತುತ ನೀವು ತಿಳಿಸಿರುವ ತೆರಿಗೆ ಕಡಿತದ ಮೊತ್ತ ಈ ಪದ್ಧತಿಗೆ ತಕ್ಕಂತೆ ಇದೆ. ಹಳೆಯ ಪದ್ಧತಿಯಡಿ ನಿಮಗೆ ಹೂಡಿಕೆಗೆ ಸಂಬಂಧಿಸಿ ₹1.50 ಲಕ್ಷದ ತೆರಿಗೆ ವಿನಾಯಿತಿ ಇದ್ದರೂ ತೆರಿಗೆ ದರಗಳು ಹೆಚ್ಚಾಗಿರುವ ಕಾರಣ ಅದು ಲಾಭದಾಯಕವಲ್ಲ. ಮಾತ್ರವಲ್ಲ, ಹೊಸ ಪದ್ಧತಿಯಡಿ ಈ ಹೂಡಿಕೆಗೆ ಸಂಬಂಧಿಸಿದ ತೆರಿಗೆ ವಿನಾಯಿತಿಗೆ ಅವಕಾಶವಿಲ್ಲ. ಆದರೆ, ತೆರಿಗೆ ದರ ಕಡಿಮೆಯಾಗಿದೆ. ಹೀಗಾಗಿ, ಸುಮಾರು ₹30 ಸಾವಿರದಷ್ಟು ತೆರಿಗೆ ಹೊಸ ಪದ್ಧತಿಯಡಿ ಕಡಿಮೆ.

ಇನ್ನು ಹೂಡಿಕೆಗೆ ಸಂಬಂಧಿಸಿ ಹೇಳುವುದಾದರೆ, ತೆರಿಗೆ ಲಾಭಕ್ಕೋಸ್ಕರವೇ ಹೂಡಿಕೆ ಮಾಡುವುದಾದರೆ, ಅದರಿಂದ ನಿಜವಾದ ಲಾಭವಿದೆಯೇ ಎನ್ನುವುದನ್ನು ಮೊದಲೇ ಪರಿಗಣಿಸಿ ಹೂಡಿಕೆ ಮಾಡಿ. ಇಲ್ಲವಾದರೆ ಯಾವುದೇ ಸಮಯದ ನಿರ್ಬಂಧವಿಲ್ಲದೆ, ನಿಮ್ಮ ವಯಸ್ಸಿಗೆ ಅನುಗುಣವಾಗಿ ನಗದೀಕರಿಸಬಹುದಾದ ಎಫ್.ಡಿಯಂತಹ ಹೂಡಿಕೆಗಳಲ್ಲಿ ನಿಮ್ಮ ಹಣ ಇಡಿ.

ಟಿ. ಶಕುಂತಲಾ, ನೆಲಮಂಗಲ ತಾಲ್ಲೂಕು

- **ಪ್ರಶ್ನೆ:** ನಾನು ಕೃಷಿಕರ ಕುಟುಂಬದ ಸದಸ್ಯೆ. ನನಗೆ ಮದುವೆಯಾಗಿ ಮೂವರು ಮಕ್ಕಳಿದ್ದಾರೆ. ಅವರು ಉನ್ನತ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನ್ನ ಪತಿ ಕೃಷಿಕ. ನನ್ನ ತಂದೆಯವರಿಗೆ 10 ಎಕರೆ ಕೃಷಿ ಭೂಮಿ ಇದ್ದು ಐವರು ಮಕ್ಕಳಿದ್ದಾರೆ. ನನ್ನ ತಂದೆ ಹಾಗೂ ಮಕ್ಕಳು 2009ರಲ್ಲಿ ಈ 10 ಎಕರೆ ಭೂಮಿಯಲ್ಲಿ 2 ಎಕರೆ ಭೂಮಿಯನ್ನು ₹54 ಲಕ್ಷಕ್ಕೆ ಮಾರಾಟ ಮಾಡಿದ್ದರು. ಇದರಲ್ಲಿ ₹5 ಲಕ್ಷ ಮೊತ್ತವನ್ನು ನನ್ನ ಭಾಗಕ್ಕೆಂದು ಇಟ್ಟಿದ್ದರು. ನನ್ನ ಸೋದರರ ಬಳಿ ಇದ್ದ ಈ ಮೊತ್ತವನ್ನು ಬಡ್ಡಿ ಸಮೇತ (₹20 ಲಕ್ಷ) ಬ್ಯಾಂಕಿಗೆ 2023ರ ನವೆಂಬರ್‌ನಲ್ಲಿ ಜಮಾ ಮಾಡಿದ್ದರು. ಈ ಹಣ ಹೇಗೆ ಹೂಡಿಕೆ ಮಾಡಬೇಕು ಮತ್ತು ಇದಕ್ಕೆ ತೆರಿಗೆ ಇದೆಯೇ?

ಉತ್ತರ: ನೀವು ನೀಡಿರುವ ಮಾಹಿತಿಯಂತೆ 2009ರಲ್ಲೇ ಒಂದಷ್ಟು ಕೃಷಿ ಭೂಮಿಯನ್ನು ನಿಮ್ಮ ತಂದೆಯವರು ಮಾರಾಟ ಮಾಡಿರುವುದಾಗಿ ತಿಳಿಸಿದ್ದೀರಿ. ಈ ಸಂಬಂಧ ಯಾವುದೇ ತೆರಿಗೆ ಇದ್ದರೂ ಅದರ ಒಡೆತನ ಹೊಂದಿದವರಿಗೆ ಆಯಾ ವರ್ಷಕ್ಕೆ ಅನುಗುಣವಾಗಿಯೇ ತೆರಿಗೆ ಅನ್ವಯಿಸುತ್ತದೆ ಹಾಗೂ ಆ ವರ್ಷದ ರಿಟರ್ನ್ಸ್‌ನಲ್ಲಿ ತೆರಿಗೆ ಭರಿಸಬೇಕಾಗಿರುತ್ತದೆ. ಮಾರಾಟ ಮಾಡಿರುವ ಆಸ್ತಿ ಕೃಷಿ ಭೂಮಿಯಾಗಿದ್ದರೂ ಅದು ಮುನಿಸಿಪಲ್ ವ್ಯಾಪ್ತಿಯಿಂದ ಹೊರಗಿದೆಯೇ ಅಥವಾ ಒಳಗಿದೆಯೇ ಎನ್ನುವುದರ ಆಧಾರದಲ್ಲೂ ಬಂಡವಾಳ ವೃದ್ಧಿ ತೆರಿಗೆ ಅಥವಾ ವಿನಾಯಿತಿ ಅನ್ವಯಿಸುತ್ತದೆಯೇ ಎಂಬುದನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಹೀಗಾಗಿ ಪ್ರಸ್ತುತ ಸಾಲಿನಲ್ಲಿ ಅದರ ವಿಮರ್ಶೆ ಆದಾಯ ತೆರಿಗೆ ಇಲಾಖೆಯ ಹೊರತಾಗಿ ಪ್ರಸ್ತುತವಲ್ಲ.

ನಿಮಗೆ ಹಣ ವರ್ಗಾವಣೆಯಾದಾಗ ಆಸ್ತಿಯ ಮಾರಾಟದ ನಿಮ್ಮ ಪಾಲಾಗಿ ಆ ಮೊತ್ತವನ್ನು ನಿಮಗೆ ನಿಮ್ಮ ಸಹೋದರರು ನೀಡಿದ್ದಾರೆ. ಈ ಮೊತ್ತ ಬ್ಯಾಂಕ್ ಖಾತೆಗೆ ಪ್ರಸಕ್ತ ಆರ್ಥಿಕ ಸಾಲಿನಲ್ಲಿ ಜಮಾ ಆಗಿದೆ. ಈ ಮೊತ್ತಕ್ಕೆ ಅದೆಷ್ಟೋ ವರ್ಷಗಳಿಂದ ಬಡ್ಡಿಯೂ ಸೇರುತ್ತಾ ಬಂದಿದೆ. ಆದರೆ, ನಿಮ್ಮ ಹೆಸರಲ್ಲಿರಲಿಲ್ಲ ಹಾಗೂ ಯಾವ ವಿಚಾರವಾಗಿ ವರ್ಗಾಯಿಸಲಾಗಿದೆ ಎನ್ನುವುದರ ಬಗ್ಗೆ ಲಿಖಿತ ದಾಖಲೆ ಇದ್ದಂತಿಲ್ಲ. ಇದೊಂದು ಅಲಿಖಿತ ಒಪ್ಪಂದವಿರಬಹುದು. ಹೀಗಾಗಿ, ಈ ಎಲ್ಲ ವರ್ಷಗಳಲ್ಲಿ ಆ ಮೊತ್ತ ಯಾರ ಹೆಸರಲ್ಲಿತ್ತೋ ಅವರಿಗೆ ಅನ್ವಯವಾಗುವ ತೆರಿಗೆಯನ್ನು ಬ್ಯಾಂಕ್ ಕಟಾಯಿಸಿರುತ್ತದೆ. ಹಾಗೂ ಯಾವ ಸಹೋದರನ ಹೆಸರಲ್ಲಿ ಈ ತನಕ ಆ ಮೊತ್ತ ಇತ್ತೋ ಅದರ ಬಡ್ಡಿಗೆ ಅನ್ವಯವಾಗಿರುವ ತೆರಿಗೆಗೆ ಅವರೇ ಬಾಧ್ಯಸ್ಥರು. ಈ ಸಂಬಂಧ ತೆರಿಗೆ ರಿಟರ್ನ್ಸ್ ಅವರೇ ಸಲ್ಲಿಸಿರಬೇಕು.

ಸಾಮಾನ್ಯವಾಗಿ ಯಾವುದೇ ಪಿತ್ರಾರ್ಜಿತ ಆಸ್ತಿಯ ಪಾಲನ್ನು ಭೂಮಿಯ ಹಿಸ್ಸೆಯಾಗಿ ಪಾಲು ಮಾಡಿದಾಗ ತೆರಿಗೆ ಇರುವುದಿಲ್ಲ. ಮಾರಾಟ ಮಾಡಿದಾಗಲಷ್ಟೇ ತೆರಿಗೆ ಅನ್ವಯಿಸುತ್ತದೆ. ನಿಮ್ಮ ವಿಚಾರದಲ್ಲಿ, ನಿಮ್ಮ ಹೆಸರಲ್ಲಿ ಈ ಮೊತ್ತ ಬರುವ ಮೊದಲು ಯಾವುದೇ ವ್ಯವಹಾರವಾಗಿಲ್ಲ. ಪರ್ಯಾಯವಾಗಿ, ಬಂದ ಹಣಕ್ಕೆ ಮೂಲವಾಗಿ, ಆ ಮೊತ್ತವನ್ನು ನಿಮ್ಮ ಸಹೋದರರಿಂದ ಉಡುಗೊರೆ ರೂಪದಲ್ಲಿ ದಾಖಲಿಸಿಕೊಳ್ಳಿ. ಸಂಬಂಧಿಗಳಿಂದ ಬಂದ ಉಡುಗೊರೆ ಮೊತ್ತಕ್ಕೆ ತೆರಿಗೆ ಇರುವುದಿಲ್ಲ. ಇನ್ನು ಹಣ ಹೂಡಿಕೆ ಬಗ್ಗೆ ಇರುವ ವಿಚಾರವಾಗಿ ಹೇಳುವುದಾದರೆ, ಈ ಮೊತ್ತವನ್ನು ಬ್ಯಾಂಕ್‌ನಲ್ಲಿ ನಿಶ್ಚಿತ ಠೇವಣಿ ರೂಪದಲ್ಲಿ ಇಡಬಹುದು. ಅಥವಾ ಅಂಚೆ ಕಚೇರಿಯ ಯಾವುದೇ ಯೋಜನೆಗಳಲ್ಲಿ ತೊಡಗಿಸಿ ಬಡ್ಡಿ ಪಡೆಯಬಹುದು. ಇವು ಯಾವುದೇ ಅಸಲು ಮೊತ್ತಕ್ಕೆ ತೊಡಕಿರದ ಹೂಡಿಕೆ. ಸಾಮಾನ್ಯವಾಗಿ ಶೇ 6ರಿಂದ ಶೇ 8ರಷ್ಟು ವಾರ್ಷಿಕ ಬಡ್ಡಿ ಬರಬಹುದು. ನಿಮಗೆ ತೆರಿಗೆಗೊಳಪಡುವ ಇತರ ಯಾವುದೇ ಆದಾಯ ಇಲ್ಲದಿದ್ದಲ್ಲಿ ನಿಮ್ಮ ವಯೋಮಾನಕ್ಕೆ ಅನುಗುಣವಾಗಿ ಫಾರಂ 15 ಜಿ/ಎಚ್ ನೀಡಿ ತೆರಿಗೆ ಕಡಿತವಾಗುವುದನ್ನು ತಡೆಯಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್:businessdesk@prajavani.co.in

ಕರ್ನಾಟಕ ಬ್ಯಾಂಕ್‌ಗೆ ₹1,032 ಕೋಟಿ ನಿವ್ವಳ ಲಾಭ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ಬ್ಯಾಂಕ್ ಪ್ರಸಕ್ತ ವಿತ್ತೀಯ ವರ್ಷದ ಪ್ರಥಮ ಮೂರು ತ್ರೈಮಾಸಿಕದಲ್ಲಿ ಶೇ 25ರ ವೃದ್ಧಿ ದರದೊಂದಿಗೆ ₹1032.04 ಕೋಟಿ ನಿವ್ವಳ ಲಾಭ ಘೋಷಿಸಿದೆ.

ಹಿಂದಿನ ವಿತ್ತೀಯ ವರ್ಷದ ಪ್ರಥಮ ಮೂರು ತ್ರೈಮಾಸಿಕದಲ್ಲಿ ನಿವ್ವಳ ಲಾಭವು ₹826.49 ಕೋಟಿ ಇತ್ತು.

ಪ್ರಸಕ್ತ ತೃತೀಯ ತ್ರೈಮಾಸಿಕದಲ್ಲಿ ವಾರ್ಷಿಕ ಶೇ 10.11ರ ವೃದ್ಧಿ ದರದೊಂದಿಗೆ ₹331.08 ಕೋಟಿಗಳ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷ ಇದೇ ಅವಧಿಯಲ್ಲಿ ನಿವ್ವಳ ಲಾಭವು ₹300.68 ಕೋಟಿಗಳಾಗಿತ್ತು.

ಮಂಗಳೂರಿನಲ್ಲಿ ಮಂಗಳವಾರ ನಡೆದ ಬ್ಯಾಂಕಿನ ಆಡಳಿತ ಮಂಡಳಿಯ ಸಭೆಯಲ್ಲಿ ಹಣಕಾಸು ವರ್ಷ 2023-24ರ ತೃತೀಯ ತ್ರೈಮಾಸಿಕದ ಹಣಕಾಸು ವರದಿ ಅಂಗೀಕರಿಸಲಾಯಿತು.

> **ಕರ್ನಾಟಕ ಬ್ಯಾಂಕ್ ತಂತ್ರಜ್ಞಾನದಲ್ಲಿ ಹೂಡಿಕೆ ಮಾಡುತ್ತಿರುವುದರೊಂದಿಗೆ ಫಿನ್‌ಟೆಕ್ ಪಾಲುದಾರರೊಂದಿಗೆ ಬ್ಯಾಂಕಿಂಗ್ ರಂಗದಲ್ಲಿ ಮುನ್ನುಗ್ಗುತ್ತಿದ್ದೇವೆ.**
> **ಶೇಖರ್ ರಾವ್,** ಕಾರ್ಯನಿರ್ವಾಹಕ ನಿರ್ದೇಶಕ, ಕರ್ನಾಟಕ ಬ್ಯಾಂಕ್

ಬ್ಯಾಂಕಿನ ಒಟ್ಟು ವ್ಯವಹಾರವು, ವಾರ್ಷಿಕ ಶೇ 9.22ರ ದರದಲ್ಲಿ ವೃದ್ಧಿ ಕಂಡಿದ್ದು, ₹1,61,936.36 ಕೋಟಿಗೆ ಏರಿದೆ. ಬ್ಯಾಂಕಿನ ಮುಂಗಡಗಳು ಶೇ 9.53ರ ದರದಲ್ಲಿ ವೃದ್ಧಿ ಕಂಡು ₹69,740.97 ಕೋಟಿಗಳಷ್ಟಿವೆ ಹಾಗೂ ಠೇವಣಿಗಳು ಶೇ 8.98ರ ದರದಲ್ಲಿ ವೃದ್ಧಿ ಕಂಡು ₹92,195.39 ಕೋಟಿಗಳಿಗೆ ತಲುಪಿವೆ.

ಬ್ಯಾಂಕಿನ ವಸೂಲಾಗದ ಒಟ್ಟು ಸಾಲಗಳು (ಜಿಎನ್‌ಪಿಎ) 10 ಬೇಸಿಸ್ ಪಾಯಿಂಟ್‌ಗಳಷ್ಟು ಕಡಿಮೆಯಾಗಿದ್ದು, ಶೇ 3.64ಕ್ಕೆ ಇಳಿಕೆ ಕಂಡಿವೆ. ಇದು ಮಾರ್ಚ್ 2023ರಲ್ಲಿ ಶೇ 3.74 ರಷ್ಟಿತ್ತು. ವಸೂಲಾಗದ ನಿವ್ವಳ ಸಾಲಗಳು (ಎನ್‌ಎನ್‌ಪಿಎ) ಕೂಡ 15 ಬೇಸಿಸ್ ಪಾಯಿಂಟ್‌ಗಳಷ್ಟು ಕಡಿಮೆಯಾಗಿದ್ದು, ಶೇ 1.55 ಕ್ಕೆ ಇಳಿಕೆ ಕಂಡಿವೆ. ಇದು ಮಾರ್ಚ್ 2023ರಲ್ಲಿ ಶೇ 1.70 ರಷ್ಟಿತ್ತು.

ಈ ಫಲಿತಾಂಶದ ಬಗ್ಗೆ ಹರ್ಷ ವ್ಯಕ್ತಪಡಿಸಿ ಮಾತನಾಡಿದ ಬ್ಯಾಂಕಿನ ಎಂಡಿ ಹಾಗೂ ಸಿಇಒ ಶ್ರೀಕೃಷ್ಣನ್ ಎಚ್., 'ಕರ್ನಾಟಕ ಬ್ಯಾಂಕಿನ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಕಾರ್ಯಕ್ಷಮತೆಗೆ ಬ್ಯಾಂಕ್ ಕೈಗೊಂಡ ಸುಧಾರಿತ ಕಾರ್ಯಾಚರಣೆಗಳು ಹಾಗೂ ಬದಲಾವಣೆಗಳು ಕಾರಣ. ನಾವು ಆರ್ಥಿಕ ಕ್ಷೇತ್ರದಲ್ಲಿ ಹೆಚ್ಚು ಪ್ರಸ್ತುತವಾಗಲು ಪ್ರಜ್ಞಾಪೂರ್ವಕವಾಗಿ ಕೆಲಸ ಮಾಡಿದ್ದೇವೆ ಮತ್ತು ಹಲವಾರು ಹೊಸ ಯೋಜನೆಗಳನ್ನು ಪ್ರಾರಂಭಿಸಿದ್ದೇವೆ. ನಮ್ಮ ಶತಮಾನೋತ್ಸವದ ವರ್ಷದಲ್ಲಿ ನಾವು ಸಮರ್ಪಕವಾದ ಅಭಿವೃದ್ಧಿ ಪಥದಲ್ಲಿದ್ದೇವೆ' ಎಂದರು.

ಶೈಕ್ಷಣಿಕ ವೀಸಾಗೆ ಮಿತಿ ಹೇರಿದ ಕೆನಡಾ

ಒಟ್ಟಾವಾ (ಪಿಟಿಐ): ಹೊಸದಾಗಿ ಅಂತರರಾಷ್ಟ್ರೀಯ ವಿದ್ಯಾರ್ಥಿಗಳ ವೀಸಾ ನೀಡುವುದಕ್ಕೆ ಕೆನಡಾ ಸರ್ಕಾರ ತಕ್ಷಣದಿಂದ ಅನ್ವಯಿಸುವಂತೆ ಎರಡು ವರ್ಷಗಳ ಅವಧಿಗೆ ಮಿತಿಯನ್ನು ಹೇರಿದೆ.

ಆಂತರಿಕವಾಗಿ ಮೂಡಿರುವ ವಸತಿ ಬಿಕ್ಕಟ್ಟಿಗೆ ಪರಿಹಾರ ಕಂಡುಕೊಳ್ಳುವುದು ಈ ಕ್ರಮದ ಉದ್ದೇಶವಾಗಿದೆ ಎಂದು ಸರ್ಕಾರ ಕಾರಣ ನೀಡಿದೆ. ಈ ಕ್ರಮ ಕೆನಡಾದಲ್ಲಿ ಉನ್ನತ ಶಿಕ್ಷಣವನ್ನು ಪಡೆಯಲು ಚಿಂತನೆ ನಡೆಸಿದ್ದ ಭಾರತೀಯ ವಿದ್ಯಾರ್ಥಿಗಳ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ವಲಸಿಗರ ಖಾತೆ ಸಚಿವ ಮಾರ್ಕ್ ಮಿಲ್ಲರ್, 'ಹೊಸ ನಿಯಮದ ಅನ್ವಯ 2024ರಲ್ಲಿ ವೀಸಾ ನೀಡುವುದರಲ್ಲಿ ಶೇ 35ರಷ್ಟು ಕಡಿತವಾಗಲಿದೆ. ಆ ಪ್ರಕಾರ, 2024ರಲ್ಲಿ ಹೊಸದಾಗಿ 3.64 ಲಕ್ಷ ವೀಸಾ ನೀಡಬಹುದಾಗಿದೆ. ಕಳೆದ ವರ್ಷ 5.60 ಲಕ್ಷ ವೀಸಾ ನೀಡಲಾಗಿತ್ತು' ಎಂದು ತಿಳಿಸಿದರು.


ಉದ್ದೇಶಿತ ಮಿತಿಯು ಎರಡು ವರ್ಷ ಚಾಲ್ತಿಯಲ್ಲಿರಲಿದೆ. 2025ನೇ ಸಾಲಿನಲ್ಲಿ ಎಷ್ಟು ವೀಸಾ ನೀಡಬೇಕು ಎಂಬುದನ್ನು ಈ ವರ್ಷಾಂತ್ಯದಲ್ಲಿ ತೀರ್ಮಾನಿಸಲಾಗುವುದು ಎಂದು ಹೇಳಿದರು.



ರಷ್ಯಾ ಸೇನೆಯ ಕ್ಷಿಪಣಿಗಳ ದಾಳಿಯಿಂದ ಉಕ್ರೇನ್‌ನ ಹಾರ್ಕಿವ್‌ನಲ್ಲಿ ತೀವ್ರ ಹಾನಿಗೊಳಗಾದ ಕಟ್ಟಡದ ಅವಶೇಷಗಳಡಿ ರಕ್ಷಣಾ ಕಾರ್ಯ ನಡೆಯಿತು—ಎಎಫ್‌ಪಿ ಚಿತ್ರ

ತರಂಜಿತ್ ಸಂಧುಗೆ ಬೈಡನ್ ಆಡಳಿತ ಪ್ರಶಂಸೆ

ವಾಷಿಂಗ್ಟನ್ (ಪಿಟಿಐ): ಭಾರತದ ರಾಯಭಾರಿ ತರಂಜಿತ್ ಸಿಂಗ್ ಸಂಧು ಅವರು ಭಾರತ-ಅಮೆರಿಕದ ಬಾಂಧವ್ಯವನ್ನು ಬಲಪಡಿಸುವ ದಿಸೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ ಎಂದು ಅಮೆರಿಕ ಸರ್ಕಾರ ಪ್ರಶಂಸೆ ವ್ಯಕ್ತಪಡಿಸಿದೆ.



ತರಂಜಿತ್ ಸಿಂಗ್ ಸಂಧು

ವಿದೇಶಾಂಗ ಸಚಿವಾಲಯದಲ್ಲಿ ಮೂರು ದಶಕ ಕೆಲಸ ಮಾಡಿರುವ ಸಂಧು ಅವರು ನಿವೃತ್ತಿಯಾಗಿದ್ದು, ಇಲ್ಲಿನ 'ಇಂಡಿಯಾ ಹೌಸ್'ನಲ್ಲಿ ಬೀಳ್ಕೊಡುಗೆ ಸಮಾರಂಭವನ್ನು ಸೋಮವಾರ ಏರ್ಪಡಿಸಲಾಗಿತ್ತು. ಈ ವೇಳೆ ಮಾತನಾಡಿದ ಶ್ವೇತ ಭವನದ ರಾಷ್ಟ್ರೀಯ ಔಷಧ ನಿಯಂತ್ರಣ ನೀತಿಯ ನಿರ್ದೇಶಕ ರಾಹುಲ್ ಗುಪ್ತ, 'ನಿಮ್ಮ ಕಾರ್ಯವೈಖರಿ ಯಿಂದಾಗಿ ದ್ವಿಪಕ್ಷೀಯ ಸಂಬಂಧದ ತೋಟದಲ್ಲಿ ಸಾವಿರಾರು ಹೂವುಗಳು ಅರಳಿವೆ' ಎಂದರು.

ರಾಜಕೀಯ ವ್ಯವಹಾರಗಳ ಅಧೀನ ಕಾರ್ಯದರ್ಶಿ ವಿಕ್ಟೋರಿಯಾ ನುಲಾಂಡ್, 'ಸಂಧು ಅವರ ರೀತಿಯ ಮತ್ತೊಬ್ಬ ರಾಯಭಾರಿಯನ್ನು ಕಾಣಲು ಸಾಧ್ಯವಿಲ್ಲ' ಎಂದು ಹೊಗಳಿದರು.

ಆಸ್ಟ್ರೇಲಿಯನ್ ಓಪನ್ ಟೆನಿಸ್: ನಾಲ್ಕರ ಘಟ್ಟ ಪ್ರವೇಶಿಸಿದ ಸಬಲೆಂಕಾ, ಸಿನ್ನರ್

ಸವಾಲು ಜಯಿಸಿದ ಜೊಕೊ, ಕೊಕೊ



ಸರ್ಬಿಯಾದ ನೊವಾಕ್ ಜೊಕೊವಿಚ್



ಅಮೆರಿಕದ ಕೊಕೊ ಗಫ್ —ಎಎಫ್‌ಪಿ ಚಿತ್ರಗಳು

ಮೆಲ್ಬರ್ನ್ (ಎಎಫ್‌ಪಿ): ಹಾಲಿ ಚಾಂಪಿಯನ್ ನೊವಾಕ್ ಜೊಕೊವಿಚ್ ಅವರು ಟೇಲರ್ ಫ್ರಿಟ್ಜ್ ಅವರ ಪ್ರಬಲ ಹೋರಾಟವನ್ನು ಪ್ರಯಾಸದಿಂದ ಬದಿಗೊತ್ತಿ ಮಂಗಳವಾರ ಆಸ್ಟ್ರೇಲಿಯನ್ ಓಪನ್ ಟೆನಿಸ್ ಟೂರ್ನಿಯಲ್ಲಿ 11ನೇ ಬಾರಿ ಸೆಮಿಫೈನಲ್ ತಲುಪಿದರು. ಇದಕ್ಕೆ ತದ್ವಿರುದ್ಧವಾಗಿ ಮಹಿಳಾ ವಿಭಾಗದ ಹಾಲಿ ಚಾಂಪಿಯನ್ ಅರಿನಾ ಸಬಲೆಂಕಾ ಅವರು ಅಧಿಕಾರಯುತವಾಗಿ ಗೆದ್ದು ಸೆಮಿಫೈನಲ್‌ಗೆ ದಾಪುಗಾಲಿಟ್ಟರು.

ಸರ್ಬಿಯಾದ ಜೊಕೊವಿಚ್ ರಾಡ್ ಲೇವರ್ ಅರೇನಾದಲ್ಲಿ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ 12ನೇ ಶ್ರೇಯಾಂಕದ ಫ್ರಿಟ್ಜ್ (ಅಮೆರಿಕ) ಅವರನ್ನು 7-6 (7-3), 4-6, 6-2, 6-3 ರಿಂದ ಸೋಲಿಸಿ ಅಭೂತಪೂರ್ವ 25ನೇ ಗ್ರ್ಯಾಂಡ್‌ಸ್ಲಾಮ್ ಪ್ರಶಸ್ತಿಯತ್ತ ದಿಟ್ಟ ಹೆಜ್ಜೆಯಿಟ್ಟರು. 32 ಡಿಗ್ರಿ ಬಿಸಿಲಿದ್ದು ಆಡುವುದು ತುಂಬಾ ಕಷ್ಟವಾಯಿತು ಎಂದು 36 ವರ್ಷದ ಸೂಪರ್‌ಸ್ಟಾರ್ ಆಟಗಾರ ಒಪ್ಪಿಕೊಂಡರು. ಅವರಿಗಿಂತ ಫ್ರಿಟ್ಜ್ 10 ವರ್ಷ ಚಿಕ್ಕವರು.

'ದೈಹಿಕವಾಗಿ, ಭಾವನಾತ್ಮಕವಾಗಿ ತುಂಬಾ ಬಳಲಿದೆ. ಮೊದಲ ಎರಡು ಸೆಟ್‌ಗಳಲ್ಲಂತೂ ಸುಸ್ತುಹೊಡೆದಿದ್ದೆ' ಎಂದು ಅವರು ಮೂರು ಗಂಟೆ 45 ನಿಮಿಷಗಳ ದೀರ್ಘ ಹೋರಾಟದ ನಂತರ ಪ್ರತಿಕ್ರಿಯಿಸಿದರು. 'ಮೂರನೇ ಸೆಟ್‌ನ ಮಧ್ಯದಲ್ಲಿ ಆಟದ ಮಟ್ಟ ಎತ್ತರಿಸಿಕೊಂಡು, ಕೊನೆಯವರೆಗೂ ಉಳಿಸಿಕೊಂಡೆ' ಎಂದು ಹೇಳಿದರು.

ಜೊಕೊವಿಚ್ ಅವರು ಸೆಮಿಫೈನಲ್‌ನಲ್ಲಿ, ನಾಲ್ಕನೇ ಶ್ರೇಯಾಂಕದ ಯಾನಿಕ್ ಸಿನ್ನರ್ ಅವರನ್ನು ಎದುರಿಸಲಿದ್ದಾರೆ. ಇಟಲಿಯ ಸಿನ್ನರ್ ಇನ್ನೊಂದು ಪಂದ್ಯದಲ್ಲಿ ಐದನೇ ಶ್ರೇಯಾಂಕದ ಆಂಡ್ರೆ ರುಬ್ಲೆವ್ (ರಷ್ಯಾ) ಅವರನ್ನು 6-4, 7-5, 6-3ರಿಂದ ಸೋಲಿಸಿ ನಾಲ್ಕರ ಘಟ್ಟ ಪ್ರವೇಶಿಸಿದರು.

ಮೆಲ್ಬರ್ನ್ ಪಾರ್ಕ್‌ನಲ್ಲಿ ಈ ಹಿಂದೆ ಆಡಿದ ಎಲ್ಲಾ 10 ಸೆಮಿಫೈನಲ್ ಪಂದ್ಯಗಳಲ್ಲಿ ಜೊಕೊವಿಚ್ ವಿಜೇತರಾಗಿದ್ದಾರೆ. 2008ರಲ್ಲಿ ಮೊದಲ ಬಾರಿ ಟ್ರೋಫಿ ಎತ್ತಿದ್ದರು. ಸದ್ಯ 33 ಪಂದ್ಯಗಳಲ್ಲಿ ಅಜೇಯರಾಗುಳಿದಿದ್ದಾರೆ.

ಇನ್ನೊಂದೆಡೆ, ಮಹಿಳಾ ವಿಭಾಗದ ಹಾಲಿ ಚಾಂಪಿಯನ್ ಸಬಲೆಂಕಾ 6-2, 6-3 ರಿಂದ ಒಂಬತ್ತನೇ ಶ್ರೇಯಾಂಕದ ಬಾರ್ಬರಾ ಕ್ರಾಜಿಸಿಕೊವಾ ಮೇಲೆ ಗೆಲ್ಲಲು ಪ್ರಯಾಸಪಡಲಿಲ್ಲ. ಪಂದ್ಯ 71 ನಿಮಿಷ ನಡೆಯಿತು.

ಬೆಲಾರಸ್ ಆಟಗಾರ್ತಿಯ ಸೆಮಿಫೈನಲ್ ಎದುರಾಳಿ ನಾಲ್ಕನೇ ಶ್ರೇಯಾಂಕದ ಕೊಕೊ ಗಫ್. ಕಳೆದ ವರ್ಷ ಅಮೆರಿಕ ಓಪನ್ ಫೈನಲ್‌ನಲ್ಲಿ ಇವರಿಬ್ಬರು ಎದುರಾಳಿಗಳಾಗಿದ್ದರು.

ಅಮೆರಿಕದ ಕೊಕೊ, ಸುದೀರ್ಘವಾಗಿ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಶ್ರೇಯಾಂಕರಹಿತ ಆಟಗಾರ್ತಿ, ಉಕ್ರೇನ್‌ನ ಮಾರ್ತಾ ಕೊಸ್ಟಿಯುಕ್ ಅವರನ್ನು 7-6 (8-6), 6-7 (3-7), 6-2 ರಿಂದ ಸೋಲಿಸಲು ಮೂರು ಗಂಟೆ ಬೆವರು ಹರಿಸಬೇಕಾಯಿತು.

ಫೆ.23ರಂದು ಉದ್ಘಾಟನಾ ಪಂದ್ಯ

ಡಬ್ಲ್ಯುಪಿಎಲ್ ಟೂರ್ನಿಗೆ ಬೆಂಗಳೂರು, ನವದೆಹಲಿ ಆತಿಥ್ಯ

ನವದೆಹಲಿ (ಪಿಟಿಐ): ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ಮತ್ತು ರನ್ನರ್ ಅಪ್ ಡೆಲ್ಲಿ ಕ್ಯಾಪಿಟಲ್ಸ್ ತಂಡಗಳು, ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಫೆಬ್ರುವರಿ 23 ರಂದು ನಡೆಯಲಿರುವ ಮಹಿಳಾ ಪ್ರೀಮಿಯರ್ ಲೀಗ್‌ನ (ಡಬ್ಲ್ಯುಪಿಎಲ್) ಎರಡನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಲೀಗ್‌ನ ಪಂದ್ಯಗಳು ಬೆಂಗಳೂರು ಮತ್ತು ದೆಹಲಿಯಲ್ಲಿ ನಡೆಯಲಿವೆ. ಮಾರ್ಚ್ 15 ಮತ್ತು 17 ರಂದು ಕ್ರಮವಾಗಿ ಎಲಿಮಿನೇಟರ್ ಮತ್ತು ಫೈನಲ್ ಪಂದ್ಯಗಳು ನಡೆಯಲಿದ್ದು, ಈ ಪಂದ್ಯಗಳ ಆತಿಥ್ಯವನ್ನು ದೆಹಲಿಯ ಅರುಣ್ ಜೇಟ್ಲಿ ಕ್ರೀಡಾಂಗಣ ವಹಿಸಲಿದೆ.

ಈ ವರ್ಷ ಡಬ್ಲ್ಯುಪಿಎಲ್‌ನಲ್ಲಿ ಒಟ್ಟು 22 ಪಂದ್ಯಗಳು ನಡೆಯಲಿದ್ದು, ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆಯುವ ತಂಡ ನೇರವಾಗಿ ಫೈನಲ್ ಪ್ರವೇಶಿಸಲಿದೆ. ಎರಡು ಮತ್ತು ಮೂರನೇ ಸ್ಥಾನ ಪಡೆಯುವ ತಂಡಗಳು ಎಲಿಮಿನೇಟರ್‌ನಲ್ಲಿ ಸೆಣಸಲಿವೆ.

ಈ ಬಾರಿಯ ಆವೃತ್ತಿಯಲ್ಲಿ ಕಶ್ವಿ ಗೌತಮ್ ಮತ್ತು ವೃಂದಾ ದಿನೇಶ್ ಅವರಹಂತಹ ಯುವ ಪ್ರತಿಭೆಗಳು ಕಣದಲ್ಲಿವೆ. ಕಳೆದ ತಿಂಗಳು ನಡೆದ ಡಬ್ಲ್ಯುಪಿಎಲ್ ಮಿನಿ ಬಿಡ್ಡಿಂಗ್‌ನಲ್ಲಿ ಇವರಿಬ್ಬರು ಭಾರಿ ಮೊತ್ತ ಪಡೆದಿದ್ದರು. 30 ಸ್ಥಾನಗಳಿಗೆ ನಡೆದ ಬಿಡ್‌ನಲ್ಲಿ 165 ಆಟಗಾರ್ತಿಯರು ಪಾಲ್ಗೊಂಡಿದ್ದರು.

ಮಹಿಳಾ ಪ್ರೀಮಿಯರ್ ಲೀಗ್

ದಿನಾಂಕ	ಪಂದ್ಯ	ಸ್ಥಳ
ಫೆ.23	ಮುಂಬೈ ಇಂಡಿಯನ್ಸ್–ಡೆಲ್ಲಿ ಕ್ಯಾಪಿಟಲ್ಸ್	ಬೆಂಗಳೂರು
ಫೆ.24	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಯು.ಪಿ. ವಾರಿಯರ್ಸ್	ಬೆಂಗಳೂರು
ಫೆ.25	ಗುಜರಾತ್ ಜೈಂಟ್ಸ್–ಮುಂಬೈ ಇಂಡಿಯನ್ಸ್	ಬೆಂಗಳೂರು
ಫೆ.26	ಯು.ಪಿ ವಾರಿಯರ್ಸ್–ಡೆಲ್ಲಿ ಕ್ಯಾಪಿಟಲ್ಸ್	ಬೆಂಗಳೂರು
ಫೆ.27	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಗುಜರಾತ್ ಜೈಂಟ್ಸ್	ಬೆಂಗಳೂರು
ಫೆ.28	ಮುಂಬೈ ಇಂಡಿಯನ್ಸ್–ಯು.ಪಿ.ವಾರಿಯರ್ಸ್	ಬೆಂಗಳೂರು
ಫೆ.29	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಡೆಲ್ಲಿ ಕ್ಯಾಪಿಟಲ್ಸ್	ಬೆಂಗಳೂರು
ಮಾರ್ಚ್1	ಯು.ಪಿ.ವಾರಿಯರ್ಸ್–ಗುಜರಾತ್ ಜೈಂಟ್ಸ್	ಬೆಂಗಳೂರು
ಮಾರ್ಚ್2	ರಾಯಲ್ ಚಾಲೆಂಜರ್ಸ್ ಬೆಂಗಳೂರು–ಮುಂಬೈ ಇಂಡಿಯನ್ಸ್	ಬೆಂಗಳೂರು
ಮಾರ್ಚ್3	ಗುಜರಾತ್ ಜೈಂಟ್ಸ್– ಡೆಲ್ಲಿ ಕ್ಯಾಪಿಟಲ್ಸ್	ಬೆಂಗಳೂರು
ಮಾರ್ಚ್4	ಯು.ಪಿ.ವಾರಿಯರ್ಸ್–ರಾಯಲ್ ಚಾಲೆಂಜರ್ಸ್ ಬೆಂಗಳೂರು	ಬೆಂಗಳೂರು
ಮಾರ್ಚ್5	ಡೆಲ್ಲಿ ಕ್ಯಾಪಿಟಲ್ಸ್–ಮುಂಬೈ ಇಂಡಿಯನ್ಸ್	ದೆಹಲಿ
ಮಾರ್ಚ್6	ಗುಜರಾತ್ ಜೈಂಟ್ಸ್ –ರಾಯಲ್ ಚಾಲೆಂಜರ್ಸ್ ಬೆಂಗಳೂರು	ದೆಹಲಿ
ಮಾರ್ಚ್7	ಯು.ಪಿ. ವಾರಿಯರ್ಸ್ –ಮುಂಬೈ ಇಂಡಿಯನ್ಸ್	ದೆಹಲಿ
ಮಾರ್ಚ್8	ಡೆಲ್ಲಿ ಕ್ಯಾಪಿಟಲ್ಸ್ –ಯು.ಪಿ. ವಾರಿಯರ್ಸ್	ದೆಹಲಿ
ಮಾರ್ಚ್9	ಮುಂಬೈ ಇಂಡಿಯನ್ಸ್ –ಗುಜರಾತ್ ಜೈಂಟ್ಸ್	ದೆಹಲಿ
ಮಾರ್ಚ್10	ಡೆಲ್ಲಿ ಕ್ಯಾಪಿಟಲ್ಸ್ –ರಾಯಲ್ ಚಾಲೆಂಜರ್ಸ್ ಬೆಂಗಳೂರು	ದೆಹಲಿ
ಮಾರ್ಚ್11	ಗುಜರಾತ್ ಜೈಂಟ್ಸ್ –ಯು.ಪಿ. ವಾರಿಯರ್ಸ್	ದೆಹಲಿ
ಮಾರ್ಚ್12	ಮುಂಬೈ ಇಂಡಿಯನ್ಸ್ –ರಾಯಲ್ ಚಾಲೆಂಜರ್ಸ್ ಬೆಂಗಳೂರು	ದೆಹಲಿ
ಮಾರ್ಚ್13	ಡೆಲ್ಲಿ ಕ್ಯಾಪಿಟಲ್ಸ್ –ಗುಜರಾತ್ ಜೈಂಟ್ಸ್	ದೆಹಲಿ
ಮಾರ್ಚ್15	ಎಲಿಮಿನೇಟರ್	ದೆಹಲಿ
ಮಾರ್ಚ್17	ಫೈನಲ್ ಪಂದ್ಯ	ದೆಹಲಿ

ಹೈದರಾಬಾದ್‌ನಲ್ಲಿ ನಾಳೆಯಿಂದ ಮೊದಲ ಕ್ರಿಕೆಟ್ ಟೆಸ್ಟ್

'ಪಿಚ್ ಸ್ಪಿನ್ ಸ್ನೇಹಿಯಾಗಬಹುದು'



ಭಾರತ ತಂಡದ ಅಭ್ಯಾಸದ ವೇಳೆ ರವೀಂದ್ರ ಜಡೇಜ ಅವರೊಂದಿಗೆ ಚರ್ಚೆ ನಡೆಸಿದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ —ಪಿಟಿಐ ಚಿತ್ರ

ಹೈದರಾಬಾದ್ (ಎಎಫ್‌ಪಿ): ಇಂಗ್ಲೆಂಡ್ ವಿರುದ್ಧ ಗುರುವಾರ ಇಲ್ಲಿ ಮೊದಲ ಟೆಸ್ಟ್ ಪಂದ್ಯ ಆರಂಭವಾಗಲಿದ್ದು, ಇಲ್ಲಿನ ಪಿಚ್ 'ಉತ್ತಮವಾಗಿದೆ'. ಆದರೆ ದಿನಕಳೆದಂತೆ ಪಿಚ್ ಸ್ಪಿನ್ನರ್‌ಗಳಿಗೆ ನೆರವಾಗಬಹುದು ಎಂದು ಭಾರತ ತಂಡದ ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಅಭಿಪ್ರಾಯಪಟ್ಟರು.

ಪಿಚ್‌ನ ಎರಡೂ ಕಡೆ ಗುಡ್ ಲೆಂಗ್ತ್ ಜಾಗ ಶುಷ್ಕವಾಗಿದೆ. 'ಪಿಚ್ ಹೇಗೆ ವರ್ತಿಸಬಹುದು ಎಂಬುದನ್ನು ಈಗಲೇ ಹೇಳುವುದು ಕಷ್ಟ. ಪಂದ್ಯ ಆರಂಭಕ್ಕೆ ಮುನ್ನ ಮತ್ತೊಮ್ಮೆ ಪರಿಶೀಲನೆ ನಡೆಸುತ್ತೇವೆ. ನನಗೆ ಪಿಚ್ ಉತ್ತಮವಾಗಿರುವಂತೆ ಕಾಣುತ್ತಿದೆ' ಎಂದು ಮಂಗಳವಾರ ಮಾಧ್ಯಮ ಸಂವಾದದ ವೇಳೆ ದ್ರಾವಿಡ್ ಹೇಳಿದರು.

'ಆದರೆ ಪಿಚ್ ಸ್ಪಿನ್‌ಗೂ ನೆರವಾಗಬಹುದು. ಎಷ್ಟು ಬೇಗ ಎಂದು ಖಚಿತವಾಗಿ ಹೇಳಲಾಗದು. ಪಂದ್ಯ ಸಾಗಿದಂತೆ ಸ್ಪಿನ್ನರ್‌ಸ್ನೇಹಿಯಾಗಬಹುದು' ಎಂದು ಅವರು ವಿಶ್ಲೇಷಿಸಿದರು.


ಪಿಚ್ ವರ್ತನೆ ಬಗ್ಗೆ ಇಂಗ್ಲೆಂಡ್ ಪಾಳೆಯದಲ್ಲೂ ಚರ್ಚೆಯಾಗಿದೆ ಎಂದು ಆ ತಂಡದ ವೇಗದ ಬೌಲರ್ ಮಾರ್ಕ್ ವುಡ್ ಒಪ್ಪಿಕೊಂಡರು. 'ನಿಜ, ಪಿಚ್ ಬಗ್ಗೆ ನಮ್ಮಲ್ಲಿ ಚರ್ಚೆಯಾಗಿದೆ. ಆದರೆ ಆ ಬಗ್ಗೆಯೇ ದೀರ್ಘವಾಗಿ ಚರ್ಚಿಸಿ ತಲೆಕೆಡಿಸಿಕೊಳ್ಳಲು ಹೋಗಿಲ್ಲ. ನಮ್ಮ ತಂಡದ ಬಗ್ಗೆ ನಮಗೆ ಆತ್ಮವಿಶ್ವಾಸವಿದ್ದು, ವಿಶೇಷವಾದುದನ್ನು ಸಾಧಿಸುವ ಧೈರ್ಯವಿದೆ. ನಮ್ಮಲ್ಲಿ ಸ್ಪಿನ್ನರ್ ಗಳಿದ್ದಾರೆ. ವೇಗಿಗಳಿದ್ದಾರೆ. ಉತ್ತಮ ಬ್ಯಾಟರ್‌ಗಳಿದ್ದಾರೆ. ಇತ್ತೀಚಿನ ದಿನಗಳಲ್ಲಿ ಉತ್ತಮವಾಗಿ ಆಡಿದ ಹಿನ್ನೆಲೆಯಿದೆ' ಎಂದು ಅವರು ಹೇಳಿದರು.

ಭಾರತ ತಂಡವನ್ನು ತವರಿನಲ್ಲೇ ಸೋಲಿಸಿದ ಕೊನೆಯ ತಂಡ ಇಂಗ್ಲೆಂಡ್. 2012ರಲ್ಲಿ ಆಲಿಸ್ಟರ್ ಕುಕ್ ನೇತೃತ್ವದ ಇಂಗ್ಲೆಂಡ್ ತಂಡ 2-1 ರಿಂದ ಭಾರತ ತಂಡವನ್ನು ಸೋಲಿಸಿತ್ತು.

'ಬಾಝ್‌ಬಾಲ್' ಶೈಲಿಗೆ ಒತ್ತು: ಇಂಗ್ಲೆಂಡ್ ತಂಡ ಈ ಪ್ರವಾಸದಲ್ಲೂ ಆಕ್ರಮಣಕಾರಿ ಶೈಲಿಯ 'ಬಾಝ್ ಬಾಲ್' ಕ್ರಿಕೆಟ್ ಆಡಲಿದೆ ಎಂದು ವುಡ್ ತಿಳಿಸಿದರು.

ಇಂಗ್ಲೆಂಡ್ ಕೋಚ್ ಆಗಿರುವ ನ್ಯೂಜಿಲೆಂಡ್‌ನ ಮಾಜಿ ನಾಯಕ ಬ್ರೆಂಡನ್ ಮೆಕ್ಕಲಂ, ನಾಯಕ ಬೆನ್ ಸ್ಟೋಕ್ಸ್ ಅವರು ಕಂಡುಕೊಂಡ ಆಕ್ರಮಣಕಾರಿ ಶೈಲಿಯ ಆಟವನ್ನು 'ಬಾಝ್‌ಬಾಲ್' ಎನ್ನಲಾಗುತ್ತಿದೆ. ಮೆಕ್ಕಲಂ ಅವರ ಅಡ್ಡಹೆಸರು ಇದು. ಆದರೆ ಇಂಗ್ಲೆಂಡ್ ತಂಡದ ಆಕ್ರಮಣಕಾರಿ ಶೈಲಿಯ ಆಟಕ್ಕೆ ಪ್ರತಿತಂತ್ರ ಹೂಡಲು ತಂಡ ಸಮರ್ಥವಾಗಿದೆ ಎಂಬ ವಿಶ್ವಾಸವಿದೆ ಎಂದು ದ್ರಾವಿಡ್ ಹೇಳಿದರು.

'ರಾಹುಲ್‌ಗೆ ಕೀಪಿಂಗ್ ಹೊಣೆ ಇಲ್ಲ'



ಕೆ.ಎಲ್‌.ರಾಹುಲ್

ಹೈದರಾಬಾದ್ (ಪಿಟಿಐ): ಕೆ.ಎಲ್.ರಾಹುಲ್ ಅವರು ಇಂಗ್ಲೆಂಡ್ ವಿರುದ್ಧದ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ವಿಕೆಟ್ ಕೀಪಿಂಗ್ ಮಾಡುವುದಿಲ್ಲ ಎಂದು ಭಾರತ ತಂಡದ ಚೀಫ್ ಕೋಚ್ ರಾಹುಲ್ ದ್ರಾವಿಡ್ ಮಂಗಳವಾರ ಸ್ಪಷ್ಟಮಾತುಗಳಲ್ಲಿ ಹೇಳಿದ್ದಾರೆ. ಹೀಗಾಗಿ ಕೆ.ಎಸ್.ಭರತ್ ಮತ್ತು ಧ್ರುವ್ ಜುರೇಲ್ ಇವರಲ್ಲಿ ಒಬ್ಬರು ವಿಕೆಟ್ ಕೀಪರ್–ಬ್ಯಾಟರ್ ಪಾತ್ರ ವಹಿಸಬೇಕಾಗಿದೆ.

ದಕ್ಷಿಣ ಆಫ್ರಿಕಾ ವಿರುದ್ಧ ಕಳೆದ ತಿಂಗಳು ನಡೆದ ಎರಡು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ 31 ವರ್ಷದ ರಾಹುಲ್ ವಿಕೆಟ್ ಕೀಪರ್ ಆಗಿದ್ದರು. ಅವರು ಚುರುಕಾಗಿ ಆ ಪಾತ್ರ ನಿರ್ವಹಿಸಿದ್ದರು. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿ ಗುರುವಾರ ಇಲ್ಲಿ ಆರಂಭವಾಗಲಿದೆ.

'ರಾಹುಲ್ ಅವರು ಈ ಸರಣಿಗೆ ವಿಕೆಟ್ ಕೀಪರ್ ಆಗಿ ಆಡುವುದಿಲ್ಲ. ಆಯ್ಕೆಯಲ್ಲೇ ಈ ಬಗ್ಗೆ ಸ್ಪಷ್ಟತೆ ಹೊಂದಿದ್ದೇವೆ. ನಾವು ಇನ್ನಿಬ್ಬರು ಕೀಪರ್‌ಗಳನ್ನು ಆಯ್ಕೆ ಮಾಡಿದ್ದೇವೆ. ರಾಹುಲ್, ದಕ್ಷಿಣ ಆಫ್ರಿಕಾ ವಿರುದ್ಧ ಸರಣಿಯಲ್ಲಿ ಉತ್ತಮ ಪ್ರದರ್ಶನ ನೀಡಿದ್ದರೆಂಬುದರಲ್ಲಿ ಎರಡು ಮಾತಿಲ್ಲ. ಸರಣಿಯಲ್ಲಿ ಸಮಬಲ ಗೊಳಿಸುವಲ್ಲಿ ಅವರ ಪಾತ್ರ ಮಹತ್ವದ್ದಾಗಿತ್ತು' ಎಂದು ದ್ರಾವಿಡ್ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಆದರೆ ಐದು ಟೆಸ್ಟ್ ಪಂದ್ಯಗಳನ್ನು ಪರಿಗಣಿಸಿ ಮತ್ತು ಇಲ್ಲಿನ ಪರಿಸ್ಥಿತಿಗನುಗುಣವಾಗಿ (ಇಂಗ್ಲೆಂಡ್ ವಿರುದ್ಧ) ಕೀಪರ್ ಸ್ಥಾನಕ್ಕೆ ಇತರ ಇಬ್ಬರು ವಿಕೆಟ್ ಕೀಪರ್‌ಗಳ ನಡುವೆ ಆಯ್ಕೆ ನಡೆಯಲಿದೆ' ಎಂದು ಅವರು ವಿವರಿಸಿದರು.

ರಿಷಭ್ ಪಂತ್ ಸ್ಥಾನದಲ್ಲಿ ತಂಡದಲ್ಲಿ ಅವಕಾಶ ಪಡೆದ ಕೆ.ಎಸ್.ಭರತ್, ಕೀಪರ್ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿದ್ದಾರೆ.

ಐಸಿಸಿ ವರ್ಷದ ಏಕದಿನ ತಂಡಕ್ಕೆ ರೋಹಿತ್ ನಾಯಕ



ದುಬೈ (ಪಿಟಿಐ): ಐಸಿಸಿ ವರ್ಷದ ಏಕದಿನ ಕ್ರಿಕೆಟ್ ತಂಡದ ನಾಯಕನಾಗಿ ರೋಹಿತ್ ಶರ್ಮಾ ಮಂಗಳವಾರ ಆಯ್ಕೆಯಾಗಿದ್ದಾರೆ. ಅವರ ಜೊತೆ ಅನುಭವಿ ಬ್ಯಾಟರ್ ವಿರಾಟ್ ಕೊಹ್ಲಿ, ವೇಗಿಗಳಾದ ಮೊಹಮ್ಮದ್ ಶಮಿ ಮತ್ತು ಮೊಹಮ್ಮದ್ ಸಿರಾಜ್ ಸೇರಿದಂತೆ ಇತರ ಐವರು ಭಾರತೀಯರು ಸ್ಥಾನ ಪಡೆದಿದ್ದಾರೆ.

ವಿಶ್ವಕಪ್ ಫೈನಲ್ ತಲುಪಿದ್ದ ಭಾರತ (ರನ್ನರ್ ಅಪ್) ಮತ್ತು ಆಸ್ಟ್ರೇಲಿಯಾ (ವಿಜೇತರು) ಮತ್ತು ಸೆಮಿಫೈನಲ್ ತಲುಪಿದ್ದ ನ್ಯೂಜಿಲೆಂಡ್ ಮತ್ತು ದಕ್ಷಿಣ ಆಫ್ರಿಕಾದ ಆಟಗಾರರು ಈ ತಂಡದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ ಎಂದು ಐಸಿಸಿ ಹೇಳಿಕೆಯಲ್ಲಿ ತಿಳಿಸಿದೆ.

ಆಲ್‌ರೌಂಡರ್ ರವೀಂದ್ರ ಜಡೇಜಾ ಮತ್ತು ಆಫ್ ಸ್ಪಿನ್ನರ್ ರವಿಚಂದ್ರನ್ ಅಶ್ವಿನ್ 'ವರ್ಷದ ಟೆಸ್ಟ್ ತಂಡ'ದಲ್ಲಿ ಸ್ಥಾನ ಪಡೆದ ಇಬ್ಬರು ಭಾರತೀಯರಾಗಿದ್ದು, ಆಸ್ಟ್ರೇಲಿಯಾದ ವೇಗಿ ಪ್ಯಾಟ್ ಕಮಿನ್ಸ್ ಈ ತಂಡದ ನಾಯಕರಾಗಿದ್ದಾರೆ. ಬಾರ್ಡರ್-ಗಾವಸ್ಕರ್ ಸರಣಿಯಲ್ಲಿ ಅಶ್ವಿನ್ 25 ವಿಕೆಟ್‌ಗಳೊಡನೆ ಭಾರತದ ಪರ ಅತಿ ಹೆಚ್ಚು ವಿಕೆಟ್ ಪಡೆದ ಬೌಲರ್ ಎನಿಸಿದ್ದರು.

ಆಸ್ಟ್ರೇಲಿಯಾ ವಿರುದ್ಧದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಜಡೇಜಾ ಉತ್ತಮ ಪ್ರದರ್ಶನ ನೀಡಿದ್ದು, ನಾಲ್ಕು ವಿಕೆಟ್‌ಗಳ ಜೊತೆ 48 ರನ್ ಕೂಡ ಗಳಿಸಿದ್ದರು. ಆದರೂ ತಂಡ ಸೋತಿತ್ತು.

ಭಾರತ 'ಎ' ತಂಡಕ್ಕೆ ರಿಂಕು ಸಿಂಗ್



ನವದೆಹಲಿ (ಪಿಟಿಐ): ಚುಟುಕು ಕ್ರಿಕೆಟ್ ಪರಿಣತ ರಿಂಕು ಸಿಂಗ್ ಅವನ್ನು ಇಂಗ್ಲೆಂಡ್ ಲಯನ್ಸ್ ವಿರುದ್ಧ ಬುಧವಾರ ಅಹಮದಾಬಾದ್‌ನಲ್ಲಿ ಆರಂಭವಾಗುವ ನಾಲ್ಕು ದಿನಗಳ ಎರಡನೇ ಕ್ರಿಕೆಟ್ 'ಟೆಸ್ಟ್' ಪಂದ್ಯದಲ್ಲಿ ಆಡುವ ಭಾರತ 'ಎ' ತಂಡಕ್ಕೆ ಮಂಗಳವಾರ ಸೇರ್ಪಡೆ ಮಾಡಲಾಗಿದೆ.

ಮಧ್ಯಮ ಕ್ರಮಾಂಕದ ಬೀಸು ಹೊಡೆತಗಳ ಆಟಗಾರ ರಿಂಕು ಅವರು ದಕ್ಷಿಣ ಆಫ್ರಿಕಾ ವಿರುದ್ಧ ಸರಣಿ ಸಂದರ್ಭದಲ್ಲಿ ಏಕದಿನ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದು ಆಡಿದ ಎರಡು ಪಂದ್ಯಗಳಲ್ಲಿ ಕ್ರಮವಾಗಿ 17 ಮತ್ತು 38 ರನ್ ಗಳಿಸಿದ್ದರು.

ಭಾರತ– ಇಂಗ್ಲೆಂಡ್ ಲಯನ್ಸ್ ನಡುವಣ ಮೊದಲ 'ಟೆಸ್ಟ್'ಕಳೆದ ವಾರ 'ಡ್ರಾ'ದಲ್ಲಿ ಅಂತ್ಯಗೊಂಡಿತ್ತು.

15 ಆಟಗಾರರ ಭಾರತ 'ಎ' ತಂಡ ಹೀಗಿದೆ: ಅಭಿಮನ್ಯು ಈಶ್ವರನ್ (ನಾಯಕ), ಸಾಯಿ ಸುದರ್ಶನ್, ರಜತ್ ಪಾಟಿದಾರ್, ಸರ್ಫರಾಜ್ ಖಾನ್, ತಿಲಕ್ ವರ್ಮಾ, ಕುಮಾರ್ ಕುಶಾಗ್ರ, ವಾಷಿಂಗ್ಟನ್ ಸುಂದರ್, ಸೌರಭ್ ಕುಮಾರ್, ಅರ್ಷದೀಪ್ ಸಿಂಗ್, ತುಷಾರ್ ದೇಶಪಾಂಡೆ, ವಿದ್ವತ್ ಕಾವೇರಪ್ಪ, ಉಪೇಂದ್ರ ಯಾದವ್, ಆಕಾಶ್ ದೀಪ್, ಯಶ್ ದಯಾಳ್, ರಿಂಕು ಸಿಂಗ್.

ಕ್ರಿಕೆಟ್: ಕಿವೀಸ್‌ಗೆ ರೋಚಕ ಜಯ

ಈಸ್ಟ್ ಲಂಡನ್ (ದಕ್ಷಿಣ ಆಫ್ರಿಕಾ): ಕುಸಿತ ನಡುವೆಯೂ ನ್ಯೂಜಿಲೆಂಡ್ ತಂಡ 19 ವರ್ಷದೊಳಗಿನವರ ಏಕದಿನ ವಿಶ್ವ ಕಪ್ ಕ್ರಿಕೆಟ್ ಟೂರ್ನಿಯ ರೋಚಕ ಪಂದ್ಯದಲ್ಲಿ ಮಂಗಳವಾರ ಅಫ್ಗಾನಿಸ್ತಾನ ತಂಡವನ್ನು ಒಂದು ವಿಕೆಟ್‌ನಿಂದ ಸೋಲಿಸಿತು.

'ಡಿ' ಗುಂಪಿನ ಈ ಪಂದ್ಯದಲ್ಲಿ ಟಾಸ್ ಗೆದ್ದ ಅಫ್ಗಾನಿಸ್ತಾನ 21.3 ಓವರುಗಳಲ್ಲಿ 91 ರನ್ನಿಗೆ ಉರುಳಿತು. ಮ್ಯಾಟ್ ರೋವ್ 21 ರನ್ನಿಗೆ ಐದು ವಿಕೆಟ್ ಪಡೆದು ಮಿಂಚಿದರು. ಅಫ್ಗಾನಿಸ್ತಾನ ಪ್ರತಿ ಹೋರಾಟ ತೋರಿದರೂ ಕಿವೀಸ್ ತಂಡ 28.2 ಓವರುಗಳಲ್ಲಿ 9 ವಿಕೆಟ್ ನಷ್ಟಕ್ಕೆ 92 ರನ್ ಗಳಿಸಿ ಗುರಿತಲುಪಿತು.

ಪೊಚೆಫಸ್ಟ್ರೂಮ್‌ನಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಇಂಗ್ಲೆಂಡ್ ತಂಡ ಡಕ್‌ವರ್ತ್ ಲೂಯಿಸ್ ಆಧಾರದಲ್ಲಿ ಆತಿಥೇಯ ದಕ್ಷಿಣ ಆಫ್ರಿಕಾ ತಂಡನ್ನು 36 ರನ್‌ಗಳಿಂದ ಸೋಲಿಸಿತು.

ಪ್ರೊ ಕಬಡ್ಡಿ: ಮುಂಬಾ–ಪುಣೇರಿ ಪಂದ್ಯ ಟೈ

ಹೈದರಾಬಾದ್: ಪ್ರೊ ಕಬಡ್ಡಿ ಲೀಗ್‌ನ ರೋಚಕ ಪಂದ್ಯದಲ್ಲಿ ಕೊನೆಗಳಿಗೆಯಲ್ಲಿ ಹಿನ್ನಡೆಯಿಂದ ಪುಟಿದೆದ್ದ ಯು ಮುಂಬಾ ತಂಡ 32-32 ರಿಂದ ಪುಣೇರಿ ಪಲ್ಟನ್ ಜೊತೆ ಟೈ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಈ ಪಂದ್ಯದಲ್ಲಿ ವಿರಾಮದ ವೇಳೆಗೆ ಮುಂಬಾ ತಂಡವು 19-17 ಪಾಯಿಂಟ್ಸ್‌ಗಳಿಂದ ಮುನ್ನಡೆ ಪಡೆದಿತ್ತು. ಪಂದ್ಯದ ಆರಂಭದಿಂದಲೂ ಉಭಯ ತಂಡಗಳ ಆಟಗಾರರು ಜಿದ್ದಾಜಿದ್ದಿಯ ಪೈಪೋಟಿ ನಡೆಸಿದರು. ಅಲ್ಲದೇ ಎರಡು ತಂಡಗಳು ತಲಾ ಒಂದು ಬಾರಿ ಆಲೌಟ್ ಆದವು.

ಪುಣೇರಿ ಪರ ನಾಯಕ ಅಸ್ಲಾಂ ಇನಾಮದಾರ್ 8, ಮೋಹಿತ್ ಗೋಯತ್ 7 ಪಾಯಿಂಟ್ಸ್ ಕಲೆ ಹಾಕಿದರು. ಟ್ಯಾಕಲ್‌ನಲ್ಲಿ ಮೊಹಮ್ಮದ್‌ರೇಝಾ 6 ಮತ್ತು ಸಂಕೇತ್ ಸಾವಂತ್ 4 ಅಂಕಗಳನ್ನು ತಂಡಕ್ಕೆ ತಂದಿತ್ತರು. ಇದು 14 ಪಂದ್ಯಗಳಲ್ಲಿ ಪುಣೇರಿಗೆ 11ನೇ ಗೆಲುವು. ಅದು 60 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದೆ.

ಮುಂಬಾ ಪರ ರೈಡರ್ ಗುಮನ್ ಸಿಂಗ್ 15 ಪಾಯಿಂಟ್ಸ್ ಪಡೆದು ಮಿಂಚಿದರು. ಗೋಕುಲಕಣ್ಣನ್ ಟ್ಯಾಕಲ್‌ನಲ್ಲಿ 6 ಅಂಕಗಳನ್ನು ತಂಡಕ್ಕೆ ಒದಗಿಸಿಕೊಟ್ಟರು. ಆಡಿರುವ 14 ಪಂದ್ಯಗಳಲ್ಲಿ ಆರು ಪಂದ್ಯದಲ್ಲಿ ಜಯ ಸಾಧಿಸಿರುವ ಯು ಮುಂಬಾ, 40 ಪಾಯಿಂಟ್ಸ್‌ನೊಂದಿಗೆ ಆರನೇ ಸ್ಥಾನದಲ್ಲಿದೆ.

ಇಂದಿನ ಪಂದ್ಯಗಳು

ಹರಿಯಾಣ ಸ್ಟೀಲರ್ಸ್–ದಬಂಗ್ ಡೆಲ್ಲಿ (ರಾತ್ರಿ 8)

ತೆಲುಗು ಟೈಟನ್ಸ್–ತಮಿಳ್ ತಲೈವಾಸ್ (ರಾತ್ರಿ 9)

ಬೆಂಗಳೂರು ಗ್ರ್ಯಾಂಡ್‌ಮಾಸ್ಟರ್ಸ್ ಓಪನ್ ಚೆಸ್ ಟೂರ್ನಿ

ಅಗ್ರಸ್ಥಾನಕ್ಕೆ ತೀವ್ರಗೊಂಡ ಪೈಪೋಟಿ

ಪ್ರಜಾವಾಣಿ ವಾರ್ತೆ



ನೈಜೆಲ್ ಶಾರ್ಟ್

ಬೆಂಗಳೂರು: ಬೆಂಗಳೂರು ಅಂತರ ರಾಷ್ಟ್ರೀಯ ಗ್ರ್ಯಾಂಡ್‌ಮಾಸ್ಟರ್ ಓಪನ್ ಚೆಸ್ ಟೂರ್ನಿಯ ಮುಕ್ತಾಯಕ್ಕೆ ಇನ್ನು ಮೂರೇ ಸುತ್ತುಗಳು ಉಳಿದಿರುವಂತೆ ಪ್ರಶಸ್ತಿಗೆ ಪೈಪೋಟಿ ತೀವ್ರಗೊಂಡಿದೆ. ನಾಲ್ವರು ಗ್ರ್ಯಾಂಡ್‌ಮಾಸ್ಟರ್ ಆಟಗಾರರು– ಅಭಿಜಿತ್ ಗುಪ್ತಾ, ಎಸ್.ಪಿ. ಸೇತುರಾಮನ್, ನೈಜೆಲ್ ಶಾರ್ಟ್ ಮತ್ತು ಮಿತ್ರಬಾ ಗುಹಾ– ಏಳು ಸುತ್ತುಗಳ ನಂತರ ತಲಾ ಆರು ಪಾಯಿಂಟ್ಸ್ ಕಲೆಹಾಕಿದ್ದು ಅಗ್ರಸ್ಥಾನ ಹಂಚಿಕೊಂಡಿದ್ದಾರೆ.

ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಮಂಗಳವಾರ ಮೊದಲ ಬೋರ್ಡ್‌ನಲ್ಲಿ ಅಗ್ರ ಶ್ರೇಯಾಂಕದ ಅಭಿಜಿತ್ ಗುಪ್ತಾ (ಪಿಎಸ್‌ಪಿಬಿ) ಮತ್ತು ಬಂಗಾಳದ ಮಿತ್ರಬಾ ಗುಹಾ ಬೇಗನೇ– ಕೇವಲ 16 ನಡೆಗಳ ನಂತರ 'ಡ್ರಾ'ಕ್ಕೆ ಒಪ್ಪಿಕೊಂಡರು. ಎರಡನೇ ಶ್ರೇಯಾಂಕ ಪಡೆದಿರುವ ರಾಷ್ಟ್ರೀಯ ಚಾಂಪಿಯನ್ ಸೇತುರಾಮನ್ ವಿರುದ್ಧ ಬಿಳಿ ಕಾಯಿಗಳಲ್ಲಿ ಆಡಿದ ಒಂಬತ್ತನೇ ಶ್ರೇಯಾಂಕದ ಪಿ.ಇನಿಯನ್ 43ನೇ ನಡೆಯಲ್ಲಿ ಸೋಲೊಪ್ಪಿಕೊಂಡರು.

ಬ್ರಿಟನ್‌ನ ಹಳೆಯ ಹುಲಿ ನೈಜೆಲ್ ಶಾರ್ಟ್ ಅವರಿಗೆ ತಮಿಳುನಾಡಿನ ಎ.ಆರ್.ಇಳಂಪರ್ತಿ ಹೆಚ್ಚು ಪೈಪೋಟಿ ಒಡ್ಡಲಿಲ್ಲ. 34ನೇ ನಡೆಯಲ್ಲಿ ಶಾರ್ಟ್ ಗೆದ್ದರು.

ಆರು ಆಟಗಾರರು ಐದೂವರೆ ಪಾಯಿಂಟ್‌ಗಳೊಂದಿಗೆ ಎರಡನೇ ಸ್ಥಾನ ಹಂಚಿಕೊಂಡಿದ್ದಾರೆ. ಟೂರ್ನಿಯಲ್ಲಿ ಉತ್ತಮ ಆಟ ತೋರುತ್ತಿರುವ ಕೇರಳದ ಯುವ ಆಟಗಾರ ನಿತಿನ್ ಬಾಬು (ರೇಟಿಂಗ್: 2177), ಐಎಂ ಸಮ್ಮೇದ್ ಜಯಕುಮಾರ್ ಅವರನ್ನು ಸೋಲಿಸಿದರು. ಎರಡನೇ ಸ್ಥಾನದಲ್ಲಿರುವ ಇತರ ಐವರು– ಜಿಎಂ ಎಂ.ಶ್ಯಾಮಸುಂದರ್, ಜಿಎಂ ಸಂದೀಪನ್ ಚಂದಾ, ಎಲ್.ಆರ್.ಶ್ರೀಹರಿ, ನೀಲೋತ್ಪಲ್ ದಾಸ್ ಮತ್ತು ನೀಲೇಶ್ ಸಹಾ.

ಎಂಟನೇ ಸುತ್ತಿನಲ್ಲಿ ಸೇತುರಾಮನ್, ಅಭಿಜಿತ್ ಗುಪ್ತಾ ವಿರುದ್ಧ, ಮಿತ್ರಬಾ ಗುಹಾ, ನೈಜೆಲ್ ಶಾರ್ಟ್ ವಿರುದ್ಧ ಆಡಲಿದ್ದಾರೆ.

ರವಿ ಶಾಸ್ತ್ರಿ, ಫಾರೂಕ್‌ಗೆ ಜೀವಮಾನ ಸಾಧನೆ ಪ್ರಶಸ್ತಿ



ಬಿಸಿಸಿಐಯಿಂದ ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ಪಡೆದ ಭಾರತ ತಂಡದ ಮಾಜಿ ಮುಖ್ಯ ಕೋಚ್ ರವಿ ಶಾಸ್ತ್ರಿ ಮತ್ತು ಮಾಜಿ ವಿಕೆಟ್ ಕೀಪರ್ ಫಾರೂಕ್ ಎಂಜಿನಿಯರ್ —ಪಿಟಿಐ ಚಿತ್ರ

ಹೈದರಾಬಾದ್: ಭಾರತ ತಂಡದ ಮಾಜಿ ಮುಖ್ಯ ಕೋಚ್ ರವಿ ಶಾಸ್ತ್ರಿ ಮತ್ತು ಮಾಜಿ ವಿಕೆಟ್ ಕೀಪರ್ ಫಾರೂಕ್ ಎಂಜಿನಿಯರ್ ಅವರಿಗೆ ಮಂಗಳವಾರ ಇಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯು (ಬಿಸಿಸಿಐ) ಕರ್ನಲ್ ಸಿ.ಕೆ. ನಾಯ್ಡು ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಿತು.

1983ರಲ್ಲಿ ವಿಶ್ವಕಪ್ ಗೆದ್ದ ತಂಡದ ಸದಸ್ಯರಾಗಿದ್ದ ಶಾಸ್ತ್ರಿ ಅವರು 'ಇದು ನನಗೆ ಅತ್ಯಂತ ಭಾವನಾತ್ಮಕ ಕ್ಷಣ' ಎಂದು ಪ್ರತಿಕ್ರಿಯಿಸಿದರು. ಅವರು 1985ರ 'ವರ್ಲ್ಡ್ ಸೀರಿಸ್'ನಲ್ಲಿ 'ಸರಣಿಯ ಆಟಗಾರ' ಗೌರವ ಪಡೆದಿದ್ದರು.

ಭಾರತ ತಂಡದ ಬ್ಯಾಟರ್ ಶುಭಮನ್ ಗಿಲ್ ಅವರಿಗೆ 2022–23ನೇ ಸಾಲಿನ ಪುರುಷರ ವಿಭಾಗದ ವರ್ಷದ ಅಂತರರಾಷ್ಟ್ರೀಯ ಕ್ರಿಕೆಟಿಗ ಪುರಸ್ಕಾರ (ಪಾಲಿ ಉಮ್ರಿಗಾರ್ ಪ್ರಶಸ್ತಿ) ನೀಡಲಾಯಿತು. ಮಹಿಳೆಯರ ವಿಭಾಗದಲ್ಲಿ ಈ ಗೌರವ ಸ್ಪಿನ್ನರ್ ದೀಪ್ತಿ ಶರ್ಮಾ ಅವರ ಪಾಲಾಯಿತು. ಬಿಸಿಸಿಐ ಅಧ್ಯಕ್ಷ ರೋಜರ್ ಬಿನ್ನಿ, ಕಾರ್ಯದರ್ಶಿ ಜಯ್ ಶಾ ಪ್ರಶಸ್ತಿ ಪ್ರದಾನ ಮಾಡಿದರು.

ಪಾಲಿ ಉಮ್ರಿಗಾರ್ ಪ್ರಶಸ್ತಿ ಪುರಸ್ಕೃತರು: ಮೊಹಮ್ಮದ್ ಶಮಿ (2019- 20), ಆರ್. ಅಶ್ವಿನ್ (2020-21), ಜಸ್‌ಪ್ರೀತ್ ಬೂಮ್ರಾ (2021-22).

ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಅತ್ಯುತ್ತಮ ಪದಾರ್ಪಣೆ ಪ್ರಶಸ್ತಿ: ಮಯಂಕ್ ಅಗರವಾಲ್ (2019-20), ಅಕ್ಷರ್ ಪಟೇಲ್ (2020-21), ಶ್ರೇಯಸ್ ಅಯ್ಯರ್ (2021-22), ಯಶಸ್ವಿ ಜೈಸ್ವಾಲ್ (2022-23).

ಸಂಕ್ಷಿಪ್ತ ಸುದ್ದಿ

ನಾರ್ತಾಂಪ್ಟನ್‌ಶೈರ್‌ಗೆ ಮರಳಲಿರುವ ಕರುಣ್ ನಾಯರ್



ನಾರ್ತಾಂಪ್ಟನ್ (ಇಂಗ್ಲೆಂಡ್), (ಪಿಟಿಐ): ಭಾರತದ ಬ್ಯಾಟರ್ ಕರುಣ್ ನಾಯರ್ ಅವರು ಮುಂಬರುವ ಕೌಂಟಿ ಚಾಂಪಿಯನ್‌ಷಿಪ್‌ನಲ್ಲಿ ನಾರ್ತಾಂಪ್ಟನ್ ಷೈರ್ ಪರ ಆಡಲಿದ್ದಾರೆ. ಕಳೆದ ವರ್ಷ ಈ ಕ್ಲಬ್ ಪರ ಅವರು ಉತ್ತಮ ಯಶಸ್ಸು ಗಳಿಸಿದ್ದರು.

32 ವರ್ಷದ ಕರುಣ್ ಈ ಕ್ಲಬ್ ಪರ ಏಳು ಪಂದ್ಯಗಳಲ್ಲಿ ಆಡಲಿದ್ದಾರೆ. ಕಳೆದ ಋತುವಿನಲ್ಲಿ ಅವರು ಆಡಿದ ಮೂರು ಪಂದ್ಯಗಳಲ್ಲಿ ಕ್ರಮವಾಗಿ 78, 150 ಮತ್ತು 21 ರನ್ (ಸರಾಸರಿ 83) ಗಳಿಸಿದ್ದರು. ಆದರೆ ಕ್ಲಬ್ ಎ ಡಿವಿಷನ್‌ನಲ್ಲಿ ಉಳಿದುಕೊಳ್ಳಲು ವಿಫಲವಾಗಿತ್ತು.

ಭಾರತ ತಂಡದ ಪರ ಅವರು ಅಲ್ಪಾವಧಿಗೆ ಆಡಿದ್ದರು. ಇಂಗ್ಲೆಂಡ್ ವಿರುದ್ಧ 2016ರಲ್ಲಿ ಗಳಿಸಿದ ಅಜೇಯ 303 ಅವರ ಕ್ರಿಕೆಟ್ ಜೀವನದ ಸ್ಮರಣೀಯ ಇನಿಂಗ್ಸ್.

ಟೆಸ್ಟ್‌ನಲ್ಲಿ ವೀರೇಂದ್ರ ಸೆಹ್ವಾಗ್ ನಂತರ ತ್ರಿಶತಕ ಗಳಿಸಿದ್ದ ಎರಡನೇ ಆಟಗಾರ ಎನಿಸಿದ್ದರು. ಚಾಂಪಿಯನ್‌ಷಿಪ್‌ನ ದ್ವಿತೀಯಾರ್ಧದಲ್ಲಿ ನಾಯರ್ ಅವರು ಪೃಥ್ವಿ ಶಾ ಸ್ಥಾನ ತುಂಬಲಿದ್ದಾರೆ.

ಸಿರಿಯಾಗೆ ಮಣಿದ ಭಾರತ

ಅಲ್ ಖೋರ್ (ಕತಾರ್) (ಪಿಟಿಐ): ಭಾರತ ತಂಡ ಎಎಫ್‌ಸಿ ಏಷ್ಯಾ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಮಂಗಳವಾರ ಸಿರಿಯಾ ಎದುರು 0-1 ರಿಂದ ಸೋಲು ಅನುಭವಿಸಿತು.

ಗುಂಪಿನಲ್ಲಿ ಆಡಿದ ಮೂರೂ ಪಂದ್ಯಗಳನ್ನು ಸೋತ ನಂತರ ಸುನಿಲ್ ಚೆಟ್ರಿ ಬಳಗ ಟೂರ್ನಿಯಿಂದ ಹೊರ ಬಿದ್ದಿದೆ. ನಾಕ್‌ಔಟ್ ಪ್ರವೇಶಕ್ಕೆ ಇದ್ದ ಅವಕಾಶವನ್ನು ಜೀವಂತವಾಗಿ ಇರಿಸಲು ಸಿರಿಯಾ ವಿರುದ್ಧ ಪಂದ್ಯವನ್ನು ಭಾರತ ಗೆಲ್ಲಲೇಬೇಕಿತ್ತು.

ಬದಲಿ ಆಟಗಾರ ಒಮರ್ ಖ್ರಿಬಿನ್ 76ನೇ ನಿಮಿಷ ಗಳಿಸಿದ ಗೋಲಿನಿಂದ ಸಿರಿಯಾ ತಂಡದ ನಾಕೌಟ್ ಅವಕಾಶ ಜೀವಂತವಾಯಿತು.

ಪರಿಕ್ರಮ ಎಫ್‌ಸಿ ತಂಡಕ್ಕೆ ಜಯ

ಬೆಂಗಳೂರು: ವಿಶಾಲ್ ಕುಮಾರ್ ಅವರ ಆಟದ ಬಲದಿಂದ ಪರಿಕ್ರಮ ಎಫ್.ಸಿ ತಂಡವು ಬಿಡಿಎಫ್‌ಎ 'ಎ' ಡಿವಿಷನ್ ಫುಟ್‌ಬಾಲ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 4-1ರಿಂದ ಡಿವೈಇಎಸ್ ಎಫ್.ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ವಿಶಾಲ್ (52 ಮತ್ತು 80 + 1ನೇ ನಿ.) ಪರಿಕ್ರಮದ ಪರ ಎರಡು ಗೋಲು ಗಳಿಸಿದರೆ, ಲಂಚುಂಗ್ರ ಪಮೇಯಿ (80 + 3ನೇ) ಮತ್ತು ಸ್ಯಾಮ್ಯುಯೆಲ್ ಗೋಗಿ (80 + 7ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಡಿವೈಇಎಸ್ ಪರವಾಗಿ ಚಂದನ್ ಎಸ್‌ಎ (29ನೇ) ಏಕೈಕ ಗೋಲು ತಂದಿತ್ತರು.

ಮತ್ತೊಂದು ಪಂದ್ಯದಲ್ಲಿ ಜವಾಹರ್ ಯೂನಿಯನ್ ಎಫ್.ಸಿ ತಂಡವು 1-0ಯಿಂದ ಇನ್‌ಕಂ ಟ್ಯಾಕ್ಸ್ ತಂಡವನ್ನು ಸೋಲಿಸಿತು. ಕಾರ್ತಿಕ್ (75ನೇ) ಜವಾಹರ್ ತಂಡದ ಪರವಾಗಿ ಗೆಲುವಿನ ಗೋಲು ದಾಖಲಿಸಿದರು.

ಬ್ಯಾಡ್ಮಿಂಟನ್: ಪ್ರಧಾನ ಸುತ್ತಿಗೆ ಕಿರಣ್ ಜಾರ್ಜ್



ಜಕಾರ್ತಾ(ಪಿಟಿಐ): ಭಾರತದ ಕಿರಣ್ ಜಾರ್ಜ್ ಅವರು ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಅರ್ಹತಾ ಸುತ್ತಿನಲ್ಲಿ ಮಂಗಳವಾರ ಎರಡು ಗೆಲುವು ಸಾಧಿಸಿ ಪ್ರಧಾನ ಸುತ್ತು ಪ್ರವೇಶಿಸಿದ್ದಾರೆ.

ಕೊಚ್ಚಿಯ 23 ವರ್ಷದ ಆಟಗಾರ, ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಇಂಡೊನೇಷ್ಯಾದ ಶೆಸರ್ ಹಿರೆನ್ ರುಸ್ತಾವಿಟೊ ವಿರುದ್ಧ 21-17, 12-21, 21-15 ರಿಂದ ಮತ್ತು ಫ್ರಾನ್ಸ್‌ನ ಅಲೆಕ್ಸ್ ಲೇನಿಯರ್ ಅವರ ವಿರುದ್ಧ 12-21, 21-18, 22-20 ಅಂತರದಿಂದ ಜಯ ಗಳಿಸಿದರು.

ಪ್ರಧಾನ ಸುತ್ತಿನಲ್ಲಿ ಭಾರತದ ಎಚ್.ಎಸ್.ಪ್ರಣಯ್ ಅವರು ಸಿಂಗಪುರದ ಲೋಹ್ ಕೀನ್ ಯೂ ವಿರುದ್ಧ ತಮ್ಮ ಅಭಿಯಾನ ಆರಂಭಿಸಲಿದ್ದಾರೆ. ಲಕ್ಷ್ಯ ಸೇನ್ ಅವರು ಮೊದಲ ಸುತ್ತಿನಲ್ಲಿ ಚೀನಾದ ವೆಂಗ್ ಹಾಂಗ್ ಯಾಂಗ್ ವಿರುದ್ಧ ಸೆಣಸಲಿದ್ದಾರೆ.

ಫೆ.4ಕ್ಕೆ ಪ್ಯಾರಾ ಬ್ಯಾಡ್ಮಿಂಟನ್

ಬೆಂಗಳೂರು: ಕರ್ನಾಟಕ ರಾಜ್ಯ ಪ್ಯಾರಾ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಫೆ.4ರಂದು ದಾವಣಗೆರೆಯ ನೇತಾಜಿ ಸುಭಾಷ್‌ಚಂದ್ರ ಬೋಸ್ ಕ್ರೀಡಾಂಗಣದಲ್ಲಿ ಆಯೋಜಿಸಲಾಗಿದೆ.

ಕರ್ನಾಟಕ ರಾಜ್ಯ ಅಂಗವಿಕಲರ ಕ್ರೀಡಾ ಸಂಸ್ಥೆಯ ಆಶ್ರಯದಲ್ಲಿ ನಡೆಯುವ ಈ ಟೂರ್ನಿಯು ಮುಂಬರುವ ರಾಷ್ಟ್ರೀಯ ಕೂಟಕ್ಕೆ ಆಯ್ಕೆ ಟ್ರಯಲ್ಸ್ ಕೂಡ ಆಗಿರಲಿದೆ. ಟೂರ್ನಿಯಲ್ಲಿ ಭಾಗವಹಿಸುವ ಸ್ಪರ್ಧಿಗಳು ಇದೇ 30ರೊಳಗೆ ಇ ಮೇಲ್‌ಗೆ (entries.karpb@gmail) ವಿವರವನ್ನು ಕಳುಹಿಸಿ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ ದೂರವಾಣಿ: 080-29914590 ಸಂಪರ್ಕಿಸಬಹುದು.


SMART BAZAAR
Reliance
ಫುಲ್ ಪೈಸಾ ವಸೂಲ್ ಸೇಲ್
24th -28th Jan
Also On JioMart
ಫುಲ್ ಪೈಸಾ ವಸೂಲ್ ನ ಆಕರ್ಷಕ ಆಫರ್ ಬೇಕಾ? ಸ್ಮಾರ್ಟ್ ಬಜಾರ್‌ಗೆ ಬನ್ನಿರಿ
ಮನೆಯಲ್ಲೇ ಕುಳಿತು ಫುಲ್ ಪೈಸಾ ವಸೂಲ್ ನ ಆಫರ್ ಬೇಕಾ? ಜಿಯೋಮಾರ್ಟ್ ಆಪ್ ಡೌನ್ ಲೋಡ್ ಮಾಡಿ!
ನಿಮ್ಮ ಹತ್ತಿರದ ಅಂಗಡಿಗೆ ಭೇಟಿ ನೀಡಿ
SMART SUPERSTORE
fresh Signature
ಬೆಂಗಳೂರು : ಶೆಲ್ ಪೆಟ್ರೋಲ್ ಪಂಪ್ ಪಕ್ಕದಲ್ಲಿ, ಇಸ್ಕಾನ್ ದೇವಸ್ಥಾನದ ಹತ್ತಿರ, ರಾಜಾಜಿನಗರ • ಬೆಂಗಳೂರು ಸೆಂಟ್ರಲ್ ಮಾಲ್ ಎದುರು, ರಾಗಿಗುಡ್ಡ, ಜಯನಗರ 9 ನೇ ಬ್ಲಾಕ್ • ರಾಯಲ್ ಮೀನಾಕ್ಷಿ ಮಾಲ್, ಬನ್ನೇರುಘಟ್ಟ ರಸ್ತೆ • ಜಿಟಿ ವರ್ಲ್ಡ್ ಮಾಲ್, ಮಾಗಡಿ ಮುಖ್ಯ ರಸ್ತೆ, ಪ್ರಸನ್ನ ಥಿಯೇಟರ್ ಪಕ್ಕ • ಸಂಗೀತ ಅಪಾರ್ಟ್ ಮೆಂಟ್ ಹತ್ತಿರ, ಹಳೆಯ ಗೀತಾಂಜಲಿ ಥಿಯೇಟರ್, ಮಲ್ಲೇಶ್ವರಂ • ಬ್ರಿಗೇಡ್ ಮಿಲೇನಿಯಮ್ ಹತ್ತಿರ, RBI ಲೇಔಟ್, 7 ನೇ ಹಂತ, J.P. ನಗರ • ಸೋಲ್ ಸ್ಪೇಸ್ ಸ್ಪಿರಿಟ್, ಬೆಳ್ಳಂದೂರ್. • ವಿಜಯಾ ಬ್ಯಾಂಕ್ ಕಾಲೋನಿ, ಔಟರ್ ರಿಂಗ್ ರೋಡ್, ಬಾಣಸವಾಡಿ. • ಮಾರುತಿ ಆರ್ಕೇಡ್, ಭದ್ರಪ್ಪಾ ಲೇಔಟ್, ಔಟರ್ ರಿಂಗ್ ರೋಡ್ ಹೆಬ್ಬಾಳ . • ರಿಲಯನ್ಸ್ ಡಿಜಿಟಲ್ ಪಕ್ಕದಲ್ಲಿ, ಹೆಣ್ಣೂರು-ಬಾಗಲೂರು ಮುಖ್ಯರಸ್ತೆ, ಕೊತ್ತನೂರು • ಕೆಳ ಮಹಡಿ, ಫೀನಿಕ್ಸ್ ಮಾರ್ಕೆಟ್ ಸಿಟಿ, ಮಹದೇವಪುರ ಮುಖ್ಯ ರಸ್ತೆ • ಟ್ರೆಂಡ್ಸ್ ಪಕ್ಕ, ಕತ್ರಿಗುಪ್ಪೆ ರಸ್ತೆ, ಬನಶಂಕರಿ 3 ನೇ ಹಂತ • ರಾಯಭಾರ ಕಚೇರಿ ಪ್ಯಾರಾಗಾನ್, ಐಟಿಪಿಎಲ್ ಮುಖ್ಯ ರಸ್ತೆ, ಎದುರು. ಕುಂದಲಹಳ್ಳಿ ಗೇಟ್ ಬಸ್ ನಿಲ್ದಾಣ • ಬೆಂಗಳೂರು : ಅಕ್ಷಯ ನಗರ : ಡಿಎಲ್ ಎಫ್ ನ್ಯೂ ಟೌನ್ ಹತ್ತಿರ, ಬೇಗೂರ್ - ಹುಳಿಮಾವು ರಸ್ತೆ • ಚಂದಾಪುರ : ಗುಲ್ಲಿ ರೆಡ್ಡಿ ಲೇಔಟ್, ಚಂದಾಪುರ ಅತ್ತಿಬೆಲೆ ಹೋಬಳಿ, ಆನೇಕಲ್ ಮುಖ್ಯ ರಸ್ತೆ • ಕೃಷ್ಣ ಟವರ್ ಉತ್ತರಹಳ್ಳಿ : ಚಿಕ್ಕಸಂದ್ರ, ಕಾಂತಿ ಸ್ವೀಟ್ಸ್ ಎದುರಿಗೆ, ಉತ್ತರಹಳ್ಳಿ ಮುಖ್ಯ ರಸ್ತೆ • ಮೋನಾರ್ಚ್ ಸೆರೆನಿಟಿ : ಥಣಿಸಂದ್ರ ಮುಖ್ಯ ರಸ್ತೆ. ಥಣಿಸಂದ್ರ. • ಶಾಂತಿನಗರ ಟಿ ಟಿ ಎಮ್ ಸಿ : ವಿಲ್ಸನ್ ಗಾರ್ಡನ್ ಹತ್ತಿರ, ಶಾಂತಿನಗರ • ಮಾಳಗಾಲ ರೋಡ್ : ಮಾಳಗಾಲ ಮುಖ್ಯ ರಸ್ತೆ, ನಾಗರಭಾವಿ 2 ನೇ ಹಂತ, ಗಂಗಮ್ಮ ಗಾರ್ಡನ್ಸ್. • ವಿದ್ಯಾರಣ್ಯಪುರ : ಮಾರ್ಸ್ ಎನ್‌ಕ್ಲೇವ, ದೊಡ್ಡಮ್ಮಸಂದ್ರ ಮುಖ್ಯ ರಸ್ತೆ. ವಿದ್ಯಾರಣ್ಯಪುರ • ವಿಜ್ಞಾನನಗರ : ಶೆಲ್ ಪೆಟ್ರೋಲ್ ಬಂಕ್ ಹತ್ತಿರ, ವಿಭೂತಿಪುರ ಹಳ್ಳಿ, ವಿಜ್ಞಾನನಗರ್ • ವಿಜಯನಗರ ಟಿ ಟಿ ಎಮ್ ಸಿ : ಮಾರುತಿ ಮಂದಿರ ಹತ್ತಿರ • ಕೆ ಆರ್ ಪುರಂ : ಬೆತ್ತಲ್ ನಗರ, ಬಸವನಪುರ್ ಮುಖ್ಯ ರಸ್ತೆ, ಕೆ ಆರ್ ಪುರಂ • ಭಾರತೀಯ ಮಾಲ್ ಆಫ್ ಬೆಂಗಳೂರು : ಭಾರತೀಯ ಸಿಟಿ, ಆರ್ ಕೆ ಹೆಗ್ಡೆ ನಗರ, ಥಣಿಸಂದ್ರ ಮುಖ್ಯ ರಸ್ತೆ. • ಎಲೆಕ್ಟ್ರಾನಿಕ್ ಸಿಟಿ : ಶ್ರೀಧರ್ ರೆಡ್ಡಿ ಪ್ರಾಪರ್ಟಿ, ರುಚಿ ಸಾಗರ ಹೋಟೆಲ್ ಹತ್ತಿರ ಹಂತ 2 • ಹರಳೂರು ರೋಡ್ : ಪಿಎನ್‌ಆರ್ ಫೇಲಿಸಿಟಿ, ಡಿಎಸ್‌ಆರ್ ಅಲ್ಟಿಮ ಅಪಾರ್ಟ್ಮೆಂಟ್ ಹತ್ತಿರ. • ಎನ್‌ಆರ್‌ಐ ಲೇಔಟ್ : ಮುಖ್ಯ ರಸ್ತೆ, ಎಚ್‌ಡಿಎಫ್‌ಸಿ ಬ್ಯಾಂಕ್ ಹತ್ತಿರ, ಕಲ್ಕೆರೆ ಗ್ರಾಮ. • ಡಿವಿನಿಟಿ ಮಾಲ್ : ಮೈಸೂರು ರಸ್ತೆ, ನಾಯಂಡಹಳ್ಳಿ ಮೆಟ್ರೋ ನಿಲ್ದಾಣದ ಹತ್ತಿರ. • ಕನಕಪುರ: ಕೋಡಿಹಳ್ಳಿ ರೋಡ್, ಎಚ್‌ಡಿಎಫ್‌ಸಿ ಮತ್ತು ಎಕ್ಸಿಸ್ ಬ್ಯಾಂಕ್‌ನ ನಡುವೆ. • ತುಮಕೂರು: ಎಮ್‌ಜಿ ಸ್ಟೇಡಿಯಮ್‌ನ ಪಕ್ಕದಲ್ಲಿ, ಕುವೆಂಪುನಗರ.
ಕೋಕ ಕೋಲಾ / ಥಮ್ಸ್ ಅಪ್ / ಸ್ಪ್ರೈಟ್ / ಮಾಜಾ 600 ml ರಿಂದ (ಆಯ್ದ ಪ್ರಕಾರಗಳು)
BUY ANY 3 GET ANY 1 FREE
ಎಮ್‌ಆರ್‌ಪಿ ₹40 ರಿಂದ / ಯೂನಿಟ್
ಬಿಸ್ಕಿಟ್ಸ್ ದೊಡ್ಡ ಪ್ಯಾಕ್ 300 g ರಿಂದ / ಲೊಟ್ಟೆ ಚಾಕೋ ಪೈ 336 g (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹120 ರಿಂದ / ಯೂನಿಟ್
ಚಾಕೋಲೇಟ್ ಹೋಮ್ ಪ್ಯಾಕ್ಸ್ (ಕ್ಯಾಡ್ಬರಿಸ್ ಡೈರಿ ಮಿಲ್ಕ್ / ಪರ್ಕ್ / ಫೈವ್ ಸ್ಟಾರ್ / ಕಿಟ್ ಕ್ಯಾಟ್ / ಮಂಚ್ ಮಹಾ) 126 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹99 ರಿಂದ / ಯೂನಿಟ್
ಮ್ಯಾಗಿ ವೆಜ್ ಅಟ್ಟಾ / ಟಾಪ್ ರಾಮೆನ್ / ನಿಸ್ಸಿನ್ ಜೇಕಿ / ಚಿಂಗ್ಸ್ ಸೀಕ್ರೆಟ್ / ಸನ್‌ಫೀಸ್ಟ್ ಯಿಪ್ಪೀ! ಮಸಾಲಾ ನೂಡಲ್ಸ್ 80 g ರಿಂದ (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹49 ರಿಂದ / ಯೂನಿಟ್
ಡವ್ / ಲಕ್ಸ್ / ಫಿಯಾಮಾ / ಗೋದ್ರೇಜ್ ನಂ.1 / ಸಿಂಥೋಲ್ / ಸಂತೂರ್ ಸೋಪ್ 125 g ರಿಂದ (ಮಲ್ಟಿ ಪ್ಯಾಕ್) (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹175 ರಿಂದ / ಯೂನಿಟ್
ಕೋಲ್ಗೆಟ್ ಡೆಂಟಲ್ ಕ್ರೀಮ್ 500 g / ಸ್ವರ್ಣ ವೇದ್‌ಶಕ್ತಿ / ಡಾಬರ್ ರೆಡ್ ಟೂತ್ / ಪೆಪ್ಸೋಡೆಂಟ್ 300 g / ಸೆನ್ಸೋಡೈನ್ ಟೂತ್‌ಪೇಸ್ಟ್ 100 g (ಆಯ್ದ ಪ್ರಕಾರಗಳು)
BUY ANY 2 GET ANY 1 FREE
ಎಮ್‌ಆರ್‌ಪಿ ₹186 ರಿಂದ / ಯೂನಿಟ್
ಚೀಸ್, ಲಸ್ಸಿ, ಐಸ್ ಕ್ರೀಮ್, ಹಾಲು ಪಾನೀಯಗಳು, ಪನೀರ್ ಬ್ಯಾಟರ್, ಬ್ರೆಡ್, ಕೇಕ್ ಮತ್ತು ರಸ್ಕ್, ಫ್ರೋಜನ್ ವೆಜ್ ಮತ್ತು ಸ್ನಾಕ್ಸ್ 18 g ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 26% ಕಡಿತ
ಎಮ್‌ಆರ್‌ಪಿ ₹10 ರಿಂದ
ವಿಸ್ಪರ್ ಅಲ್ಟ್ರಾ ಎಕ್ಸ್ ಎಲ್ XL+ 44s / ಅಲ್ ನೈಟ್ XL + 40s / ಸ್ಟೇಫ್ರೀ ಡ್ರೈಮ್ಯಾಕ್ಸ್ ಸ್ಯಾನಿಟರಿ ನ್ಯಾಪ್‌ಕಿನ್ (ಆಯ್ದ ಪ್ರಕಾರಗಳು)
50% ಕಡಿತ
ಎಮ್‌ಆರ್‌ಪಿ ₹575 ರಿಂದ
ಸ್ಮಾರ್ಟ್ ಬೆಲೆ ₹288 ರಿಂದ
ಸರ್ಫ್ ಎಕ್ಸೆಲ್ / ಟೈಡ್ ಪ್ಲಸ್ ಡಿಟರ್ಜಂಟ್ ಪೌಡರ್ 5 kg
ಫ್ಲಾಟ್ 33% ಕಡಿತ
ಎಮ್‌ಆರ್‌ಪಿ ₹770 ರಿಂದ
ಸ್ಮಾರ್ಟ್ ಬೆಲೆ ₹516 ರಿಂದ
₹60
nafed
ಭಾರತ್ ಚನಾ ದಾಲ್ 1 kg
ಈಗ ಲಭ್ಯವಿದೆ
ಪ್ಯಾರಿಸ್ ವೈಟ್ ಲೇಬಲ್ ಸಲ್ಫರ್ ಫ್ರೀ ಸಕ್ಕರೆ 5 kg
ಸ್ಮಾರ್ಟ್ ಬೆಲೆ ₹209 (₹41.80/ kg)
ಎಮ್‌ಆರ್‌ಪಿ ₹300
ಉಳಿಸಿರಿ ₹91
ಗುಡ್ ಲೈಫ್ ಡೈಲಿ ರೈಸ್ 26 kg
ಸ್ಮಾರ್ಟ್ ಬೆಲೆ ₹1345 (₹51.73/ kg)
ಎಮ್‌ಆರ್‌ಪಿ ₹1800
ಉಳಿಸಿರಿ ₹455
ಆಶೀರ್ವಾದ ಸುಪೀರಿಯರ್ ಎಂಪಿ ಆಟ್ಟಾ 5 kg
ಸ್ಮಾರ್ಟ್ ಬೆಲೆ ₹281
ಉಚಿತ
ಎಮ್‌ಆರ್‌ಪಿ ₹329
ಉಳಿಸಿರಿ ₹48
ಸೂಪರ್ ಸರ್ವೋತ್ತಮ ರೈಸ್ ಬ್ರ್ಯಾನ್ ಆಯಿಲ್ / ಗುಡ್ ಲೈಫ್ ರಿಫೈನ್ಡ್ ಸೂರ್ಯಕಾಂತಿ ಎಣ್ಣೆ 1 ℓ
ಸ್ಮಾರ್ಟ್ ಬೆಲೆ ₹97/ ₹99
ಎಮ್‌ಆರ್‌ಪಿ ₹199 / ₹150
ಉಳಿಸಿರಿ ₹102 / ₹51
ನಂದಿನಿ ಶುದ್ಧ ತುಪ್ಪ 1 ℓ
ಸ್ಮಾರ್ಟ್ ಬೆಲೆ ₹575
ಎಮ್‌ಆರ್‌ಪಿ ₹650
ಉಳಿಸಿರಿ ₹75
ಗುಡ್ ಲೈಫ್ ಆಲ್ಮಂಡ್ ವ್ಯಾಲ್ಯೂ ಪ್ಯಾಕ್ / ವಿಟ್ಟಲ್ ಬಾಲಾಜಿ ಸೂಪರ್ ವ್ಯಾಲ್ಯೂ ಕ್ಯಾಶಿವ್ 500 g
ಸ್ಮಾರ್ಟ್ ಬೆಲೆ ₹299
ಎಮ್‌ಆರ್‌ಪಿ ₹525 / ₹449
ಉಳಿಸಿರಿ ₹226 / ₹150
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹80
ಎಮ್‌ಆರ್‌ಪಿ ₹315 ರಿಂದ
ಸ್ಮಾರ್ಟ್ ಬೆಲೆ ₹235 ರಿಂದ
ಬೂಸ್ಟ್ / ಹಾರ್ಲಿಕ್ಸ್ ಕ್ಲಾಸಿಕ್ ಮಾಲ್ಟ್ ಹೆಲ್ತ್ ಡ್ರಿಂಕ್ 1 kg
ಉಳಿಸಿರಿ ₹170
ಎಮ್‌ಆರ್‌ಪಿ ₹615 ರಿಂದ
ಸ್ಮಾರ್ಟ್ ಬೆಲೆ ₹445 ರಿಂದ
ಡವ್ / ಹೆಡ್ & ಶೋಲ್ಡರ್ಸ್ / ಲೊರಿಯಾಲ್ / ಸನ್ ಸಿಲ್ಕ್ / ಪ್ಯಾಂಟೀನ್ ಶ್ಯಾಂಪೂ 580 ml ರಿಂದ (ಆಯ್ದ ಪ್ರಕಾರಗಳು)
ಉಳಿಸಿರಿ ₹450
ಎಮ್‌ಆರ್‌ಪಿ ₹799 ರಿಂದ
ಸ್ಮಾರ್ಟ್ ಬೆಲೆ ₹349 ರಿಂದ
ಲೈಝೋಲ್ ಫ್ಲೋರ್ ಕ್ಲೀನರ್ 2 ℓ (ಸಿಟ್ರಸ್ / ಫ್ಲೋರಲ್)
ಉಳಿಸಿರಿ ₹65
ಉಚಿತ ಲೈಜಾಲ್ 500 ml (ಸಿಟ್ರಸ್)
ಎಮ್‌ಆರ್‌ಪಿ ₹440
ಸ್ಮಾರ್ಟ್ ಬೆಲೆ ₹375
SINGER LYF
3 ಬರ್ನರ್ ಗ್ಲಾಸ್ ಟಾಪ್ ಗ್ಯಾಸ್ ಸ್ಟವ್
ಸ್ಮಾರ್ಟ್ ಬೆಲೆ ₹1999
ಎಮ್‌ಆರ್‌ಪಿ ₹7560 ರಿಂದ
LIVE SMART
ಫ್ಯಾಷನ್ ₹499 ರ ಒಳಗೆ 2000+ ಸ್ಟೈಲ್
ಟಿ-ಶರ್ಟ್ ₹199 ಎಮ್‌ಆರ್‌ಪಿ ₹399
ಕುರ್ತಾ ₹199 ಎಮ್‌ಆರ್‌ಪಿ ₹399
ಡೆನಿಮ್ಸ್ ₹399 ಎಮ್‌ಆರ್‌ಪಿ ₹999
ಲೆಗ್ಗಿಂಗ್ಸ್ ₹299 ಎಮ್‌ಆರ್‌ಪಿ ₹499
LA OPALA
12 Pcs ಒಪಲ್‌ವೇರ್ ಡಿನ್ನರ್ ಸೆಟ್
ಸ್ಮಾರ್ಟ್ ಬೆಲೆ ₹599
ಎಮ್‌ಆರ್‌ಪಿ ₹1445
SUPERSPUN Layers
ದಿಂಬಿನ ಹೊದಿಕೆಯೊಂದಿಗೆ ಡಬಲ್ ಬೆಡ್‌ಶೀಟ್ (100 % ಹತ್ತಿ)
ಸ್ಮಾರ್ಟ್ ಬೆಲೆ ₹499
ಎಮ್‌ಆರ್‌ಪಿ ₹2099
ARISTOCRAT
3 ಪೀಸಸ್ ಹಾರ್ಡ್ ಟ್ರಾಲಿ ಸೆಟ್
ಸ್ಮಾರ್ಟ್ ಬೆಲೆ ₹5999
ಎಮ್‌ಆರ್‌ಪಿ ₹22000
Prestige Pigeon Crompton LYF WONDERCHEF SINGER
ಹೋಂ ಅಪ್ಲೈಯನ್ಸ್
ವರೆಗೆ 60% ಕಡಿತ
ಎಮ್‌ಆರ್‌ಪಿ ₹899 ರಿಂದ
10% INSTANT DISCOUNT# SBI card
#Min. Trxn.: ₹3,000; Max. Discount: ₹500 per Trxn. Valid only on one Trxn. per credit card. Validity: 24 Jan - 28 Jan 2024. T&C Apply.
Paytm CASHBACK Get up to ₹300* Cashback on minimum payment of ₹1500
Paytm Payments Bank Wallet
*T&C apply
Minimum Assured ₹30 Cashback. Offer Valid Once per user from 23rd January to 28th January 2024. *T&C apply
Pay with MobiKwik GET UPTO ₹300* CASHBACK
*T&C Apply : Minimum Assured Cashback ₹50. Min Transaction of ₹1000 | Valid Once Per User Valid from 23rd to 28th Jan 2024
ನಿಮ್ಮ ಹತ್ತಿರದ ಸ್ಟೋರ್ ನ್ನು ಪತ್ತೆಹಚ್ಚಲು ಸ್ಕ್ಯಾನ್ ಮಾಡಿ
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಬ್ಯಾಂಕಿಂಗ್ ಕಾರ್ಡ್/ವಾಲೆಟ್ ಕೊಡುಗೆಗಳು ಸ್ಮಾರ್ಟ್ ಬಜಾರ್, ಸ್ಮಾರ್ಟ್ ಸೂಪರ್‌ಸ್ಟೋರ್, ಮತ್ತು ರಿಲಯನ್ಸ್ ಫ್ರೆಶ್ ಸಿಗ್ನೇಚರ್‌ನಲ್ಲಿ ಮಾತ್ರ ಮಾನ್ಯವಾಗಿರುತ್ತವೆ. ಸ್ಟಾಕ್‌ಗಳು ಇರುವವರೆಗೂ ಆಫರ್‌ಗಳು ಮಾನ್ಯವಾಗಿರುತ್ತವೆ. ಎಲ್ಲಾ ಕೊಡುಗೆಗಳು ಸೂಚನೆಯಿಲ್ಲದೆ ಬದಲಾವಣೆಗೆ ಒಳಪಟ್ಟಿರುತ್ತವೆ. ತೋರಿಸಲಾದ ಉತ್ಪನ್ನಗಳ ಚಿತ್ರಗಳು / ಛಾಯಾಚಿತ್ರಗಳು ಪ್ರಾತಿನಿಧ್ಯ ಉದ್ದೇಶಕ್ಕಾಗಿ ಮಾತ್ರ. ಹೋಮ್‌ವೇರ್ ಮತ್ತು ಅಪ್ಪರೇಲ್ ಆಫರ್‌ಗಳು ಆಯ್ದ ಸ್ಮಾರ್ಟ್ ಬಜಾರ್ ಮತ್ತು ಸ್ಮಾರ್ಟ್ ಸೂಪರ್ ಸ್ಟೋರ್‌ಗಳಲ್ಲಿ ಮಾತ್ರ ಊರ್ಜಿತವಿದೆ. ಎಲ್ಲಾ ಉತ್ಪನ್ನಗಳ ಎಂಆರ್ ಪಿ ಎಲ್ಲಾ ತೆರಿಗೆಗಳನ್ನು ಒಳಗೊಂಡಿರುತ್ತದೆ. ರಿಯಾಯಿತಿ ಶೇಕಡಾವಾರು ಆಫರ್ ಬೆಲೆಯ ಹತ್ತಿರದ ಶೇಕಡಾವಾರು ಮೊತ್ತಕ್ಕೆ ಪೂರ್ಣಗೊಳ್ಳುತ್ತದೆ. ಎಲ್ಲಾ ಆಫರ್‌ಗಳು 28 ಜನವರಿ 2024. ರವರೆಗೆ ಮಾನ್ಯವಾಗಿರುತ್ತವೆ. ಎಲ್ಲಾ ವಿವಾದಗಳು ಮುಂಬೈನಲ್ಲಿರುವ ನ್ಯಾಯಾಲಯಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.